ಮಹಾ ನಕ್ಷತ್ರವೆಂಬ ಸೂರ್ಯನಕ್ಷತ್ರ ಆರಂಭಿಸುವ ಕಾಲ.

ಮಹಾ ನಕ್ಷತ್ರಗಳು	ತಿಂಗಳು	ತಾರೀಕು	ಘಳಿಗೆ	ವಿಘಳಿಗೆ	ಮಹಾ ನಕ್ಷತ್ರಗಳು	ತಿಂಗಳು	ತಾರೀಕು	ಘಳಿಗೆ	ವಿಘಳಿಗೆ
ಉತ್ತರಾಷಾ.	ಜನವರಿ	೯	ರಾತ್ರಿ	೧೧	ಪುಷ್ಯಾ	ಜುಲಾಯಿ	೧೯	ಪ್ರಾತಃ.	೭
ಶ್ರವಣಾ	"	೨೧	"	೧	ಆಶ್ಲೇಷಾ	ಆಗೊಸ್ತು	೧	"	೭
ಧನಿಷ್ಠಾ	ಫೆಬ್ರವರಿ	೭	ಪ್ರಾತಃ.	೯	ಮಘಾ	"	೧೪	"	೪
ಶತಭಿಷಾ	"	೧೭	"	೯	ಹುಬ್ಬಾ	"	೨೮	ರಾತ್ರಿ	೧೨
ಪೂರ್ವಾಭಾ.	ಮಾರ್ಚಿ	೨	ಸಾಯಂ.	೪	ಉತ್ತರಾ	ಸಪ್ತಂಬರ	೧೧	ಸಾಯಂ.	೬
ಉತ್ತರಾಭಾ.	"	೧೪	ರಾತ್ರಿ	೧೨	ಹಸ್ತಾ	"	೨೪	ಹಗಲು	೯
ರೇವತೀ	"	೨೯	ಹಗಲು	೩	ಚಿತ್ರಾ	ಒಕ್ತೋಬರ	೮	ರಾತ್ರಿ	೧೦
ಅಶ್ವಿನೀ	ಏಪ್ರಿಲ್	೧೨	ಪ್ರಾತಃ.	೫	ಸ್ವಾತೀ	"	೨೨	ಪ್ರಾತಃ.	೮
ಭರಣೀ	"	೨೫	ರಾತ್ರಿ	೯	ವಿಶಾಖಾ	ನವಂಬರ	೪	ಸಾಯಂ.	೪
ಕೃತ್ತಿಕಾ	ಮೇ	೯	ಹಗಲು	೩	ಅನುರಾಧಾ	"	೧೩	ರಾತ್ರಿ	೧೧
ರೋಹಿಣೀ	"	೨೩	"	೧೨	ಜ್ಯೇಷ್ಠಾ	"	೨೦	"	೩
ಮೃಗಶಿರಾ	ಜೂನ್	೬	"	೧೦	ಮೂಲಾ	ದಶಂಬರ	೧೪	ಪ್ರಾತಃ.	೫
ಆರ್ದ್ರಾ	"	೨೦	"	೧೦	ಪೂರ್ವಾಷಾ.	"	೨೭	"	೯
ಪುನರ್ವಸೂ	ಜುಲಾಯಿ	೪	"	೯					

ದ್ವಕ್ಷಿದ್ಧ ಸಂಕ್ರಮಣಕಾಲದ ಘಳಿಗೆ ವಿಘಳಿಗೆಗಳು.

(ಮಧ್ಯ ಸೂರ್ಯೋದಯಾದಿ.)

ತಿಂಗಳು	ತಾರೀಕು	ಘಳಿಗೆ ವಿಘಳಿಗೆ	ರಾಶಿ ಸಂಖ್ಯೆ	ವಾರ	ತಿಂಗಳು	ತಾರೀಕು	ಘಳಿಗೆ ವಿಘಳಿಗೆ	ರಾಶಿ ಸಂಖ್ಯೆ	ವಾರ
ಜನವರಿ	೧೫	೦-೧೧	ಮಕರ	ಚಂದ್ರನವಾರ	ಜುಲಾಯಿ	೧೪	೭೪-೭೭	ಕರ್ಕಾಟ	ಮಂಗಳವಾರ
ಫೆಬ್ರವರಿ	೧೦	೭೫-೧೭	ಕುಂಭ	ಮಂಗಳವಾರ	ಆಗೊಸ್ತು	೧೪	೫೫-೧೫	ಸಿಂಹ	ಶುಕ್ರವಾರ
ಮಾರ್ಚಿ	೧೫	೫೫- ೫	ಮೀನ	ಗುರುವಾರ	ಸಪ್ತಂಬರ	೧೪	೫೪-೭೫	ಕನ್ಯಾ	ಚಂದ್ರವಾರ
ಏಪ್ರಿಲ್	೧೧	೫೭-೭೪	ಮೇಷ	ಶನಿವಾರ	ಒಕ್ತೋಬರ	೧೫	೭೪-೧೦	ತುಲಾ	ಗುರುವಾರ
ಮೇ	೧೫	೫೦- ೪	ವೃಷಭ	ಮಂಗಳವಾರ	ನವಂಬರ	೧೪	೭೭- ೫	ವೃಶ್ಚಿಕ	ಶನಿವಾರ
ಜೂನ್	೧೭	೭- ೧	ಮಿಥುನ	ಶನಿವಾರ	ದಶಂಬರ	೧೭	೫೯-೧೯	ಧನು	ಆದಿತ್ಯವಾರ

ಗರ್ಲಾಕೀರಲ್ಲಿ ಕುಜಾದಿ ಗ್ರಹಗಳ ರಾಶಿಪ್ರವೇಶಕಾಲಗಳು.

ಗ್ರಹ	ಯಾವ ಸಮಯದಿಂದ		ಯಾವ ಸಮಯದ ವರೆಗೆ					ಎಲ್ಲಿ
	ತಿಂಗಳು	ತಾ.	ತಿಂಗಳು	ತಾ.	ಹೊತ್ತು	ಘ.	ಸಿ.	
Mars ಕುಜಸ್ಫುಟ	ಜನವರಿ	೧	ಜನವರಿ	೩	ಹಗಲು	೨	೧೩	ಧನುವಿನಲ್ಲಿ
	"	೩	ಫೆಬ್ರುವರಿ	೧೦	ಸಾಯಂಕಾಲ	೫	೫೭	ಮಕರ
	ಫೆಬ್ರುವರಿ	೧೦	ಮಾರ್ಚ್	೩೦	"	೭	೨೬	ಕುಂಭ
	ಮಾರ್ಚ್	೩೦	ಏಪ್ರಿಲ್	೨೯	"	೪	೧೫	ಮೀನ
	ಏಪ್ರಿಲ್	೨೯	ಜೂನ್	೯	ಪ್ರಾತಃಕಾಲ	೩	೧೩	ಮೇಷ
	ಜೂನ್	೯	ಜುಲಾಯಿ	೩೦	ಸಾಯಂಕಾಲ	೮	೫೦	ವೃಷಭ
	ಜುಲಾಯಿ	೩೦	ಸಪ್ತಂಬರ	೪	"	೩	೦	ಮಿಥುನ
	ಸಪ್ತಂಬರ	೪	ಒಕ್ತೋಬರ	೨೫	ಪ್ರಾತಃಕಾಲ	೪	೫೯	ಕರ್ಕಾಟಕ
	ಒಕ್ತೋಬರ	೨೫ ರಿಂದ ದಶಂಬರ ತಿಂಗಳ ೭ರ ವರೆಗೂ						ಸಿಂಹ
Mercury ಬುಧಸ್ಫುಟ	ಜನವರಿ	೧	ಫೆಬ್ರುವರಿ	೪	ಹಗಲು	೧೨	೨೯	ಧನುವಿನಲ್ಲಿ
	ಫೆಬ್ರುವರಿ	೪	"	೨೪	ಸಾಯಂಕಾಲ	೪	೧೬	ಮಕರ
	"	೨೪	ಮಾರ್ಚ್	೧೩	ಪ್ರಾತಃಕಾಲ	೯	೩೧	ಕುಂಭ
	ಮಾರ್ಚ್	೧೩	"	೨೮	ಹಗಲು	೩	೫೯	ಮೀನ
	"	೨೮	ಜೂನ್	೫	ಪ್ರಾತಃಕಾಲ	೧೨	೩೯	ಮೇಷ
	ಜೂನ್	೫	"	೨೧	ಹಗಲು	೧೧	೩	ವೃಷಭ
	"	೨೧	ಜುಲಾಯಿ	೫	"	೧೦	೫೨	ಮಿಥುನ
	ಜುಲಾಯಿ	೫	"	೨೨	"	೩	೧೯	ಕರ್ಕಾಟಕ
	"	೨೨	ಸಪ್ತಂಬರ	೨೯	ರಾತ್ರಿ	೯	೫೭	ಸಿಂಹ
	ಸಪ್ತಂಬರ	೨೯	ಒಕ್ತೋಬರ	೧೩	ಪ್ರಾತಃಕಾಲ	೧	೧೯	ಕನ್ಯಾ
	ಒಕ್ತೋಬರ	೧೩	ನವಂಬರ	೩	ಸಾಯಂಕಾಲ	೫	೨೩	ತುಲಾ
	ನವಂಬರ	೩	"	೨೪	ಹಗಲು	೯	೨೨	ವೃಶ್ಚಿಕ
	"	೨೪ ರಿಂದ ವರ್ಷಾಂತ ವರೆಗೂ						ಧನು
Jupiter ಗುರುಸ್ಫುಟ	ಜನವರಿ	೧	ಒಕ್ತೋಬರ	೬	ಮಧ್ಯಾಹ್ನ	೧	೫೬	ಸಿಂಹದಲ್ಲಿ
	ಒಕ್ತೋಬರ	೬ ರಿಂದ ವರ್ಷಾಂತ ವರೆಗೂ						ಕನ್ಯಾ
Venus ಶುಕ್ರಸ್ಫುಟ	ಜನವರಿ	೧	ಜನವರಿ	೧೦	ಹಗಲು	೧೧	೯	ವೃಶ್ಚಿಕದಲ್ಲಿ
	"	೧೦	ಫೆಬ್ರುವರಿ	೫	"	೧	೪೧	ಧನು
	ಫೆಬ್ರುವರಿ	೫	"	೩೭	"	೫	೪೩	ಮಕರ
	"	೩೭	ಮಾರ್ಚ್	೩೩	ಸಾಯಂಕಾಲ	೬	೫೦	ಕುಂಭ
	ಮಾರ್ಚ್	೩೩	ಏಪ್ರಿಲ್	೧೭	ಪ್ರಾತಃಕಾಲ	೧೨	೫	ಮೀನ
	ಏಪ್ರಿಲ್	೧೭	ಮೇ	೧೦	ರಾತ್ರಿ	೧೦	೫೯	ಮೇಷ
	ಮೇ	೧೦	ಜೂನು	೪	ಸಾಯಂಕಾಲ	೫	೧೦	ವೃಷಭ
	ಜೂನು	೪	"	೨೯	ಪ್ರಾತಃಕಾಲ	೪	೧೩	ಮಿಥುನ
	"	೨೯	ಜುಲಾಯಿ	೨೩	ಸಾಯಂಕಾಲ	೪	೫೮	ಕರ್ಕಾಟಕ
	ಜುಲಾಯಿ	೨೩	ಆಗೊಸ್ತು	೧೭	ಪ್ರಾತಃಕಾಲ	೬	೫೮	ಸಿಂಹ
	ಆಗೊಸ್ತು	೧೭	ಸಪ್ತಂಬರ	೧೧	"	೪	೬	ಕನ್ಯಾ
	ಸಪ್ತಂಬರ	೧೧	ಒಕ್ತೋಬರ	೬	"	೬	೫೫	ತುಲಾ
	ಒಕ್ತೋಬರ	೬	"	೩೧	ರಾತ್ರಿ	೧	೫೬	ವೃಶ್ಚಿಕ
	"	೩೧	ನವಂಬರ	೨೩	ಹಗಲು	೩	೨೬	ಧನು
	ನವಂಬರ	೨೩	ದಶಂಬರ	೨೯	ಪ್ರಾತಃಕಾಲ	೫	೦	ಮಕರ
	ದಶಂಬರ	೨೯	"	೩೧ ವರೆಗೆ				ಕುಂಭ
Saturn ಶನಿಸ್ಫುಟ	ಜನವರಿ	೧	ಮೇ	೫	ಹಗಲು	೧೨	೨೭	ವೃಷಭದಲ್ಲಿ
	ಮೇ	೫ ವರ್ಷಾಂತ ವರೆಗೂ						ಮಿಥುನ
Moon's ascending node ರಾಹುಸ್ಫುಟ	ಜನವರಿ	೧	ನವಂಬರ	೧೯	ಪ್ರಾತಃಕಾಲ	೧೨	೨೦	ಕನ್ಯದಲ್ಲಿ
	ನವಂಬರ	೧೯	ವರ್ಷಾಂತ ವರೆಗೂ					ಸಿಂಹ

೧೯೪೩ನೇ ಇಸವಿಯಲ್ಲಿ ಸಂಭವಿಸುವ

ಗ್ರಹಣಗಳು.

ಈ ವರ್ಷದಲ್ಲಿ ಸೂರ್ಯಕ್ಕೆ ಎರಡು, ಚಂದ್ರಕ್ಕೆ ಎರಡು, ಹೀಗೆ ನಾಲ್ಕು ಗ್ರಹಣಗಳು ಸಂಭವಿಸುವವು. ಅವುಗಳಲ್ಲಿ ಒಂದು ಚಂದ್ರಗ್ರಹಣ ಮಾತ್ರವೇ ನಮಗೆ ತೋರುವಂಥಾದ್ದು. ಹ್ಯಾಗೆಂದರೆ:—

I. ಕಂಕಣ ಸೂರ್ಯಗ್ರಹಣ: ಇದು ಮಾರ್ಚಿ ತಾರೀಕು ೧೬ನೇ ಸಾಯಂಕಾಲ ಘಂಟೆ ೫ ನಿಮಿಷ ೧೭ಕ್ಕೆ ಆರಂಭಿಸಿ, ಮಧ್ಯರಾತ್ರಿ ಘಂಟೆ ೧ ನಿಮಿಷ ೧೩ಕ್ಕೆ ಅಂತ್ಯವಾಗುತ್ತದೆ. ಇಲ್ಲಿ ಕಾಣುವದಿಲ್ಲ; ಉತ್ತರ ಅಮೇರಿಕದಲ್ಲಿ ಗೋಚರ.

II. ಪಾರ್ಶ್ವ ಚಂದ್ರಗ್ರಹಣ: ಇದು ಮಾರ್ಚಿ ೩೦ನೇ ಚೈತ್ರಪೂರ್ಣಿಮಾ ಚಂದ್ರವಾರದ ರಾತ್ರಿಯಲ್ಲಿ ಆದ್ಯಂತವಾಗಿ ಮಂಗಳೂರಲ್ಲಿ ದೃಶ್ಯವಾಗುತ್ತದೆ.

ಸ್ಪರ್ಶಕಾಲ	ಘಂಟೆ	೭	ನಿಮಿಷ	೫೮	ಮಧ್ಯಕಾಲದಲ್ಲಿ ಗ್ರಾಸ $\frac{೨೨}{೨೪}$; ಅಂದರೆ ೨೨ ಪಾಲು ಗ್ರಹಣವಾಗಿ ೩ ಪಾಲಷ್ಟು ಚಂದ್ರ ಬಿಂಬ ಬಿಟ್ಟಿರುವದೆಂಬ ತಾತ್ಪರ್ಯವು.
ಮಧ್ಯಕಾಲ	"	೯	"	೩೪	
ಮೋಕ್ಷಕಾಲ	"	೧೧	"	೯	
ಆದ್ಯಂತಕಾಲ	"	೩	"	೧೧	

ಸ್ಪರ್ಶಕಾಲದಲ್ಲಿ ಚಂದ್ರದ ದಕ್ಷಿಣ ಬಿಂದುವಿನಿಂಬ ೪೧ ಭಾಗ ಪೂರ್ವಕ್ಕೆ
ಮೋಕ್ಷಕಾಲದಲ್ಲಿ " " " ೭೬ " ಪಶ್ಚಿಮಕ್ಕೆ } ಆಗುವದು.

ಸ್ಥೂಲವಾಗಿ ಹೇಳುವದಾದರೆ, ಆಗ್ನೇಯ ಸ್ಪರ್ಶ, ನೈಋತ್ಯ ಮೋಕ್ಷವೆನ್ನ ಬಹುದು.

III. ಪೂರ್ಣ ಸೂರ್ಯಗ್ರಹಣ: ಇದು ಸಪ್ತಂಬರ್ ೭ನೇ ರಾತ್ರಿ ೧೧ ಘಂಟೆ ೩೫ ನಿಮಿಷಕ್ಕಾರಂಭಿಸಿ, ಸಪ್ತಂಬರ್ ೮ನೇ ಪ್ರಾತಃಕಾಲ ಘಂಟೆ ೪ ನಿಮಿಷ ೭ಕ್ಕೆ ತೀರುವದು. ಇಲ್ಲಿ ಕಾಣದು; ಔಸ್ಟ್ರಾಲ್ಯ ಖಂಡದಲ್ಲಿ ದೃಶ್ಯ.

IV. ಚಂದ್ರಕ್ಕೆ ಪಾರ್ಶ್ವಗ್ರಹಣ: ಇದು ಸಪ್ತಂಬರ್ ೨೪ನೇ ಹಗಲು ಘಂಟೆ ೧೧ ನಿಮಿಷ ೧೪ಕ್ಕೆ ಆರಂಭಿಸಿ, ಘಂಟೆ ೨ ನಿಮಿಷ ೨೧ಕ್ಕೆ ಮುಗಿಯುತ್ತದೆ. ಇದು ಕೂಡ ಇಲ್ಲಿ ಕಾಣದು; ಅಮೇರಿಕದಲ್ಲಿ ಗೋಚರವು.

ವರ್ತಮಾನಸಂಗ್ರಹ.

ಭೂಮಿಯೂ ಅದರ ಪೂರ್ಣತೆಯೂ ಭೂಲೋಕವೂ ಅದರ ನಿವಾಸಿಗಳೂ ಯೆಹೋವನವೇ. ಮಹೋನ್ನತನಾದ ದೇವರು ಮನುಷ್ಯರ ರಾಜ್ಯದಲ್ಲಿ ಆಳುತ್ತಾನೆ; ರಾಜಾಧಿರಾಜನು ವಿಶ್ವಪತಿಯು ಆಗಿರುವ ಆತನು ಈ ಭೂಮಿಯ ಕಾರ್ಯಗಳನ್ನೆಲ್ಲಾ ತನ್ನ ಪರಮಪವಿತ್ರವಾದ ಚಿತ್ತಕ್ಕನುಸಾರವಾಗಿ ನಡಿಸುತ್ತಾನೆ. ಈ ಸರ್ತಿಯ ವರ್ತಮಾನಸಂಗ್ರಹದಲ್ಲಿ ಆಯಾ ಶೀಮೆಗಳಲ್ಲಿ ಭೂಕಂಪಾದಿ ಮಹಾ ಉತ್ಪಾತಗಳನ್ನು ಕುರಿತ ಭಯಂಕರ ಸಂಗತಿಗಳು ಹೇಳಿರುವದನ್ನು ಓದುವವರು ಕಾಣುವರು. ಇಂಥಾ ಸಂಭವಗಳಿಂದಲೂ ಆ ದಯಾಳು ದೇವರು ನಮಗೆ ಭಯಹಸ್ತ ತೋರಿಸಿ ನಮ್ಮನ್ನೆಚ್ಚರಿಸಿ, ನಾವು ಪಾಪಾಸಕ್ತಿ ಲೋಕಾಸಕ್ತಿಯನ್ನು ಬಿಟ್ಟು ತನ್ನ ಕಡೆಗೆ ತಿರುಗುವಂತೆ ಬುದ್ಧಿ ಹೇಳುತ್ತಾನೆಂದು ತಿಳಿಯ ಬೇಕು. ಆತನ ಹತ್ತರವೇ ನಿಜಸುಖವು, ಆತನ ಹತ್ತರವೇ ರಕ್ಷಣೆಯು ಅದೆ.

ಈಗ ಲೋಕದಲ್ಲಿ ಸಂಭವಿಸಿದ ಮುಖ್ಯ ಗೋಷ್ಠಿಗಳನ್ನು ಕ್ಲುಪ್ತವಾಗಿ ಹೇಳುತ್ತೇವೆ. ಹಿಂದುಸ್ಥಾನದಲ್ಲಿ ನಡೆದ ಕಾರ್ಯಗಳನ್ನು ಹೇಳುವಲ್ಲಿ ಕಲ್ಕತ್ತದಲ್ಲಿ ಸರಕಾರದವರು ಹೇರಳ ದ್ರವ್ಯ ಖರ್ಚು ಮಾಡಿ ಸವಣಿಸಿದ ಮಹಾ ಪ್ರದರ್ಶನವು ಹೆಚ್ಚಿನದು; ಪ್ರದರ್ಶನವೆಂದರೆ ಲೋಕದ ಆಯಾ ದೇಶಗಳಲ್ಲಿ ಹುಟ್ಟುವ ವಿಚಿತ್ರ ವಿಚಿತ್ರ ಒಡವೆಗಳನ್ನೂ ಕೈಗಾರಿಕೆಯ ನಾನಾ ಒಡವೆಗಳನ್ನೂ ಸಂತೆಯಲ್ಲಿ ಎಂಬಂತೆ ಜನರು ನೋಡುವದಕ್ಕೂ ವಿಕ್ರೀತ ಮಾಡುವದಕ್ಕೂ ತರುವದು. ಅದು ಲೋಕಸಂತೆ ಎಂದು ಹೇಳ ಬಹುದು. ಇಂಥಾ ಪ್ರದರ್ಶನಗಳೆಂಬ ಲೋಕಸಂತೆಗಳು ಲಂಡನ, ಪರಿಸ, ವಿಯನ್ನ ಮುಂತಾದ ಯುರೋಪೀಯ ಪಟ್ಣಗಳಲ್ಲಿಯೂ ಮಾಡಲಾಗಿದ್ದವು. ಅವುಗಳಿಂದ ಬೇರೆ ಬೇರೆ ಜನರಲ್ಲಿ ಹೊಕ್ಕುಬಳಿಕೆಯೂ ಪರಿಚಿತಿಯೂ ಉಂಟಾಗುವದಲ್ಲದೆ ವ್ಯಾಪಾರಕ್ಕೆ ವೃದ್ಧಿಯೂ ಉಂಟಾಗುತ್ತದೆ. ಕಲ್ಕತ್ತದ ಪ್ರದರ್ಶನವು ೧೮೮೪ನೇ ಇಸವಿ ದಶಂಬರ ತಿಂಗಳಲ್ಲಿ ಬಹಿರಂಗವಾಗಿ ಮುಹೂರ್ತ ಮಾಡಲ್ಪಟ್ಟು, ೧೮೮೫ನೇ ಏಪ್ರಿಲ್ ತಿಂಗಳಲ್ಲಿ ಮುಗಿಯಿತು. ಇಂಗ್ಲಾಂಡು, ಫ್ರಾನ್ಸು, ಜರ್ಮನಿ ಮೊದಲಾದ ಶೀಮೆಗಳಿಂದಲೂ ಅಮೇರಿಕದಿಂದಲೂ ಔಸ್ತ್ರಾಲ್ಯದಿಂದಲೂ ನಾನಾ ತರದ ಅಪೂರ್ವ ವಸ್ತು ಒಡವೆಗಳನ್ನು ಜನರು ಪ್ರದರ್ಶನಕ್ಕೆ ತಂದಿದ್ದರು. ನಮ್ಮ ದೇಶದ ಬೇರೆ ಬೇರೆ ಊರುಗಳಿಂದಲೂ ಆಯಾ ಅಪೂರ್ವ ವಸ್ತುಗಳನ್ನು ತಂದಿದ್ದರು. ಯಾವ ಯಾವ ಒಡವೆಗಳನ್ನು ತಂದಿದ್ದರೆಂದು ಕೇಳಿದರೆ, ಅಂದಜಂದವಾಗಿ ನೇಯಿದ ನೂಲಿನ ರೇಶಿಮೆಯ ವಸ್ತ್ರಗಳೂ, ಕಸೂದಿಯ ಕೆಲಸಗಳೂ, ಗಾಜಿನ ಪಾತ್ರೆಗಳೂ, ರತ್ನಾದಿಕಗಳೂ, ಹಲವು ವಿಧದ ಯಂತ್ರಗಳೂ, ಬೊಂಬೆಗಳೂ, ಅದಲ್ಲದೆ ಧಾನ್ಯಾದಿಗಳೂ, ಫಲಾದಿಗಳೂ ಸಹ ಪ್ರದರ್ಶನಕ್ಕಾಗಿ ಕಟ್ಟಿಸಿದ ವಿಶಾಲವಾದ ಮಂಟಪದಲ್ಲಿ ತಕ್ಕ ತಕ್ಕ ಸ್ಥಳಗಳಲ್ಲಿ

ಮಂಡಿಸಿಡೋಣಾಗಿದ್ದವು. ಬಹು ದೂರ ದೂರ ದೇಶಗಳಿಂದ ಈ ಲೋಕಸಂತೆ ನೋಡುವದಕ್ಕೆ ಜನರು ಬಂದಿದ್ದರು. ಹಲವು ಒಡವೆಗಳು ಅಲ್ಲೇ ವಿಕ್ರೀತವಾದವು. ಸರಕಾರದವರು ನೇಮಿಸಿದ ಪಂಚಾಯತರು ಎಲ್ಲಾ ಒಡವೆಗಳನ್ನು ನೋಡಿ ಪರೀಕ್ಷಿಸುತ್ತಾ, ಉತ್ತಮವೂ ಮಹಾ ಪ್ರಯೋಜನವೂ ಆಗಿರುವ ವಸ್ತು ಒಡವೆಗಳನ್ನು ಮಾಡಿದವರಿಗೆ ಇನಾಮು ಕೊಡಿಸಿದರು. ಇದೇ ತರದ ಪ್ರದರ್ಶನವು ಮುಂಬಾಯಿಯಲ್ಲಿಯೂ ಆಗ ಬೇಕೆಂದು ಕೆಲವರು ಆಲೋಚಿಸಿದ್ದಾರೆ. ಆದರೆ ಅದು ಅಷ್ಟು ಬೇಗ ಆಗಲಿಕ್ಕಿಲ್ಲಾ; ಎಲ್ಲಾ ಸವಣಿಸುವದಕ್ಕೆ ಮೂರು ನಾಲ್ಕು ವರ್ಷ ಬೇಕಾದೀತು.—ವಿಕ್ಟೋರಿಯ ಚಕ್ರವರ್ತಿನಿಯವರ ಕುಮಾರರಾದ ಡ್ಯೂಕ್ ಅಫ್ ಕನ್ನಾಟ್ ಇವರು ಹಿಂದುಸ್ಥಾನದಲ್ಲಿ ಮಿಾರತಿನಲ್ಲಿರುವ ಸೈನ್ಯಕ್ಕೆ ದಳವಾಯಿಯಾಗಿ ನೇಮಕ ಪಟ್ಟು, ತಮ್ಮ ರಾಣಿಯವರೊಡನೆ ಈ ದೇಶಕ್ಕೆ ಬಂದದ್ದು ವಿಶೇಷ ಸಂಗತಿಯಾಗಿದೆ. ಇದಕ್ಕೆ ಮೊದಲು ರಾಜಪುತ್ರರಿಬ್ಬರು ಹಿಂದು ದೇಶಕ್ಕೆ ಬಂದಿದ್ದರೂ ರಾಜಕುಮಾರ್ತೆಯಾದವಳು ಬಂದದ್ದಿಲ್ಲಾ.—ಕಳದ ವರ್ಷ ಹಿಂದು ದೇಶದಲ್ಲಿ ಧರ್ಮಸಂಸ್ಥಾಪನೆಗೋಸ್ಕರ ಬಹಳ ಧಾವತಿ ಮಾಡುತ್ತಿದ್ದ ಪ್ರಸಿದ್ಧ ಪುರುಷರಿಬ್ಬರು ಈ ಲೋಕವನ್ನು ಬಿಟ್ಟು ಹೋದರು. ದಯಾನಂದ ಸರಸ್ವತಿ ಸ್ವಾಮಿ ಎಂಬವನು ಬಾಲ್ಯದಿಂದಲೇ ಸಂಸ್ಕೃತ ಅಭ್ಯಾಸ ಮಾಡಿ, ವೇದಗಳನ್ನೇ ಪಾಠ ಮಾಡುತ್ತಾ ಅದರಲ್ಲಿಯೇ ನಿಮಗ್ನನಾಗಿ, ವೇದದಲ್ಲಿಯೇ ಸತ್ಯವಾದ ಹಿಂದು ಧರ್ಮವು ಅದೆ ಎಂದು ಭಾವಿಸಿ ವೇದಮತವನ್ನು ಪುನರ್ಜೀವನ ಮಾಡ ಬೇಕೆಂಬ ತಾತ್ಪರ್ಯದಿಂದ ಆರ್ಯಸಮಾಜವೆಂದು ನೂತನ ಮತ ಸ್ಥಾಪಿಸಿದ್ದನು. ದೇವತೆಗಳು, ದೇವಸ್ಥಾನಗಳು, ಜಾತಿನೇಮ, ತೀರ್ಥಯಾತ್ರೆಗಳು ಬೇಡ, ವಿಧವೆಗಳಿಗೆ ಪುನರ್ವಿವಾಹವಾಗ ತಕ್ಕದ್ದು, ಬಾಲವಿವಾಹ ನಿಷೇಧಿಸ ಬೇಕು ಎಂಬದು ಅವನ ನೂತನ ಬೋಧನೆಯಾಗಿತ್ತು. ಇದರ ನಿಮಿತ್ತ ಬ್ರಾಹ್ಮಣರು ಹಲವರು ಅವನಿಗೆ ವೈರಿಗಳಾಗಿದ್ದರು. ಆ ಸ್ವಾಮಿಯು ಮುಸಲ್ಮಾನರ ಕುರಾನೂ ಕ್ರೈಸ್ತರ ಬೈಬಿಲು ಸಹ ಪಠಿಸುತ್ತಿದ್ದು ವೇದಗಳಿಗೆ ಹೋಲಿಸುತ್ತಿದ್ದನು. ಬ್ರಹ್ಮಸಮಾಜದ ಜಗದ್ವಿಖ್ಯಾತ ನಾಯಕನಾದ ಬಾಬುಕೇಶವ ಚಂದ್ರಸೇನನಿಗೂ ದೇವಾಜ್ಞೆಯಾಯಿತು. ಈತನ ಮರಣದಿಂದ ತಮಗೂ ವ್ಯಸನವಾಯಿತೆಂದು ಆತನ ಹಿರೇ ಮಗನಿಗೆ ತಿಳಿಸ ಬೇಕೆಂಬದಾಗಿ ಚಕ್ರವರ್ತಿನಿಯವರು ವೈಸರಾಯ ಧೊರೆಗಳಿಗೆ ಅಪ್ಪಣೆ ಮಾಡಿದರು. ಕೇಶವ ಚಂದ್ರಸೇನನು ತೀರಿಕೊಂಡ ಮೇಲೆ ಬ್ರಹ್ಮಸಮಾಜದವರಲ್ಲಿ ಐಕ್ಯ ಕಮ್ಮಿಯಾಗಿ ಭೇದ ಬಂದು ಹೋಯಿತು.—ಫೆಬ್ರವರಿ ತಿಂಗಳಿನಲ್ಲಿ ಹೈದರಾಬಾದಿನ ತರುಣ ನಿಜಾಮ ಸಾಹೇಬರಿಗೆ ಪಟ್ಟ ಕಟ್ಟುವದಾಯಿತು. ಈ ಉದ್ದಿಶ್ಯವಾಗಿ ವೈಸರಾಯ ಧೊರೆಗಳೂ ಮದ್ರಾಸ ಮುಂಬಾಯಿ ಗವರ್ನರ್ ಧೊರೆಗಳೂ ಮುಂತಾಗಿ ದೊಡ್ಡ ದೊಡ್ಡ ಧೊರೆಗಳು ಬಂದಿದ್ದರು. ವೈಸರಾಯ ಧೊರೆಗಳು ಹಿಂದುಸ್ಥಾನ ಚಕ್ರವರ್ತಿನಿಯವರ ಹೆಸರಿನಲ್ಲಿ ನಿಜಾಮ ಸಾಹೇಬರನ್ನು ಗದ್ದಿಗೇ ಮೇಲೆ ಕುಂಡ್ರಿಸಿ, ಒಂದು ಪಟ್ಟಾಕತ್ತಿ ಇನಾಮಾಗಿ ಕೊಟ್ಟನಂತರ ನಿಜಾಮ ಸಾಹೇಬರು, ನನ್ನ ರಾಜ್ಯಭಾರವನ್ನು ತಮ್ಮ

ಹತ್ತರ ಆಲೋಚನೆ ಕೇಳುತ್ತಾ ನಡಿಸೇನೆಂದು ಮಾತು ಕೊಟ್ಟರು. ಮಾಜಿ ಮಂತ್ರಿ ಸರ್ ಸಾಲಾರಜಂಗ ಇವರ ಮಗನಿಗೆ ನಿಜಾಮ ಸಾಹೇಬರ ಹತ್ತರ ಮಂತ್ರಿಯ ಉದ್ಯೋಗವು ನೇಮಕವಾಯಿತು. ಮದ್ರಾಸಿನಲ್ಲಿ ಕೆಲವು ಕಾಲ ಮೈಲಿಖಜ್ಜಿ ಬಹಳ ಪ್ರಬಲವಾಗಿ ಹೇರಳ ಜನರು ಮೃತಿ ಪಟ್ಟರು; ಆದ್ದರಿಂದ ಬಲೋದ್ಬಂದಿಯಿಂದ ದಾಕು ಹಾಕಿಸ ಬೇಕೆಂಬ ಅಪ್ಪಣೆ ಹೊರಡುವದು ಅವಶ್ಯವಾಯಿತು. ಉತ್ತರದಲ್ಲಿ ಒಂದೆರ ಡು ಸ್ಥಳಗಳಲ್ಲಿ ವಾಂತಿಭೇದಿ ಸಹ ಪ್ರಾರಂಭವಾಗಿತ್ತು; ಆದರೆ ಅದನ್ನು ಅಲ್ಲಿಂದ ಲ್ಲಿಗೆ ಅಣಗಿಸಿದ್ದರಿಂದ ಹೆಚ್ಚಿನ ಅನರ್ಥಕ್ಕೆ ಕಾರಣವಾಗಲಿಲ್ಲಾ. ನಮ್ಮ ದೇಶದಲ್ಲಿ ಕೆಲವು ಸ್ಥಳಗಳಲ್ಲಿ ಭೂಕಂಪವು ಸಹ ಉಂಟಾಯಿತು. ಡಿಲ್ಲಿಯಲ್ಲಿ ಜೂನ್ ತಿಂಗಳಿ ನಲ್ಲಿ ರಾತ್ರಿಕಾಲದಲ್ಲಿ ಭೂಮಿಯ ಉದರದಲ್ಲಿ ಘಡಘಡನೆ ಗರ್ಜನೆಯುಂಟಾಗಿ ಭೂಮಿ ಕಂಪಿಸಿತು; ಆದರೆ ನಷ್ಟವೇನೂ ಸಂಭವಿಸಲಿಲ್ಲಾ. ಮತ್ತು ಕಾಶೆವಾಡದ ಲ್ಲಿಯೂ ಗುಡುಗಿನಂಥಾ ಗರ್ಜನೆಯೊಂದಿಗೆ ಭೂಕಂಪ ಸ್ಪರ್ಶವಾಯಿತು; ಅದರಿಂದ ಅಲ್ಪವಾದ ನಷ್ಟ ಮಾತ್ರ ಸಂಭವಿಸಿತು. ಅದೇ ಪ್ರಕಾರ ಕಚ್ಛ ದೇಶದಲ್ಲಿ ಪಡುವಣ ದ್ವೀಪದ ಮೇಲಿರುವ ಖವಡಾ ಎಂಬ ಊರಿನಲ್ಲಿ ಭೂಮಿಕಂಪವು ಉಂಟಾಯಿತು; ಅಲ್ಲಿಯೂ ಹೆಚ್ಚಿನ ಹಾನಿ ಸಂಭವಿಸಲಿಲ್ಲಾ. ಮೇ ತಿಂಗಳಲ್ಲಿ ಬರ್ಮ ದೇಶದ ಬಂ ದರು ಅಕಿಯಾಬ ಪಟ್ಣದಲ್ಲಿ ಭಯಂಕರ ತುಫಾನು ಬೀಸಿ ಕರಾವಳಿಯಿಂದ ದೂರವಿ ರುವ ಊರುಗಳಲ್ಲಿಯೂ ಬಡಿದು ಅದರಿಂದ ಬಹಳ ನಷ್ಟವು ಸಂಭವಿಸಿತು. ಪಾರ್ಶಿ ಕೊಲ್ಲಿಯಲ್ಲಿ ಕಿಶಿನ್ ಎಂತ ಒಂದು ದ್ವೀಪವದೆ; ಅಲ್ಲಿಯೂ ಭೂಮಿ ಕಂಪಿಸಿ ಚಿಕ್ಕ ಚಿಕ್ಕ ಹಳ್ಳಿಗಳು ಇಪ್ಪತ್ತು ಹಾವಳಿಯಾದವು. ಅಲ್ಲಿ ಕಂಪವಾಗುವ ಕೆಲವು ದಿನ ಮೊದಲು ಇರಾಣ ಅರಬಸ್ಥಾನ ಶೀಮೆಗಳ ಸರಹದ್ದಿನಲ್ಲಿಯೂ ಕಂಪವು ಸ್ಪರ್ಶವಾಗಿ ತ್ತಂತೆ.—ಕಳದ ವರ್ಷದಲ್ಲಿ ಕೆಲವು ತಿಂಗಳ ವರೆಗೆ ಸೂರ್ಯನ ಸ್ವರೂಪವು ಅಪರೂಪ ಬಣ್ಣದಲ್ಲಿ ದೃಶ್ಯವಾಯಿತು. ಈ ದಕ್ಷಿಣ ಪ್ರಾಂತದಲ್ಲಿ ಮಾತ್ರವಲ್ಲಾ, ಜೋಳಮಂಡಲ ತೀರದಲ್ಲಿಯೂ ಇನ್ನು ಅನೇಕ ಪ್ರದೇಶಗಳಲ್ಲಿಯೂ ಸೂರ್ಯನು ಉದಯವಾಗಿ ಹತ್ತು ಘಂಟೆಯ ವರೆಗೂ ಮತ್ತು ಸಂಜೆ ಅಸ್ತಮಾನವಾಗಲಿಕ್ಕಿರುವಾಗಲೂ ಪಚ್ಚೆ ಬಣ್ಣದಲ್ಲಿ ಕಾಣುವವನಾದನು. ಬರೇ ಕಣ್ಣಿನಿಂದ ಸೂರ್ಯನನ್ನು ನೋಡ ಬಹು ದಾಯಿತು. ಈ ಅಪೂರ್ವ ತೋರಿಕೆಗೆ ಕಾರಣವೇನಾಗಿರ ಬಹುದೆಂದು ವಿದ್ವಾಂಸರು ಬಹಳ ಶೋಧನೆ ಮಾಡಿದರು. ಜಾವಾ ದ್ವೀಪದಲ್ಲಿ ಉಂಟಾದ ಜ್ವಾಲಾಮುಖಿಯ ಉತ್ಪಾತದಿಂದ ಮೇಲಕ್ಕೆ ಹಾರಿದ ಗಂಧಕಮಯ ಹಬೆಯಿಂದಲೂ ಧೂಳಿನಿಂದಲೂ ಸೂರ್ಯಬಿಂಬ ಪಚ್ಚೆಯಾಗಿ ಕಂಡು ಬಂತೆಂದು ಕೆಲವರು ಹೇಳಿದರು. ಕೆಲವರು ಹಾಗಲ್ಲಾ, ನೀರಿನ ಹಬೆಯು ಅತ್ಯಂತ ಮೇಲಕ್ಕೇರಿದ್ದರಿಂದಲೇ ಸೂರ್ಯನಸ್ವರೂಪ ಪಚ್ಚೆಯಾಗಿ ತೋರಿತೆಂದು ಹೇಳಿದರು. ಹ್ಯಾಗೂ ಇರಲಿ; ಸೂರ್ಯಸ್ವರೂಪ ಪಲ್ಲ ಟಿಸಿದ್ದು ದುಷ್ಕಾಲ ವ್ಯಾಧಿಗಳಿಗೆ ಮುಂಗುರ್ತೆಂದು ಆವಾಗ್ಯೆ ಅನೇಕರು ಹೆದರುತ್ತಿ ದ್ದರು. ಇಂಥಾ ಭಯಕ್ಕೆ ಏನೂ ಆಸ್ಪದವಿಲ್ಲಾ.

ಬರ್ಮ ದೇಶದ ಅಜೆಗಿರುವ ಅನ್ನಮವೆಂದೂ ತೊಂಕ್ವಿನ ಎಂದೂ ಅನ್ನುವ ಶೀಮೆ ಯನ್ನು ಕಟ್ಟಿಕೊಳ್ಳುವ ಉದ್ದೇಶದಿಂದ ಫ್ರೆಂಚರು ಅಲ್ಲಿಯ ಅರಸನ ಮೇಲೆ ಯುದ್ಧ ಪ್ರಾರಂಭಿಸಿದರು ಎಂದು ಕಳದ ಪಂಚಾಂಗದಲ್ಲಿ ಹೇಳಿದೆವು; ತನ್ಮಧ್ಯೇ ಚೀನಿಯರು ಆ ಶೀಮೆ ತಮ್ಮ ಮಹಾರಾಜ್ಯಕ್ಕೆ ಒಳಪಟ್ಟದ್ದೆಂದು ದಾವೆ ಹೇಳಿದ್ದರಿಂದ ಫ್ರೆಂಚರಿಗೂ ಚೀನಿಯರಿಗೂ ಯುದ್ಧವಾಗುವದೋ ಎಂತ ತೋರುವದಾಯಿತು; ಆದರೆ ಉಭಯ ಪಕ್ಷದವರು ಕೌಲುಕರಾರಿಗೆ ಒಪ್ಪಿ, ಚೀನಿಯರು ಲಾಂಗಸನ್ ಮುಂತಾದ ಕೆಲವು ಶೀಮೆ ಫ್ರೆಂಚರಿಗೆ ಬಿಟ್ಟುಕೊಟ್ಟರು. ಬಿಟ್ಟುಕೊಟ್ಟ ಶೀಮೆಯನ್ನು ಫ್ರೆಂಚರು ವಶ ಮಾಡಿಕೊ ಳ್ಳುವದಕ್ಕೆ ಹೋಗುವಾಗ ಚೀನಿ ದಂಡಿನವರು ಫ್ರೆಂಚರ ಮೇಲೆ ಬಿದ್ದು ಕಾಳಗ ಮಾ ಡಿದರು. ಈ ವಿಷಯದಲ್ಲಿ ತಮಗೆ ಖಂಡಣೆ ಹಣ ಕೊಡ ಬೇಕೆಂದು ಫ್ರೆಂಚರು ಚೀನಿ ಸರಕಾರಕ್ಕೆ ತಗಾದೆ ಮಾಡುತ್ತಾರೆ. ಇದು ಸಹ ವಿವೇಕದಿಂದ ತೀರಿಸಿಕೊಳ್ಳುವ ದೆಂದು ತೋರುತ್ತದೆ. ತೊಂಕ್ವಿನಿನಲ್ಲಿ ಚಲಾವಣೆಯಾಗುವದು ಸೀಸದ ನಾಣ್ಯಗ ಳಂತೆ; ಈ ಸೀಸವು ಸಹ ಉತ್ತಮವಲ್ಲಾ, ಬಹಳ ಕೀಳು ತರದ್ದು. ಈ ನಾಣ್ಯಗಳು ಉರುಟಾಗಿ ಸುತ್ತಳಿ ಹಗ್ಗದಲ್ಲಿ ಪವಣಿಸಿರುತ್ತವೆ; ಎರಡುವರೆ ರೂಪಾಯಿ ಚಿಲ್ಲರೆ ಮಾಡಿದರೆ, ಒಬ್ಬನು ಹೊರಲಾರದಷ್ಟು ರೊಕ್ಕ ಶಿಕ್ಕುವದು; ಹತ್ತು ಹನ್ನೆರಡು ರೂಪಾ ಯಿಯ ಚಿಲ್ಲರೆ ಹಾಕಿದರೆ, ದೋಣಿ ಮುಣುಗಲಿಕ್ಕೆ ಸಾಕಂತೆ. ಅಲ್ಲಿ ವ್ಯಾಪಾರ ಮಾ ಡುವ ಒಬ್ಬಾಕಿ ಯುರೋಪೀಯಳು ಸಂಜೆ ಮನೆಗೆ ಬರುವಾಗ ರೊಕ್ಕವನ್ನು ಒಬ್ಬ ಆಳಿನ ಮೇಲೆ ಹೊರಿಸಿ ವೈಯುತ್ತಾಳಂತೆ.

ಜಾವಾ ದ್ವೀಪದಲ್ಲಿ ಕ್ರಕತಾವೋ ಎಂಬುವ ಜ್ವಾಲಾಮುಖಿ ಪರ್ವತದ ಉತ್ಪಾತ ವಾಗಿ, ಅದು ಮಹಾ ಘರ್ಜನೆಯಿಂದ ಬೆಂಕಿಯನ್ನೂ ಪಾಷಾಣಮಯವಾದ ಪ್ರವಾಹ ವನ್ನೂ ಕಾರುವಂಥಾದ್ದಾಯಿತು. ಈ ಪರ್ವತಕ್ಕೂ ಸಿಬಿನಿ ಎಂಬ ಗುಡ್ಡಕ್ಕೂ ನಡುವೆ ಹದಿನಾರು ಜ್ವಾಲಾಮುಖಿಗಳು ಉತ್ಪಾತವಾದವು. ಇದರ ಮೂಲವಾಗಿ ೭೦ ಸಾ ವಿರ ಮನುಷ್ಯರು ಜಾನಾಹಾನಿಯಾದರು. ಸಿಂಗೋಪಾನವೆಂಬ ದ್ವೀಪವು ಶೇಳಿ ಐದು ಭಾಗವಾಯಿತು. ಬಹು ಸೂಕ್ಷ್ಮವಾದ ಧೂಳು ಪರ್ವತದೊಳಗಿಂದ ಮೇಲಕ್ಕೆ ಹಾರಿ ಬತಾವ್ಯ ಮುಂತಾದ ಪಟ್ಟಣಗಳ ವರೆಗೆ ಕವಿದು, ಆಕಾಶವು ಹಗಲಲ್ಲಿ ಕಪ್ಪಾಗಿ ಮನುಷ್ಯರು ಕೆಲಸ ಮಾಡ ಕೂಡದಂತಾಯಿತು; ಪರ್ವತದ ಎಡಬಲದ ಊರೆಲ್ಲಾ ಬೂದಿ ಮುಚ್ಚಿದ್ದಾಗಿ ಮರುಭೂಮಿಯಂತಾಯಿತು; ಜ್ವಾಲಾಮುಖಿಯ ಉತ್ಪಾತದ ದೆಶೆಯಿಂದ ಸಮುದ್ರದಲ್ಲಿ ಮಹದದ್ಭುತವಾದ ತೆರೆ ಎದ್ದು, ಅಂಜಿರಾ ಸೆರಂಗ ಪಟ್ಟಣಗಳ ಮೇಲೆ ಹೊಡದು ಹೇರಳ ನಷ್ಟವಾಗಿ ೩೦ ಸಾವಿರ ಜನರು ಸತ್ತು ಹೋದರು. ಅದೇ ಉತ್ಪಾತದಿಂದ ಸುಂದವೆಂಬ ಸಮುದ್ರಕೊಲ್ಲಿ ಪಲ್ಲಟವಾಗಿ ಹಡಗಗಳು ಪಾರಾಗ ಕೂಡದಂಥಾದ್ದಾಯಿತು. ಸಮುದ್ರದಲ್ಲುಂಟಾದ ತೆರೆಯ ಬಡಿತ ಮದ್ರಾಸಿನ ವರೆಗೆ ತಾಗಿ ಜನರಿಗೆ ಭಯಕ್ಕೆ ಕಾರಣವಾಯಿತು. ಜಾವಾ ದ್ವೀಪದಿಂದ ೨ ಸಾವಿರ ಮೈಲು ದೂರವಿರುವ ಸಿಂಹಳ ದ್ವೀಪದ ಕೊಲಂಬೋ ಬಂದರದಲ್ಲಿ ಆ ತೆರೆ ಬಡಿದು, ರೇವಿನ

ಲ್ಲಿದ್ದ ಹಡಗಗಳನ್ನು ಒಮ್ಮಿಂದೊಮ್ಮೆ ಧಡಕ್ಕೆ ಬಡಿದು ಜಲ್ಲಾಪಿಲ್ಲಿ ಮಾಡಿತು. ಇಷ್ಟು ದೂರಕ್ಕೂ ಆ ಜ್ವಾಲಾಮುಖಿಯ ರಭಸವು ಸ್ಪರ್ಶವಾಯಿತಾದರೆ, ಆ ಉತ್ಪಾತವು ಸಾಮಾನ್ಯವಾದದ್ದಲ್ಲಾ, ಬಹಳ ಗಡುಸಾದದ್ದೆಂದು ತಿಳಿಯ ಬೇಕು; ಇನ್ನೂರು ವರುಷಗಳ ಮೊದಲು ಇದೇ ತರದ ಉತ್ಪಾತವು ಅಲ್ಲಿ ಸಂಭವಿಸಿತ್ತಂತೆ. ಶೀಮೆ ಫಲವತ್ತಾದದರಿಂದ ಜನರು ಉತ್ಪಾತವನ್ನು ಮರೆತು ಬಿಟ್ಟು ಮತ್ತೂ ಅಲ್ಲೇ ವಸ್ತಿ ಮಾಡಲಾರಂಭಿಸಿದ್ದರು. ಸಂಬಾರದ ದ್ವೀಪಗಳೆಂಬ ಹಿಂದುಸಾಗರ ಶಾಂತಸಾಗರಗಳ ನಡುವೆ ಇರುವ ದ್ವೀಪಸಮುದಾಯಗಳಲ್ಲಿ ಕೆಲವುಗಳ ಮೇಲೆ ಮುಖ್ಯವಾಗಿ ಸುಮಾತ್ರ ಸೆಲೆಬಿಸ ಎಂಬವುಗಳ ಮೇಲೆ ಪದೇ ಪದೇ ಕಂಪಗಳು ಆಗುತ್ತವೆ; ಜಾವಾ ದ್ವೀಪದಲ್ಲಿರುವ ಇನ್ನೊಂದು ಜ್ವಾಲಾಮುಖಿ ಪರ್ವತದಿಂದ ಹೊಗೆ ಹೊರಡುತ್ತಲಿದೆ, ನೆಲದ ಕೆಳಗೆ ಮಹಾ ಗರ್ಜನೆಯೂ ಕೇಳುತ್ತದೆಂದು ವರ್ತಮಾನವದೆ; ಆದ್ದರಿಂದ ಅಲ್ಲೇನಾದರೂ ಮಹಾ ಉತ್ಪಾತವಾಗುವ ಸಂಭವ ತೋರುತ್ತದೆ. ಈ ಸಂಬಾರ ದ್ವೀಪಗಳ ಸಾಲಿನಲ್ಲಿ ನ್ಯೂಗಿನಿ ಎಂಬುವ ದ್ವೀಪವದೆ; ಇದನ್ನೂ ಫ್ರೆಂಚರು ಆಕ್ರಮಿಸುವ ತಾತ್ಪರ್ಯದಲ್ಲಿರುವದರಿಂದ, ಇಂಗ್ಲಿಷ ಸರಕಾರದವರು ಅದನ್ನು ತಮ್ಮ ರಾಜ್ಯಕ್ಕೆ ಶೇರಿಸಿಕೊಳ್ಳ ಬೇಕೆಂದು ಔಸ್ತ್ರಾಲ್ಯ ಸರಕಾರದವರು ಶಿಫಾರಸು ಮಾಡಿದ್ದಾರೆ. ಆ ದ್ವೀಪದಲ್ಲಿ ಶುಂಠಿ, ಕಬ್ಬು, ಕರ್ಪೂರದ ಗಿಡ, ಗಂಧ ಮೊದಲಾದದ್ದು ಚನ್ನಾಗಿ ಬೆಳಿಯುತ್ತದೆ.

ಮಿಸರ ದೇಶದಲ್ಲಿ ಅರಬಿ ಪಾಚ್ಹಾಯನೆಂಬವನು ಮಾಡಿದ ಥಾಂದಲಿಯನ್ನು ಕಳದ ಸಾರಿ ಪ್ರಸ್ತಾಪಿಸಿದೆವು; ಈಗ ಆ ದೇಶದ ತೆಂಕಣ ಶೀಮೆಯಲ್ಲಿ, ಅಂದರೆ ದಾರ ಫುರ ಖಾರ್ತುಮ ಎಂಬ ಶೀಮೆಗಳಲ್ಲಿ ಸ್ವಸ್ಥತೆ ಇಲ್ಲಾ. ಮಹಮದ ಅಹಮತ ಎಂಬವನೊಬ್ಬನು ಕುರಾನಿನಲ್ಲಿ ಹೇಳಿರುವ ಮೆಹದಿ ಎಂದನ್ನಿಸಿಕೊಂಡು ಜನರನ್ನು ಕೂಡಿಸಿಕೊಂಡು ಊರಿನ ಮೇಲೆ ಊರು ತನಗೆ ಕೈವಶ ಮಾಡಿಕೊಂಡು ಬರಬರುತ್ತಾ ಬಲಾಢ್ಯ ಪಾಳ್ಯಗಾರನಾದನು. ಅವನನ್ನು ಜಯಿಸುವದು ಮಿಸರಿ ಸೈನ್ಯದಿಂದ ಆಗದೆ ಹೋಯಿತು; ಒಂದೆರಡು ಸೈನ್ಯಗಳನ್ನು ಅವನು ಪೂರಾ ನಿರ್ಮೂಲ ಮಾಡಿದನು; ಅದದರಿಂದ ಇಂಗ್ಲಾಂಡಿನಿಂದ ಗೊರ್ಡೊನ ಎಂಬ ಪ್ರಖ್ಯಾತ ದಳವಾಯಿ ಬಂದು ಸೈನ್ಯ ಸಮೇತವಾಗಿ ಮೆಹದಿಯ ದಂಗೆಯನ್ನು ಅಣಗಿಸುವದಕ್ಕೆ ಹೋದನು. ತನ್ಮಧ್ಯೇ ಮೆಹದಿಯ ಪಕ್ಷವೂ ದಿನೇ ದಿನೇ ಬಲವಾಗುತ್ತಾ ಬಂದದರಿಂದ ಅವನನ್ನು ತೀವ್ರದಲ್ಲಿ ಜಯಿಸುವದು ಅಸದಳವಾಯಿತು. ಗೊರ್ಡೊನ ದಳವಾಯಿಯು ಒತ್ತಾಸೆಗೆ ಸೈನ್ಯ ಕಳುಹಿಸ ಬೇಕೆಂದು ಅಪೇಕ್ಷಿಸಿದ್ದರಿಂದ ಬಲವಾದ ಸೈನ್ಯ ಅವನ ಕೈಗೆ ಶಿಕ್ಕುತ್ತಲೇ ಆ ದಂಗೆ ಅಣಗುವದೆಂಬದಕ್ಕೆ ಸಂದೇಹವಿಲ್ಲಾ.

ಮದಗಸ್ಕರ ದ್ವೀಪದ ಕೆಲವು ಬಂದರುಗಳನ್ನು ಫ್ರೆಂಚರು ಹಲ್ಲಾ ಮಾಡಿದರೆಂದು ಕಳದ ಪಂಚಾಂಗದಲ್ಲಿ ಹೇಳಿದ್ದಾಯಿತು. ಕಾರ್ಯ ಹೀಗಿರುವಾಗ ದೇಶವನ್ನಾಳುವ ರಾಣಿ ಸತ್ತು ಹೋಗಿ ಅವಳ ಬಾಧ್ಯಳು ಆಗಿರುವವಳು ಪಟ್ಟಕ್ಕೆ ಬಂದಳು. ಫ್ರೆಂಚರು ವ್ಯರ್ಥವಾಗಿ ಆ ನಿರಪರಾಧಿಗಳಾದ ದ್ವೀಪದ ನಿವಾಸಿಗಳ ಮೇಲೆ ದಾವೆ ತಂದು,

ಒಂದೇ ದ್ವೀಪವನ್ನು ನಮ್ಮ ಆಶ್ರಯದಲ್ಲಿಡ ಬೇಕು, ಇಲ್ಲ, ದ್ವೀಪವನ್ನು ನಮ್ಮ ರಾಜ್ಯಕ್ಕೆ ಶೇರಿಸುತ್ತೇವೆಂದು ತಗಾದೆ ಮಾಡುತ್ತಾರೆ. ಈ ಕಾರ್ಯ ಹ್ಯಾಗೆ ತೀರುವದೋ ತಿಳಿಯದು. ಆಫ್ರಿಕ ಖಂಡದ ಮಧ್ಯ ಪ್ರದೇಶವು ಈಗ ಹೆಚ್ಚು ಹೆಚ್ಚಾಗಿ ಲೋಕದ ಹೊಕ್ಕುಬಳಿಕೆಗೆ ಬರುವದಕ್ಕೆ ಆರಂಭವಾಗಿದೆ. ಅಲ್ಲಲ್ಲಿ ವ್ಯಾಪಾರದ ನೆಲೆಗಳೂ ಮಿಶ್ಯನ ಠಾಣ್ಯಗಳೂ ಉಂಟಾಗುತ್ತಾ, ಅಜ್ಞಾನಾಂಧಕಾರದಲ್ಲಿರುವವರಾದ ಆ ಕಾಡು ಜನರಿಗೆ ಸುಜ್ಞಾನವೆಂಬ ಬೆಳಕು ಮೂಡುವದಾಗುತ್ತದೆ.

ಇಂಗ್ಲಾಂಡು ದೇಶದ ಪೂರ್ವಭಾಗದಲ್ಲಿ ಕೆಲ ಊರುಗಳಲ್ಲಿ ಮಹಾ ಭೂಕಂಪವಾಗಿ ಅದರಿಂದ ದೊಡ್ಡ ದೊಡ್ಡ ಮನೆಗಳಿಗೂ ಜನರಿಗೂ ನಷ್ಟ ಸಂಭವಿಸಿತು; ಭೂಕಂಪದಿಂದ ಒಂದು ಶೀಮೆಯಲ್ಲಿರುವ ಭಾವಿಗಳಲ್ಲಿ ನೀರು ಏಕಾಏಕಿ ೮ ಅಡಿಗಳು ಏರಿ ಈಗ್ಗಲೂ ಅಷ್ಟೇ ಅಡಿ ಉಂಟಂತೆ; ಇದು ವಿಚಿತ್ರವೇ. ಪ್ರಚಂಡ ತುಫಾನು ಸಹ ಬೀಸುವಂಥಾದ್ದಾಗಿ ಕರಾವಳಿಯ ಊರುಗಳಲ್ಲಿರುವ ಮನೆಗಳ ಮಾಡುಗಳು ಬೀಳುವದರಿಂದ ಹೇರಳ ಭಯಂಕರವಾದ ಅಪಘಾತಗಳು ಸಂಭವಿಸಿದವು. ಬಲಾಢ್ಯರಾದ ಗಂಡಸರು ಸಹ ಬಿರುಘಾಳಿಯ ರಭಸದಿಂದ ಮೇಲಕ್ಕೆತ್ತಲ್ಪಟ್ಟು ಕೆಳಗೆ ಬಿದ್ದು ಮರಣ ಪಟ್ಟರು. ಇದೇ ತುಫಾನಿನಿಂದ ಐರ್ಲಾಂಡಿನಲ್ಲಿಯೂ ಫ್ರಾನ್ಸಿನಲ್ಲಿಯೂ ಬಹಳ ಹಾವಳಿಯಾಯಿತು.—ಇನ್ನೊಂದು ವಿಶೇಷ ದುಃಖಕರ ಸಂಗತಿ ಏನಂದರೆ ಚಕ್ರವರ್ತಿನಿಯವರ ಕಿರೀ ಕುಮಾರರಾದ ಪ್ರಿನ್ಸ್ ಲ್ಯೋಪೊಲ್ಡ್ ಇವರು ಫ್ರಾನ್ಸ ದೇಶದ ಕೆನೆಸ್ ಎಂಬ ಊರಿಗೆ ಹೋಗಿದ್ದವರು ಅಲ್ಲಿ ಏಕಾಏಕಿ ಮರಣ ಹೊಂದಿದರು. ಅವರು ಒಂದಾನೊಂದು ಮಂಡಲಿಯವರು ಮಾಡಿಸಿದ ಮೇಜುವಾನಿಗೆ ಹೋಗಿದ್ದಾಗ ಬಿದ್ದರಂತೆ; ಆಗಲೇನಾದರೂ ಹೆಚ್ಚಿನ ನೋವು ಆಯಿತೆಂದು ತಿಳಿದು ಬರಲಿಲ್ಲಾ. ರಾತ್ರಿ ಬಿಡಾರಕ್ಕೆ ಹೋಗಿ ಮಲಗಿರುವಾಗ ಅವರಿಗೆ ಸ್ಮರಣೆ ತಪ್ಪಿ ಮಧ್ಯರಾತ್ರಿಗೆ ದೇವಾಜ್ಞೆಯಾಯಿತು. ಅವರು ಚಿಕ್ಕಂದಿನಿಂದಲೇ ಬಲಹೀನ ಪ್ರಕೃತಿಯವರು ಆಗಿದ್ದು ತಾಯಮ್ಮನವರಿಗೆ ಮುದ್ದುಮಗನಾಗಿ, ಊರು ಬಿಟ್ಟು ಧಾವತಿಯ ಕೆಲಸದ ಮೇಲೆ ಪರಸ್ಥಳಕ್ಕೆ ಹೋದವರಲ್ಲವಂತೆ; ಅವರು ವಿದ್ಯೆಯಲ್ಲಿ ಮಹಾ ಪ್ರಸಕ್ತರಾಗಿದ್ದರು. ಎರಡು ವರುಷಗಳ ಮೊದಲು ಅವರಿಗೆ ವಿವಾಹವಾಗಿ ಅವರ ಕುಟುಂಬದಲ್ಲಿ ಕನ್ಯಾಜನನವಾಗಿತ್ತು. ಅವರೀ ಪ್ರಕಾರ ಎಳೇ ವಯಸ್ಸಿನಲ್ಲಿ, ೩೧ ಪ್ರಾಯದಲ್ಲೇ ಅಕಾಲ ಮರಣ ಪಟ್ಟದ್ದರಿಂದ ಮಾತಃಶ್ರೀಯವರಿಗೂ ಪತ್ನಿಗೂ ಅತಿರೇಕ ದುಃಖವಾಯಿತೆಂದು ಬರಿಯುವದು ಅವಶ್ಯವಿರದು.—ಇಂಗ್ಲಾಂಡಿನಲ್ಲಿ ಫೆನ್ಯನರು ಎಂಬ ಗುಪ್ತ ರಾಜದ್ರೋಹಿಗಳು ಅಧಿಕಾರಿಗಳಿಗೆ ಕೇಡು ಮಾಡ ಬೇಕೆಂದು ಕೆಲವು ವೇಳೆ ಎತ್ತುಗಡೆ ಮಾಡಿದರೂ ಹೆಚ್ಚಿನ ಕೇಡು ಅವರ ಕೈಯಿಂದ ನಡಿಯದೆ ಹೋಯಿತು.

ಇತಲಿ ದೇಶದ ನೇಪಲ್ಸ ಪಟ್ಟಣದ ಹತ್ತರವಿರುವ ಇಸ್ಕಿಯ ಎಂಬ ದ್ವೀಪದಲ್ಲಿ ಮಹಾ ಭೂಕಂಪವಾಗಿ ಆ ದ್ವೀಪದ ಸುಂದರ ಮುಖ್ಯ ಪಟ್ಟಣವಾದ ಕಾಸಾಮಿಶಿಯೋಲವೆಂಬದು ಅದರಿಂದ ಕೇವಲ ವಿಧ್ವಂಸವಾಯಿತು. ಮನೆಗಳೆಲ್ಲಾ ಬಿದ್ದು ಹೋಗಿ

ಹೇರಳ ಜನರು ಮೃತಿ ಪಟ್ಟರು. ಹೆಣಗಳ ಗವಲಿನಿಂದ ವ್ಯಾಧಿಯುಂಟಾದೀತೆಂದು ಜೀವಂತರಾಗಿ ಉಳಿದವರೆಲ್ಲರನ್ನು ಅಲ್ಲಿಂದ ದೂರಕ್ಕೆ ವೈದು ಪಟ್ಣವನ್ನು ಮಣ್ಣು ಹಾಕಿ ಮುಚ್ಚಿ ಬಿಟ್ಟರು. ಗ್ರೇಕ ದೇಶಕ್ಕೆ ಶೇರಿದ ಕಿಯೋಸ ಎಂಬ ಊರಿನಲ್ಲಿಯೂ ಭೂ ಕಂಪವಾಗಿ ಮನೆಮಾರು ಬಿದ್ದು ಮನುಷ್ಯರೂ ಘಾಸಿ ಪಟ್ಟರು; ಅದೇ ಪ್ರಕಾರ ಅನ ತೋಲಿ ಶೀಮೆಯ ಐರವಾಲಿ ಎಂಬ ಊರಿನಲ್ಲಿಯೂ ಭೂಕಂಪದಿಂದ ಕೆಲವು ಹಳ್ಳಿ ಗಳು ಹಾಳಾಗಿ ಹೇರಳ ಜನರು ಹತವಾದರು. ಫ್ರಾನ್ಸ ದೇಶದ ದಕ್ಷಿಣ ಭಾಗದಲ್ಲಿ ಕೆಲವು ಪಟ್ಣಗಳಲ್ಲಿ ವಾಂತಿಭೇದಿ ತಲೆದೋರಿತು. ಮಾರ್ಸೆಲ್ಸ ಎಂಬ ಪಟ್ಣದಲ್ಲಿ ಬಹುತೇಕ ಜನರು ಆಹುತಿಯಾಗಿ ಬಿದ್ದರು. ಅದು ಹೆಚ್ಚು ವಿಸ್ತರಿಸದ ಹಾಗೆ ಫ್ರೆಂಚ ಅಧಿಕಾರಿಗಳು ತಕ್ಕ ಬಂದೋಬಸ್ತು ಮಾಡುತ್ತಿದ್ದಾರೆ.

ಸ್ಪೇನ ದೇಶದಲ್ಲಿ ಎರಡು ಮೂರು ಕಡೆಗಳಲ್ಲಿ ಅರಸನಿಗೆ ವಿರೋಧವಾದ ಒಳ ಸಂಚುಗಾರರ ಧಾಂದಲಿ ತಲೆದೋರಿತು. ಸರಕಾರದವರು ಬಹುಶಾ ಪ್ರಜೆಗಳ ಹಿತ ಚಿಂತಕರಲ್ಲದ್ದರಿಂದ ಈ ಒಳಸಂಚು ಉಂಟಾಗಿರ ಬಹುದೆಂದು ತೋರುತ್ತದೆ. ಆದರೆ ದಂಗೆಗಾರರ ಕೂಟಗಳ ಹುಮ್ಮಸವು ನೆರವೇರಲಿಲ್ಲಾ. ಸರಕಾರದವರು ದಂಗೆಯನ್ನು ಅಲ್ಲಿಂದಲ್ಲೇ ಅಣಗಿಸಿ ಬಿಟ್ಟರು. ಸ್ಪೇನ ದೇಶದ ಅರಸನು ಜರ್ಮನಿಗೆ ಹೋಗಿ ವಿಲ್ಲಿ ಯಮ್ ಮಹಾರಾಜರ ಭೇಟಿ ತಕ್ಕೊಂಡು ಮರಳಿ ಊರಿಗೆ ಹೋಗುವ ಪಯಣದಲ್ಲಿ ಫ್ರಾನ್ಸ ದೇಶದ ಪರಿಸಿಗೆ ಬರಲು, ರೇಲ್ವೆ ಠಾಣ್ಯದಿಂದ ಬಿಡಾರಕ್ಕೆ ಹೋಗುವ ವರೆಗೆ ಮಾರ್ಗದಲ್ಲೆಲ್ಲಾ ಪರೀಸಿನವರು ಗುಂಪು ಕೂಡಿ ಒದರುತ್ತಾ ಅರಸನನ್ನು ಬಹಳ ಹೀಯಾ ಳಿಸಿದರು. ಇದರಿಂದ ಫ್ರೆಂಚರ ದಾಂಡಿಗತನವು ಕಂಡು ಬರುತ್ತದೆ. ಅರಸನು ವೈಮ ನಸ್ಸಿನಿಂದ ತಡ ಮಾಡದೆ ಅಲ್ಲಿಂದ ಊರಿಗೆ ತೆರಳಿ ಹೋದನು. ಕಡೆಗೆ ಫ್ರಾನ್ಸ ದೇಶದ ಅಧಿಪತಿ ಜನರು ಮಾಡಿದ ತಪ್ಪು ಮನ್ನಿಸ ಬೇಕೆಂದು ಬರಕೊಂಡದ್ದರಿಂದ ಉಭಯ ಪಕ್ಷದವರು ವಿವೇಕದಿಂದ ಅನ್ಯೋನ್ಯ ಮಾಡಿಕೊಂಡರು.

ಓಸ್ಟ್ರಿಯ ದೇಶದ ರಾಜಧಾನಿ ವಿಯೆನ್ನ ಪಟ್ಣಕ್ಕೆ ಸಮೀಪದಲ್ಲಿರುವ ಒಂದು ಕೋ ಟೆಯಲ್ಲಿ ಪ್ರಿನ್ಸ್ ಚಾಂಬೋರ್ಡ ಎಂಬವರು ತೀರಿಕೊಂಡರು. ಇವರು ೧೫೮೯ನೇ ವರ್ಷ ಮೊದಲ್ಗೊಂಡು ಫ್ರಾನ್ಸ ದೇಶವನ್ನಾಳುತ್ತಿದ್ದ ಬುರ್ಬೋನರೆಂಬ ರಾಜಸ್ವರೂಪ ದಲ್ಲಿ ಕಡೆಯವರು. ಈ ಬುರ್ಬೋನ ಮಹಾರಾಜರು ಗರ್ವಿಗಳಾಗಿದ್ದು ಪ್ರಜೆಯನ್ನು ಕ್ರೂರವಾಗಿ ಆಳಿದ್ದರಿಂದಲೂ ಪ್ರೊತೆಸ್ತಂತ ಕ್ರೈಸ್ತರನ್ನು ಹಿಂಸಿಸಿದ್ದರಿಂದಲೂ ದುರ್ನಾ ಮ ಪಡಕೊಂಡವರು. ಅವರ ಕ್ರೂರತ್ವವನ್ನೂ ಗರ್ವವನ್ನೂ ಪ್ರಜೆ ಸೈರಿಸಲಾರದೆ, ೧೭೯೪ನೇದರಲ್ಲಿ ಫ್ರೆಂಚರು ಅದೇ ರಾಜವಂಶದ ಲುವಿ ಎಂಬ ಅರಸನನ್ನು ಕೊಂದು ಹಾಕಿದರು. ಪುನಹಾ ಬುರ್ಬೋನರಿಗೆ ೧೮೩೦ರ ವರೆಗೆ ರಾಜ್ಯಪಟ್ಟವು ಶಿಕ್ಕಿತು. ಆ ವರುಷದಲ್ಲಿ ಚಾರ್ಲ್ಸನೆಂಬ ಅರಸನನ್ನು ಫ್ರೆಂಚರು ಪಟ್ಟದಿಂದ ತಳ್ಳಿ ದೇಶದಿಂದ ಓಡಿಸಿ ಬಿಟ್ಟರು. ಇವನ ಮೊಮ್ಮಗನು ಮೇಲೆ ಹೇಳಿದ ಚಾಂಬೋರ್ಡ ಎಂಬವನು. ಇವನ ಮರಣದಿಂದ ಬುರ್ಬೋನ ರಾಜವಂಶವು ಸಮಾಪ್ತವಾಯಿತು.

ರುಸ್ಯ ಸರಕಾರವು ಮಹಾರಾಜ್ಯವನ್ನು ವಿಸ್ತಾರ ಮಾಡಬೇಕೆಂಬ ಹುಮ್ಮಸ ಹಿಡಿದಂತೆ ತೋರುತ್ತದೆ. ಅವರು ಕಾಬೂಲು ಕಂದಹಾರು ಶೀಮೆ, ಅಂದರೆ ಅಫಘಾನಿಸ್ಥಾನದ ಬಡಗಲಾಗೆ ಮಧ್ಯ ಆಸ್ಯದ ಮೆರ್ವ ಎಂಬದನ್ನು ತಮ್ಮ ಸಾಮ್ರಾಜ್ಯಕ್ಕೆ ಕೂಡಿಸಿಕೊಂಡು, ಅಲ್ಲಿಯ ನಿವಾಸಿಗಳಾದ ತುರ್ಕೊಮಾನರ ಮೇಲೆ ಅಧಿಕಾರಿಗಳನ್ನಿಟ್ಟರು. ರುಸ್ಯರು ಅಲ್ಲಿಯ ವರೆಗೂ ಬಲುಕಾಯಿಸಿ ಬಂದ ಕಾರಣ ಅಫಘಾನಿಸ್ಥಾನದ ಸರಹದ್ದನ್ನು ಥರಾಯಿಸುವದು ಅಗತ್ಯ ಬಿದ್ದದರಿಂದ ನಮ್ಮ ಸರಕಾರದವರು ಇಲ್ಲಿಂದ ಕೆಲವರು ಪಂಚಾಯತರನ್ನು ಅಲ್ಲಿಗೆ ರವಾನಿಸಿರುತ್ತಾರೆ.

ಅಮೇರಿಕ ಖಂಡದಲ್ಲಿ ಯುನೈಟೆಡ್ ಸ್ಟೇಟ್ಸ್ ಶೀಮೆಯಲ್ಲಿ ಒಹೈಯೋ ನದಿಯಲ್ಲಿಯೂ ಅದಕ್ಕೆ ಕಲೆಯುವ ಎರಡು ನದಿಗಳಲ್ಲಿಯೂ ನೆರೆ ಬಂದು, ಎಡಬಲದಲ್ಲಿರುವ ಊರುಗಳಲ್ಲಿ ಪ್ರವಾಹವು ಪ್ರಬಲಗೊಂಡು, ಸುಮಾರು ಮೂರು ಕೋಟಿ ಮೌಲ್ಯದ ಆಸ್ತಿಪಾಸ್ತಿ ಚಾನಾಹಾನಿಯಾಗಿ ಲಕ್ಷೋಪಲಕ್ಷ ಜನರು ಸರ್ವಸ್ವವೂ ಕಳಕೊಂಡರು. ವಿಪರೀತ ಹಿಮ ಬಿದ್ದದ್ದೂ ಅದರ ಹಿಂದೆ ವಿಪರೀತ ಮಳೆಯಾದದ್ದೂ ನೆರೆಗೆ ಕಾರಣವಾಯಿತು. ಇಂಥಾ ವಿಪತ್ತು ಈ ಮೊದಲು ಆ ಶೀಮೆಯಲ್ಲಿ ಆಗಲಿಲ್ಲವಂತೆ. ಯುನೈಟೆಡ್ ಸ್ಟೇಟ್ಸ್ ಅಂದರೆ ಸಂಯುಕ್ತ ಸಂಸ್ಥಾನಗಳೆಂಬುವ ಶೀಮೆ ಪ್ರಜಾಧಿಪತ್ಯ. ದೇಶವಾಳುವದಕ್ಕೆ ಜನರು ಆದುಕೊಂಡ ಪ್ರೆಸಿಡೆಂಟ್ ಎಂಬ ನಾಯಕನು ಇರುತ್ತಾನೆ. ಈ ಪ್ರೆಸಿಡೆಂಟರು ನಾಲ್ಕು ವರುಷಕ್ಕೊಮ್ಮೆ ಬದಲುತ್ತಾರೆ. ಈ ವರೆಗೆ ನಾಯಕನಾಗಿದ್ದ ಪ್ರೆಸಿಡೆಂಟ್ ಆರ್ಥರ ಎಂಬವರ ಅಳ್ತನದ ಗಡು ಮುಗಿಯುವದರಿಂದ ನವಂಬರ ತಿಂಗಳಲ್ಲಿ ಹೊಸ ಪ್ರೆಸಿಡೆಂಟನನ್ನು ಜನರು ಆದುಕೊಳ್ಳುವರು. ಯುನೈಟೆಡ್ ಸ್ಟೇಟ್ಸ್ ಶೀಮೆಯ ನ್ಯೂಒರ್ಲಿಯನ್ಸ ಎಂಬ ಪಟ್ಣದಲ್ಲಿ ಮಹಾ ಪ್ರದರ್ಶನವು ಸದ್ಯಾ ಆಗುವಂಥಾದ್ದು ಅದೆ. ಆ ಶೀಮೆಯಲ್ಲಾಗುವ ಅರಳೆ ಜೀನಸುಗಳಿಗೆ ಅದು ಮಧ್ಯ ಸ್ಥಳವಾಗಿರುವದರಿಂದ ಅರಳೆ ಕೈಗಾರಿಕೆ ಸಂಬಂಧ ಪಟ್ಟ ಯಾವತ್ತೂ ಸಾಮಾನು ಪ್ರದರ್ಶನಕ್ಕೆ ತರಲಾದಾವು. ಮುಂಬಾಯಿಯಲ್ಲಿ ಹುಟ್ಟುವ ಅರಳೆ ಬಟ್ಟೆಗಳ ನಮೂನೆಗಳನ್ನು ಅಲ್ಲಿಗೆ ವೈಯುವರೆಂದು ತೋರುತ್ತದೆ. ಫ್ರೆಂಚ ಸರಕಾರದವರು ಅಮೇರಿಕ ಸರಕಾರದ ಮೇಲೆ ತಮಗಿರುವ ಸಖ್ಯವನ್ನು ತೋರಿಸುವದಕ್ಕೆ ಗುಮ್ಮಟಿಯಂಥಾದ್ದೊಂದು ದೊಡ್ಡ ಪ್ರತಿಮೆ ಹೇರಳ ದ್ರವ್ಯ ವೆಚ್ಚ ಮಾಡಿ ಕೆತ್ತಿಸಿ ಉಚಿತವಾಗಿ ಕೊಟ್ಟರು. ಅದು ೩೫೦ ಅಡಿ ಎತ್ತರವಾಗಿದೆ. ಅದನ್ನು ಅಮೇರಿಕದ ತೀರದಲ್ಲಿ ಎರಡು ಬಂಡೆಗಳ ಮೇಲೆ ನಿಲ್ಲಿಸಿ ತಲೆಯ ಮೇಲೆ ದೀಪವಿಡುವರು. ಅದರ ಹೆಗ್ಗಾಲಿನ ನಡುವಿನಿಂದ ಹಡಗಗಳು ಹೋಗ ಬಹುದು. ಲೋಕದಲ್ಲಿ ಆಶ್ಚರ್ಯವಾದ ಕೆಲಸಗಳಲ್ಲಿ ಇದು ವಿಶಿಷ್ಟವೆಂದು ಹೇಳ ಬಹುದು.

ಶ ರೀ ರ ಚಿ ಕಿ ತ್ಸೆ.

(೧೯೮೪ನೇ ಇಸವಿಯ ಪಂಚಾಂಗದಲ್ಲಿರುವ ವಿವರದಿಂದ ಮುಂದೆ.)

ರೋಗಾದಿಗಳೂ ಇವುಗಳಲ್ಲಿ ಪ್ರಯೋಗವಾಗುವ ಊರೌಷಧಗಳೂ, ಇವುಗಳನ್ನು ಕುರಿತು ನಿಘಂಟುರೂಪವಾದ ಸೂಚನಾಸಾರವು.

ಜ್ವರ--ಕೆಂಜ್ವರ (ಮೈಕೆಂಪಾಗುವ ಜ್ವರ) Scarlatina, or Scarlet Fever.

ಕೆಂಜ್ವರಕ್ಕೆ ಶುರುವಿನಲ್ಲಿ ಕಠಿಣ ತಲೆಶಿಡತ, ಬೆನ್ನಿನಲ್ಲಿ ನೋವು, ಛಳಿ, ಒಂದೊಂದು ಸಾರಿ ವಾಂತಿ, ಮೈ ಕಾದು ನಾಡಿಯು ಜೋರಾಗಿ ಬಡಿಯುವದು; ಎರಡನೇ ದಿನ ಪರೀಕ್ಷಿಸಿ ನೋಡಲಾಗಿ ಬಾಯಿಯೊಳಗೆ ಕೆಂಪಗೆ ಕಾಣುವದು, ನಾಲಿಗೆಯು ಬಿಳೀ ಅಗ್ರ ದಿಂದ ತುಂಬಿರುವದು, ಗಂಟ್ಲು ನೋಯುವದು; ಅದರ ಸಂಗಡಲೇ ಅಥವಾ ಅದಾದ ಕೆಲವು ತಾಸುಗಳೊಗೆ ಮುಖಕ್ಕೂ ಕೊರಳಿಗೂ ತೋಳುಗಳಿಗೂ ಕೆಂಪು ಬೊಕ್ಕೆಗಳು ಉಂಟಾಗಿ, ಮೂರನೇ ದಿವಸ ಕಾಲುಗಳ ವರೆಗೆ ತುಂಬಿ ಬರುವವು. ಬೊಕ್ಕೆಗಳು ಆರನೇ ದಿವಸದಿಂದ ಒಂಭತ್ತನೇ ದಿವಸದೊಳಗೆ ಕಾಣದೆ ಹೋಗಿ, ಮೈಯಿಂದ ಪರೆಗಳು ಎದ್ದು ಬರುವವು; ಆದರೆ ಈ ಜ್ವರವು ಬೊಕ್ಕೆಗಳು ತೋರಿದರಿಂದಲ್ಲ, ಅದು ಕ್ರಮೇಣವಾಗಿ ಕಾಣದೆ ಹೋಗುವದರಿಂದಲೇ ಬಾಧಕಕ್ಕೆ ಆಸ್ಪದವಾಗುತ್ತದೆ.

☞ ಮೇಲಿನ ವಿವರದಲ್ಲಿ ಔಷಧಗಳ ತೂಕವಾಗಲೀ, ಅಳತೆಯಾಗಲೀ ಇಂಗ್ಲಿಷ ಹೆಸರಿನಿಂದ ಕೊಟ್ಟಿರುವಲ್ಲಿ ಅವುಗಳ ಒಂದೊಂದು ಈ ಊರಿನ ಯಾವ ತೂಕಕ್ಕೂ ಅಳತೆಗೂ ಸರಿ ಬೀಳುತ್ತದೆಂಬದು ಮುಂದಿನ ಪಟ್ಟಿಯಿಂದ ಗೊತ್ತು ಮಾಡಿಕೊಳ್ಳ ಬಹುದು. ಔಷಧಗಳನ್ನು ತಯಾರು ಮಾಡುವಾಗ ಇದನ್ನು ಸರಿ ನೋಡಿಕೊಳ್ಳ ಬೇಕು.

ತೂಕ:				ಅಳತೆ:			
೧ಗ್ರೇನ್	=	೧ಗುಲ್ಗಂಜಿ	= ೨ ಮಂಜೂಟತೂಕ	೧ ಮಿನಿಮ್	=	೧ ಸಾಧಾರಣ ತಟುಕು*	
೩೦ "	=	೨ ದ್ರಮ್	= ೭೨ "	೬೦ "	=	೧ ದ್ರಮ್	= ೧ ಚಾಸೌಟು
೪೫ "	=	೩ "	= ೧ ಪಾವಲಿತೂಕ	೪ ದ್ರಮ್	=	೨ ಔನ್ಸ್	= ೧ ಮೇಜನಸೌಟು
೬೦ "	=	೧ "	= ೧೨ "	೮ "	=	೧ "	= ೨ "
೯೦ "	=	೧೩ "	= ೨ ರೂ. ತೂಕ (ತೊಲೆ)	೧ ಔನ್ಸ್	=	ಸುಮಾರು ೨ ಕುಡುತೆ	
೧೪೦ "	=	೩ "	= ೧ " "	೪ "	=	" ೧ "	= ೨ ಸೇರು
೧ ಔನ್ಸ್	=	೮ "	= ಸುಮಾರು ೨ "	೨೦ "	=	೧ ಪ್ಯಾಂಟ್	= ೨ ಕೇಸೆ
೨ "	=	೧೬ "	= " ೫ "	೪೦ "	=	೨ "	= ೧ "

* ತಟುಕು ವಿದ್ಯಮಾನಾನುಸಾರವಾಗಿ ಚಿಕ್ಕದು ದೊಡ್ಡದು ಆಗುವದುಂಟು.

ಶ ರೀ ರ ಚಿ ಕಿ ತ್ಸೆ.

(೧೫೪೪ನೇ ಇಸವಿಯ ಪಂಚಾಂಗದಲ್ಲಿರುವ ವಿವರದಿಂದ ಮುಂದೆ.)

ರೋಗಾದಿಗಳೂ ಇವುಗಳಲ್ಲಿ ಪ್ರಯೋಗವಾಗುವ ಊರೌಷಧಗಳೂ, ಇವುಗಳನ್ನು ಕುರಿತು ನಿಘಂಟುರೂಪವಾದ ಸೂಚನಾಸಾರವು.

ಜ್ವರ--ಕೆಂಜ್ವರ (ಮೈಕೆಂಪಾಗುವ ಜ್ವರ) Scarlatina, or Scarlet Fever.

ಕೆಂಜ್ವರಕ್ಕೆ ಶುರುವಿನಲ್ಲಿ ಕಠಿಣ ತಲೆಶಿಡತ, ಬೆನ್ನಿನಲ್ಲಿ ನೋವು, ಛಳಿ, ಒಂದೊಂದು ಸಾರಿ ವಾಂತಿ, ಮೈ ಕಾದು ನಾಡಿಯು ಜೋರಾಗಿ ಬಡಿಯುವದು; ಎರಡನೇ ದಿನ ಪರೀಕ್ಷಿಸಿ ನೋಡಲಾಗಿ ಬಾಯಿಯೊಳಗೆ ಕೆಂಪಗೆ ಕಾಣುವದು, ನಾಲಿಗೆಯು ಬಿಳೀ ಅಗ್ರ ದಿಂದ ತುಂಬಿರುವದು, ಗಂಟ್ಲು ನೋಯುವದು; ಆದರ ಸಂಗಡಲೇ ಅಥವಾ ಆದಾದ ಕೆಲವು ತಾಸುಗಳೊಗೆ ಮುಖಕ್ಕೂ ಕೊರಳಿಗೂ ತೋಳುಗಳಿಗೂ ಕೆಂಪು ಬೊಕ್ಕೆಗಳು ಉಂಟಾಗಿ, ಮೂರನೇ ದಿವಸ ಕಾಲುಗಳ ವರೆಗೆ ತುಂಬಿ ಬರುವವು. ಬೊಕ್ಕೆಗಳು ಆರನೇ ದಿವಸದಿಂದ ಒಂಭತ್ತನೇ ದಿವಸದೊಳಗೆ ಕಾಣದೆ ಹೋಗಿ, ಮೈಯಿಂದ ಪರೆಗಳು ಎದ್ದು ಬರುವವು; ಆದರೆ ಈ ಜ್ವರವು ಬೊಕ್ಕೆಗಳು ತೋರಿದರಿಂದಲ್ಲ, ಅದು ಕ್ರಮೇಣವಾಗಿ ಕಾಣದೆ ಹೋಗುವದರಿಂದಲೇ ಬಾಧಕಕ್ಕೆ ಆಸ್ಪದವಾಗುತ್ತದೆ.

☞ ಮೇಲಿನ ವಿವರದಲ್ಲಿ ಔಷಧಗಳ ತೂಕವಾಗಲೀ, ಅಳತೆಯಾಗಲೀ ಇಂಗ್ಲಿಷ ಪೆಸರಿನಿಂದ ಕೊಟ್ಟಿರುವಲ್ಲಿ ಅವುಗಳ ಒಂದೊಂದು ಈ ಊರಿನ ಯಾವ ತೂಕಕ್ಕೂ ಅಳತೆಗೂ ಸರಿ ಬೀಳುತ್ತದೆಂಬದು ಮುಂದಿನ ಪಟ್ಟಿಯಿಂದ ಗೊತ್ತು ಮಾಡಿಕೊಳ್ಳ ಬಹುದು. ಔಷಧಗಳನ್ನು ತಯಾರು ಮಾಡುವಾಗ ಇದನ್ನು ಸರಿ ನೋಡಿಕೊಳ್ಳ ಬೇಕು.

ತೂಕ:				ಅಳತೆ:			
೧ಗ್ರೇನ್	=	೧ಗುಲ್ಗಂಜಿ	= ೨/೩ ಮುಂಜೂಟಿತೂಕ	೧ ಮಿನಿಮ್	=	೧ ಸಾಧಾರಣ ತಟುಕು*	
೩೦ "	=	೨/೩ ದ್ರಮ್	= ೭/೩ "	೬೦ "	=	೧ ದ್ರಮ್	= ೧ ಚಾಸೌಟು
೪೫ "	=	೩/೪ "	= ೧ ಪಾವಲಿತೂಕ	೪ ದ್ರಮ್	=	೨/೩ ಔನ್ಸ್	= ೧ ಮೇಜನಸೌಟು
೬೦ "	=	೧ "	= ೧೨/೩ "	೮ "	=	೧ "	= ೨ "
೯೦ "	=	೧೩/೩ "	= ೨ರೂ. ತೂಕ (ತೊಲೆ)	೧ ಔನ್ಸ್	=	ಸುಮಾರು ೨/೩ ಕುಡುತೆ	
೧೮೦ "	=	೩ "	= ೧ " "	೪ "	=	" ೧ "	= ೨/೩ ಸೇರು
೧ಔನ್ಸ್	=	೮ "	= ಸುಮಾರು ೨/೩ "	೨೦ "	=	೧ಪ್ಯಾಂಟ್	= ೨/೩ ಶೇರೆ
೨ "	=	೧೬ "	= " ೩ "	೪೦ "	=	೨ "	= ೧ "

* ತಟುಕು ಎದ್ಯವಾನಾನುಸಾರವಾಗಿ ಚಿಕ್ಕದು ದೊಡ್ಡದು ಆಗುವದುಂಟು.

ಚಿಕಿತ್ಸೆ: ಪ್ರಥಮತಾ ಕಿರುಮಂಜಿಯಾಗಲೀ (೩೯[1]), ಎಕ್ಕೆಗಿಡದ ಚೂರ್ಣವಾಗಲೀ[2] ಕೊಟ್ಟು ವಾಂತಿ ಮಾಡಿಸುವದು. ರೋಗಿಯನ್ನು ತಣುಸಾಗಿರುವ ಮತ್ತು ಘಾಳಿಚಲನೆ ಸರಾಗವಾಗಿರುವ ಕೋಣೆಯಲ್ಲಿ ಮಲಗಿಸ ಬೇಕು. ಅದಲ್ಲದೆ ಜ್ವರದ ಉಷ್ಣತೆಯನ್ನೂ ದಾಹವನ್ನೂ ಅಣಗಿಸುವದಕ್ಕೆ ನಿಂಬೇಹಣ್ಣಿನ ಪಾನಕವಾಗಲೀ (೫೪[3]), ಗಂಜೀ ನೀರಾಗಲೀ (೧೧೮೯[4]) ಯಥೇಷ್ಟ ಕೊಟ್ಟು, ಮೆಣಸಿನ ಮಿಶ್ರ (೨೩೮) ಹೊಟ್ಟಿಗೆ ಕೊಡುವದು. ಗಂಟ್ಲುನೋವಿನ ಬಗ್ಯೆ ಬಿಸೀ ಶಿರ್ಕದ ಹೊಗೆಯನ್ನು (೨೩೯) ಬಾಯಿಯಲ್ಲಿ ಹೀರಿಕೊಳ್ಳುವದು, ಮತ್ತು ಮೆಣಸಿನ ನೀರನ್ನು ಮುಕ್ಕುಳಿಸುವದು. ಶಿರ್ಕದ ನೀರಿನಿಂದಾಗಲೀ (೨೪೦), ಬರೇ ನೀರಿನಿಂದಾಗಲೀ (೨೪೧) ಮೈಯನ್ನು ತೊಳಿಯುವದರಿಂದ ರೋಗಿಗೆ ಬಹಳ ಹಿತವಾಗುವದಲ್ಲದೆ ಗುಣಕರವೂ ಆಗಿರುವದು. ಈ ರೋಗವು ಕಠಿಣವಾಗಿ ಬೇರೆ ಉಪದ್ರವಗಳ ಸಂಗಡ ಹೊಂದಿಕೊಂಡಿರುವದಕ್ಕೂ, ಅನಂತರದ ಆಶಕ್ತಿಗೂ, ಜ್ವರಕ್ಕೆ ಹೇಳಿರುವ ಚಿಕಿತ್ಸೆಯಲ್ಲಿ ಹೇಳಿದಂತೆ ಮಾಡುವದು.

೨೩೮.[5] ಕೆಂಜ್ವರದಲ್ಲಿ ಕೆಳಗೆ ಹೇಳುವ ಮಿಶ್ರವು ಬಹಳ ಗುಣಕರವೆಂದು ಪಶ್ಚಿಮ ಇಂದಿಯಗಳಲ್ಲಿ (ಅಂದರೆ ಅಮೇರಿಕದಲ್ಲಿ) ಪ್ರಶಸ್ತತೆ ಹೊಂದಿರುತ್ತದೆ: ಎರಡು ಮೇಜಿನ ಸೌಟು ಮೆಣಸಿನ ಹುಡಿ[6] ಮತ್ತು ಎರಡು ಚಾಸೌಟನಷ್ಟು ಉಪ್ಪು, ಇವೆರಡನ್ನು ಚನ್ನಾಗಿ ಆರದು, ಅರ್ಧ ಪ್ಯಾಂಟ್ ಕುದಿಯುವ ನೀರಿನಲ್ಲಿ ಕಲಕಿಸಿ ಒತ್ತಟ್ಟು ಇಟ್ಟು, ತಣ್ಣಗಾದ ಮೇಲೆ ಅದನ್ನು ಗಾಳಿಸಿ ತೆಗದ ನೀರಿಗೆ ಅರ್ಧ ಪ್ಯಾಂಟ್ ಶಿರ್ಕ (ಹುಳಿರಸ) ಕೂಡಿಸುವದು. ಈ ಮಿಶ್ರದಿಂದ ಪ್ರಾಯಪ್ರಬುದ್ಧರಿಗೆ ೧ ಮೇಜಿನ ಸೌಟನಷ್ಟು ನಾಲ್ಕು ತಾಸುಗಳಿಗೊಮ್ಮೆ ಕೊಡುವದು. ಈ ಪರಿಮಾಣವನ್ನು ಮಕ್ಕಳಿಗೆ ಪ್ರಾಯಕ್ಕೂ ರೋಗದ ಕಠಿಣತೆಗೂ ಅನುಸಾರವಾಗಿ ಕಡಿಮೆ ಮಾಡ ಬಹುದು. ಇದೇ ಮಿಶ್ರವನ್ನು ಕೆಂಜ್ವರದಲ್ಲಿ ಉಂಟಾಗುವ ಗಂಟ್ಲುನೋವಿಗೂ, ಇತರ ಲಘು ತರದ ಗಂಟ್ಲುನೋವು ಗಂಟ್ಲೊಡೆಯೋಣ ಮುಂತಾದ್ದಕ್ಕೂ ಬಾಯಿಯಲ್ಲಿ ಮುಕ್ಕುಳಿಸುವದಕ್ಕೆ ಉತ್ತಮ ಔಷಧವಾಗಿ ಪ್ರಯೋಗಿಸಲೂ ಬಹುದು.

೨೩೯. ಲಘು ತರ ಹುಣ್ಣು ಉಂಟಾಗುವ, ಧ್ವನಿ ಕೆಡುವ, ಮತ್ತು ಬೇರೆ ವಿಧದ ಗಂಟ್ಲುನೋವುಗಳಲ್ಲಿ (ಮುಖ್ಯವಾಗಿ ಅದು ಕೆಂಜ್ವರದ ದೆಶೆಯಿಂದ ಉಂಟಾಗಿದ್ದರೆ) ಶಿರ್ಕವನ್ನು ಬಿಸಿ ಮಾಡಿ ಅದರ ಹೊಗೆಯನ್ನು ಬಾಯಿಯಲ್ಲಿ ಉಸುರೆಳದು ಹೀರಿಕೊಳ್ಳುವದರಿಂದ ಬಹುಶಾ ಗುಣಾಂಶ ಬರುವದು.

೨೪೦. ಮೈಲಿಗಜ್ಜಿ, ಕೋರ, ಕೆಂಜ್ವರ ಮುಂತಾದ ಜ್ವರದ ಉಪದ್ರವಗಳಲ್ಲಿ ಮೂರು ಪಾಲು ನೀರಿಗೆ ೧ ಪಾಲು ಸಿರ್ಕ ಬೆರಸಿ, ಒಂದು ಆರಿವೆಯನ್ನು ಅದರಲ್ಲಿ ಅದ್ದಿ, ದಿನಕ್ಕೆ ಎರಡು ಮೂರಾವರ್ತಿ ಮೈಯೊರಸುವದು ಬಹಳ ಶಮನಕರವೂ ಮನೋಹರವೂ ಆಗಿರುವದು. ಇದರ ಶೀತೋಷ್ಣತೆಯ ಹಾಳಿತವನ್ನು ೨೪೧ನೇ ಅಂಕೆಯಲ್ಲಿ ಹೇಳಿರುವಂತೆ ರೋಗಿಯ ಶರೀರ ಪ್ರಕೃತಿಗೂ ಹವೆಯ ಸ್ಥಿತಿಗೂ ತಕ್ಕಂತೆ ಕ್ರಮ ಪಡಿಸ ಬೇಕು.

---

1) ೧೪೭೬ನೇ ಇಸವಿಯ ಪಂಚಾಂಗದ ೭೭ನೇ ಪಾನಿನಲ್ಲಿ ನೋಡು.
2) ೧೪೭೯ನೇ ಇಸವಿಯ ಪಂಚಾಂಗದ ೪೯ನೇ ಪಾನಿನಲ್ಲಿರುವ ಟಿಪ್ಪಣಿಯಲ್ಲಿ ನೋಡು.
3) ೧೪೭೭ನೇ ಇಸವಿಯ ಪಂಚಾಂಗದ ೨೧ನೇ ಪಾನಿನಲ್ಲಿ ನೋಡು.
4) ೧೪೮೦ನೇ ಇಸವಿಯ ಪಂಚಾಂಗದ ೪೭ನೇ ಪಾನಿನಲ್ಲಿ ನೋಡು.
5) ೧೪೮೪ನೇ ಇಸವಿಯ ಪಂಚಾಂಗದ ೫೭ನೇ ಪಾನಿನಲ್ಲಿ ತೀರಿದ ೨೭೭ನೇ ಅಂಕೆಯಿಂದ ಮುಂದೆ.
6) ಇದರ ವಿಷಯ ೧೪೭೭ನೇ ಇಸವಿಯ ಪಂಚಾಂಗದ ೭೭ನೇ ಪಾನಿನಲ್ಲಿರುವ ಟಿಪ್ಪಣಿಯನ್ನು ನೋಡು.

೨೪೧. ಜ್ವರಗಳಲ್ಲಿಯೂ ಇತರ ಉರಿಬೇನೆಗಳಲ್ಲಿಯೂ ಉಂಟಾಗುವ ದಾಹಶಮನಾರ್ಥವಾಗಿ ತಣ್ಣೀರನ್ನು ನಿರಾತಂಕವಾಗಿ ಕುಡಿಯ ಬಹುದು; ಇದಲ್ಲದೆ ಅದು ತಂಪೂ ಹಿತವೂ ಆಗುವಂತೆ ಅದಕ್ಕೆ ಅಕ್ಕಿ, ಕೂವೆಹಿಟ್ಟು ಮುಂತಾದ ಜಿಗಟಾದ ಪದಾರ್ಥವನ್ನೂ, ಹುಣಸೇಹುಳಿ, ನಿಂಬೇರಸ ಮುಂತಾದ ಸಸ್ಯಾದಿ ಆಮ್ಲವನ್ನೂ ತಕ್ಕಷ್ಟು ಕೂಡಿಸ ಬಹುದು. ಮೈಲಿಗಜ್ಜಿ, ಕೋರ, ಕೆಂಜ್ವರ ಮುಂತಾದ ಜ್ವರಗಳಲ್ಲಿ ತಣ್ಣೀರಿನಿಂದ ದಿನಕ್ಕೆ ಒಂದೆರಡು ಸಾರಿ ಮೈಯೊರೆಸುವದು ರೋಗಿಗೆ ಮನೋಹರವಾಗಿರುವದು; ಆದರೆ ಮೈಯ ಶಕೆಯು ಸಹಜ ಸ್ಥಿತಿಗಿಂತ ಹೆಚ್ಚಾಗಿದ್ದ ಪಕ್ಷಕ್ಕೆ, ಅದಕ್ಕೆ ಬದಲಾಗಿ ಉಗುರುಬೆಚ್ಚಗೆ ನೀರನ್ನು ಪ್ರಯೋಗಿಸ ಬಹುದು. ಒಟ್ಟಾರೆಯಾಗಿ ನೀರು ತಣ್ಣಗೆಯೋ ಉಗುರುಬೆಚ್ಚಗೆಯೋ ಪೂರ್ಣ ಬಿಸಿಯೋ ಎಂಬದನ್ನು ರೋಗಿಯ ಚಿತ್ತವೃತ್ತಿಗೆ ಅನುಸಾರವಾಗಿ ಹಿತವಾಗುವಂತೆ ಕ್ರಮ ಪಡಿಸ ಬೇಕು. ನೀರಿನ ಸಂಗಡ, ಮೇಲೆ ಹೇಳಿದಂತೆ, ಸಿರ್ಕ ಬೆರಿಸುವದು ಇನ್ನಷ್ಟು ಶಮನಕರವಾಗಿರುವದು.

ಜ್ವರ (ಕಠಿಣ ಮತ್ತು ಬಿಡದೆ ಬರುವಂಥಾದ್ದು)

Ardent or Continued Fever.

ಚಿಕಿತ್ಸೆ: ಅನೇಕ ಸಂಗತಿಗಳಲ್ಲಿ ಕರಿಜೀರಿಗೆಯ (ಕಾಳಜೀರಿಗೆಯ) ಚೂರ್ಣ (೭೪[1]), ಧನಿಯಾಲ್ಕ (೧೫೦[2]), ಇಲ್ಲವೆ ಅಳಲೇಕಾಯಿಯ ಕಷಾಯ (೭೫[3]) ಕೊಟ್ಟು ಮಲಶೋಧನೆ ಮಾಡಿಸುವದು; ಅಥವಾ ರೋಗಿಯು ಸ್ವಲ್ಪ ಶಕ್ತಿಯುಳ್ಳವನಾಗಿದ್ದರೆ, ಜಾಫಲ (ನೇಪಾಳ) ಬೀಜದ ಮಾತ್ರೆ (೫೯[4]) ಕೊಟ್ಟು ಝಾಡನೆ ಮಾಡಿಸ ಬಹುದು. ಚನ್ನಾಗಿ ಮಲಶೋಧನೆ ಆದ ಬಳಿಕ ದಾಹವನ್ನು ನಿವಾರಿಸಿ ಮೈ ತಣಿಸುವ ಬಗ್ಗೆ, ಪೆಟ್ಲುಪ್ಪಿನ ನೀರನ್ನು (೨೧೯[5]) ಆಗಲೀ, ಬೆಂಡೇಕಾಯಿಯ ಕಷಾಯವನ್ನು (೧೮೪[6]) ಆಗಲೀ, ನಿಂಬೇಹಣ್ಣಿನ ಪಾನಕವನ್ನಾಗಲೀ (೨೧೮[5]), ಹುಣಸೇ ಹುಳಿಯ ಶರ್ಬತವನ್ನಾಗಲೀ (೫೫೪[7]) ಕೊಡುವದು. ಎಲ್ಲಾ ತರದ ಜ್ವರಗಳಲ್ಲಿ (ಮುಖ್ಯವಾಗಿ ಅನ್ನಕೋಶದ ಆಕ್ರಮದ ದೆಶೆಯಿಂದ ಉಂಟಾಗುವ ಜ್ವರಗಳಲ್ಲಿ) ಬಹಳ ಪ್ರಯೋಜನಕರವಾಗಿಯೂ ಶಮನಕರವಾಗಿಯೂ ಇರುವ ಪಾನಕ ಯಾವದಂದರೆ — ಹಾಲು ಮತ್ತು ಸೋಡಾ (soda) ಎಂಬ (ಸೌಳುಖಾರ) ಲವಣದ ನೀರು ಇವೆರಡನ್ನು ಸಮಾಂಶವಾಗಿ ಕೂಡಿಸಿ ಅದಕ್ಕೆ ಒಂದಿಷ್ಟು ಬರ್ಫ (ಹಿಮಗಡ್ಡೆ) ತುಂಡು ಶಿಕ್ಕಿದರೆ ಹಾಕಿ, ಕುಡಿಯಲಿಕ್ಕೆ ಕೊಡುವದು. ಹಿಮಗಡ್ಡೆಯ ತುಂಡನ್ನು ಮಾತ್ರವೇ ಬಾಯಿಯಲ್ಲಿಟ್ಟು ಶೀಪಿಕೊಳ್ಳುವದರಿಂದಲೂ ದಾಹ ಶಾಂತವಾಗಿ ಮೈ ತಣ್ಣಗಾಗಲೀಸ ಬಹುದು. ಈ ಎರಡನೇ ಉದ್ದಿಶ್ಯಕ್ಕೋಸ್ಕರ ಬರೇ ಉಗುರುಬೆಚ್ಚಗೆ ಸಿರ್ಕದ ನೀರಿನಿಂದಾಗಲೀ (೨೨೦[8]),

---

1) ೧೪೯೯ನೇ ಇಸವಿಯ ಪಂಚಾಂಗದ ೩೭ನೇ ಪಾನಿನಲ್ಲಿಯೂ ಅದರ ಟಿಪ್ಪಣಿಯಲ್ಲಿಯೂ ನೋಡು.

2) ೧೪೪೧ನೇ ಇಸವಿಯ ಪಂಚಾಂಗದ ೫೫ನೇ ಪಾನಿನಲ್ಲಿಯೂ ಅದರ ಟಿಪ್ಪಣಿಯಲ್ಲಿಯೂ ನೋಡು.

3) ೧೪೯೯ನೇ ಇಸವಿಯ ಪಂಚಾಂಗದ ೩೪ನೇ ಪಾನಿನಲ್ಲಿಯೂ ಅದರ ಟಿಪ್ಪಣಿಯಲ್ಲಿಯೂ ನೋಡು.

4) ೧೪೩೩ನೇ ಇಸವಿಯ ಪಂಚಾಂಗದ ೨೪ನೇ ಪಾನಿನಲ್ಲಿಯೂ ಅದರ ಟಿಪ್ಪಣಿಯಲ್ಲಿಯೂ ನೋಡು.

5) ೧೪೪೪ನೇ ಇಸವಿಯ ಪಂಚಾಂಗದ ೪೩ನೇ ಪಾನಿನಲ್ಲಿಯೂ, ಪೆಟ್ಲುಪ್ಪನ್ನು ಸಿದ ಮಾಡುವ ವಿಷಯದಲ್ಲಿ ೧೪೩೩ನೇ ಇಸವಿಯ ಪಂಚಾಂಗದ ೩೦ನೇ ಪಾನಿನ ಟಿಪ್ಪಣಿಯಲ್ಲಿಯೂ ನೋಡು.

6) ೧೪೪೩ನೇ ಇಸವಿಯ ಪಂಚಾಂಗದ ೪೩ನೇ ಪಾನಿನಲ್ಲಿಯೂ ಅದರ ಟಿಪ್ಪಣಿಯಲ್ಲಿಯೂ ನೋಡು.

7) ೧೪೩೩ನೇ ಇಸವಿಯ ಪಂಚಾಂಗದ ೩೧ನೇ ಪಾನಿನಲ್ಲಿಯೂ ಅದರ ಟಿಪ್ಪಣಿಯಲ್ಲಿಯೂ ನೋಡು.

8) ೧೪೪೪ನೇ ಇಸವಿಯ ಪಂಚಾಂಗದ ೪೯ನೇ ಪಾನಿನಲ್ಲಿ ನೋಡು.

ಬರೇ ನೀರಿನಿಂದಾಗಲೀ ಮೈ ತೊಳೆಯುವದು. ಆಹಾರ: ಅಕ್ಕೀ ಗಂಜಿ (೧೧೮೮[1]) ಇಲ್ಲವೆ ಕೂವೆ ಮುಂತಾದ ಇತರ ಹಿಟ್ಟಿನ ಗಂಜೀ ಮಾಡಿ ಕೊಡುವದು. ಆದಲ್ಲದೆ ರೋಗಿಯನ್ನು ಮಲಗಿಸಿದ ಕೋಣೆ ತಣುಸಾಗಿಯೂ ಸರಾಗ ಘಾಳಿಯ ಚಲನೆಯುಳ್ಳದ್ದಾಗಿಯೂ ಇರಿಸ ಬೇಕು. ತಲೆಶಿಡಿತ ತಲೆಭಾರ ನಿವಾರಿಸುವ ಬಗ್ಯೆ ಸಿಕ್ಕದ ಲೇಪವನ್ನಾಗಲೀ (೨೨[2]), ಪೆಟ್ಟುಪ್ಪಿನ ಲೇಪವನ್ನಾಗಲೀ (೨೪೨), ಇವು ಫಲಿತವಾಗದಿದ್ದ ಪಕ್ಷಕ್ಕೆ, ಬಿಸಿ ನೀರಿನ ಶೇಕವನ್ನಾಗಲೀ (೧೦೯[3]) ಕೊಡ ಬಹುದು. ಕಠಿಣ ಸಂಗತಿಗಳಲ್ಲಿ ಅವಶ್ಯವಾದ ಪಕ್ಷಕ್ಕೆ, ಕೆನ್ನೆಗಳಿಗಾಗಲೀ ಹೆಗ್ಗತ್ತಿಗಾಗಲೀ ಜಿಗಳೆ ಕಚ್ಚಿಸಿ[4], ಪಾದಗಳಿಗೆ ಸಾಸಿವೇ ಒತ್ತಡ (೫೨[5]) ಕಟ್ಟುವದು. ಕಿರಿಹೊಟ್ಟೆಯಲ್ಲಿಯಾಗಲೀ ಎದೆಯಲ್ಲಿ ಆಗಲೀ ತೀವ್ರ ತರದ ನೋವು ಮುಂತಾದ್ದು ಇರುವ ಪಕ್ಷಕ್ಕೆ, ಆ ನೋವುಳ್ಳ ಜಾಗದಲ್ಲಿ ಮೇಲೆ ಹೇಳಿದಂತೆ ಜಿಗಳೆ ಕಚ್ಚಿಸ ಬೇಕು; ಆದರೆ ಇದು ತಾಗದಿದ್ದರೆ, ಚಳ್ಳೆ (೧೯೦[6]) ಎಬ್ಬಿಸ ಬೇಕಾದೀತು. ವಾಂತಿಯೂ ಅನ್ನಕೋಶ್ಠದ ಅಕ್ರಮವೂ ಇದ್ದ ಪಕ್ಷಕ್ಕೆ, ಸುಣ್ಣದ ತಿಳೀನೀರು (೨೪೩) ಕೊಡುವದು. ಗಂಟ್ಲುನೋವಾಗಲೀ ನಾಲಿಗೆ ಒಡಿಯೋಣವಾಗಲೀ ಎದ್ದರೆ, ಬಿಳೀಗಾರ (೧೦೨[7]) ಇಲ್ಲವೆ ಫಟಿಕಾರ (೭೬[8]) ಪ್ರಯೋಗಿಸುವದು. ಬಾಯ್ಯಾರಿ ಉಗುಳು ದಪ್ಪವಾದರೆ, ನಿಂಬೇಹಣ್ಣಿನ ಹೋಳನ್ನಾಗಲೀ ಅನನಾಸಿನ ತುಂಡನ್ನಾಗಲೀ ಬಾಯಿಯಲ್ಲಿಟ್ಟು ಶೀಪಿಕೊಳ್ಳುವದರಿಂದ ಬಹಳ ಗುಣವಿರುವದು. ಜ್ವರವು ಬಹಳ ವಿಾರಿ ಹೋಗಿ ರೋಗಿಗೆ ಬಹಳ ನಿಶ್ಚೇತನ, ಆಡಲ ಭ್ರಮಣ ಮುಂತಾದ್ದು ಉಂಟಾದರೆ, ಕರ್ಪೂರವನ್ನೂ (೨೨೨[9]) ಬ್ರಾಂಡೀ ಮಿಶ್ರವನ್ನೂ[10] ಕೊಡುವದು; ಮತ್ತು ಕೈಕಾಲುಗಳ ತುದಿಗಳಿಗೆ ಟರ್ಪೆಂಟಾಯಿನ (ಕರ್ಪೂರತೈಲದ) ನೀರುಗಾವು (೨೪[11]) ಕೊಡುವದು. ಆದಲ್ಲದೆ ಕರ್ಪೂರತೈಲದ ಪಿಚಕಾರಿ ಹೊಡಿಯುವದು ಸಹ (೬೩[12]) ಈ ಸ್ಥಿತಿಯಲ್ಲಿ ಬಹಳ ಗುಣಾಂಶ ಉಳ್ಳದ್ದು. ಜ್ವರ ಬಿಟ್ಟ ಮೇಲೆ ಉಂಟಾಗುವ ಅಶಕ್ತ್ಯಿಯ ಬಗ್ಯೆಯೂ ಮೈಕೂಡುವದಕ್ಕೂ ಮುಂದೆ ಹೇಳಿರುವ ತೇಜವರ್ಧಕ ಔಷಧಗಳು (tonics) ಬಹಳ ಒಳ್ಳೆಯವುಗಳು. ಚಿರೆತ್ತ (ಕಿರಿಯಾತಿನ) ಕಲ್ಕ (೧೦[13]), ಅತಿವಿಟೆಯದ ನೀರು (೨೨೫[14]), ಗಜಿಗೆಯ ಚೂರ್ಣ (೨೨೬[14]), ನೆಲಬೇವು ಎಂಬ ಕಿರ್ಯಾತಿನ

---

1) ೧೮೮೦ನೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿ ನೋಡು.

2) ೧೮೭೬ನೇ ಇಸವಿಯ ಪಂಚಾಂಗದ ೩೧ನೇ ಪಾನಿನಲ್ಲಿ ನೋಡು.

3) ೧೮೮೦ನೇ ಇಸವಿಯ ಪಂಚಾಂಗದ ೪೧ನೇ ಪಾನಿನಲ್ಲಿ ನೋಡು.

4) ಜಿಗಳೆ ಕಚ್ಚಿಸುವ ವಿಷಯದಲ್ಲಿ ೧೮೮೦ನೇ ಇಸವಿಯ ಪಂಚಾಂಗದ ೩೩-೩೪ನೇ ಪಾನುಗಳಲ್ಲಿ ನೋಡು.

5) ೧೮೭೭ನೇ ಇಸವಿಯ ಪಂಚಾಂಗದ ೩೪ನೇ ಪಾನಿನಲ್ಲಿ ನೋಡು.

6) ೧೮೮೩ನೇ ಇಸವಿಯ ಪಂಚಾಂಗದ ೪೭ನೇ ಪಾನಿನಲ್ಲಿಯೂ ಅದರ ಟಪ್ಪಣಿಯಲ್ಲಿಯೂ ನೋಡು.

7) ೧೮೭೯ನೇ ಇಸವಿಯ ಪಂಚಾಂಗದ ೩೧ನೇ ಪಾನಿನಲ್ಲಿ ನೋಡು.

8) ಅದೇ ಪಂಚಾಂಗದ ೩೯ನೇ ಪಾನಿನಲ್ಲಿ ನೋಡು.

9) ೧೮೮೪ನೇ ಇಸವಿಯ ಪಂಚಾಂಗದ ೪೯ನೇ ಪಾನಿನಲ್ಲಿರುವ ಟಪ್ಪಣಿಯಲ್ಲಿ ನೋಡು.

10) ೧೮೭೭ನೇ ಇಸವಿಯ ಪಂಚಾಂಗದ ೧೭ನೇ ಪಾನಿನಲ್ಲಿರುವ ℥. ಕಲಮನ್ನು ನೋಡು.

11) ೧೮೭೭ನೇ ಇಸವಿಯ ಪಂಚಾಂಗದ ೩೨ನೇ ಪಾನಿನಲ್ಲಿ ನೋಡು.

12) ೧೮೭೭ನೇ ಇಸವಿಯ ಪಂಚಾಂಗದ ೪೫ನೇ ಪಾನಿನಲ್ಲಿ ನೋಡು.

13) ೧೮೭೭ನೇ ಇಸವಿಯ ಪಂಚಾಂಗದ ೩೯ನೇ ಪಾನಿನಲ್ಲಿ ನೋಡು. ಆದರೆ ಈ ಕಲ್ಕವನ್ನು ತಣ್ಣೀರಿನಲ್ಲಿ ಪೂಡ ಬೇಕು.

14) ೧೮೮೪ನೇ ಇಸವಿಯ ಪಂಚಾಂಗದ ೫೦ನೇ ಪಾನಿನಲ್ಲಿಯೂ ಅದರ ಟಪ್ಪಣಿಯಲ್ಲಿಯೂ ನೋಡು.

ಕಲ್ಕ (೯೪[1]), ಬೇವಿನ ಚಕ್ಕೆಯ ಕಷಾಯ (೪೯[2]), ಇಲ್ಲವೆ ಅಮೃತಬಳ್ಳಿಯ ಕಲ್ಕ (೫೦[3]) ಸಹ ಬಹಳ ಪ್ರಯೋಜನಕರವಾಗಿರುವವು. ಇದಕ್ಕೊಕ್ಕೀಸ್ಕರ ಕಿರ್ಯಾತಿನ ಮತ್ತು ಬಜೆಯ ಕಲ್ಕ (೧೨[4]) ಅಥವಾ ಕಿರ್ಯಾತಿನ ಧೃತಿ (೧೧[4]) ಒಂದು ವೇಳೆ ಅತ್ಯುತ್ತಮವಾಗಿದ್ದಾವು. ಅದಲ್ಲದೆ ಯಥೇಷ್ಟ ಮಾಂಸಾಹಾರ ಕೊಡ ತಕ್ಕದ್ದು.

ಸೂಚನೆ: ಏವಂಚ ಜ್ವರ ಇರುವಷ್ಟು ಕಾಲಕ್ಕೆ ಮಲಶೋಧನೆಯು ಸರಿಯಾಗಿ ಇರಲೀಸುವಂಥಾದ್ದು ಅತ್ಯವಶ್ಯಕವಾದದ್ದು.

೨೪೨. ಜ್ವರದಲ್ಲಿ ಉಂಟಾಗುವ ತಲೆಶಿಡಿತಕ್ಕೂ ಅಡಲಭ್ರಮಣಕ್ಕೂ ಪೆಟ್ಲುಪ್ಪನ್ನೂ ನವಸಾಗರವನ್ನೂ ಸಮಭಾಗವಾಗಿ ಮೂರು ಮೂರು ಔನ್ಸ್ ತೆಗದು, ಒಂದು ಬಾಟ್ಲಿ ತುಂಬ ನೀರಿನಲ್ಲಿ ಹಾಕಿ ಕಲಕಿಸಿ, ಆದರಲ್ಲಿ ಅರಿವೆ ತುಂಡನ್ನು ಅದ್ದಿ, ಕಣತಲೆಗೆ ಇಟ್ಟು, ಆದನ್ನು ಬಿಡದೆ ತೋಯಿಸುತ್ತಾ ಇರುವದು.

೨೪೩. ಕಠಿಣ ತರದ ವಾಂತಿಯು ಬೇರೆ ಯಾವ ವಿಧದಿಂದ ನಿಲ್ಲದ ಪಕ್ಷಕ್ಕೆ, ಸುಣ್ಣದ ತಿಳೀನೀರು[5] ಹಾಲಿನಲ್ಲಿ ಕೆಲವು ಸಾರಿ ಕೊಡುವದರಿಂದ ಗುಣ ಬರುವದು. ಕಠಿಣ ತರದ ಜ್ವರದ ದೆಶೆಯಿಂದ ಉಂಟಾಗುವ ವಾಂತಿಗೂ ಕೊಟ್ಟು ನೋಡ ತಕ್ಕ ದ್ದಾಗಿರುತ್ತದೆ. ಅರಿಶಿನ ಜ್ವರದಲ್ಲಿ ಅದನ್ನು ಕೊಡುವದರಿಂದ ಕಪ್ಪು ತರದ ವಾಂತಿ ಸಹ ನಿಂತು ಹೋಗುವದಂತೆ. ಉಗುಳುರೋಗದಲ್ಲಿಯೂ ಅದು ಬಹಳ ಪ್ರಯೋಜನಕರವಾದ ಔಷಧವಾಗಿರುತ್ತದೆ.

ಜ್ವರ—ವರಿಶೇಜ್ವರ (ಛಳಿಜ್ವರ, ವಿಷಮ ಅಥವಾ ಮಲೆಜ್ವರ)

Intermittent Fever or Ague, Remittent or Jungle Fever.

ಇದರ ಚಿಕಿತ್ಸೆಯನ್ನು ಕುರಿತು ೧೬೬೪ನೇ ಇಸವಿಯ ಪಂಚಾಂಗದ ೪೮—೫೩ನೇ ಪಾನುಗಳಲ್ಲಿ ನೋಡಿಕೊಳ್ಳುವದು.

ಜ್ವಾಲೆ (ಬೀಗು) Inflammation.

ಇದಕ್ಕೆ ೧೬೬೦ನೇ ಇಸವಿಯ ಪಂಚಾಂಗದ ೪೩—೪೬ನೇ ಪಾನುಗಳಲ್ಲಿ ಉರುಪು ಉರುತಗಳಿಗೆ ಹೇಳಿದ ಚಿಕಿತ್ಸೆಯನ್ನು ಮಾಡುವದು.

ಜಿಗಳೆ ಕಚ್ಚಿದರಿಂದ ನೆತ್ತರು ಸುರಿಯುವದನ್ನು ನಿಲ್ಲಿಸೋಣ

To arrest Bleeding from Leech-bites.

೧೬೬೦ನೇ ಇಸವಿಯ ಪಂಚಾಂಗದ ೩೪ನೇ ಪಾನಿನಲ್ಲಿರುವ ೩ನೇ ಅಂಕೆ ನೋಡು.

---

1) ೧೬೬೯ನೇ ಇಸವಿಯ ಪಂಚಾಂಗದ ೪೮ನೇ ಪಾನಿನಲ್ಲಿಯೂ ಅದರ ಟಪ್ಪಣಿಯಲ್ಲಿಯೂ ನೋಡು.

2) ೧೬೬೩ನೇ ಇಸವಿಯ ಪಂಚಾಂಗದ ೧೪-೧೫ನೇ ಪಾನುಗಳಲ್ಲಿಯೂ ಟಪ್ಪಣಿಯಲ್ಲಿಯೂ ನೋಡು.

3) ಆದೇ ಪಂಚಾಂಗದ ೧೯ನೇ ಪಾನಿನಲ್ಲಿಯೂ ಅದರ ಟಪ್ಪಣಿಯಲ್ಲಿಯೂ ನೋಡು.

4) ೧೬೬೩ನೇ ಇಸವಿಯ ಪಂಚಾಂಗದ ೫೯ನೇ ಪಾನಿನಲ್ಲಿ ನೋಡು.

5) ಆದೇ ಪಂಚಾಂಗದ ೩೦ನೇ ಪಾನಿನಲ್ಲಿರುವ ೧೭, ೧೪, ೧೯ನೇ ಕಲಮುಗಳನ್ನು ನೋಡು.

ಜೊಲ್ಲು ಹೆಚ್ಚುವದು Salivation.

ಗಲಲಂನೇ ಇಸವಿಯ ಪಂಚಾಂಗದ ೩೭ನೇ ಪಾನಿನಲ್ಲಿ ನೋಡು.

ತರಟೇ ಹುಳ (ಕಿವಿಹಾವು, ಶತಪದಿ) Venomous Bites of Centipedes.

ಇದಕ್ಕೆ ಗಲಲಗನೇ ಇಸವಿಯ ಪಂಚಾಂಗದ ೫೦ನೇ ಪಾನಿನಲ್ಲಿ ಕಣಜಹುಳ ಚುಚ್ಚಿದ್ದಕ್ಕೆ ಹೇಳಿದ ಚಿಕಿತ್ಸೆಯನ್ನು ಮಾಡುವದು.

ತಲೆಖಜ್ಜಿ (ಮಸುಳು, ತಲೆಚುಂಡು) Scald-head, Scurf in the Head.

ಇದಕ್ಕೆ ಇದೇ ಪಂಚಾಂಗದಲ್ಲಿ ದದ್ದು ಎಂಬ ಖಜ್ಜಿಗೆ ಹೇಳಿದ ಚಿಕಿತ್ಸೆಯನ್ನು ಅಥವಾ ಎಣ್ಣೆಯನ್ನು ಮಾಡುವದು. ಅದಲ್ಲದೆ ತಲೆಖಜ್ಜಿಗೆ ಸಾಧಾರಣವಾಗಿಯೂ ಒಳ್ಳೇ ಗುಣಕರವಾಗಿಯೂ ಇರುವ ಔಷಧವೇನಂದರೆ—ಒಂದು ಬಾಟ್ಲಿ ನೀರಿನಲ್ಲಿ ಒಂದು ಅಡಿಕೆಯಷ್ಟು ಹೊಸ ಚಿಪ್ಪು ಸುಣ್ಣವನ್ನು ಹಾಕಿ, ಚನ್ನಾಗಿ ಕಲಕಿಸಿ, ಸುಮಾರು ೧೨ ತಾಸು ವರೆಗೆ ಒತ್ತಟ್ಟು ಇಡುವದು. ಆ ಮೇಲೆ ಅದರ ತಿಳೀನೀರು ಮಾತ್ರ ಬೇರೊಂದು ಪಾತ್ರೆಯಲ್ಲಿ ತೆಗದು, ಅದಕ್ಕೆ ಕಾಲು ಬಾಟ್ಲಿ ಒಳ್ಳೇ ಶಿರ್ಕವನ್ನು ಕೂಡಿಸಿ ಚನ್ನಾಗಿ ಕದಲಿಸ ಬೇಕು. ಈ ಮಿಶ್ರ ನೀರಿನಿಂದ ದಿನಾಲು ತಲೆಯನ್ನು ತೊಳಿಯ ಬೇಕು: ಆಂದರೆ ಕೂದಲಿನ ಬುಡ ಮಾತ್ರ ಒದ್ದೆಯಾದರೆ ಸಾಕು. ಈ ಮಿಶ್ರವು ಮೆದುಲಿಗಾಗಲೀ ಕಣ್ಣಿಗಾಗಲೀ ಕಿಂಚಿತ್ತಾದರೂ ಬಾಧಕಕರವಲ್ಲ.

ತಲೆವ್ಯಾಧಿ ಸಂಬಂಧವಾದ ನಿದ್ರೆಗೇಡು
Sleeplessness in Head Affections.

ಇದರ ಚಿಕಿತ್ಸೆಯನ್ನು ಮುಂದೆ ಬರುವ ನಿದ್ರೆಗೇಡು ಎಂಬ ಹೆಸರಿನಲ್ಲಿ ನೋಡು.

ತಲೆವ್ಯಾಧಿ Affections of Head.

ರಕ್ತ ತಲೆಗೇರಿ ನಿದ್ರಾಭಂಗವೂ ಅವಿಶ್ರಾಂತಿಯೂ ಕರಕರೆಯೂ ಸಹಿತವಿದ್ದರೆ, ಸಾಸಿವೆ ಮಜ್ಜನ ಕೊಡುವದು (೨೪೪[1]).

೨೪೪. ಬುದ್ಧಿಭ್ರಾಂತಿಯು ಪ್ರಾರಂಭಾವಸ್ಥೆ, ಅಡಲಭ್ರಮಣೆ ಮುಂತಾದ ತಲೆವ್ಯಾಧಿಗಳಲ್ಲಿ ರಕ್ತತಲೆಗೇರಿ, ಅನಿದ್ರೆಯೂ ಅವಿಶ್ರಾಂತಿಯೂ ಕರಕರೆಯೂ ಉಂಟಾದರೆ, ಚನ್ನಾಗಿ ಸಾಸಿವೆ ಹುಡಿ ಕಲಕಿಸಲ್ಪಟ್ಟ ಬಿಸಿ ನೀರಿನಲ್ಲಿ ಅದ್ದಿದ ಅರಿವೆಯಿಂದ ಕಿಬ್ಬೊಟ್ಟೆಯ ಕೆಳಭಾಗವನ್ನೂ ಕಾಲುಗಳನ್ನೂ ಪೂರ್ಣ ಮುಚ್ಚಿ, ತಣ್ಣೀರಲ್ಲಿ ನೆನಸಿದ ಇನ್ನೊಂದು ಅರಿವೆಯನ್ನು ನೆತ್ತಿಗೆ ಸುತ್ತ ಬೇಕು. ಇದರಿಂದ ಬಹಳ ಶಮನಕರ ಫಲವುಂಟಾಗುವದಲ್ಲದೆ, ಆಗಾಗ್ಯೆ ನಿದ್ರೆ ಸಹ ಬರುವದು. ಅದಲ್ಲದೆ ಪ್ರತಿ ರಾತ್ರೆ ಮಲಗುವ ಮುಂಚೆ (೨೩ನೇ[2] ಅಂಕೆಯಲ್ಲಿ ಹೇಳಿದಂತೆ) ಸಾಸಿವೆ ನೀರಿನ ಪಾದಮಜ್ಜನ ಕೊಟ್ಟು ಗುಣ ನೋಡ ಬಹುದು.

---

1) ನಪ್ಪವಾಗಿ ಛಾಪಿಸಿ ಇರುವ ಅಂಕೆ ವಿಶೇಷ ಗುಣವುಳ್ಳ ಔಷಧವೆಂದು ಸೂಚಿಸುತ್ತದೆ.

2) ಗಅಒನೇ ಇಸವಿಯ ಪಂಚಾಂಗದ ೩೧ನೇ ಪಾನಿನಲ್ಲಿ ನೋಡು.

ತಲೆಶಿಡಿತ Headache.

ತಲೆನೋವು ಬೇರೆ ರೋಗದ ಲಕ್ಷಣವಾಗಿರುತ್ತದಲ್ಲದೆ ಅದು ತಾನೇ ಒಂದು ರೋಗವಾಗಿರುವದಿಲ್ಲ. ಆದದರಿಂದ ಅದು ಅನ್ನಕೋಶದ ಆಕ್ರಮದ ದೆಶೆಯಿಂದಾಗಲೀ, ಮಲಬದ್ಧತೆಯಿಂದಾಗಲೀ, ನೆಗಡಿಯಿಂದಾಗಲೀ, ಮಾನಸಿಕ ಉತ್ತೇಜನದಿಂದಾಗಲೀ ಮಸ್ತಿಸ್ಕದಲ್ಲಿ ರಕ್ತವೇರೋಣದರಿಂದಾಗಲೀ ಉಂಟಾಗುವದುಂಟು; ಆದಕಾರಣ ಆಯಾ ಕಾರಣಗಳ ರಣೆಯಿಂದ ತತ್ಸಂಬಂಧವಾದ ತಲೆಶಿಡಿತ ಸಹ ಶಮನವಾದೀತು.

ಚಿಕಿತ್ಸೆ: ತಲೆಶಿಡಿತಕ್ಕೆ ಅದರದರ ಕಾರಣಕ್ಕನುಸಾರವಾಗಿ ಚಿಕಿತ್ಸೆ ಮಾಡ ತಕ್ಕದ್ದು. ಮಲಬದ್ಧತೆಯಿಂದ ಆಗಿದ್ದರೆ, ಹರಳೆಣ್ಣೆ (೧೫೦[1]), ಕರಿಜೀರಿಗೆ ಚೂರ್ಣ (೨೪[2]), ಅಳಲೆ ಕಾಯಿ ಕಷಾಯ (೭೫[3]), ಇಲ್ಲವೆ ಇತರ ಏನಾದರೂ ವಿರೇಚಕ ಔಷಧ ಕೊಟ್ಟು ಝಾಡನೆ ಮಾಡಿಸುವದು. ಪಿತ್ತೋದ್ರೇಕದಿಂದ ಉಂಟಾದ ಪಕ್ಷಕ್ಕೆ, ಮಲಶೋಧಕ ಔಷಧ ಕೊಡುವದಕ್ಕಿಂತ ಮುಂಚೆ ೩ ಗ್ರೇನ್. "ಕೆಲೊಮೆಲ್" (calomel[4]) ಧಾತು ಕೈಬಳೀಲಿ ಇದ್ದರೆ, ಕೊಡುವದು. ಆ ಮೇಲೆ ನವಸಾಗರ (೨೪೫) ಕೊಡುವದು. ನರಗಳ ಅಶಕ್ತಿಯಿಂದಾಗಲೀ, ಸೂತಿಕವಾಯುವಿನಿಂದಾಗಲೀ, ವಾತದಿಂದಾಗಲೀ ಉಂಟಾಗುವ ತಲೆಶಿಡಿತ ಸಹ, ನವಸಾಗರ ಕೆಲವು ದಿನಗಳ ವರೆಗೆ ಬಿಡದೆ ಕೊಡುವದರಿಂದಲೂ, ಬಾಹ್ಯ ಲೇಪನವಾಗಿ ಕರ್ಪೂರದ ನೀರು (೨೪೬) ಹಚ್ಚುವದರಿಂದಲೂ ಶಮನವಾಗುವದು. ಸೂತಕದ ಕಟ್ಟಳೆಯು ನಿಂತು ಹೋದ ದೆಶೆಯಿಂದ ತಲೆವೇದನೆ ಉಂಟಾದ ಪಕ್ಷಕ್ಕೆ, ತೊಡೆಗೆ ಜಿಗಳೆ ಕಚ್ಚಿಸುವದು[5]. ಮೂಲವ್ಯಾಧಿಯ ರಕ್ತಹರಿಯೋಣವು ಫಕ್ಕನೆ ಸ್ತಬ್ಧವಾದ ದೆಶೆಯಿಂದ ಉಂಟಾದ ಪಕ್ಷಕ್ಕೆ, ಮಲಾಶಯದ ಅಂಚಿಗೆ ಜಿಗಳೆ ಕಚ್ಚಿಸುವದು. ಈಗ ಹೇಳಿದ ಉಭಯ ಸಂಗತಿಗಳಲ್ಲಿಯೂ ಹೊಟ್ಟೆಗೆ ರಕ್ತಬೋಳ (೨೦೭[6]) ಕೊಡ ತಕ್ಕದ್ದು. ತಲೆವೇದನೆಯಲ್ಲಿ ಪ್ರಶಸ್ತವಾದ ಬೇರೆ ಚಿಕಿತ್ಸೆಗಳು ಯಾವವಂದರೆ: ಶುಂಠೀ ಒತ್ತಡ (೨೪೭), ಬಿಸಿ ನೀರಿನ ಶೇಕ (೧೦೯[7]), ಸಾಸಿವೆಯ ಒತ್ತಡ, ಇಲ್ಲವೆ ಕೈಕಾಲುಗಳ ತುದಿಗಳಿಗೆ ಸಾಸಿವೆ ನೀರಿನ ಮಜ್ಜನ (೨೩[8]), ಇವು ಬಹಳ ಗುಣಕರವಾಗಿರುತ್ತವೆ.

೨೪೫. ನವಸಾಗರವು[9] ಸೂತಿಕವಾಯು, ನರಗಳ ಅಶಕ್ತಿ, ಮತ್ತು ಪಿತ್ತದ ತಲೇಶಿಡಿತ, ಇವುಗಳಲ್ಲಿ ಬಹಳ ಗುಣಕರವಾಗಿರುತ್ತದೆ, ಮಾತ್ರವಲ್ಲದೆ ಅವು ಪೂರ್ಣ ನಿವಾರಣೆಯಾದದ್ದುಂಟು; ಹ್ಯಾಗಂದರೆ: ನವಸಾಗರ ೧೦—೨೦ ಗ್ರೇನ್ ತೆಗದು, ಕರ್ಪೂರದ ನೀರಿನಲ್ಲಿ (೨೪೬) ಕಲಕಿಸಿ, ದಿನಕ್ಕೆ ಎರಡು ಯಾ ಮೂರು ಸಾರಿ ಕೊಡುವದು. ರೋಗದ ಎಷ್ಟು ಪ್ರಾರಂಭದಲ್ಲಿ ಕೊಡಲಾಗುತ್ತದೋ ಗುಣವಾಗುವ ಸಂಭವವು ಅಷ್ಟು ಹೆಚ್ಚಾಗಿರುವದು.

---

1) ೧೫೦ನೇ ಇಸವಿಯ ಪಂಚಾಂಗದ ೫೯ನೇ ಪಾನಿನಲ್ಲಿಯೂ ಅದರ ಟಿಪ್ಪಣಿಯಲ್ಲಿಯೂ ನೋಡು.
2) ೧೫೬ನೇ ಇಸವಿಯ ಪಂಚಾಂಗದ ೬೬ನೇ ಪಾನಿನಲ್ಲಿಯೂ ಅದರ ಟಿಪ್ಪಣಿಯಲ್ಲಿಯೂ ನೋಡು.
3) ೧೫೬ನೇ ಇಸವಿಯ ಪಂಚಾಂಗದ ೬೭ನೇ ಪಾನಿನಲ್ಲಿಯೂ ಅದರ ಟಿಪ್ಪಣಿಯಲ್ಲಿಯೂ ನೋಡು.
4) ಇದು ಎಲಾಯತಿ ಔಷಧ ಮಾರುವ ಅಂಗಡಿಗಳಲ್ಲಿ ಶಿಗುತ್ತದೆ.
5) ೧೫೦ನೇ ಇಸವಿಯ ಪಂಚಾಂಗದ ೫೬-೫೯ನೇ ಪಾನುಗಳಲ್ಲಿ ನೋಡು.
6) ೧೫೦೬ನೇ ಇಸವಿಯ ಪಂಚಾಂಗದ ೫೬-೫೭ನೇ ಪಾನುಗಳಲ್ಲಿಯೂ ಟಿಪ್ಪಣಿಯಲ್ಲಿಯೂ ನೋಡು.
7) ೧೫೦೯ನೇ ಇಸವಿಯ ಪಂಚಾಂಗದ ೪೧ನೇ ಪಾನಿನಲ್ಲಿ ನೋಡು.
8) ೧೫೨೩ನೇ ಇಸವಿಯ ಪಂಚಾಂಗದ ೭೧ನೇ ಪಾನಿನಲ್ಲಿ ನೋಡು.
9) ೧೫೨೭ನೇ ಇಸವಿಯ ಪಂಚಾಂಗದ ೩೧ನೇ ಪಾನಿನಲ್ಲಿರುವ ಟಿಪ್ಪಣಿಯನ್ನು ಸರಿ ನೋಡು.

೨೪೬. ಕರ್ಪೂರದ[1] ನೀರು ಮನೆಯಲ್ಲಿ ಆಗಾಗ್ಯೆ ಉಪಯೋಗಕ್ಕೊಸ್ಕರವಾಗಿ ತಯಾರು ಮಾಡಿ ಇಟ್ಟುಕೊಳ್ಳ ತಕ್ಕದ್ದು. ಅದನ್ನು ಮಾಡುವದು ಹ್ಯಾಗಂದರೆ: ಒಂದು ಇಡೀ ಬಾಟ್ಲಿ ನೀರಿನಲ್ಲಿ ೨ ದ್ರಮ್ ಕರ್ಪೂರವನ್ನು ಹಾಕಿ, ಕೆಲವು ದಿವಸಗಳ ತನಕ ಒತ್ತಟ್ಟಿನಲ್ಲಿ ಇಡುವದು. ಆ ಮೇಲೆ ತೆಗದು, ಅದರಿಂದ, ದೊಡ್ಡವರಿಗಾದರೆ, ಒಂದು ವ್ಯಾನ್‌ಗ್ಲಾಸ್ ತುಂಬ ಕೊಡ ಬಹುದು. ಬೇರೆ ಔಷಧಗಳನ್ನು ಕೊಡುವಾಗ ಹ್ಯಾವರಿಕೆ ಆಗದ ಹಾಗೆ ಕರ್ಪೂರದ ನೀರನ್ನು ಬೆರಿಸಿ ಕೊಡ ಬಹುದು.

೨೪೭. ಶುಂಠಿಯನ್ನು ಸ್ವಲ್ಪ ನೀರು ಹಾಕಿ ಅರದು, ಲೇಪ ಮಾಡಿ ತಲೆಗೆ ಹಚ್ಚುವದರಿಂದ ತಲೆಶಿಡಿತ ಅನೇಕ ಸಂಗತಿಗಳಲ್ಲಿ ನಿವಾರಣೆಯಾಗುತ್ತದೆ. ಹಲ್ಲುನೋವು, ಹರಿವಾತವುಳ್ಳ ಮುಖಕ್ಕೆ ಶುಂಠೀ ಲೇಪ ಹಚ್ಚುವದರಿಂದ ಪರಿಹಾರವಾಗುವದು.

ತೀಟೆ (ಖಜ್ಜಿ) Itch.

ಖಜ್ಜಿಯ ಚಿಕಿತ್ಸೆಯನ್ನು ಕುರಿತು ೧೮೮೯ನೇ ಇಸವಿಯ ಪಂಚಾಂಗದ ೨೩೩—೨೪೪ನೇ ಪಾನುಗಳಲ್ಲಿ ನೋಡು.

ತುರಿದಡಿಕೆ To allay the Irritation of Nettle Rash.

ಇದರ ತುರಿಯನ್ನು ನಿವಾರಿಸುವ ಬಗ್ಯೆ ಬಿಳಿಗಾರದ ನೀರು (೧೪೪[2]) ಹಚ್ಚುವದು.

ತೊಡೆವಾಳವು Buboes.

ಮೇಹದ ರೋಗವುಳ್ಳ ಸ್ತ್ರೀಸಂಬಂಧವಾಗಿ ಉಂಟಾಗುವ ಈ ಕೆಟ್ಟ ರೋಗವು ತೊಡೆಯ ಸಂದಿನಲ್ಲಿ ಒಂದಾಗಲೀ ಕೆಲವಾಗಲೀ ಗುಳ್ಳೆಗಳಂತೆ ಕುರುಗಳು ಎದ್ದು, ಜ್ವರವೂ ಸರ್ವಾಂಗ ವೇದನೆಯೂ ಉಂಟಾಗಿ, ಕಡೆಗೆ ಆ ಹುಣ್ಣು ಒಡದು, ಕೀವು ಸೋರುತ್ತಾ ಬೇಗ ಮಾಯದ ಗಬ್ಬಾದ ಹುಣ್ಣು ವ್ರಣವಾಗಿ, ಬಹಳ ಕಾಲ ವರೆಗೆ ರೋಗಿಗೆ ಪೀಡಿಸುವಂಥಾದ್ದಾಗಿರುವದು.

ಚಿಕಿತ್ಸೆ: ತೊಡೆವಾಳವು ಉತ್ತೇಜಕವಲ್ಲದ ಆಹಾರಪಥ್ಯದಿಂದಲೂ, ಯಾವಾಗಲೂ ಅಡ್ಡ ಮಲಗಿ ಪೂರ್ಣ ವಿಶ್ರಾಂತಿಯಾಗಿರುವದರಿಂದಲೂ, ನವಸಾಗರದ ನೀರು (೧೧೭[3]) ಲೇಪಿಸುವದು, ಮಲಶೋಧನೆ ಸರಿಯಾಗುವಂತೆ ಜಾಗ್ರತೆ ಇಡುವದು, ಇವುಗಳಿಂದಲೂ ಬಹುಶಾ ಅಣಗಿ ಆರಿ ಹೋದೀತು. ಹುಣ್ಣಿನಲ್ಲಿ ಕೀವು ಉಂಟಾದರೆ, ಬಾವುಗಳಿಗೆ ಹೇಳಿದ ಚಿಕಿತ್ಸೆಯನ್ನು ಮಾಡುವದು. ಹುಣ್ಣು ಒಡದು ವ್ರಣ ಉಂಟಾದ ಪಕ್ಷಕ್ಕೆ, ಬಿಳಿಗಾರದ ನೀರು (೧೭೦[4]) ಮತ್ತು ದಾವರದ ಮುಲಾಮು ಸಹ ಹಚ್ಚಿ ಕುರುಗಳಿಗೆ ಹೇಳಿದ ಚಿಕಿತ್ಸೆಯನ್ನು ಮಾಡುವದು.

---

1) ೧೮೮೦ನೇ ಇಸವಿಯ ಪಂಚಾಂಗದ ೬೬ನೇ ಪಾನಿನಲ್ಲಿರುವ ೧೫ನೇ ಟಿಪ್ಪಣಿಯನ್ನು ಸರಿ ನೋಡು.

2) ೧೮೮೪ನೇ ಇಸವಿಯ ಪಂಚಾಂಗದ ೪೭ನೇ ಪಾನಿನಲ್ಲಿ ನೋಡು.

3) ೧೮೮೦ನೇ ಇಸವಿಯ ಪಂಚಾಂಗದ ೪೪-೪೫ನೇ ಪಾನುಗಳಲ್ಲಿ ನೋಡು.

4) ೧೮೮೪ನೇ ಇಸವಿಯ ಪಂಚಾಂಗದ ೫೬ನೇ ಪಾನಿನಲ್ಲಿ ನೋಡು.

ದದ್ದು, ತದ್ದು Ringworm.

ಇದಕ್ಕೆ ಬಿಳಿಗಾರ, ಶಿರ್ಕ (೨೪೮) ಆಗಲೀ, ಶೀಮೆ ಅಗೆಸೆಯ ಮುಲಾಮು (೨೧೬[1]) ಆಗಲೀ, ಮೈಲತುತ್ತಿನ ಮುಲಾಮು (೨೪೯) ಆಗಲೀ ಹಚ್ಚುವದರಿಂದ ವಾಸಿಯಾಗುವದು.

೨೪೮. ದದ್ದು ಎಂಬ ಖಜ್ಜಿಗೆ ಒಂದು ದ್ರಮ್ ಬಿಳಿಗಾರವನ್ನು ೨ ಔನ್ಸ್ ಬಟ್ಟೆ ಹಾಕಿ ತೆಗೆದ ಶಿರ್ಕದಲ್ಲಿ ಅರದು ಹಚ್ಚುವದು ಒಳ್ಳೇ ಔಷಧವಂತೆ.

೨೪೯. ದದ್ದು, ತಲೆಖಜ್ಜಿ (ಮಸುಳು), ಮಾದಿಹುಣ್ಣು ಮುಂತಾದ ಚರ್ಮವ್ಯಾಧಿಗಳಲ್ಲಿ ಮುಂದೆ ಹೇಳಿದ ಮುಲಾಮು ಬಹಳ ಪ್ರಯೋಜನಕರವಾದದ್ದು. ಮೈಲತುತ್ತಿನ ಚೂರ್ಣ ೨೦ ಗ್ರೇನ್, ಮಾಚಿಕಾಯಿ[2] ಚೂರ್ಣ ೧ ದ್ರಮ್, ಜರ್ಬಿ (lard or ceromel) ೧ ಔನ್ಸ್, ಇವುಗಳನ್ನು ಚನ್ನಾಗಿ ಅರದು ಮುಲಾಮಿನಂತೆ ಹದ ಮಾಡಿ, ದದ್ದು ಇರುವಲ್ಲಿ ಹಚ್ಚಿ ಚನ್ನಾಗಿ ತಿಕ್ಕುವದು. ಬರೇ ಖಜ್ಜಿಯಾದರೆ, ೧ ಔನ್ಸ್ ಮೈಲತುತ್ತನ್ನು ೧ ಪ್ಯಾಂಟ ನೀರಿನಲ್ಲಿ ಕರಗಿಸಿ, ಆ ನೀರಿನಿಂದ ಆಗಾಗ್ಯೆ ತೊಳಿಯುವದು; ತೊಳಿಯುವದಕ್ಕೆ ಮುಂಚೆ ತೀಟೆಯ ಚಿಪ್ಪನ್ನು ಚನ್ನಾಗಿ ಉಜ್ಜಿ ಸಾಫ್ ಮಾಡ ಬೇಕು.

ದುರ್ಬಲತೆ (ದೇಹದ ಸ್ವಾಭಾವಿಕ), ಅಶಕ್ತಿ, ಬಲಹೀನತೆ Constitutional Debility.

೧೮೭೯ನೇ ಇಸವಿಯ ಪಂಚಾಂಗದ ೪೧—೪೨ನೇ ಪಾನುಗಳಲ್ಲಿ ನೋಡು.

ದುರ್ಗಂಧವುಳ್ಳ ಹುಣ್ಣುಗಳು Gangrenous Ulcers.

ಇದಕ್ಕೆ ೧೮೭೭ನೇ ಇಸವಿಯ ಪಂಚಾಂಗದ ೪೮—೫೨ನೇ ಪಾನುಗಳಲ್ಲಿ, ಮುಖ್ಯವಾಗಿ ೬೬, ೬೭ನೇ ಅಂಕೆಗಳಲ್ಲಿ ಹೇಳಿರುವ ಚಿಕಿತ್ಸೆಯನ್ನು ಮಾಡ ಬೇಕು.

ನಡುವಾಯು, ಸೊಂಟವಾತ Lumbago.

೧೮೮೧ನೇ ಇಸವಿಯ ಪಂಚಾಂಗದ ೪೮—೪೯ನೇ ಪಾನುಗಳಲ್ಲಿ ನೋಡು.

ನರಗಳ ಬಾವು Glandular Swellings, Enlargement of Glands.

ಚಿಕಿತ್ಸೆ: ಆದರ ಪ್ರಥಮ ಸ್ಥಿತಿಯಲ್ಲಿ ನವಸಾಗರದ ನೀರು (೧೧೭[3]), ಎಳ್ಳೆಣ್ಣೆಯ ಶೇಕ (೧೫೬[4]), ಕರ್ಪೂರದ ಮುಲಾಮು (೧೧೯[5]), ಆಫೀನಿಯ ತೈಲ್ಯ (೧೨೦[5]) ಹಚ್ಚುವದು. ಬೀಗು ಇರುವಲ್ಲಿ ಕೀವು ಉಂಟಾದರೆ, ಅದಕ್ಕೆ ಬಾವು ಹುಣ್ಣುಗಳಿಗೆ ಹೇಳಿರುವ ಚಿಕಿತ್ಸೆಯನ್ನು ಮಾಡಿ, ಹೊಟ್ಟೆಗೆ ವಿಾನಿನ ಎಣ್ಣೆ[6] ಕೊಡುವದು.

---

1) ೧೮೮೪ನೇ ಇಸವಿಯ ಪಂಚಾಂಗದ ೪೫ನೇ ಪಾನಿನಲ್ಲಿಯೂ ಆದರ ಟಿಪ್ಪಣಿಯಲ್ಲಿಯೂ ನೋಡು.
2) ೧೮೭೬ನೇ ಇಸವಿಯ ಪಂಚಾಂಗದ ೩೫ನೇ ಪಾನಿನ ೩೪ನೇ ಅಂಕೆಯನ್ನೂ ಟಿಪ್ಪಣಿಯನ್ನೂ ನೋಡು.
3) ೧೮೮೦ನೇ ಇಸವಿಯ ಪಂಚಾಂಗದ ೪೪ನೇ ಪಾನಿನಲ್ಲಿ, ನೋಡು.
4) ೧೮೮೩ನೇ ಇಸವಿಯ ಪಂಚಾಂಗದ ೪೫ನೇ ಪಾನಿನಲ್ಲಿ ನೋಡು.
5) ೧೮೮೩ನೇ ಇಸವಿಯ ಪಂಚಾಂಗದ ೪೭ನೇ ಪಾನಿನಲ್ಲಿ ನೋಡು.
6) ೧೮೭೭ನೇ ಇಸವಿಯ ಪಂಚಾಂಗದ ೨೭ನೇ ಪಾನಿನಲ್ಲಿ ನೋಡು.

ನರವೇಧನೆ Pains in Muscles.

ಚಿಕಿತ್ಸೆ: ನವಸಾಗರದ ಧೃತಿ (೨೫೦) ಕೊಟ್ಟು, ಕರ್ಪೂರದ ಮುಲಾಮು (೧೧೯[1]), ಮಜ್ಜಿಗೆ ಹುಲ್ಲಿನ ಎಣ್ಣೆ (೧೨೧[1]), ಅಷೀನಿಯ ತೈಲ್ಯ (೧೨೦[1]), ಟರಪೆಂಟ್ಯಾನದ ಮುಲಾಮು (೧೨೨[1]) ಸಹ ಹಚ್ಚುವದು.

೨೫೦. ದೀರ್ಘಕಾಲದ ವಾತಕ್ಕೆ, ಮುಖ್ಯವಾಗಿ ನರಗಳು ಬಾಧಿಸಲ್ಪಟ್ಟಿರುವಲ್ಲಿ, ೧೫-೨೪ ಗ್ರೇನ್ ನವಸಾಗರವನ್ನು ಸುಗಂಧಿಬೇರಿನ ಕಲ್ಕದಲ್ಲಿ (೧೩[1]) ಕಲಕಿಸಿ ಕೊಟ್ಟರೆ, ಬಹಳ ಗುಣ ಬರುವದು. ಇದು ದೊಡ್ಡ ಶಹಾರುಗಳಲ್ಲಿ ವಿಶೇಷ ಕೆಲಸ ಮಾಡಿ ಕಡಿಮೆ ಆಹಾರ ಉಣ್ಣುವ ಕೈಕೆಲಸದವರಿಗೆ ಎದೆ ಮುಂತಾದ ಮುಂಡದ ಇತರ ಭಾಗಗಳಲ್ಲಿ ಬಹುಶಾ ಉಂಟಾಗುವ, ನರವೇಧನೆ ಸಹ ನಿವಾರಿಸುವದಕ್ಕೆ ಬಹಳ ಉತ್ತಮ ಔಷಧವಾಗಿರುತ್ತದೆ. ಇಂಥಾ ಸಂಗತಿಗಳಲ್ಲಿ ಈ ಚಿಕಿತ್ಸೆಯನ್ನು ಬಿಡದೆ ತಕ್ಕಷ್ಟು ಕಾಲ ತನಕ ನಡಿಸ ಬೇಕಷ್ಟೆ.

ನಷ್ಟೇಂದ್ರಿಯ Spermatorrhœa.

ಗಲಲಂನೇ ಇಸವಿಯ ಪಂಚಾಂಗದ ೩೫—೩೬ನೇ ಪಾನುಗಳಲ್ಲಿ ನೋಡು.

ನಳವಾಯು Colic.

ಅದೇ ಗಲಲಂನೇ ಇಸವಿಯ ಪಂಚಾಂಗದ ೩೮—೪೦ನೇ ಪಾನುಗಳಲ್ಲಿ ನೋಡು.

ನಾಯಿಕೆಮ್ಮು Hooping Cough.

ಗಲಲಗನೇ ಇಸವಿಯ ಪಂಚಾಂಗದ ೫೪—೫೬ನೇ ಪಾನುಗಳಲ್ಲಿ ನೋಡು.

ನಾಲಿಗೆ ಒಡಿಯೋಣ ಅಥವಾ ಅದಕ್ಕೆ ಬಿಳೀ ಹುಣ್ಣು ಆಗೋಣ Fissures or Cracks of the Tongue.

ಕಠಿಣ ಜ್ವರ, ಕ್ಷಯರೋಗ ಮುಂತಾದವುಗಳಲ್ಲಿ ಆಗುವ ನಾಲಿಗೆಯ ಅಗ್ರವೆಂಬ ಈ ರೋಗಕ್ಕೆ ಬಿಳಿಗಾರದ ನೀರು (೭೭[4]) ಮುಕ್ಕುಳಿಸುವದಾಗಲೀ ಜೇನಿನ ಸಂಗಡ ಅದನ್ನು (೧೦೨[4]) ಹಚ್ಚುವದಾಗಲೀ ಗುಣಕರವು. ಅದಲ್ಲದೆ ಪಟಿಕಾರದ ಮಿಶ್ರ ನೀರು (೭೬[4]) ಮುಕ್ಕುಳಿಸುವದರಿಂದ ಸಹ ಅದು ವಾಶಿಯಾದೀತು.

ನಾವಿಕರ ರಕ್ತಪಿತ್ತ Scurvy.

ವಿಶೇಷವಾಗಿ ನಾವಿಕರಿಗೆ ಉಂಟಾಗುವ ಈ ರೋಗದ ಲಕ್ಷಣಗಳು: ಮೈಕೈಯೆ ಮಾರ್ಪಟ್ಟು, ಶರೀರದ ಮಾನಸಿಕ ಜಾಡ್ಯ, ಕೈಕಾಲುಗಳಲ್ಲಿ ವಾತ ಸ್ವಭಾವದ ನೋವು, ವಸಡುಗಳು ಮೆತ್ತಗಾಗಿ, ಉಬ್ಬಿ, ಕ್ಷಣದಲ್ಲಿ ರಕ್ತ ಸೋರುವದು, ಕಾಲುಗಳು ಉಬ್ಬಿ ಬಿಮ್ಮಗೆ ಆಗೋಣ, ದಣು, ಅತಿಸಾರ, ಉಷ್ಣಾತಿಸಾರ ಮುಂತಾದವುಗಳು ಆಗಿರುತ್ತವೆ.

---

1) ಗಅಂನೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿ ನೋಡು.

2) ಅದೇ ಇಸವಿಯ ಪಂಚಾಂಗದ ೪೦ನೇ ಪಾನಿನಲ್ಲಿಯೂ ಅದರ ಟಿಪ್ಪಣಿಯಲ್ಲಿಯೂ ನೋಡು.

3) ಗಅ೭೬ನೇ ಇಸವಿಯ ಪಂಚಾಂಗದ ೩೦ನೇ ಪಾನಿನಲ್ಲಿ ನೋಡು.

4) ಗಅ೭೯ನೇ ಇಸವಿಯ ಪಂಚಾಂಗದ ೬೯ನೇ ಪಾನಿನಲ್ಲಿ ೭೬, ೭೭ನೇ ಅಂಕೆಗಳನ್ನೂ, ೪೧ನೇ ಪಾನಿನಲ್ಲಿ ೧೦೨ನೇ ಅಂಕೆಯನ್ನೂ ನೋಡು.

ಚಿಕಿತ್ಸೆ: ನಿಂಬೆಹಣ್ಣಿನ ರಸವು (೧೦೦[1]) ಈ ರೋಗ ಬಾರದ ಹಾಗೆ ಅಭ್ಯಂತರಿಸುವದಕ್ಕೂ, ಬಂದರೆ ಅದನ್ನು ವಾಶಿ ಮಾಡುವದಕ್ಕೂ, ಬಹಳ ಪ್ರಶಸ್ತತೆ ಹೊಂದಿರುತ್ತದೆ. ಎಲ್ಲಾ ಆಮ್ಲ ತರದ ಹಣ್ಣುಗಳು, ಅಂದರೆ ನಿಂಬಿ, ಕಿತ್ತಲೆ, ಹುಣಸೆ (೫೫[2]) ಮುಂತಾದ್ದನ್ನು ಬಹಳ ಗುಣಕರವಾಗಿ ಪ್ರಯೋಗಿಸ ಬಹುದು. ಶೆರೆಮನೆ ಇತ್ಯಾದಿಗಳಲ್ಲಿ ಈ ರೋಗ ಬಾರದಂತೆ ನಿಂಬೆರಸ ಮುಂತಾದ ಆಮ್ಲ ಪದಾರ್ಥಗಳ ಪ್ರಯೋಗದ ಹೊರ್ತು, ಆರೋಗ್ಯಸಾಧಕ ಅನುಪಾನಗಳಿಗೆ ಸಹ ಲಕ್ಷ್ಯ ಕೊಡುವದು ಅವಶ್ಯ; ಅಂದರೆ, ನಿರ್ಮಲತೆ, ಘಾಳಿಚಲನೆ, ವಾಸಸ್ಥಾನ ಒಣಗಲಾಗಿರಿಸೋಣ, ಜನಸ್ತೋಮ ಆಗುವಷ್ಟು ಕಡಿಮೆ ಮಾಡೋಣ, ಮತ್ತು ಬಹುತರ ಹಸಿ ಕಾಯಿಪಲ್ಯ ಸಹಿತವಾದ ಪುಷ್ಟಿಕರ ಆಹಾರ ಸಹ ಕೊಡಲಗತ್ಯವಾದ್ದು. ನಾವಿಕರ ಪಿತ್ತವೆಂಬ ಈ ರೋಗದ ದೆಶೆಯಿಂದ ಝಾಡನೆಯುಂಟಾದರೆ, ಬಿಲ್ವ ಪತ್ರೆಹಣ್ಣಿನ ಪಾನಕ (೩೨, ೯೮[3]) ಕೊಟ್ಟದ್ದರಿಂದ ಗುಣ ಬರುವದು.

ನೀರುಮೆದುಳು (ಜಲಮಸ್ತಕರೋಗ, ಮೆದುಳಿನಲ್ಲಿ ನೀರು ಹುಟ್ಟುವದು) Water on the Brain.

೧೮೮೪ನೇ ಇಸವಿಯ ಪಂಚಾಂಗದ ೫೪ನೇ ಪಾನಿನಲ್ಲಿ ನೋಡು.

ನೂಲುರೋಗದ ಹುಣ್ಣು Delhi Sores.

ಇದಕ್ಕೆ ಬಿಳಿಗಾರದ ಮುಲಾಮು (೧೭೦[4]) ವಿಶೇಷ ಗುಣವುಳ್ಳದ್ದಂತೆ. ಅದಲ್ಲದೆ ೧೮೮೨ನೇ ಇಸವಿಯ ಪಂಚಾಂಗದ ೫೦—೫೬ನೇ ಪಾನುಗಳಲ್ಲಿ ಕೀವು ಸೋರುವ ಹುಣ್ಣಿಗೆ ಹೇಳಿರುವ ಚಿಕಿತ್ಸೆಯನ್ನು ಸರಿ ನೋಡುವದು.

ನೆಗಡಿ Catarrh or Cold.

ಚಿಕಿತ್ಸೆ: ನೆಗಡಿ ಆಥವಾ ಶೀತಕ್ಕೆ ಪ್ರಾರಂಭದಲ್ಲಿ ಶುಂಠಿಕಲ್ಕ (೨೨೪[5]), ಅಥವಾ ಜಿಳೀ ವಾಯಿನಿನ ಮಜ್ಜಿಗೆ[6] ಕೊಟ್ಟು, ಬುಡದಲ್ಲೇ ಅಣಗಿಸ ಬಹುದು. ಅದನ್ನು ರಾತ್ರೆ ತಕ್ಕೊಂಡು, ಮೈ ಹೊದ್ದುಕೊಂಡು ಮಲಗಿದ್ದಾದರೆ, ಯಥೇಷ್ಟ ಮೈ ಬೆವರಿದರಿಂದ ನೆಗಡಿ ಶಮನವಾದೀತು. ಅದೇ ಉದ್ದಿಶ್ಯ ಹಬೇ ಮಜ್ಜನ (೨೧೭[7]) ಸಹ ಕೊಡುವದು. ಶೀತದಿಂದ ಉಂಟಾಗುವ ಮೈಬಿಸಿಗೆ ಪೆಟ್ಲುಪ್ಪಿನ ನೀರು (೧೮೭[8]), ಬೆಂಡೆಕಾಯಿ ಕಷಾಯ

1) ೧೮೮೩ನೇ ಇಸವಿಯ ಪಂಚಾಂಗದ ೫೧ನೇ ಪಾನಿನಲ್ಲಿ ನೋಡು.

2) ೧೮೭೭ನೇ ಇಸವಿಯ ಪಂಚಾಂಗದ ೬೧ನೇ ಪಾನಿನಲ್ಲಿಯೂ ಅದರ ಟಿಪ್ಪಣಿಯಲ್ಲಿಯೂ ನೋಡು.

3) ೧೮೭೭ನೇ ಇಸವಿಯ ಪಂಚಾಂಗದ ೬೪ನೇ ಪಾನಿನಲ್ಲಿಯೂ ಅದರ ಟಿಪ್ಪಣಿಯಲ್ಲಿಯೂ, ೧೮೭೯ನೇ ಇಸವಿಯ ಪಂಚಾಂಗದ ೫೦ನೇ ಪಾನಿನಲ್ಲಿಯೂ ನೋಡು.

4) ೧೮೮೩ನೇ ಇಸವಿಯ ಪಂಚಾಂಗದ ೫೬ನೇ ಪಾನಿನಲ್ಲಿ ನೋಡು.

5) ೧೮೮೪ನೇ ಇಸವಿಯ ಪಂಚಾಂಗದ ೫೦ನೇ ಪಾನಿನಲ್ಲಿ, ಮತ್ತು ೧೮೮೩ನೇ ಇಸವಿಯ ಪಂಚಾಂಗದ ೪೪ನೇ ಪಾನಿನಲ್ಲಿರುವ ೩೦ನೇ ಅಂಕೆಯನ್ನೂ ಅದರ ಟಿಪ್ಪಣಿಯನ್ನೂ ಸಹ ನೋಡು.

6) ೧೮೭೭ನೇ ಇಸವಿಯ ಪಂಚಾಂಗದ ೧೬ನೇ ಪಾನಿನಲ್ಲಿರುವ ಶ. ಅಕ್ಷರದಲ್ಲಿ ನೋಡು.

7) ೧೮೮೪ನೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿ ನೋಡು.

8) ೧೮೮೩ನೇ ಇಸವಿಯ ಪಂಚಾಂಗದ ೪೫ನೇ ಪಾನಿನಲ್ಲಿ ನೋಡು.

(೧೮೯[1]) ಮತ್ತು ಊರಕಿರಮಂಜಿ ಚೂರ್ಣ (೧೫೧[2]) ಸಹ ಕೊಡ ಬಹುದು. ತಲೆಭಾರ, ಶಿಡಿತ, ಮೂಗು ಕಟ್ಟುವದು ಇದ್ದರೆ, ಆರಸಿನಗಡ್ಡೇ ಹೊಗೆ (೨೫೧) ಮೂಗಿನಲ್ಲಿ ಹೀರಿ ಕೊಳ್ಳುವದರಿಂದ ನಿವಾರಣೆಯಾದೀತು. ಶೀತದಿಂದ ಉಂಟಾಗುವ ಕೆಮ್ಮಿಗೆ ೧೮೮ನೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿ ಹೇಳಿರುವ ಚಿಕಿತ್ಸೆಯನ್ನು ನೋಡು.

೨೫೧. ನೆಗಡಿಗಳಲ್ಲಿ ಆರಸಿನಗಡ್ಡೆಯನ್ನು ಸುಟ್ಟು, ಆದರ ಹೊಗೆಯನ್ನು ಮೂಗಿನಲ್ಲಿ ಹೀರಿಕೊಳ್ಳುವದರಿಂದ ತೀವ್ರತೆಯೂ ಖಾರವೂ ಉಂಟಾಗಿ, ಮೂಗಿನಿಂದ ಬಹಳ ಶಿಂಬಳ ಹೋಗಿ ಸಾಫ್ ಆಗುವದು, ಮತ್ತು ತಲೆ ಭಾರವಾಗಲೀ ಶಿಡಿತವಾಗಲೀ ಪರಿಹಾರವಾ ಗುವದು. ಆರಸಿನಗಡ್ಡೆಯ ಕಷಾಯ ಸಹ ಬಹಳ ಒಳ್ಳೇದು. (೧೮೮ನೇ ಇಸವಿಯ ಪಂಚಾಂಗದ ೧೪೩ನೇ ಅಂಕೆಯಲ್ಲಿಯೂ ಅದರ ಟಿಪ್ಪಣಿಯಲ್ಲಿಯೂ ನೋಡು.)

ನೆಗಡಿ (ಕಠಿಣ ತರದ್ದು) Influenza.

ಈ ತರದ ನೆಗಡಿಯು ಫಕ್ಕನೆ ಉಂಟಾಗಿ, ಬೇಗನೆ ಜನಗಳೊಳಗೆ ಹಬ್ಬಿ, ಹವೆಯ ಭೇದಕ್ಕೆ ಸಂಬಂಧವಿಲ್ಲದ್ದರಿಂದ ಸಾಧಾರಣ ನೆಗಡಿಯಿಂದ ವಿಶೇಷಿಸಲ್ಪಡುತ್ತದೆ. ಅದರ ಲಕ್ಷಣಗಳು: ಬೆನ್ನೆಲುಬಿನ ಕೆಳಗೆ ಶಳವು, ಅವಿಶ್ರಾಂತಿ, ಜ್ವರ, ಮುಂದಲೆಯ ಶಿಡಿತ, ಅಂಗಾಂಗ ನೋವು, ಕಠಿಣ ಕೆಮ್ಮು, ಹ್ಯಾವರಿಕೆ, ಅರುಚಿ, ಕಣ್ಣುನೋವು, ಶೀನು, ಮೂಗಿನಿಂದ ನೀರಿನಂತೆ ತೆಳುವಾದ ಶಿಂಬಳ ಸೋರುವದು, ಬಹಳ ಜಾಡ್ಯ ಇತ್ಯಾದಿಗಳು ಆಗಿರುತ್ತವೆ.

ಚಿಕಿತ್ಸೆ: ಇದಕ್ಕೆ ಯಥೇಷ್ಟ ಪೆಟ್ಲುಪ್ಪಿನ ನೀರು (೧೮೭[3]) ಕೊಟ್ಟು, ಮೇಲೆ ಸಾಧಾರಣ ನೆಗಡಿಗೆ ಹೇಳಿದ ಚಿಕಿತ್ಸೆಯನ್ನೇ ಸರಿಯಾಗಿ ಮಾಡುವದು.

ನೆಗಡಿ (ವಿಷಮ ತರದ ಶ್ವಾಸನಾಳ ಕೃಕಗಳಿಗೆ ತಟ್ಟುವಂಥಾದ್ದು) Croup.

ಮಕ್ಕಳಿಗೆ ಶೀತದಿಂದ ಉಂಟಾಗುವ ಶ್ವಾಸನಾಳ ಸಂಬಂಧವಾದ ಈ ರೋಗವು ಸಾಧಾ ರಣ ಶೀತದಿಂದ ಪ್ರಾರಂಭವಾಗಿ, ಸ್ವರಭಂಗ, ಕೆಮ್ಮು, ನೇವಸ ಮುಂತಾದವುಗಳು ಉಂಟಾ ಗುವವು. ಇದಕ್ಕೆ ಮೈಲ್‌ತುತ್ತಿನ ನೀರು (೨೫೨) ಕೊಟ್ಟು, ಕಫ ವಾಂತಿ ಮಾಡಿಸುವದು, ಮತ್ತು ಎದೆಗೂ ಕೊರಳಿಗೂ ಬಿಸಿ ನೀರಿನ ಹೊಗೆ ಕೊಡುವದು (೧೮೮[4]) ಈ ಪೀಡೆಯ ಚಿಕಿತ್ಸೆಯಲ್ಲಿ ಬಹಳ ಪ್ರಯೋಜನಕರವಾಗಿರುವದು.

೨೫೨. ವಿಷಮ ಗಂಟ್ಲುನೋವಿಗೂ ಕಠಿಣ ತರದ ನೆಗಡಿಗೂ ಮೈಲ್‌ತುತ್ತಿನ ಪ್ರಯೋಗವು ಬಹಳ ಪ್ರಶಸ್ತವಾಗಿರುತ್ತದೆ. ಒಂದು ಔನ್ಸ್ ನೀರಿನಲ್ಲಿ ಐದು ಗ್ರೇನ್ ಮೈಲ್‌ತುತ್ತಿನ ಪುಡಿ ಮಾಡಿ ಹಾಕಿ ಕಲಕಿಸಿ, ಅದರ ತಿಳಿನೀರು ಚಿಕ್ಕ ಮಕ್ಕಳಿಗೆ ಒಂದು ಚಾಸೌಟಿನಷ್ಟರ ಮೇರೆಗೆ ಯಾ ಪ್ರಾಯಕ್ಕನುಸಾರವಾಗಿ ಕಡಿಮೆ ಪ್ರಮಾಣದಲ್ಲಿ ಅರ್ಧ ಅರ್ಧ ಘಂಟೆಗೆ ಕೊಟ್ಟು, ವಾಂತಿ ಮಾಡಿಸುವದು. ಕಠಿಣ ತರದ ನೆಗಡಿಗೂ ಅದೇ ಚಿಕಿತ್ಸೆ ಮಾಡ ಬಹುದು. ವಾಂತಿ ಪ್ರಾ ರಂಭಿಸಿದ ಮೇಲೆ ಆ ಔಷಧ ಕೊಡ ಬಾರದು.

---

1) ೧೮೮ನೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿಯೂ ಅದರ ಟಿಪ್ಪಣಿಯಲ್ಲಿಯೂ ನೋಡು. ಬೆಂಡೆಕಾಯಿ ಕಷಾಯವು ಸಾಧಾರಣವಾಗಿ ಬಾಹಕ್ಕೆ ಮೂತ್ರವಲ್ಲದೆ, ಜ್ವರ, ನೆಗಡಿ, ಮೂತ್ರಕೃಚ್ಛ್ರ ಮತ್ತು ಮೂತ್ರ ಮಾಡುವಾಗ ಪ್ರಯಾಸವೂ ನೋವೂ ಉರಿಯೂ ಇರುವ ಎಲ್ಲಾ ಸಂಗತಿಗಳಲ್ಲಿಯೂ ಗುಣ ಕರವೂ ಹಿತಕರವೂ ಸಹ ಆಗಿರುತ್ತದೆ.

2) ೧೮೮೧ನೇ ಇಸವಿಯ ಪಂಚಾಂಗದ ೫೫ನೇ ಪಾನಿನಲ್ಲಿ ನೋಡು.

3) ೧೮೮೬ನೇ ಇಸವಿಯ ಪಂಚಾಂಗದ ೪೫ನೇ ಪಾನಿನಲ್ಲಿ ನೋಡು.

4) ೧೮೮೬ನೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿ ನೋಡು.

ನೆತ್ತರಗಡ್ಡೆ Boil.

ಇದಕ್ಕೆ ೧೪೮೨ನೇ ಇಸವಿಯ ಪಂಚಾಂಗದ ೫೯೯—೬೦ನೇ ಪಾನುಗಳಲ್ಲಿ ಕುರಗಳಿಗೆ ಹೇಳಿದ ಚಿಕಿತ್ಸೆಯನ್ನು ಮಾಡ ಬೇಕು.

ನೆತ್ತರ ಹರಿಯೋಣ (ಗುಂಡಿಗೆ, ಅನ್ನಕೋಶಾದಿ ಅಂತರೇಂದ್ರಿಯಗಳಿಂದ) Hæmmorrhage from the Lungs or other Internal Organs.

೧೪೭೭ನೇ ಇಸವಿಯ ಪಂಚಾಂಗದ ೧೯—೨೨ನೇ ಪಾನುಗಳಲ್ಲಿ ನೋಡು.

ನೇಪಾಳದ ಬೀಜದ(ಜಾಫಲದ ಬೀಜ)ದೆಶೆಯಿಂದ ವಿಷ ಉಂಟಾದ್ದಕ್ಕೆ Poisoning by Croton Seeds.

೧೪೮೧ನೇ ಇಸವಿಯ ಪಂಚಾಂಗದ ೪೯ನೇ ಪಾನಿನಲ್ಲಿರುವ ೧೩೯ನೇ ಅಂಕೆಯಲ್ಲಿ ಹೇಳಿದ ಪ್ರಕಾರ ನಿಂಬೇ ರಸವನ್ನು ಕೊಟ್ಟಲ್ಲಿ ಆದರ ವಿಷ ಪರಿಹಾರವಾಗುವದು.●

ನೇವಸ Asthma.

೧೪೮೦ನೇ ಇಸವಿಯ ಪಂಚಾಂಗದ ೪೦—೪೩ನೇ ಪಾನುಗಳಲ್ಲಿ ನೋಡು.

ನೋವಿನ ಗಡ್ಡೆ (ಮೊಡವೆಗಳು) Painful Nodes or Tumours.

೧೪೮೨ನೇ ಇಸವಿಯ ಪಂಚಾಂಗದ ೪೯ನೇ ಪಾನಿನಲ್ಲಿ ಹೇಳಿದಂತೆ ಉಮ್ಮತ್ತದ ಒತ್ತಡ[1] ಕಟ್ಟುವದಲ್ಲದೆ, ರಾತ್ರೆಗೆ ನಿದ್ರೆ ಬರುವಂತೆಯೂ ವೇದನೆ ಶಮನವಾಗುವಂತೆಯೂ ಅಫೀನಿಯಾಗಲೀ (೧೪೫೯), ಉಮ್ಮತ್ತದ ಧೃತಿಯಾಗಲೀ (೨೫೩), ಕೊಡುವದು. ಈ ಸಂಗತಿಯಲ್ಲಿ ಒತ್ತಡಕ್ಕೆ ಉಮ್ಮತ್ತದ ಎಲೆಯ ಬದಲಾಗಿ ಹೊಗೆಸೊಪ್ಪಿನ ಚೂರು ಇನ್ನಷ್ಟು ಗುಣಕರವಾಗಿ ಪ್ರಯೋಗಿಸ ಬಹುದು.

೨೫೩. ೨½ ಔನ್ಸ್ ಉಮ್ಮತ್ತದ ಬೀಜವನ್ನು ತಂದು, ಒಂದು ಪ್ಯಾಂಟ (proof-spirit[2]) ದ್ರಾವಕದಲ್ಲಿ ಹಾಕಿ, ಬಿಮ್ಮಗೆ ಬಾಟ್ಲಿಯ ಬಾಯಿ ಮುಚ್ಚಿ, ಆಗಾಗ್ಗೆ ಚನ್ನಾಗಿ ಅಲ್ಲಾಡಿಸುತ್ತಾ ಏಳು ದಿನಗಳ ಮಟ್ಟಿಗೆ ಇಡ ಬೇಕು. ಆ ಮೇಲೆ ತೆರದು, ಅದರೊಳಗಿನ ಕಸವನ್ನು ಗಿವಚಿ ಹಿಂಡಿ ತೆಗದು, ಆ ದ್ರಾವಕವನ್ನು ಗಾಳಿಸಿ, ಬಳಿಕ ಅದನ್ನು ಅಳೆದು ನೋಡ ಬೇಕು; ಒಂದು ಪ್ಯಾಂಟಿಗೆ ಕಡಿಮೆಯಾದ ಪಕ್ಷದಲ್ಲಿ, ಅದಕ್ಕೆ ಪುನಹಾ ಸ್ವಲ್ಪ ದ್ರಾವಕ ಕೂಡಿಸಿ ಭರ್ತಿ ಮಾಡ ಬೇಕು. ಈ ಧೃತಿಯು ಅಫೀನಿಯಷ್ಟೇ ನೋವು ಶಮನಕರ, ನಿದ್ರಾಕಾರಕ ಗುಣವುಳ್ಳ ದ್ದಾಗಿರುತ್ತದೆ. ಇದನ್ನು ಕೊಡ ತಕ್ಕ ಪರಿಮಾಣ ವಿದ್ಯಮಾನಾನುಸಾರವಾಗಿ ನಿಶ್ಚಯಿಸ ಬೇಕು. ಆದದರಿಂದ ಹ್ಯಾಗೂ ಪ್ರಥಮತಾ ೧೦—೧೫ ತಟಕುಗಳನ್ನು ಒಂದಿಷ್ಟು ನೀರಿನಲ್ಲಿ ಹಾಕಿ ಕೊಟ್ಟು ಪ್ರಾರಂಭಿಸ ಬಹುದು; ಆ ಮೇಲೆ ಕೊಡುವಾಗ ಆದರ ಪರಿಮಾಣವನ್ನು

---

1) ೧೪೭೬ನೇ ಇಸವಿಯ ಪಂಚಾಂಗದ ೫೫ನೇ ಪಾನಿನಲ್ಲಿರುವ ೬ನೇ ಅಂಕೆಯಲ್ಲಿ ನೋಡು.

2) ೧೪೮೩ನೇ ಇಸವಿಯ ಪಂಚಾಂಗದ ೪೪ನೇ ಪಾನಿನಲ್ಲಿ ನೋಡು.

3) ಇದು ಎಲಾಯತಿಯ ಔಷಧಗಳನ್ನು ಮಾರುವ ಅಂಗಡಿಗಳಲ್ಲಿ ಶಿಗುತ್ತದೆ. ವರಂತು ಆದು ಶಿಕ್ಕದಿದ್ದರೆ, ಕಳ್ಳಿನಿಂದ (ಹೆಂಡ) ಅಷ್ಟೇ ಬಲವಾದ ದ್ರಾವಕವನ್ನು ಮಾಡ ಬಹುದು; ಹ್ಯಾಗಂದರೆ: ಕಳ್ಳನ್ನು ಘಾಳಿತಾಗುವಲ್ಲಿ ಇಟ್ಟರೆ, ಅದು ಬಹಳ ಬೇಗ ದ್ರಾಕ್ಷೇ ರಸದಂತೆ ಉಕ್ಕಿ, ಸಾರಾಯವಾಗುತ್ತದೆ; ಈ ಸಾರಾಯವನ್ನು (specific gravity) ೯೫೦ ಡಿಗ್ರಿಯ ವರೆಗೆ ಬಟ್ಟಿ ಇಳಿಸಲಾಗಿ, ಮೇಲೆ ಹೇಳಿದ ತರದ ದ್ರಾವಕವು ಉತ್ಪನ್ನವಾಗುತ್ತದೆ.

ಕ್ರಮೇಣ ಏರಿಸುತ್ತಾ ಅವಶ್ಯ ಬಿದ್ದ ಹಾಗೆ ೨೦—೩೦ ತಟಕುಗಳ ವರೆಗೆ ಕೊಡ ಬಹುದು. ಒಟ್ಟಾರೆ ಗುಣದಲ್ಲಿ ಈ ಧೃತಿಯ ೨೦ ತಟಕುಗಳು ಅಫೀನಿಯ ೧ ಗ್ರೇನಿಗೆ ಸಮವಾದಾವು. ಉಮ್ಮತ್ತದ ದೋಷಗಳಲ್ಲೊಂದು ಯಾವದೆಂದರೆ: ಅದರ ವಿಶೇಷ ಪ್ರಯೋಗದಿಂದ ಕಣ್ಣು ಗೊಂಬೆ ದೊಡ್ಡದಾಗುವದು. ಆದದರಿಂದ ಈ ಔಷಧವನ್ನು ಕೊಡುವಾಗ ಕಣ್ಣುಗಳನ್ನು ಆಗಾಗ್ಯೆ ಪರೀಕ್ಷಿಸುತ್ತಲಿರ ಬೇಕು, ಮತ್ತು ಆದು ಎಂದಾದರೂ ದೊಡ್ಡದಾಗಿ ಕಂಡರೆ, ಈ ಔಷಧ ಹದ ಮಾರಿತೆಂದು ತಿಳಿದು, ಅದರಿಂದ ಗುಣವಿದ್ದರೂ ಇಲ್ಲದಿದ್ದರೂ, ಅದನ್ನು ಕೂಡಲೇ ನಿಲ್ಲಿಸಿ ಬಿಡ ಬೇಕು.

ಪಾದರಸದ ವಿಷಕ್ಕೆ

Poisoning by Mercury (Corrosive Sublimate etc.)

೧೮೭೯ನೇ ಇಸವಿಯ ಪಂಚಾಂಗದ ೩೮—೩೯ನೇ ಪಾನುಗಳಲ್ಲಿ ನೋಡು.

ಪಾರ್ಶ್ವಶೂಲೆ (ದೀರ್ಘಕಾಲದ ಕಲಿಜದ ರೋಗ)

Chronic Affections of the Liver.

೧೮೮೨ನೇ ಇಸವಿಯ ಪಂಚಾಂಗದ ೪೪—೪೫ನೇ ಪಾನುಗಳಲ್ಲಿ ನೋಡು.

ಪಾಷಾಣದ ವಿಷಕ್ಕೆ Poisoning by Arsenic.

ಲಕ್ಷಣ: ಬವಳಿ ಬರುವದು, ಕಾರುವದು, ಆನ್ನಕೋಶದಲ್ಲಿ ನೋವು, ಉಬ್ಬಳ, ವಿಪರೀತ ದಾಹ, ಮಂದ ನಾಡಿ.

ಚಿಕಿತ್ಸೆ: ಕೂಡುವಷ್ಟು ತ್ವರೆಯಲ್ಲಿ ಮೈಲತುತ್ತಿನ ನೀರಾಗಲೀ (೬೪[1]) ಸಾಸಿವೆಯ ನೀರಾಗಲೀ (೩೮[2]) ಕೊಟ್ಟು ವಾಂತಿ ಮಾಡಿಸಿ, ಅನ್ನಕೋಶ ಖಾಲಿ ಮಾಡುವದು; ಆ ಮೇಲೆ ಯಥೇಷ್ಟವಾಗಿ ಕೋಳಿ ಮೊಟ್ಟೆಯ ಬಿಳುಪನ್ನು ಹಾಲಿನಲ್ಲ್ಯಾಗಲೀ ಸಮ ಭಾಗ ಸುಣ್ಣದ ತಿಳೀನೀರು ಮತ್ತು ಎಳ್ಳೆಣ್ಣೆ, ತೆಂಗಿನೆಣ್ಣೆ, ಇಲ್ಲವೇ ಇತರ ಎಣ್ಣೆ ಕೂಡಿಸಿ ಮಾಡಿದ ಮಿಶ್ರದಲ್ಲ್ಯಾಗಲೀ ಚನ್ನಾಗಿ ಕಲಕಿಸಿ ಕೊಡುವದು. ಹುಡಿ ಸಕ್ಕರೆ ಇಂಥಾ ಸಂಗತಿಗಳಲ್ಲಿ ಸಹಾಯಕವೆಂದು ಹೇಳುತ್ತಾರೆ. ಆದರೆ, ಆದು ಮೇಲೆ ಹೇಳಿದ ಮಿಶ್ರದಂತೆ ತನ್ನಷ್ಟಕ್ಕೆ ವಿಷದ ಆಣುಗಳನ್ನು ಒಟ್ಟು ಕೂಡಿಸುವದಕ್ಕೆ ಆದೀತಷ್ಟೆ. ಈ ಅಭಿಪ್ರಾಯ ಗೆಂಡದ ಮಸೀ ವಿಷಯದಲ್ಲಿಯೂ ತಾಗುತ್ತದೆ; ಯಾಕಂದರೆ ಆದು ಸಹ ಆ ಬಗ್ಯೆ ಸಹಾಯಕವಾದ್ದೆಂದು ಹೆಸಗೊಂಡದೆ. ವಾಂತಿ ನಿಲ್ಲುತ್ತಲೇ ಹರಳೆಣ್ಣೆ (೧೫೦[3]) ಕೊಟ್ಟು ಒಟ್ಟು ಕೂಡಿದ ವಿಷದ ಆಣುಗಳೆಲ್ಲಾ ಮಲಶೋಧನೆ ಮಾಡಿಸಿ ಝಾಡಿಸುವದು. ಈ ಹರಳೆಣ್ಣೆಯನ್ನು ತಿರಿತಿರಿಗಿ ಎರಡು ಯಾ ಮೂರು ದಿನಗಳ ವರೆಗೆ ಕೊಡುತ್ತಾ ಬರ ಬಹುದು. ಬಹಳ ಅಶಕ್ತಿ ಇದ್ದ ಪಕ್ಷಕ್ಕೆ, ಬ್ರಾಂಡಿ ಮಿಶ್ರ[4] ಕೊಡ ಬಹುದು; ಮತ್ತು ತರುವಾಯ ಇನ್ನೂ ನೋವು, ಅವಿಶ್ರಾಂತಿ ಉಳಿದಿದ್ದ ಪಕ್ಷಕ್ಕೆ, ಅವು ಒಂದಿಷ್ಟು ಅಫೀನಿ (೬೯[5]) ಬಹಳ ಸಣ್ಣ ಪರಿಮಾಣದಲ್ಲಿ ಕೊಟ್ಟು ಶಮನವಾಗುವವು.

---

1) ೧೮೭೯ನೇ ಇಸವಿಯ ಪಂಚಾಂಗದ ೪೭ನೇ ಪಾನಿನಲ್ಲಿ ನೋಡು.
2) ೧೮೭೭ನೇ ಇಸವಿಯ ಪಂಚಾಂಗದ ೫೭ನೇ ಪಾನಿನಲ್ಲಿ ನೋಡು.
3) ೧೮೮೦ನೇ ಇಸವಿಯ ಪಂಚಾಂಗದ ೫೫ನೇ ಪಾನಿನಲ್ಲಿ ನೋಡು.
4) ೧೮೭೭ನೇ ಇಸವಿಯ ಪಂಚಾಂಗದ ೧೭ನೇ ಪಾನಿನಲ್ಲಿರುವ f. ಅಕ್ಷರ ನೋಡು.
5) ೧೮೭೯ನೇ ಇಸವಿಯ ಪಂಚಾಂಗದ ೫೦ನೇ ಪಾನಿನಲ್ಲಿ ನೋಡು.

ಪೆಟ್ಟುಗಳು, ದೆಬ್ಬೆಗಳು Blows.

೧೮೮೮ನೇ ಇಸವಿಯ ಪಂಚಾಂಗದ ೪೬—೪೮ನೇ ಪಾನುಗಳಲ್ಲಿ ನೋಡು.

ಪ್ರಮೇಹ Gonorrhœa.

ಕೆಟ್ಟ ಸಹವಾಸದ ದೆಶೆಯಿಂದ ಜನನೇಂದ್ರಿಯಗಳಲ್ಲಿ ನೋವು ಹುಣ್ಣು ಉಂಟಾಗಿ, ತರುವಾಯ ಅದರಲ್ಲಿ ಕೀವು ಹುಟ್ಟಿ, ಮೂತ್ರದ್ವಾರದಿಂದ ಸೋರುವದು.

ಚಿಕಿತ್ಸೆ: ಕರಿಜೀರಿಗೆಯ ಚೂರ್ಣವಾಗಲೀ (೭೪[1]), ಆಳಲೆಕಾಯಿ ಕಷಾಯವಾಗಲೀ (೭೫[2]), ಹರಳೆಣ್ಣೆಯಾಗಲೀ ಕೊಟ್ಟು ಝಾಡಿಸಿ ಮಾಡಿಸುವದು. ತರುವಾಯ ಮೂತ್ರದ್ವಾರದಲ್ಲಿರುವ ನೋವಿಗೂ, ಉರಿಗೂ ಶಮನಕರವಾಗಿ ಪೆಟ್ಲುಪ್ಪನ್ನು (೭೫೪) ಬೆಂಡೇಕಾಯಿ ಕಷಾಯದ (೭೫೫) ಸಂಗಡವಾಗಲೀ, ಇಸಬ್‌ಗೊಲ್ ಕಷಾಯದ (೭೫೬) ಸಂಗಡವಾಗಲೀ, ಗಂಜಿನೀರಿನಲ್ಲಿ ಆಗಲೀ (೧೧೮೮[3]) ಕೊಡುವದು. ಆನೆನೆಗ್ಗಿಲು ಗಿಡದ ಸೊಪ್ಪಿನ ನೀರು (೭೩೪[4]) ಈ ಉದ್ದಿಶ್ಯ ಬಹಳ ಗುಣವುಳ್ಳದ್ದೆಂದು ಹೇಳುತ್ತಾರೆ; ಆದದರಿಂದ ಅದನ್ನು ಕೊಟ್ಟು ನೋಡ ಬಹುದು. ಬೀಗು (ಉರಿ) ಇರುವ ಲಕ್ಷಣಗಳು ಕಡಿಮೆಯಾಗಲಿಕ್ಕೆ ತೊಡಗಿದಾಗ, ಮುಂದೆ ಹೇಳುವ ಔಷಧಗಳಲ್ಲಿ ಒಂದು ಕೊಡ ತಕ್ಕದ್ದು. ಗಂಧಮೆಣಸಿನ ಚೂರ್ಣ (೮೩[5]), ಗರ್ಜನ್ ತೈಲ (೮೫[6]), ಗಂಧದ ಎಣ್ಣೆ (೭೫೭), ಅಥವಾ ಮಾಚಿಕಾಯಿಯ ಚೂರ್ಣ (೮೯[5]),ಕೊಡುವದು. ಬಾಹ್ಯಲೇಪನವಾಗಿ ಪಟಿಕಾರ ನೀರು (೭೫೮) ಹಚ್ಚುವದು ಯಾ ಪಿಚ್ಕಾರಿ ಹೊಡಿಯುವದು. ಆಗಾಗ್ಯೆ ಕೀವು ಸೋರುವದರಿಂದ ನೋವಾಗಿ ಸ್ವಾತಂತ್ರ್ಯವಿಲ್ಲದೆ ನೆಟ್ಟಗೆ ಆಗೋಣಕ್ಕೆ ಕರ್ಪೂರ (೧೦೩[8]) ಅತ್ಯುತ್ತಮ ಫಲಕರ ಔಷಧವಾಗಿರುತ್ತದೆ. ಈ ರೋಗ ಪುನಹಾ ಆಗದಂತೆ (Bromide of Potassium[7]) ಎಂಬ ಲವಣ ೨೦—೩೦ ಗ್ರೇನ್ ಒಂದು ವ್ಯಾನ್ ಗ್ಲಾಸ್ ನೀರಿನಲ್ಲಿ ಹಾಕಿ ಕಲಕಿಸಿ ರಾತ್ರೆ ಮಲಗುವಾಗ ಕೆಲ ದಿನ ವರೆಗೆ ಕುಡಿಯುವದು ಬಹಳ ಒಳ್ಳೇದೆಂದು ಹೆಸರ್ಗೊಂಡದೆ.

೭೫೪. ಪ್ರಮೇಹದಲ್ಲಿ ಪೆಟ್ಲುಪ್ಪು ಒಂದು ದ್ರಮ್ ಗಂಜಿನೀರಿನಲ್ಲಾಗಲೀ ಬೆಂಡೇಕಾಯಿ ಕಷಾಯದಲ್ಲಾಗಲೀ ಹಾಕಿ ಕರಗಿಸಿ, ಬೇಕಾದ ಹಾಗೆ ಕುಡಿಯುವದರಿಂದ ಉರಿಮೂತ್ರ ಶಮನವಾಗುವದು. ಅದಲ್ಲದೆ ಸ್ತ್ರೀಯರ ಕಠಿಣ ಅಸ್ಥಿಶ್ರಾವಕ್ಕೂ ೧೦ ಗ್ರೇನ್ ಪೆಟ್ಲುಪ್ಪು, ೫ ಗ್ರೇನ್ ಪಟಿಕಾರ, ಇವೆರಡನ್ನು ಚನ್ನಾಗಿ ಪುಡಿ ಮಾಡಿ ದಿನಕ್ಕೆ ಮೂರು ಸಾರಿ ಕೊಡುವದರಿಂದ ವಾಸಿಯಾಗುವದು.

೭೫೫. ಬೆಂಡೇಕಾಯಿಯನ್ನು[9] ೩ ಔನ್ಸ್ ತೆಗದು, ಶಿಗಿದು ಚಿಕ್ಕ ತುಂಡುಗಳಾಗಿ ಮಾಡಿ, ೧೪ ಪ್ಯಾಂಟ್ ನೀರಿನಲ್ಲಿ ಹಾಕಿ ಬೇಯಿಸುವದು. ಆ ಮೇಲೆ ಅದನ್ನು ಗಾಳಿಸಿ,

---

1) ೧೮೮೮ನೇ ಇಸವಿಯ ಪಂಚಾಂಗದ ೭೭ನೇ ಪಾನಿನಲ್ಲಿಯೂ ಅದರ ಟಿಪ್ಪಣಿಯಲ್ಲಿಯೂ ನೋಡು.

2) ೧೮೮೮ನೇ ಇಸವಿಯ ಪಂಚಾಂಗದ ೭೯ನೇ ಪಾನಿನಲ್ಲಿ ನೋಡು.

3) ೧೮೮೦ನೇ ಇಸವಿಯ ಪಂಚಾಂಗದ ೪೫ನೇ ಪಾನಿನಲ್ಲಿ ನೋಡು.

4) ೧೮೮೪ನೇ ಇಸವಿಯ ಪಂಚಾಂಗದ ೫೬ನೇ ಪಾನಿನಲ್ಲಿಯೂ ಅದರ ಟಿಪ್ಪಣಿಯಲ್ಲಿಯೂ ನೋಡು.

5) ೧೮೮೮ನೇ ಇಸವಿಯ ಪಂಚಾಂಗದ ೪೬—೪೪ನೇ ಪಾನುಗಳಲ್ಲಿ ನೋಡು.

6) ೧೮೮೦ನೇ ಇಸವಿಯ ಪಂಚಾಂಗದ ೭೭ನೇ ಪಾನಿನಲ್ಲಿ ನೋಡು.

7) ಇದು ಎಲಾಯತೀ ಔಷಧಗಳನ್ನು ಮಾರುವ ಅಂಗಡಿಗಳಲ್ಲಿ ಶಿಗುತ್ತದೆ.

8) ೧೮೮೩ನೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿರುವ ೧೮೮ನೇ ಅಂಕೆಯನ್ನೂ ಅದರ ಟಿಪ್ಪಣಿಯನ್ನೂ, ಇದೇ ಪಂಚಾಂಗದ ೫೭ನೇ ಪಾನಿನ 1ನೇ ಟಿಪ್ಪಣಿಯನ್ನೂ ಸರಿ ನೋಡು.

ರುಚಿಗೆ ತಕ್ಕದ್ದಾಗಿ ಶೀ ಮಾಡಿ, ಬಿಸಿ ಇರುವಾಗ ಆಗಾಗ್ಯೆ ಕುಡಿಯುತ್ತಾ ಇರುವದು. ಇದು ಜ್ವರದಲ್ಲಿಯೂ ಮೂತ್ರಕೃಚ್ಛ್ರದಲ್ಲಿಯೂ ಪ್ರಮೇಹದಲ್ಲಿಯೂ ಇತರ ಉರಿಮೂತ್ರ, ಮೂತ್ರಬದ್ಧತೆಗಳಲ್ಲಿಯೂ ಬಹಳ ಹಿತವೂ ಗುಣಕರವೂ ಆಗಿರುವದು. ಈ ಕಷಾಯ ಕುಡಿಯುವದರಿಂದ ಮೂತ್ರ ವೃದ್ಧಿಯಾಗುವದಂತೆ.

೨೫೬. ಹುರುಳಿಕಾಯಿ, ಮೂತ್ರದ್ವಾರಗಳ ವ್ಯಾಧಿ, ಪ್ರಮೇಹ ಮುಂತಾವುಗಳಲ್ಲಿ ವೇಧನೆಯೂ ಉರಿಯೂ ಜ್ವಾಲೆಯೂ ಮೂತ್ರ ಹೊಯ್ಯುವದಕ್ಕೆ ಪ್ರಯಾಸವೂ ಉಂಟಾದ್ದಕ್ಕೆ ಮುಂದೆ ಹೇಳಿದ ಕಷಾಯವು ಗುಣಕರವಾದೀತು. ಇಸಬ್‌ಗೋಲ್ ಬೀಜದ[1] ಪುಡಿ ೨ ದ್ರಮ್ ೧ ಪ್ಯಾಂಟ್ ನೀರಿನಲ್ಲಿ ಹಾಕಿ ಬಾಯಿ ಮುಚ್ಚಿ, ೧೦ ನಿಮಿಷಗಳ ವರೆಗೆ ಬೇಯಿಸಿ ಕಷಾಯ ತೆಗಿಯುವದು. ಈ ಕಷಾಯವನ್ನು ಗಾಳಿಸಿ, ಒಂದು ಸಾರಿಗೆ ೨—೪ ಔನ್ಸ್ ಮೇರೆಗೆ ದಿನಕ್ಕೆ ೩—೪ ಸಾರಿ ಕೊಡುವದು.

೨೫೭. ಗಂಧದ ಎಣ್ಣೆ[2] ಪ್ರಮೇಹದಲ್ಲಿ ಔಷಧವಾಗಿ ಇತ್ತಲಾಗೆ ಬಳಿಕೆಗೆ ಬಂದದೆ. ಮತ್ತು ಅದರ ಪ್ರಯೋಗದಿಂದ ೧೦೦ಕ್ಕಿಂತಲೂ ಮೇಲೆ ಗುಣಾಂಶಗಳು ಕಂಡು ಬಂದದರಿಂದ, ಅದನ್ನು ಅವಶ್ಯವಾಗಿ ಪರೀಕ್ಷಿಸಿ ನೋಡ ತಕ್ಕದ್ದಾಗಿರುತ್ತದೆ. ಈ ಎಣ್ಣೆಯ ೩೦—೪೦ ತಟಕುಗಳನ್ನು ಒಂದಿಷ್ಟು ಓಮದ ನೀರಿನಲ್ಲ್ಯಾಗಲೀ[3] ಶುಂಠೀ ಕಲ್ಕದಲ್ಲ್ಯಾಗಲೀ ಹಾಕಿ ಕಲಕಿಸಿ, ದಿನಕ್ಕೆ ಮೂರು ಸಾರಿ ಕೊಡುವದು. ಮೇಹದ ಬಿಳುಪು ಹೋಗುವದಕ್ಕೂ ಇದನ್ನು ಕೊಟ್ಟು ನೋಡ ಬಹುದು.

೨೫೮. ಪ್ರಮೇಹದ ಹಾಗೆ ತೋರುವಂಥಾ ಒಂದು ರೋಗವಿರುತ್ತದೆ. ಅದು ನಿಜವಾದ ಪ್ರಮೇಹದಲ್ಲಿ ಇರುವಂತೆ ಮೂತ್ರದ್ವಾರದೊಳಗಿನಿಂದ ಕೀವು ಸೋರದೆ, ಲಿಂಗದ ತುದಿಯಲ್ಲಿ ಚರ್ಮಕ್ಕೂ ಬೆಂಡಿಗೂ ನಡುವೆ ಇರುವ ಹುಣ್ಣಿನ ದೆಶೆಯಿಂದ ಕೀವು ಸೋರುವದು. ಇದಕ್ಕೆ ೨೦ ಗ್ರೇನ್ ಪಟಿಕಾರವನ್ನು ೧ ಔನ್ಸ್ ನೀರಿನಲ್ಲಿ ಕಲಕಿಸಿ, ಆದರಿಂದ ತೊಳೆಯುವಷ್ಟು ಉತ್ತಮ ಔಷಧ ಬೇರೊಂದಿಲ್ಲ. ಈ ಪ್ರಕಾರ ದಿನಕ್ಕೆ ೨ ಯಾ ೩ ಸಾರಿ ತೊಳೆಯುವದು. ಇದಲ್ಲದೆ ಆ ಭಾಗವನ್ನು ಪೂರ್ಣ ಶುಚಿಯಾಗಿ ಇರಿಸುವದು ಅತ್ಯಗತ್ಯ. ೩ ಗ್ರೇನ್ ಪಟಿಕಾರ ೧ ಔನ್ಸ್ ನೀರಿನಲ್ಲಿ ಕಲಕಿಸಿ, ದಿನಕ್ಕೆ ೨ ಸಾರಿ ಪಿಚ್ಕಾರಿ ಹೊಡಿಯುವದು ಸಹ ಬಿಳಿದು ಹೋಗುವಲ್ಲಿ ಇನ್ನಷ್ಟು ಗುಣಕರವಾಗಿರುತ್ತದೆ[4].

---

1) ೧೯೬೬ನೇ ಇಸವಿಯ ಪಂಚಾಂಗದ ೬೬ನೇ ಪಾನಿನಲ್ಲಿ ಇರುವ ೬೬ನೇ ಅಂಕೆಯನ್ನೂ ಅದರ ಟಪ್ಪಣಿಯನ್ನೂ ಸರಿ ನೋಡಿರಿ.

2) *Engl:* Sandalwood Oil; ಹಿಂದು: ಸಂದಲ್ಕಾ ಅತ್ತರ್, ಚಂದನ್ಕಾ ಅತ್ತರ್; ತಮು: ಶಂದನಂ ತೈಲಂ.—ಗಂಧದ ಎಣ್ಣೆಯು ಪರಿಮಳದ್ರವ್ಯವಾಗಿದ್ದು ಗಂಧಸರಕಿನ ಎಲ್ಲಾ ಅಂಗಡಿಗಳಲ್ಲಿ ಮಾರೋಣವಾಗುತ್ತದೆ.

3) ೧೯೬೬ನೇ ಇಸವಿಯ ಪಂಚಾಂಗದ ೬೯ನೇ ಪಾನಿನಲ್ಲಿರುವ ೧೫ನೇ ಅಂಕೆಯಲ್ಲಿ ನೋಡು.

4) ಆಸ್ಥಿಶ್ರಾವದಲ್ಲಿ ಪಟಿಕಾರದ ಚಿಕಿತ್ಸೆಯನ್ನು ಕುರಿತು ೧೯೬೯ನೇ ಇಸವಿಯ ಪಂಚಾಂಗದ ೪೪ನೇ ಪಾನಿನಲ್ಲಿರುವ ೨೦ನೇ ಅಂಕೆಯಲ್ಲಿ ನೋಡು.

ಶ್ರೀ ಪೌಲ ಉವಾಚ.

ಪತ್ನೀ ಪತ್ಯುರ್ವಶೇ ತಿಷ್ಠೇತ್ಪತ್ಯ್ಯಾಂ ಪ್ರೀಯೇತ ತತ್ಪತಿಃ ।
ಪಿತ್ರೋರಾಜ್ಞಾಂ ಭಜೇದ್ಬಾಲಃ ಪಿತಾ ಬಾಲಂ ನ ರೋಷಯೇತ್ ॥ ೧ ॥

ದಾಸಶ್ಚ ಸ್ವಾಮಿನಃ ಸ್ವಸ್ಯ ಸರ್ವಥಾಜ್ಞಾಂ ಪ್ರಪಾಲಯೇತ್ ।
ನ ದೃಷ್ಟಿಸೇವಯಾ ಕಿಂತು ಖ್ರಿಷ್ಟದಾಸ ಇವೋದ್ಯತಃ ॥ ೨ ॥

ಸ್ವಾಮೀ ದಾಸಂಪ್ರತಿ ನ್ಯಾಯ್ಯಮುತರ್ಜಿತ್ವಾ ಸಮಾಚರೇತ್ ।
ಮಮಾಪ್ಯಪಕ್ಷಪಾತ್ಯಸ್ತಿ ಸ್ವರ್ಗೇ ಸ್ವಾಮೀತಿ ಚಿಂತಯನ್ ॥ ೩ ॥

ಮುಖ್ಯಾಧಿಕಾರಿಣಾಂ ನಿಘ್ನಸ್ತಿಷ್ಠೇತ್ಸರ್ವಃ ಪ್ರಜಾಗಣಃ ।
ಯತೋಧಿಕಾರಿಣಃ ಸರ್ವಾನ್ ಪರಮೇಶೋ ನ್ಯರೂಪಯತ್ ॥ ೪ ॥

ಅತೋ ವಿರೋಧಿನಸ್ತೇಷಾಂ ವಿರುಂಧಂತ್ಯೈಶ್ವರಂ ವಿಧಿಂ ।
ಯಾವಂತಸ್ತು ವಿರುಂಧಂತಿ ದಂಡಸ್ತಾವದ್ಭಿರಾಪ್ಸ್ಯತೇ ॥ ೫ ॥

ಕರಂ ತದ್ಭ್ಯಾಹೀತೇ ದದ್ಯಾಚ್ಚುಲ್ಕಂ ಶುಲ್ಕ ಗ್ರಹಾಯಚ ।
ಮಾನಂ ಮಾನ್ಯಾಯ ಯದ್ಯೇನ ಪ್ರಾಪ್ಯಂ ತಸ್ಮೈ ದದೀತ ತತ್ ॥ ೬ ॥

ಮಿಥ್ಯಾಕಥಾಂ ಪರಿತ್ಯಜ್ಯ ಸತ್ಯಂ ಬ್ರೂಯಾತ್ ಪರಂಪ್ರತಿ ।
ಮಿಥೋಂಗರೂಪಕಾ ಯಸ್ಮಾದಾಸ್ಮಹೇ ನಿಖಿಲಾ ವಯಂ ॥ ೭ ॥

ಅನ್ಯಚ್ಚ ಕ್ರೋಧಮಾಪನ್ನಸ್ತೇನ ನೋ ಕಿಲ್ಬಿಷೇ ಪತೇತ್ ।
ಅಶಾಂತೇ ತಿಷ್ಠತಿ ಕ್ರೋಧೇ ಮಾರ್ತಂಡೋಸ್ತಂ ನ ಗಚ್ಛತು ॥ ೮ ॥

ಯಃ ಕೋಪ್ಯಜೋರಯತ್ಪೂರ್ವಂ ಸ ಪುನರ್ನೈನ ಜೋರಯೇತ್ ।
ಸದ್ವ್ಯಾಪಾರೇ ಶ್ರಮಿತ್ವಾ ತು ದಾನಾರ್ಥಂ ಕಿಂಚಿದಾರ್ಜಯೇತ್ ॥ ೯ ॥

ಸಾರಲ್ಯೇನ ಪರಾನ್ ಲೋಕಾನ್ ಪ್ರತಿ ಪ್ರೇಮಾಣಮಾಚರೇತ್ ।
ಅಸಾಧುನೋ ವಿರಜ್ಯೇತ ಸ್ಯಾದಾಸಕ್ತಸ್ತು ಸಾಧುನಿ ॥ ೧೦ ॥

ಅನ್ಯಸ್ಮಿನ್ ಭ್ರಾತೃವತ್ ಸ್ನಿಹ್ಯೇದುತ್ಕರ್ಷೇಣಾದ್ರಿಯೇತಚ ।
ಕಾರ್ಯೇಷು ಯತ್ನವಾಂಸ್ತಿಷ್ಠನ್ ಪ್ರಭುಂ ಸೇವೇತ ಸರ್ವದಾ ॥ ೧೧ ॥

ದಕ್ಷಿಣ ಹಿಂದುಸ್ಥಾನದಲ್ಲಿ ರೂಢಿಯಾಗಿ ಎಣಿಸುವ

ಶಕಗಳ ಮೊಕಾಬಿಲೆ ಪಟ್ಟಿ.

ಕ್ರಿಸ್ತಶಕ A. D.		ಹಿಂದು ಶಕಗಳು				ಫಸಲಿ		ಮಹಮ್ಮದಿ ಹಿಜರಿ	
		ಚಾಂದ್ರಮಾನ		ಸೌರಮಾನ					
		ಸಂವತ್ಸರಗಳು	ಶಾಲಿವಾಹನ ಶಕ	ಮಲಯಾಳ ಕೊಲ್ಲಮ್					
1807	1867	ಪ್ರಭವ	1729	1789	982	1042	1216	1276	1222	1284
1808	1868	ವಿಭವ	1730	1790	983	1043	1217	1277	1223	1285
1809	1869	ಶುಕ್ಲ	1731	1791	984	1044	1218	1278	1224	1286
1810	1870	ಪ್ರಮೋದೂತ	1732	1792	985	1045	1219	1279	1225	1287
1811	1871	ಪ್ರಜೋತ್ಪತ್ತಿ	1733	1793	986	1046	1220	1280	1226	1288
1812	1872	ಆಂಗೀರಸ	1734	1794	987	1047	1221	1281	1227	1289
1813	1873	ಶ್ರೀಮುಖ	1735	1795	988	1048	1222	1282	1228-29	1290
1814	1874	ಭಾವ	1736	1796	989	1049	1223	1283	1230	1291
1815	1875	ಯುವ	1737	1797	990	1050	1224	1284	1231	1292
1816	1876	ಧಾತು	1738	1798	991	1051	1225	1285	1232	1293
1817	1877	ಈಶ್ವರ	1739	1799	992	1052	1226	1286	1233	1294-95
1818	1878	ಬಹುಧಾನ್ಯ	1740	1800	993	1053	1227	1287	1234	1296
1819	1879	ಪ್ರಮಾಥಿ	1741	1801	994	1054	1228	1288	1235	1297
1820	1880	ವಿಕ್ರಮ	1742	1802	995	1055	1229	1289	1236	1298
1821	1881	ವಿಷು	1743	1803	996	1056	1230	1290	1237	1299
1822	1882	ಚಿತ್ರಭಾನು	1744	1804	997	1057	1231	1291	1238	1300
1823	1883	ಸ್ವಭಾನು	1745	1805	998	1058	1232	1292	1239	1301
1824	1884	ತಾರಣ	1746	1806	999	1059	1233	1293	1240	1302
1825	1885	ಪಾರ್ಥಿವ	1747	1807	1000	1060	1234	1294	1241	1303
1826	1886	ವ್ಯಯ	1748	1808	1001	1061	1235	1295	1242	1304
1827	1887	ಸರ್ವಜಿತು	1749	1809	1002	1062	1236	1296	1243	1305
1828	1888	ಸರ್ವಧಾರಿ	1750	1810	1003	1063	1237	1297	1244	1306
1829	1889	ವಿರೋಧಿ	1751	1811	1004	1064	1238	1298	1245	1307
1830	1890	ವಿಕೃತಿ	1752	1812	1005	1065	1239	1299	1246	1308
1831	1891	ಖರ	1753	1813	1006	1066	1240	1300	1247	1309
1832	1892	ನಂದನ	1754	1814	1007	1067	1241	1301	1248	1310
1833	1893	ವಿಜಯ	1755	1815	1008	1068	1242	1302	1249	1311
1834	1894	ಜಯ	1756	1816	1009	1069	1243	1303	1250	1312

ಕ್ರಿಸ್ತಶಕ		ಸಂವತ್ಸರಗಳು	ಶಾಲಿವಾಹನ ಶಕ		ಮಲಯಾಳ ಕೊಲ್ಲಮ್		ಫಸಲಿ		ಮಹಮ್ಮದಿ ಹಿಜರಿ	
1835	1895	ಮನ್ಮಥ	1757	1817	1010	1070	1244	1304	1251	1313
1836	1896	ದುರ್ಮುಖಿ	1758	1818	1011	1071	1245	1305	1252	1314
1837	1897	ಹೇವಿಳಂಬಿ	1759	1819	1012	1072	1246	1306	1253	1315
1838	1898	ವಿಳಂಬಿ	1760	1820	1013	1073	1247	1307	1254	1316
1839	1899	ವಿಕಾರಿ	1761	1821	1014	1074	1248	1308	1255	1317
1840	1900	ಶಾರ್ವರಿ	1762	1822	1015	1075	1249	1309	1256	1318
1841	1901	ಪ್ಲವ	1763	1823	1016	1076	1250	1310	1257	1319
1842	1902	ಶುಭಕೃತು	1764	1824	1017	1077	1251	1311	1258	1320
1843	1903	ಶೋಭಕೃತು	1765	1825	1018	1078	1252	1312	1259	1321
1844	1904	ಕ್ರೋಧಿ	1766	1826	1019	1079	1253	1313	1260	1322
1845	1905	ವಿಶ್ವಾವಸು	1767	1827	1020	1080	1254	1314	1261-62	1323
1846	1906	ಪರಾಭವ	1768	1828	1021	1081	1255	1315	1263	1324
1847	1907	ಪ್ಲವಂಗ	1769	1829	1022	1082	1256	1316	1264	1325
1848	1908	ಕೀಲಕ	1770	1830	1023	1083	1257	1317	1265	1326
1849	1909	ಸೌಮ್ಯ	1771	1831	1024	1084	1258	1318	1266	1327-28
1850	1910	ಸಾಧಾರಣ	1772	1832	1025	1085	1259	1319	1267	1329
1851	1911	ವಿರೋಧಿಕೃತು	1773	1833	1026	1086	1260	1320	1268	1330
1852	1912	ಪರಿಧಾವಿ	1774	1834	1027	1087	1261	1321	1269	1331
1853	1913	ಪ್ರಮಾದೀಚ	1775	1835	1028	1088	1262	1322	1270	1332
1854	1914	ಆನಂದ	1776	1836	1029	1089	1263	1323	1271	1333
1855	1915	ರಾಕ್ಷಸ	1777	1837	1030	1090	1264	1324	1272	1334
1856	1916	ನಳ	1778	1838	1031	1091	1265	1325	1273	1335
1857	1917	ಪಿಂಗಳ	1779	1839	1032	1092	1266	1326	1274	1336
1858	1918	ಕಾಳಯುಕ್ತಿ	1780	1840	1033	1093	1267	1327	1275	1337
1859	1919	ಸಿದ್ಧಾರ್ಥಿ	1781	1841	1034	1094	1268	1328	1276	1338
1860	1920	ರೌದ್ರಿ	1782	1842	1035	1095	1269	1329	1277	1339
1861	1921	ದುರ್ಮತಿ	1783	1843	1036	1096	1270	1330	1278	1340
1862	1922	ದುಂದುಭಿ	1784	1844	1037	1097	1271	1331	1279	1341
1863	1923	ರುಧಿರೋದ್ಗಾರಿ	1785	1845	1038	1098	1272	1332	1280	1342
1864	1924	ರಕ್ತಾಕ್ಷಿ	1786	1846	1039	1099	1273	1333	1281	1343
1865	1925	ಕ್ರೋಧನ	1787	1847	1040	1100	1274	1334	1282	1344
1866	1926	ಕ್ಷಯ	1788	1848	1041	1101	1275	1335	1283	1345

ಸೂಚನೆ: 1. ಕ್ರಿಸ್ತಶಕವೆಂಬ ಇಸವಿ ಜನವರಿ 1ನೇ ತಾರೀಕಿಗೆ ಪ್ರಾರಂಭವಾಗುವದು.
2. ಸಂವತ್ಸರವೂ ಶಾಲಿವಾಹನ ಶಕವೂ (ಒಂದೇ ದಿವಸ) ಮಾರ್ಚ್-ಎಪ್ರಿಲಲ್ಲಿ ಪ್ರಾರಂಭವಾಗುವದು.
3. ಮಲಯಾಳ ಕೊಲ್ಲಮ್ ಎಂಬ ಕೇರಳ ಶಕವು ಸಪಟಂಬರ ತಿಂಗಳಲ್ಲಿ "
4. ಫಸಲಿ ಜುಲಾಯಿ 1ನೇ ತಾರೀಕಿಗೆ "
5. ಮಹಮ್ಮದಿ ಹಿಜರಿ ಸಾಮಾನ್ಯವಾಗಿ ವರ್ಷ ವರ್ಷ ೧೫ ದಿವಸಕ್ಕೆ ಮುಂದಾಗಿ "

ಜೀವದ ನೀರು.

ಸಂವಾದ.

ರಾಗ ಶಂಕರಾಭರಣ.

ರಾ|| ಒಂದು ದಿವಸ ಯೇಸು ಬಂದು ಸಮರ್ಯದ ಚಂದದ ಸುಕರಕಾಗೀ ।
ಸಂದ ಯಾಕೋಬನಾತ್ಮಜಗಿತ್ತ ಭಾವಿಯ ಮುಂದೆ ತಾ ಶ್ರಮಿಸಿ ಕೂತಾ ॥ ೧ ॥

ಆಸು ದೂರದ ಮಾರ್ಗಾಯಾಸದೊಳಾರನೆ ತಾಸಿನ ಸಮಯದೊಳೂ ।
ಭಾಸುರಾಂಗಿಯು ಸಮರ್ಯೆಯೋರ್ವಳು ನೀರಾ ತಾ ಶೇದುವರೆ ಬಂದಳೂ ॥ ೨ ॥

ಯೇಸುವಿಂತೆಂದ ಕೇಳಿಲೆಗೆ ಸಮರ್ಯೆ ನಾನಾಸರವಡುತಿಹೆನೂ ।
ನೀ ಸಂತೋಷದಿ ನೀರ ಕುಡಿಯಲು ಕೊಡು ಯೆನಲಾ ಸುದತಿಯು ಪೇಳ್ದಳೂ ॥ ೩ ॥

ರಾ|| ನೀನು ಯೆಹೂದ್ಯನಾಗಿ ಸಮರ್ಯದ ಮಾನಿನಿಯೊಡನೆ ಬಾಗೀ ।
ಪಾನೀಯ ಕುಡಿಯ ಕೇಳುವದೇನು ಯವರಿವರ್ಗೇನುಂಟು ಬಳಿಕೆಗಳೂ ॥ ೪ ॥

ರಾ|| ಒಡೆಯನೆಂದನು ಕೇಳು ದೇವರ ವರವನ್ನು ಕುಡಿಯ ಕೊಡೆಂದೆನಗೇ ।
ಒಡನೆ ನಿನ್ನೊಳು ಪೇಳ್ವನ್ಯಾವನೆಂದರಿದು ಬೇಡ್ ಕೊಡುವನು ಜೀವನೀರಾ ॥ ೫ ॥

ರಾ|| ನಿನಗೆ ಸಾಧನಮೊಂದಿಲ್ಲಾ, ಭಾವಿಯುವಾಳವೆನಗೀವೆ ಯೆಂತು ಜಲಾ ।
ಘನವಾದಿ ಕೂಪವ್ಯಾಕೋಬ ತಾನಿತ್ತೆಮ್ಮ ಜನಕಂಗೆ ಮಿಗಿಲೆ ನೀನೂ ॥ ೬ ॥

ರಾ|| ಈ ನೀರ ಕುಡಿದವರೆರಡನೆ ದಾಹಿಪರಾನಿತ್ತ ನೀರ್ಕುಡಿಯೇ ।
ತಾ ನಿತ್ಯಜೀವಕೆ ಹರಿವ ನೀರೊರತೆ ಸಮಾನ ತೃಪ್ತಗಳಹರೂ ॥ ೭ ॥

ರಾ|| ದಾಹವ ಪಡೆಯದಂತೆ ಶೇದುವದಕೆ ಬಾಹದ ತೆರನು ಮುಂತೇ ।
ಯೇಹೂದನಾಥ ನೀ ದಯೆ ಗೈವ್ರದೆನಲು ಮತ್ತಾ ಮಹಿಳೆಯೊಳೆಂದನೂ ॥ ೮ ॥

ರಾ|| ಮಂಡಲದೊಳಗುಳ್ಳ ಹೆಂಡತಿಯರಿಗೆಲ್ಲಾ ಗಂಡನಾಳುದನಲ್ಲವೇ ।
ಖಂಡಿತವದರಿಂದ ನಡೆ ನಿನ್ನ ಮೋಹದ ಗಂಡನ ಕರದು ತಾರೌ ॥ ೯ ॥

ರಾ|| ಸಾನಂದ ಮಹಿಮ ನೀನು ಯೆಹೂದನಾಥ ಯೇನೆಂದು ಪೇಳಲಿನ್ನೂ ।
ಈ ನಗರಾಂತದೊಳೆನಗಿಲ್ಲಾ ಗಂಡನಿಧಾನವೀ ನುಡಿ ಯೆಂದಳೂ ॥ ೧೦ ॥

ರಾ|| ಸತಿಯೆ ನಿನ್ನಯ ನುಡಿ ಕೃತಕವಲ್ಲವು ನಿಜಪತಿಯಿಲ್ಲವೆಂದು ಪೇಳ್ದೇ ।
ಪತಿಗಳೈವರಿರ್ದರಿತರರಿಂದೀಗಿರ್ಪ ಪತಿ ತಾನಲ್ಲಿವನು ಧಿಟಾ ॥ ೧೧ ॥

ರಾ|| ಐಯ್ಯಾ ನೀ ಸುಪ್ರವಾದಿ ನಿನ್ನಯ ಮಾತು ಸೈಯಿದು ಪರಮ ಬೋಧೀ ।
ವಯ್ಯ ನಮ್ಮಯ ಪೂರುವಜರೀ ಬೆಟ್ಟದಿ ಜಗದಯ್ಯನ ನಮಿಸಿದರೂ ॥ ೧೨ ॥

ಆದರೆ ನೀವಂದಿರಿ ದೇವರನೆಯಾರಾಧಿಪ ಸ್ಥಳವನಲ್ಲಿ ।
ಆದಿ ಯೆರೂಸಲೇಮೇ ಯೆನ್ನತೊರವೀರೀ ಭೇದವ ತಿಳಿಸೆನಗೆ ॥ ೧೩ ॥

ರಾ|| ಯೆನ್ನ ನೀ ನಂಬು ಸಂಪನ್ನೆ ಯೆರೂಸಲೇಮಿನ್ನೀ ಬೆಟ್ಟದೊಳಾದರೂ ।
ಯೆನ್ನ ತಂದೆಯನಾರಾಧಿಸದಿಪ್ಪ ಕಾಲ ಮುಂದಿನ್ನು ತಪ್ಪದೆ ಬಪ್ಪುದೂ ॥ ೧೪ ॥

ಅರಿಯದಿರುವದನ್ನಾರಾಧಿಪಿರೈ ನೀವು ವರಿತದ ವಂದಿಪೆವೂ ।
ಸರಿ ಯಾಕಂದರೆ ರಕ್ಷೆ ಯೂದರಿಂದಾಗೆದೆ ಐರೆಯಿದನ್ನಂಬು ನೀನೂ ॥ ೧೫ ॥

ಸತ್ಯದಿಂದಾತ್ಮದಿಂ ಪಿತನ ವಂದಿಪ ಕಾಲ ಮತ್ತೀಗ ಬರುತಲಿದೆ ।
ನಿತ್ಯವೀಪರಿಯಾರಾಧಕರನಿಚ್ಛೈಸುವನಾತ್ಮನಾಗಿಹ ದೇವರೂ ॥ ೧೬ ॥

ರಾ|| ನಸುನಗುತವನೊಡನೆ ಸ್ತ್ರೀ ನುಡಿದಳು ಮೆಸ್ಸಿಯನು ಬರುವ ತಾನೇ ।
ಹಸನಾಗಿ ತಿಳಿಸುವ ಬಂದಾಗ ತಾನೆಲ್ಲಾ ತುಸ ಮಾತ್ರ ಬಲ್ಲೆ ನಾನೂ ॥ ೧೭ ॥

ರಾ|| ನಿನ್ನೊಡನುಸುರುವ ತಾನೇಯವನೆನಲನ್ನೆಗಾ ಶಿಷ್ಯರೆಲ್ಲಾ ।
ಮನ್ನದಿ ವಿಸ್ಮಯ ಬಡುತೈತರಲು ಸತಿ ತನ್ನಯ ಪುರ ಶೇರ್ದಳೂ ॥ ೧೮ ॥

ರಾ|| ಪಟ್ಟಣದವರೊಳಂದೂ ನಾ ಮಾಡಿದ ಗುಟ್ಟುಗಳೊಂದನ್ನೊಂದೂ ।
ದೃಷ್ಟಿಸುತೊರದ ನೋಡಿರಿ ಕ್ರಿಸ್ತನೀತನೆ ಶ್ರೇಷ್ಠನೆಂದೊರೆವೆ ನಾನೂ ॥ ೧೯ ॥

ಆ ಪುರದವರೆಲ್ಲರೂ ತತ್ಸತಿಯೊಡನಾಪರಾಪರನಿದಿರೂ
ತಾ ಪೊರಮಟ್ಟೈದಿ ವಂದಿಸಿ ಕರತಂದರೀ ಪರಮಾತ್ಮಜನಾ ॥ ೨೦ ॥

ರಾ|| ಸತಿಯ ಮಾತಿಗಾಗಿ ವಿಶ್ವಾಸಗೈದ ಸನ್ನುತರಾ ಸಮರ್ಯರೊಳೂ ।
ಅತುಲಿತ ಮಹಿಮ ಶ್ರೀ ಕ್ರಿಸ್ತನೆರಡು ದಿನ ಹಿತವ ಬೋಧಿಸುತ್ತಿದ್ದನೂ ॥ ೨೧ ॥

ರಾ|| ಬಳಿಕೆಲ್ಲ ಪುರಜನರು ತತ್ಸತಿಗೆಂದರೆಲೆಗೆ ನಾವೀಗೆಲ್ಲರೂ ।
ಸಲೆ ನಿನ್ನ ನುಡಿಗಲ್ಲಾ ಕ್ರಿಸ್ತನ ವಾಕ್ಯಕೆ ನೆಲೆಗೊಂಡು ನಂಬಿದೆವೂ ॥ ೨೨ ॥

ಪ್ರತಿಯೋರ್ವರಾವೆ ಕೇಳಿ ಲೋಕದ ರಕ್ಷಕೃತನಾದ ಭಾಗ್ಯಶಾಲೀ ।
ಪತಿತಪಾವನ ಕ್ರಿಸ್ತ ದೇವರಾತ್ಮಜನೆಂದು ಮತಿವಂತೆ ಬಲ್ಲೆವೀಗ ॥ ೨೩ ॥

ಮುಳ್ಕಿ ಕವಿ ರಾಮಕೃಷ್ಣಯ್ಯನ ಕೃತಿ.

ಅಲೆಕ್ಸಂದರ ಡಫ್ ಪಂಡಿತನು.

ಪ್ರಂಚಾಂಗದ ಮೊದಲನೇ ಪಾನಿನಲ್ಲಿ ಮೇಲೆ ಹೇಳಿದ ಪಂಡಿತನ ಚಿತ್ರವು ಅದೆ. ಈ ಪಂಡಿತನು ಬಂಗಾಳದಲ್ಲಿ ಕೀರ್ತಿ ಪಟ್ಟ ಪಾದರಿಯಾಗಿದ್ದನು. ಅವನು ೧೮೦೬ನೇ ವರ್ಷ ದಲ್ಲಿ ಸ್ಕೊತ್ಲಾಂದಿನಲ್ಲಿ ಹುಟ್ಟಿದನು. ಚಿಕ್ಕಂದಿನಿಂದಲೇ ಭಕ್ತರಾದ ಜನರ ಮಧ್ಯದಲ್ಲಿರುವವ ನಾದದರಿಂದ ದೇವರ ಭಕ್ತಿಯು ಅವನಲ್ಲಿ ಚನ್ನಾಗಿ ನೆಲೆಗೊಂಡಿತ್ತು. ಭಕ್ತನಾಗಿದ್ದ ಅವನ ತಂದೆಯು ಯಾವಾಗಲೂ ಮನೆಯಲ್ಲಿ ಹಿಂದು ದೇಶವನ್ನು ಕುರಿತು ಮಾತಾಡುತ್ತಿದ್ದದರಿಂದ ತಾನು ಮಿಶ್ಯನೆರಿಯಾಗಿ ಹಿಂದು ದೇಶಕ್ಕೆ ಹೋಗ ಬೇಕೆಂಬ ಅಪೇಕ್ಷೆ ಚಿಕ್ಕಂದೇ ಅವನಲ್ಲಿ ಉಂ ಟಾಯಿತು; ಅದನ್ನು ಅವನು ಸಾಧಿಸದೆ ಬಿಡಲಿಲ್ಲಾ. ಹದಿನೈದು ವರ್ಷ ಪ್ರಾಯದೊಳಗೆ ಸಾಧಾರಣ ವಿದ್ಯೆ ಕಲಿತ ಮೇಲೆ ಸರ್ವವಿದ್ಯಾಶಾಲೆಯಲ್ಲಿ ಎಂಟು ವರ್ಷಗಳು ಅಭ್ಯಾಸ ಮಾಡಿ ಇಪ್ಪತ್ತಮೂರನೇ ಪ್ರಾಯದಲ್ಲಿ ಒಳ್ಳೇ ವ್ಯುತ್ಪನ್ನನಾದನು. ಹೀಗಿರುವಾಗ ೧೮೩೦ನೇ ವರ್ಷದಲ್ಲಿ ಸ್ಕೊತ್ಲಾಂದಿನಲ್ಲಿರುವ ಮಿಶ್ಯನ ಸಂಘದವರು ಕಲ್ಕತ್ತದಲ್ಲಿ ವಿದ್ಯಾಶಾಲೆಯನ್ನು ಸ್ಥಾಪಿಸ ಬೇಕೆಂದು ಠರಾಯಿಸಿ ಅದಕ್ಕೆ ಅವಶ್ಯವಾದ ದ್ರವ್ಯಾನುಕೂಲವನ್ನು ಸಂಗ್ರಹಿಸಿ, ೧೮೩೨ನೇ ವರ್ಷದಲ್ಲಿ ಅಲೆಕ್ಸಂದರ ಡಫನನ್ನು ಕಲ್ಕತ್ತದಲ್ಲಿ ವಿದ್ಯಾಶಾಲೆ ಸ್ಥಾಪಿಸುವ ಬಗ್ಗೆ ನೇಮಿಸಿ ಕಳುಹಿಸಿದರು. ಸಮುದ್ರಪಯಣದಲ್ಲಿ ಎರಡಾವರ್ತಿ ಹಡಗನಷ್ಟ ಪಟ್ಟು ಸಂಗಡ ತಕ್ಕೊಂಡು ಬಂದ ಅಮೂಲ್ಯ ಪುಸ್ತಕಗಳನ್ನೆಲ್ಲಾ ಕಳಕೊಂಡು, ೧೮೩೦ನೆಯಲ್ಲಿ ಕಲ್ಕತ್ತಕ್ಕೆ ಮುಟ್ಟಿದನು. ವಿದ್ಯಾಶಾಲೆ ಸ್ಥಾಪಿಸುವದಕ್ಕೆ ತಾನು ಬಂದವನೆಂದು ಮೊದಲು ಮನೆ ಕಟ್ಟಿಸ ಬೇಕೆಂಬದಾಗಿ ನೆನಸದೆ, ಸಣ್ಣದೊಂದು ಮನೆ ಬಾಡಿಗೆಗೆ ಮಾಡಿಕೊಂಡು ಹುಡುಗರನ್ನು ಹುಡುಕಿ ಕರಕೊಂಡು ಕಲಿಸುವದಕ್ಕೆ ಪ್ರಾರಂಭ ಮಾಡಿದನು. ಜೂಣಿಯಲ್ಲಿ ಐದು ಹುಡು ಗರು ಅವನ ಶಾಲೆಗೆ ಬಂದರು. ಶಾಲೆಯಲ್ಲಿ ಕಲಿಸುತ್ತಾ ಪ್ರಸಂಗ ಮಾಡುತ್ತಾ ದೇವರ ಕಾರ್ಯದಲ್ಲಿ ಮಹಾ ಆಸಕ್ತನಾಗಿದ್ದದರಿಂದ ಆಕ್ಷೇಮದ ನಿಮಿತ್ತ ಎರಡಾವರ್ತಿ ವಿಲಾಯ ತಿಗೆ ಹೋದನು. ವಿಲಾಯತಿಯಲ್ಲಿಯೂ ಸುಮ್ಮನಿರದೆ ಕಲ್ಕತ್ತದಲ್ಲಿ ವಿದ್ಯಾಶಾಲೆಗಾಗಿ ದೊಡ್ಡ ಮನೆ ಕಟ್ಟಿಸ ಬೇಕೆಂದು ಕುರಿತು ಅದರ ಉದ್ದಿಶ್ಯವಾಗಿ ಹಣ ಕೂಡಿಸುವವನಾ ದನು. ಅವನೊಬ್ಬನ ಪ್ರಯತ್ನದಿಂದಲೇ ಒಂದುವರೆ ಲಕ್ಷ ರೂಪಾಯಿ ಅವನ ಕೈಯಲ್ಲಿ ಕೂಡಿತು. ಈ ರೊಕ್ಕದಿಂದ ಅವನು ಕಲ್ಕತ್ತದಲ್ಲಿ ಸ್ಕೊತ್ಲಾಂದ ಮಿಶ್ಯನಿಗೆ ಶೇರಿರುವ ದೊಡ್ಡ ವಿದ್ಯಾಶಾಲೆಯನ್ನು ಸ್ಥಾಪಿಸಿದನು. ಅವನ ಹತ್ತರ ಕಲಿತವರು ಹಲವರು ಈಗ ಒಳ್ಳೇ ಸ್ಥಿತಿಯಲ್ಲಿದ್ದಾರೆ. ಈ ಪ್ರಕಾರ ೧೮೩೩ನೇ ಇಸವಿಯ ವರೆಗೆ ಅಂದರೆ ಮೂವತ್ತಮೂರು ವರ್ಷಗಳು ದೇವರ ರಾಜ್ಯದ ಕಾರ್ಯಗಳಲ್ಲಿಯೂ ದೇಶದ ಜನರ ಹಿತಾರ್ಥವಾದ ಕಾರ್ಯ ಗಳಲ್ಲಿಯೂ ಎಡೆಬಿಡದೆ ಪ್ರಯತ್ನ ಮಾಡಿದ ಮೇಲೆ ದೇಹದಲ್ಲಿ ಬಲಹೀನನಾಗಿ ಧಾತು ಕುಂದಿ ಸ್ವದೇಶಕ್ಕೆ ತೆರಳಿದನು. ೧೮೬೨ನೇ ವರ್ಷದಲ್ಲಿ ಹಿಂದುಸ್ಥಾನದಲ್ಲಿ ಕಠಿಣ ದುಷ್ಕಾಲವು ಬಿದ್ದಿರುವಾಗ ಕಾಗದಪತ್ರಗಳನ್ನು ಬರೆಯುತ್ತಾ ಮಾತುಭಾರಿ ಗೃಹಸ್ಥರೂ ಐಶ್ವರ್ಯವಂತ ರೂ ಅನ್ನಾಹಾರವಿಲ್ಲದೆ ಭಂಗಭವಣಿ ಪಡುವ ಬಡ ಹಿಂದು ಜನರಿಗೆ ಸಹಾಯ ಮಾಡುವಂತೆ ಬಹಳ ಧಾವತಿ ಮಾಡಿದನು. ೧೮೬೨ನೇ ವರ್ಷದಲ್ಲಿ ಅವನು ಪರಲೋಕದಲ್ಲಿರುವ ವಿಶ್ರಾಂ

ತಿಗೆ ಶೀರುವ ಕಾಲವು ಹತ್ತರ ಬಂತು. ನಿಮ್ಮ ರೋಗವು ಗುಣವಾಗುವಂತೆ ಕಾಣುವದಿಲ್ಲ ವೆಂದು ವೈದ್ಯರೂ ಸ್ನೇಹಿತರೂ ಅವನಿಗೆ ಹೇಳಿದಾಗ ಅವನು ಏನೂ ಹೆದರದೆ, ಹೌದು ಖರೆ, ನಾನು ಹಾಗೆ ಕೆಲವು ಕಾಲದಿಂದ ನೆನಸುತ್ತಿದ್ದೆನೆಂದು ಹೇಳಿದನು. ದೇವರ ವಾಕ್ಯವನ್ನೂ ಭಕ್ತಿಯ ಗೀತಗಳನ್ನೂ ಕೇಳುತ್ತಾ ಇರುವಾಗ ಅವನು ಇಹ ಬಿಟ್ಟು ಪರವನ್ನೈದಿದನು. ಈ ಅಲೆಕ್ಸಂದರ ಡಫನು ಹಿಂದು ಜನರ ಸತ್ಯವಾದ ನಿರಂತರ ಸ್ನೇಹಿತನಾಗಿದ್ದನು. ಅವನು ಬಂಗಾಲ ದೇಶದವರಿಗಾಗಿ ಅಷ್ಟು ಧಾವತಿ ಮಾಡಿದ್ದು ಯಾಕೆ? ಸ್ವಾರ್ಥದಿಂದಲೋ? ಅಲ್ಲಾ. ಅವನು ಪ್ರೀತಿ ಮಾಡುತ್ತಿದ್ದ ಯೇಸು ಕ್ರಿಸ್ತನ ಪ್ರೀತಿಯು ಅವನ ಹೃದಯದಲ್ಲಿ ತುಂಬಿ ತುಳುಕುತ್ತಿತ್ತು. ಕ್ರಿಸ್ತನ ಪ್ರೀತಿ ನಮ್ಮನ್ನೂ ಒತ್ತುತ್ತದೆ, ಇರಿಕಿಸುತ್ತದೆಂದು ಪೌಲ ನೆಂಬ ದೇವಭಕ್ತನು ಹೇಳಿದನು. ದೇವರು ಪ್ರೀತಿಯಾಗಿದ್ದಾನೆ; ದೇವರ ಭಕ್ತರಾದವರ ಲ್ಲಿಯೂ ಇದೇ ಪ್ರೀತಿ ಪ್ರತಿಬಿಂಬಿಸುತ್ತದೆ. ಈ ದೇವರನ್ನು ತಿಳಿದು ಆತನ ಪ್ರೀತಿಯನ್ನನು ಭವಿಸುವದೇ ಪರಮ ಭಾಗ್ಯವು.

ಸ್ವದೇಶಕ್ಕಾಗಿ ಜೀವ ಕೊಟ್ಟವನು.

ಪೂರ್ವ ಕಾಲದಲ್ಲಿ ಇತಲಿ ದೇಶದ ರಾಜಧಾನಿ ರೋಮುಪುರಿಯಲ್ಲಿ ರೋಮಾಯರು ಎಂಬ ಜನಾಂಗವು ಇತ್ತು. ಮೂರ್ತಿಪೂಜಕರಾಗಿದ್ದ ರೋಮಾಯರು ಮಹಾ ಅಹಂಕಾರಿಗಳೂ ಕ್ರೂರರೂ ಆಗಿದ್ದಾಗ್ಯೂ ಅವರಲ್ಲಿ ಆಯಾ ಸದ್ಗುಣಗಳೂ ಸಹಾ ಶೋಭಿಸುತ್ತಿದ್ದವು. ಅವರು ಧೈರ್ಯಶಾಲಿಗಳೂ ಸತ್ಯವಚನಿಗಳೂ ಮಿತಾನುಭಾವಿಗಳೂ ದೇಶಾಭಿಮಾನಿಗಳೂ ಎಂದು ಪ್ರಖ್ಯಾತಿ ಪಟ್ಟವರು. ಐಶ್ವರ್ಯ ಸಂಪಾದಿಸಿ ಸಂಪನ್ನರೆಂದೆನ್ನಿಸಿಕೊಳ್ಳುವದು ದೊಡ್ಡದೆಂದು ಅವರು ನೆನಸುತ್ತಿದ್ದಿಲ್ಲಾ. ಮನುಷ್ಯನ ಸದ್‌ವೃತ್ತಿ ಎಂಬ ಧನವೇ ಹೆಚ್ಚಿನದೆಂದು ಅವರು ಹೇಳುವರು. ಒಬ್ಬನು ಐಶ್ವರ್ಯವಂತನಾಗಿದ್ದು, ಹೇಡಿಯೂ ಸುಳ್ಳನೂ, ಉಣ್ಣುವದರಲ್ಲಿ ತಿನ್ನುವದರಲ್ಲಿ ಪ್ರೀತಿ ಇಟ್ಟು ಧಡ್ಡನಾಗಿದ್ದರೆ ಅವನಿಗೆ ಮಾನವಿರಲಿಲ್ಲಾ. ತಮ್ಮ ದೇಶಕ್ಕಾಗಿ ಯುದ್ಧ ಮಾಡಿ ಜಯಗೊಳ್ಳುವದಕ್ಕೆ ಪ್ರಾಣವನ್ನಾದರೂ ಕೊಡುವರೆ ಸಿದ್ಧವಾಗಿದ್ದರು. ಕಾಲಾನುಗತದಲ್ಲಿ ಅವರ ಈ ಸದ್ಗುಣಗಳೆಲ್ಲಾ ಲೋಪವಾಗುತ್ತಾ ಬಂದವು; ಅವರು ಸ್ವಾರ್ಥಪರರೂ ಹೇಡಿಗಳೂ ನೀಚರೂ ಆಗುತ್ತಾ, ದೇಶವನ್ನೂ ಕಾಪಾಡಲಾರದೆ ತಮ್ಮ ನಾಶನಕ್ಕೆ ತಾವೇ ಕಾರಣವಾದರು.

ಅವರೊಳಗೆ ಶೋಭಿಸಿದ ಕೆಲವು ಸದ್ಗುಣಗಳು ಕೆಳಗೆ ಬರುವ ಕಥೆಯಲ್ಲಿ ಕಾಣುತ್ತವೆ; ಅದೊಂದು ದಂತಕಥೆಯಾಗಿದ್ದರೂ ಅದರಿಂದ ಒಳ್ಳೇ ಉಪದೇಶವನ್ನು ನಾವು ತೆಗದುಕೊಳ್ಳಬಹುದು. ಅದೇನಂದರೆ: ಪಟ್ಟಣದಲ್ಲಿ ಸಂತೆಯಾಗುವ ಜಾಗವಿತ್ತು; ಅಲ್ಲಿಗೆ ಜನರು ಯಾವಾಗಲೂ ಎಡತಾಕುತ್ತಾ, ದಿನದ ವರ್ತಮಾನವನ್ನು ಕೇಳುತ್ತಾ, ನ್ಯಾಯಸ್ಥಾನದಲ್ಲಿ ನಡದ ಸಂಗತಿಗಳನ್ನು ಕುರಿತು ಮಾತಾಡುತ್ತಾ ಇರುವರು. ಆ ಜಾಗದಲ್ಲಿ ಒಮ್ಮೆ ದೊಡ್ಡದೊಂದು ಅಗಾಧವಾದ ಬಿರುಕುಂಟಾಯಿತು; ಅದು ಎಷ್ಟು ಆಳವೆಂದು ಯಾರಿಂದಲೂ ಹೇಳಲಿಕ್ಕೆ ಆಗಲಿಲ್ಲಾ. ಅಲ್ಲಿದ್ದ ಜನರೆಲ್ಲರೂ ಕೂಡಿ ಆ ಬಿರುಕಿನೊಳಗೆ ಕಲ್ಲೂ ಮಣ್ಣೂ ಹಾಕಿ ಅದನ್ನು ತುಂಬಿಸಿ

ದರೂ ಸಮುದ್ರದಲ್ಲಿ ಕಸಕಸೆ ಹಾಕಿದಂತೆ ಆಯಿತಲ್ಲದೆ ಖನಿ ತುಂಬಲಿಲ್ಲಾ. ಎಂದಿನಂತೆ ಅಗಲವಾಗಿಯೂ ಆಳವಾಗಿಯೂ ಉಳಿಯಿತು. ಆವಾಗ ಎಲ್ಲರೂ ಘಾಬರಿಯಾಗಿ, ಏನು ಮಾಡುವಾ ಎಂದು ಒಬ್ಬರ ಮುಖ ಒಬ್ಬರು ನೋಡುತ್ತಾ ಜೋಯಿಸರ ಪೂಜಾರಿಗಳ ಬಳಿಗೆ ಓಡಿ ಹೋದರು. ಪೂಜಾರಿಗಳು ದೇವತೆಗಳಿಗೆ ಪ್ರಸಾದ ಹಾಕಿ ವಿಚಾರಿಸಲು, ರೋಮ ಪುರಿಯಲ್ಲಿ ಅತಿ ಅಮೂಲ್ಯವಾದ ವಸ್ತು ಯಾವದೋ ಅದನ್ನು ಆ ಬಿರುಕಿನೊಳಗೆ ಹಾಕಿದರೆ ಹೊರ್ತು ಆ ಬಿರುಕು ತುಂಬದು ಎಂಬ ದೈವೋತ್ತರವಾಯಿತು. ಆದರೆ ರೋಮ ಪುರಿಯಲ್ಲಿ ಅಮೂಲ್ಯವಾದದ್ದು ಯಾವದೆಂದು ನಿಶ್ಚಯಿಸ ತಕ್ಕವರ್ಯಾರು? ಹೀಗೆ ಏನು ಮಾಡ ಬೇಕೆಂದು ಸಂಶಯದಲ್ಲಿರುವಾಗ ಮಾರ್ಕ ಕುರ್ತಿಯ ಎಂಬ ಒಬ್ಬ ಹರೇದ ಹೊಂತಗಾರನು, ಸಂಭಾವಿಕ ಕುಲದವನು, ಯುದ್ಧದಲ್ಲಿ ಮಹಾ ಶೂರನು, ತನ್ನ ಶೀಸಕ ಮುಂತಾದ ಆಯುಧಗಳನ್ನು ಧರಿಸಿದವನಾಗಿ ಜಲೋ ಕುದುರೆಯ ಮೇಲೆ ಕುಂತು ಅಲ್ಲಿಗೆ ಬಂದನು. ದುಃಖದೀದ ಬಿರುಕನ್ನೇ ನೋಡುತ್ತಿದ್ದ ಜನರಿಗೆ ಅವನು ಹೇಳಿದನು—ಎಲೋ ರೋಮಾಯರೇ, ಆಯುಧಗಳೂ ಪರಾಕ್ರಮವೂ ಅಲ್ಲದೆ ರೋಮಪುರಿಗೆ ಅತ್ಯಮೂಲ್ಯವಾದದ್ದು ಏನದೆ? ಜನರೆಲ್ಲರೂ ವಿಸ್ಮಯದಿಂದ ಅವನನ್ನು ದೃಷ್ಟಿಸುತ್ತಿರುವಾಗ ಅವನು ಸಂತೇ ಸ್ಥಳಕ್ಕೆ ಎದುರಾಗಿದ್ದ ದೇವಸ್ಥಾನಗಳ ಕಡೆಗೆ ತಿರುಗಿ, ಎರಡು ಕೈಗಳನ್ನು ಮೇಲಕ್ಕೆತ್ತಿ ವಂದನೆ ಮಾಡಿದ ಮೇಲೆ, ಜನರೆಲ್ಲರೂ ಭಯಭೀತರಾಗಿ ವಿಸ್ಮಿತರಾಗಿರುತ್ತಿರಲಿಕ್ಕೆ ಕುದುರೆಯನ್ನು ಓಡಿಸಿ ಧೈರ್ಯದಿಂದಲೂ ಸಂತೋಷ ಮುಖದಿಂದಲೂ ಆ ಬಿರುಕಿನೊಳಗೆ ಧುಮುಕಿದನು. ಅವನೂ ಕುದುರೆಯೂ ಕತ್ತಲಾದ ಅಗಾಧದಲ್ಲಿ ಅದೃಶ್ಯವಾಗಲಾಗಿ, ಜನರು ಅವನನ್ನು ಕೊಂಡಾಡಿ ಆ ಹೊಂಡದೊಳಗೆ ಹೂವೂ ಹಣ್ಣೂ ಹಾಕಿದರು. ಆಗ ಹೊಂಡ ಮುಚ್ಚಿ ಹೋಯಿತು.

ಮೇಲೆ ಹೇಳಿದ ಕಥೆ ದಂತಕಥೆ ಮಾತ್ರ. ಪರಾರ್ಥವಾಗಿ ಜೀವವನ್ನು ಕೊಟ್ಟದ್ದಕ್ಕೆ ಅನುಪಮವಾದ ಮತ್ತು ಸತ್ಯವಾದ ಉದಾಹರಣೆ ಮತ್ತೊಂದು ಅದೆ. ಲೋಕರಕ್ಷಕನಾದ ಯೇಸು ಕ್ರಿಸ್ತನು ತನ್ನ ಪ್ರಾಣವನ್ನು ಅನೇಕರಿಗೋಸ್ಕರ ವಿಮೋಚನೆಯಾಗಿ ಕೊಡುವದಕ್ಕೆ ಬಂದನು. ಮನುಷ್ಯರಾದ ನಾವು ದೇವರ ಆಜ್ಞಾಭಂಗ ಮಾಡಿ ಪಾಪಪತಿತರೂ ದೇವರಿಗೆ ವೈರಿಗಳೂ ಆಗಿದ್ದವರು. ವೈರಿಗಳಾದ ನಮ್ಮನ್ನು ದೇವರು ಪುನಹಾ ತನಗೆ ಅನ್ಯೋನ್ಯ ಮಾಡುವದಕ್ಕೆ ಚಿತ್ತೈಸಿದನು. "ದೇವರು ಕ್ರಿಸ್ತನಲ್ಲಿದ್ದು ಲೋಕವನ್ನು ತನಗೆ ಅನ್ಯೋನ್ಯ ಮಾಡಿದನು. ನಾವಿನ್ನೂ ಬಲಹೀನರಾಗಿರುವಾಗ್ಯೆ ಕ್ರಿಸ್ತನು ತಕ್ಕ ಸಮಯದಲ್ಲಿ ಭಕ್ತಿಹೀನರಿಗೋಸ್ಕರ ಸತ್ತನು. ನೀತಿವಂತನಿಗೋಸ್ಕರ ಯಾವನಾದರೂ ಸಾಯುವದು ದುರ್ಲಭವಾಗಿದೆ; ಒಂದು ವೇಳೆ ಉಪಕಾರಿಗೋಸ್ಕರ ಯಾವನಾದರೂ ಸಾಯುವದಕ್ಕೆ ಅಷ್ಟು ಧೈರ್ಯ ಪಟ್ಟಾನು. ನಾವಿನ್ನೂ ಪಾಪಿಗಳಾಗಿರುವಾಗ ಕ್ರಿಸ್ತನು ನಮಗೋಸ್ಕರ ಸತ್ತದ್ದರಿಂದ ದೇವರು ನಮ್ಮ ಮೇಲಿರುವ ಪ್ರೀತಿಯನ್ನು ಪ್ರತಿಷ್ಠೆ ಮಾಡುತ್ತಾನೆ. ಓದುವವರೇ, ಈ ದಿವ್ಯವಾಕ್ಯವನ್ನು ಹೃದಯದಲ್ಲಿ ತೂಕ ಮಾಡಿರಿ; ನಿಮ್ಮನ್ನು ವಿಮೋಚನೆ ಮಾಡುವದಕ್ಕೆ ಪ್ರಾಣಾರ್ಪಣೆ ಮಾಡಿದ ಯೇಸು ರಕ್ಷಕನಲ್ಲಿ ವಿಶ್ವಾಸವಿಡುವವರಾಗಿರಿ. ನಾವು ರಕ್ಷಿಸಲ್ಪಡುವದಕ್ಕೆ ಯೇಸು ಕ್ರಿಸ್ತನಲ್ಲದೆ ಆಕಾಶದ ಕೆಳಗೆ ಮತ್ತೊಬ್ಬ ರಕ್ಷಕನಿಲ್ಲಾ.

ಠ ಸೇ ತೀ ವೆ ರ್

(೧೮೮೯ನೇ ಇಸವಿ Iನೇ ಆಕ್ಟಿನಲ್ಲಿರುವ ಪಟ್ಟಿಯಿಂದ ಎತ್ತಿ ತೆಗದು ಸಂಕ್ಷೇಪಿಸಿದ್ದು.)

ದಸ್ತಾವೇಜಿನ ವಿವರಣೆ:	ಸ್ಟಾಂಪ್ ಹಾಸಲು:

11. (Bill of Exchange or Promissory Note) ಬಿಲ್ ಒಫ್ ಎಕ್ಸ್‌ಚೇಂಜ್ ಯಾ ಪ್ರೊಮಿಸರಿ ನೋಟು (ಅಂದರೆ ವಟಾಯಿಸ ತಕ್ಕ ಹುಂಡಿ ಯಾ ವಾಯಿದೇ ಚೀಟು. ಇದರಲ್ಲಿ ಚಕ್ಕ್, ಪತ್ರ, ಬೇಂಕನೋಟು, ಇಲ್ಲವೆ ಕರೆನ್ಸಿನೋಟು ಶೇರುವದಿಲ್ಲ):—

a) ಕೇಳಿದಾಗಲೇ ಪಾವತಿ ಆಗ ತಕ್ಕದ್ದಾಗಿ, ಅದರ ಮೌಲ್ಯ ೩೦ ರೂಪಾಯಿಗೆ ಎಷ್ಟಾದರೆ . . . . . ೧ ಆಣೆ

	ಒಂದಕ್ಕೆ	ದುಬ್ಬಾರೆಪ್ರತಿಗೆ		ತಿಬ್ಬಾರೆಪ್ರತಿಗೆ	
b) ಕೇಳಿದಾಗಲೇ ಅಲ್ಲದೆ ಅನ್ಯಥಾ ಪಾವತಿಯಾಗ ತಕ್ಕದ್ದಾಗಿ, ಬರದ ಯಾ ಕಂಡ ತಾರೀಕಿನಿಂದ ಒಂದು ಸಂವತ್ಸರಕ್ಕೆ ಎಷ್ಟಾದ ವಾಯಿದೆ ಇದ್ದರೆ:	ರೂ.	ಆ.	ರೂ.	ಆ.	ರೂ.	ಆ.
ನಮೂದಿಸಿದ ರೂಪಾಯಿ ೩೦೦ಕ್ಕೆ ಮೀರದಿದ್ದರೆ	೦	೩	೦	೧	೦	೧
ರೂಪಾಯಿ ೩೦೦ಕ್ಕೆ ಮೀರಿ ೪೦೦ ,,	೦	೪	೦	೩	೦	೩
,, ೪೦೦ ,, ೬೦೦ ,,	೦	೬	೦	೩	೦	೩
,, ೬೦೦ ,, ೧೦೦೦ ,,	೦	೧೦	೦	೪	೦	೪
,, ೧೦೦೦ ,, ೧೩೦೦ ,,	೦	೧೩	೦	೬	೦	೪
,, ೧೩೦೦ ,, ೧೬೦೦ ,,	೧	೦	೦	೮	೦	೬
,, ೧೬೦೦ ,, ೩೪೦೦ ,,	೧	೮	೦	೧೩	೦	೮
೩೪೦೦ ರೂಪಾಯಿ ಮೇಲೆ ೧೦೦೦೦ ರೂ. ವರೆಗೆ ಪ್ರತಿ ರೂ. ೩೪೦೦ಕ್ಕೆ ಯಾ ಅದರ ಅಂತಕ್ಕೆ.	೧	೮	೦	೧೩	೦	೮
೧೦೦೦೦ ರೂಪಾಯಿ ಮೇಲೆ ೫೦೦೦೦ ರೂಪಾಯಿ ವರೆಗೆ ಪ್ರತಿ ರೂಪಾಯಿ ೪೦೦೦ಕ್ಕೆ ಯಾ ಅದರ ಅಂತಕ್ಕೆ. . .	೫	೦	೧	೮	೧	೦
೫೦೦೦೦ ರೂಪಾಯಿ ಮೇಲೆ ಪ್ರತಿ ರೂಪಾಯಿ ೧೦೦೦೦ಕ್ಕೆ ಯಾ ಅದರ ಅಂತಕ್ಕೆ	೫	೦	೫	೦	೩	೦

c) ಬರದ ತಾರೀಕಿನಿಂದ ಇಲ್ಲವೆ ಕಂಡ ತಾರೀಕಿನಿಂದ ಒಂದು ಸಂವತ್ಸರದ ಮೇಲೆ ಪಾವತಿ ಆಗ ತಕ್ಕದ್ದಾದರೆ— ೧೩ನೇ ಅಂಕೆಯಲ್ಲಿ ಹೇಳಿರುವಷ್ಟೇ ತಸೆ

12. (Bill of Lading) ಬಿಲ್ ಒಫ್ ಲೇಡಿಂಗ್ ಎಂಬ ಸಾಮಾನು (ಜಹಜಿನ ಮೇಲೆ) ಭರಾವಣೆಚೀಟು . . . . . ೪ ಆಣೆ

13. ಪತ್ರ (ಈ ಆಕ್ಟಿನಿಂದ ಅನ್ಯಥಾ ನಿಬಂಧಿಸಲ್ಪಡದೆ ಇರುವಂಥಾದ್ದು); **(57.) (Settlement)** ವ್ಯವಸ್ಥಾಪತ್ರ:—

ಇದರ ಮೊಬಲಗು ೧೦ ರೂಪಾಯಿಗೆ ಮೀರದಿದ್ದರೆ . .	೨ ಆಣೆ
೧೦ ರೂಪಾಯಿಗೆ ಮೀರಿ ೫೦ ರೂಪಾಯಿಗೆ ಮೀರದಿದ್ದರೆ. .	೪ ಆಣೆ
೫೦ ,, ,, ೧೦೦ ,, ,, . .	೮ ಆಣೆ
೧೦೦ರೂ.ಮೇಲೆ ೧೦೦೦ರೂ. ವರೆಗೆ ಪ್ರತಿ ರೂ.೧೦೦ಕ್ಕೆ ಯಾ ಅದರಂತಕ್ಕೆ	೮ ಆಣೆ
೧೦೦೦,, ,, ಪ್ರತಿ ,, ೫೦ಕ್ಕೆ ಯಾ ಅದರ ಅಂತಕ್ಕೆ. . .	೨ ರೂಪಾಯಿ ೮ ಆಣೆ

14. (Bond or Mortgage-Deed) ಪತ್ರ ಅಥವಾ ಅಡಮಾನ ಪತ್ರ (ಒಂದು ಕೆಲಸವನ್ನು ಸರಿಯಾಗಿ ನೆರವೇರಿಸ ತಕ್ಕ ಬಗ್ಗೆ ಅಥವಾ ತದ್ವಾರಾ ವಸೂಲಾದ ಹಣಕ್ಕೆ ಸಬಬು ಕೊಡ ತಕ್ಕ ಬಗ್ಗೆ ಜಾಮೀನಾಗಿ ಬರಕೊಡುವಂಥಾದ್ದು):—

a) ಪತ್ರದ ಮೊಬಲಗು ೧೦೦೦ ರೂಪಾಯಿಗೆ ಮೀರದಿದ್ದರೆ—13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ
b) ಇತರ ಸಂಗತಿಯಲ್ಲಿ . . . . . ೫ ರೂಪಾಯಿ

19. ಇಪ್ಪತ್ತು ರೂಪಾಯಿಗೆ ಮೀರಿದ ಹಣಕ್ಕೆ (Cheque) ಚೆಕ್ಕ್ ಯಾನೆ ಹುಂಡಿ . . . . . ೧ ಆಣೆ

21. (Conveyance) ಕೊನ್ವೆಯನ್ಸ್ ಯಾನೆ ಕ್ರಯಪತ್ರ, ದಾನಪತ್ರ:—
ಪ್ರತಿಫಲದ ಮೊಬಲಗು
ರೂಪ್ಯಾ ೫೦ಕ್ಕೆ ಮೀರದಿದ್ದರೆ . . . . . ೬ ಆಣೆ
„ ೫೦ ಮೀರಿ ರೂ. ೧೦೦ಕ್ಕೆ ಮೀರದಿದ್ದರೆ . . . . ೧ ರೂಪಾಯಿ
„ ೧೦೦ „ „ ೧೦೦೦ವರೆಗೆ ಪ್ರತಿ ರೂ. ೧೦೦ಕ್ಕೆ ಯಾ ಅದರ ಅಂಶಕ್ಕೆ ೧ ರೂಪಾಯಿ
„ ೧೦೦೦ „ „ ಪ್ರತಿ ೫೦೦ ರೂಪಾಯಿಗೆ ಯಾ ಅದರ ಅಂಶಕ್ಕೆ ೫ ರೂಪಾಯಿ

29. ಸಾಲ ಕೊಟ್ಟ ಹಣದ ವಸೂಲಿಯ ಬಂದೋಬಸ್ತಿಗಾಗಿ ಮೂಲ ದಸ್ತಾವೇಜುಗಳನ್ನು ಇಲ್ಲವೆ ಬೇರೆ ಬೆಲೆಯುಳ್ಳ ಸಾಧನಗಳನ್ನು ತೀವಣೆ ಇಟ್ಟು, ಅಥವಾ ಚರಸೊತ್ತಿನ ಈಡಿನ ಮೇಲೆ ಸಾಲ ತಕ್ಕೊಂಡದ್ದಕ್ಕೆ ಸಾಕ್ಷ್ಯವಾಗಿ ಉಂಟಾಗುವ ದಸ್ತಾವೇಜು:—
a) ಸಾಲದ ಹಣವು ಅಂಥಾ ದಸ್ತಾವೇಜಿನ ತಾರೀಕಿನಿಂದ ಮೂರು ತಿಂಗಳ ಮೇಲೆ ಒಂದು ವರ್ಷದೊಳಗೆ ಸಂದಾಯವಾಗ ತಕ್ಕಂಥಾದ್ದಾಗಿದ್ದರೆ | 11ನೇ ಅಂಕೆಯ *b*ಯಲ್ಲಿ ಹೇಳಿರುವಷ್ಟೆ ಠಸೆ
b) ಮೂರು ತಿಂಗಳ ಒಳಗಿನ ವಾಯಿದೆಯಿಂದ ಸಂದಾಯವಾಗ ತಕ್ಕಂಥಾದ್ದಾಗಿದ್ದರೆ . . . . . 11ನೇ ಅಂಕೆಯ *b*ಯಲ್ಲಿ ಹೇಳಿರುವ ಠಸೆಯ ಅರೆವಾಸಿ

30. ಅಡವಿನ ಸೊತ್ತಿನ ಮೇಲೆ ಇನ್ನೂ ಸಾಲವನ್ನು ಹೊರಿಸಿ ಉಂಟಾಗುವ ದಸ್ತಾವೇಜು:—
a) ಪ್ರಥಮತಾ ಆದ ಅಡವು 44ನೇ ಅಂಕೆಯ *a*ಯಲ್ಲಿ ಸೂಚಿಸಿರುವಂಥಾದ್ದಾಗಿದ್ದರೆ . . . . . 21ನೇ ಅಂಕೆಯಲ್ಲಿ ಹೇಳಿದ ಕ್ರಯಪತ್ರದಷ್ಟೆ ಠಸೆ
b) ಅಂಥಾ ಅಡವು 44ನೇ ಅಂಕೆಯ *b*ಯಲ್ಲಿ ಹೇಳಿದಂಥಾದ್ದಾಗಿದ್ದರೆ, 13ನೇ ಅಂಕೆಯಲ್ಲಿರುವಷ್ಟೆ ಠಸೆ

32. ಪಾಲುಗಾರಿಕೇ ದಸ್ತಾವೇಜು. . . . . ೧೦ ರೂಪಾಯಿ

33. ಪಾಲುಗಾರಿಕೆ ಅಗಲಿಕೇ ದಸ್ತಾವೇಜು . . . . ೫ ರೂಪಾಯಿ

35. ಯಾವದೊಂದು ಸೊತ್ತಿನ ಬದಲಾವಣೆ ದಸ್ತಾವೇಜು—ಅಂಥಾ ಸೊತ್ತಿನ ಹೆಚ್ಚಾದ ಕಿಮ್ಮತಿನ ಬಗ್ಗೆ 21ನೇ ಅಂಕೆಯಲ್ಲಿ ಕ್ರಯಪತ್ರಕ್ಕೆ ಹೇಳಿರುವಷ್ಟೆ ಠಸೆ

39. ಗೇಣಿಚೀಟು (ಗೇಣೀ ಬಗ್ಗೆ ಮಾಡುವ ಕರಾರು ಸಹ):—
a) ಗೇಣೀ ಮೊಬಲಗು ನಿಶ್ಚಯವಿದ್ದು, ಪ್ರೀಮಿಯಮ್ ಯಾನೆ ವಟ್ಟ ಇಲ್ಲದೆ, ಗೇಣಿ ವಾಯಿದೆ ಇಂಥಾದ್ದೆಂತ ನಮೂದಿಸಲ್ಪಟ್ಟು, ಸದರಿ ವಾಯಿದೆ ಒಂದು ವರುಷಕ್ಕೆ ಮೀರದಿದ್ದರೆ . . . . . 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ
ಒಂದು ವರುಷಕ್ಕೆ ಮೀರಿ ೫ ವರ್ಷಕ್ಕೆ ಮೀರದಿದ್ದರೆ—ಸರಾಸರಿ ೧ ವರ್ಷದ ಗೇಣಿಗೆ 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ
ಮೂರು ವರ್ಷಕ್ಕೆ ಮೀರಿ ಇದ್ದರೆ—ಸರಾಸರಿ ಒಂದು ವರ್ಷಕ್ಕೆ ಬೀಳುವ ಗೇಣಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಗೇಣಿ ಮೊಬಲಗು ನಿಶ್ಚಯವಿದ್ದು, ವಟ್ಟ ಕೊಡುವದಿಲ್ಲದೆ, ಗೇಣಿ ಚೀಟಿನ ವಾಯಿದೆ ಇಂಥಾದ್ದೆಂದು ನಿರಖು ಇಲ್ಲದಿದ್ದರೆ—೧೦ ವರ್ಷದಲ್ಲಿ ಸರಾಸರಿ ಒಂದು ವರ್ಷಕ್ಕೆ ಬೀಳುವ ಗೇಣಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

c) ಒಂದು ದಂಡ ಅಥವಾ ಪ್ರೀಮಿಯಮ್ ಯಾನೆ ವಟ್ಟ ತಕ್ಕೊಳ್ಳುವ ಶರ್ತದ ಮೇಲೆ ಗೇಣಿಗೆ ಕೊಡೋಣಾಗಿ, ಗೇಣಿ ಎನಾದರೂ ಬರುವಂಥಾದ್ದು ಇಲ್ಲದಿದ್ದರೆ—ಗೇಣಿಚೀಟನಲ್ಲಿ ನಮೂದಿಸಿದ ಸದರಿ ದಂಡ ಯಾ ವಟ್ಟದ ಮೊಬಲಗಿಗಾಗಿ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

d) ಗೇಣಿ ಬರುವದರ ಹೊರ್ತು ದಂಡ ಯಾ ಪ್ರೀಮಿಯಮ್ ಯಾನೆ ವಟ್ಟ ಸಹ ತಕ್ಕೊಳ್ಳುವ ಶರ್ತದ ಮೇಲೆ ಗೇಣಿಚೀಟು ಉಂಟಾದರೆ—ಆ ದಂಡ ಯಾ ವಟ್ಟ ಇಲ್ಲದಿದ್ದರೆ, ಸದರಿ ಗೇಣೀ ಬಗ್ಗೆ ಎಷ್ಟು ಠಸೆ ಬೇಕಾದೀತೋ ಅಷ್ಟು ಪಾಸಲು, ಮತ್ತು ಸದರಿ ದಂಡದ ಯಾ ವಟ್ಟದ ಮೊಬಲಗಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

41. (Letter of Credit) ಲೆಟರ್ ಒಫ್ ಕ್ರೇಡಿಟ್ (ಅಂದರೆ ಇದು ಯಾರ ಹೆಸರಿನಲ್ಲಿ ಬರಿಯಲ್ಪಡುತ್ತದೋ ಆತನಿಗೆ ನಂಬಿಕೆಯ ಮೇಲೆ ಸಾಲ ಕೊಡುವಂತೆ ಮತ್ತೊಬ್ಬನಿಗೆ ಅಧಿಕಾರ ಕೊಡುವಂಥಾ ದಸ್ತಾವೇಜು) ೧ ಆಣೆ

43. ಒಂದು ಕಂಪೆನಿಯ ಸಂಘದ ಯಾದಾಸ್ತು . . . ೧೫ ರೂಪಾಯಿ

44. ಅಡಮಾನಪತ್ರ (14, 15, 29, 55ನೇ ಅಂಕೆಗಳಲ್ಲಿ ಏರ್ಪಡಿಸದೆ ಇರುವಂಥಾ ತರದ್ದು):—

a) ಪತ್ರ ಬರೆದು ಕೊಡುವ ಸಮಯದಲ್ಲಿ ಆದರಲ್ಲಿ ನಮೂದಿಸಿದ ಸೊತ್ತನ್ನು ಅಡವಿದಾರಗೆ ಒಪ್ಪಿಸಿ ಕೊಟ್ಟರೆ, ಇಲ್ಲವೆ ಒಪ್ಪಿಸಿ ಕೊಡುವರೆ ಸಮ್ಮತಿಸಿದರೆ . . . . . 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಸದರಿ ಸೊತ್ತಿನ ಸ್ವಾಧೀನತೆ ಬಿಟ್ಟು ಕೊಡದೆ ಇದ್ದ ಪಕ್ಷಕ್ಕೆ—13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

46. (Note or Memorandum) ನೋಟು ಯಾ ಮೆಮೊರಂಡಂ (ಅಂದರೆ ಒಬ್ಬ ದಲಾಲನಾಗಲೀ ಮುತ್ತಾಲಿಕನಾಗಲೀ ತನ್ನ ಧನಿಯ ತರಫಿನಲ್ಲಿ ಇಪ್ಪತ್ತು ರೂಪಾಯಿಗೆ ಮೀರಿದ ಯಾವ ಸರಕನ್ನಾಗಲೀ ಚೀನಸನ್ನಾಗಲಿ ಖರೀದಿ ಮಾಡಿದ್ದಾಗಿ ಇಲ್ಲವೆ ಕೊಂಡುಕೊಂಡಿರುವದಾಗಿ ಸದ್ರಿ ಧನಿಗೆ ತಿಳಿಸುವ ಚೀಟು ಯಾ ಯಾದಾಸ್ತು) . . . . . ೧ ಆಣೆ

48. ಯಾವದಾದರೂ ಒಂದು ಹೊಸ ನಿರ್ಮಾಣದ ತಪತೀಲುವಟ್ಟಿಯನ್ನು ದಾಖಲು ಮಾಡುವ ಬಗ್ಗೆ, ಅಥವಾ ಹಿಂದುಸ್ಥಾನದಲ್ಲಿ ಸದರಿ ನಿರ್ಮಿತವನ್ನು ತನ್ನ ಹೊರ್ತು ಬೇರೆ ಯಾರಾದರೂ ಮಾಡಿ ಉಪಯೋಗಿಸದಂತೆ ಅಪ್ಪಣೆ ಆಗ ಬೇಕಾಗಿ ಬರಕೊಳ್ಳುವ ಅರ್ಜಿ . . . . ೧೦೦ ರೂಪಾಯಿ

50. (Power-of-Attorney) ಪವರ್-ಒಫ್-ಎಟ್ಟರ್ನಿ (ಮೊಕ್ತ್ಯಾರನಾಮೆ):—

a) ಒಂದೇ ಕಾರ್ಯಕ್ಕೆ ಸಂಬಂಧವಾದ ಒಂದು ಯಾ ಅನೇಕ ದಸ್ತಾವೇಜುಗಳನ್ನು ರಿಜಿಸ್ತ್ರೀ ಬಗ್ಗೆ ಹಾಜರು ಪಡಿಸುವದಕ್ಕೆ ಉಂಟಾದರೆ ೯ ಆಣೆ

b) ಬೇರೆ ಯಾವದಾದರೂ ಒಂದೇ ಕಾರ್ಯಕ್ಕಾಗಿ ಒಬ್ಬ ಯಾ ಅನೇಕರಿಗೆ ಅಧಿಕಾರ ಕೊಡುವದಾದರೆ . . . . . ೧ ರೂಪಾಯಿ

c) ಸಮಷ್ಟಿಯಾಗಿ ಯಾ ಬೇರೆ ಬೇರೆಯಾಗಿ ಒಂದಕ್ಕಿಂತ ಅನೇಕ ಕಾರ್ಯಗಳಲ್ಲಿ ಆಗಲೀ ಸಾಧಾರಣವಾಗಿ ಆಗಲೀ ಪ್ರವರ್ತಿಸಲಿಕ್ಕೆ ಕ್ಕೆ ಎಂಬದಷ್ಟು ಮಂದಿಗೆ ಅಧಿಕಾರ ಕೊಡುವದಾದರೆ . . . . ಕ ರೂಪಾಯಿ

d) ಸಮಷ್ಟಿಯಾಗಿ ಯಾ ಬೇರೆ ಬೇರೆಯಾಗಿ ಅನೇಕ ಕಾರ್ಯಗಳಲ್ಲಿ ಆಗಲೀ ಸಾಧಾರಣವಾಗಿ ಆಗಲೀ ಪ್ರವರ್ತಿಸಲಿಕ್ಕೆ ಕ್ಕೆ ಎಂಬ ೧೦ಕ್ಕೆ ಮೀರದೆ ಇರುವ ಜನರಿಗೆ ಅಧಿಕಾರ ಕೊಡುವದಾದರೆ . . . . ೧೦ ರೂಪಾಯಿ

e) ಇತರ ಸಂಗತಿಯಲ್ಲಿ . . . . ಅಧಿಕಾರ ಹೊಂದುವ ಪ್ರತಿ ಮನುಷ್ಯನಿಗಾಗಿ ೧ ರೂಪಾಯಿ

52. ಇಪ್ಪತ್ತು ರೂಪಾಯಿಗೆ ಮೀರಿದ ಯಾವ ಹಣವನ್ನಾಗಲೀ ಸೊತ್ತನ್ನಾಗಲೀ ಸಂದಾಯ್ದಕ್ಕೆ ಕೊಡುವ ರಶೀದಿ . . . . . ೧ ಆಣೆ

53. ಅಡವಿನ ಸೊತ್ತಿನ ಪರಭಾರೆ ದಸ್ತಾವೇಜು:—

a) ಅಡವಿನ ಹಣ ೧೦೦ ರೂಪಾಯಿಗೆ ಮೀರದಿದ್ದರೆ . . . 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . . ೧೦ ರೂಪಾಯಿ

54. (Release) ರಿಲೀಜ್ ಯಾನೆ ಖುಲಾಸ ಪತ್ರ (ಅಂದರೆ ಒಬ್ಬನು ಮತ್ತೊಬ್ಬನ ಮೇಲಾಗಲೀ ಯಾವದೊಂದು ಸೊತ್ತಿನ ಮೇಲಾಗಲೀ ತನಗಿರುವ ಬಾಧ್ಯತೆಯನ್ನು ಬಿಟ್ಟು ಬಿಡುವ ದಸ್ತಾವೇಜು:—

a) ಬಾಧ್ಯತೆಯ ಮೊಬಲಗು ೧೦೦೦ ರೂಪಾಯಿಗೆ ಮೀರದಿದ್ದರೆ—13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . . ಕ ರೂಪಾಯಿ

58. (Shipping Order) ಸಿಪ್ಪಿಂಗ್ ಒರ್ಡರ್ (ಅಂದರೆ ಜಹಜಿನ ಮೇಲೆ ಜೀನಸುಗಳನ್ನು ವೈಯುವದಕ್ಕೋಸ್ಕರ ಅನುಜ್ಞೆ ಕೊಡುವ ಪತ್ರ) ೧ ಆಣೆ

ತಸೇ ಹಾಸಲು ಮಾಫಿ ಇರುವ ಕೆಲ ದಸ್ತಾವೇಜುಗಳು.

೨೩ *a)* 46ನೇ ಅಂಕೆಯಲ್ಲಿ ಹೇಳಿರುವ ನೋಟು ಯಾ ಮೆಮೊರಂಡಂ ಸ್ವಭಾವದ್ದಾಗಿರದೆ, ಯಾವದೊಂದು ಚರಸೊತ್ತು ಯಾ ಸರಕನ್ನು ಮೂರಾಟದ ಸಮ್ಮಂಧವಾಗಿರುವ ಯಾವದೊಂದು ಕರಾರು ಯಾ ಕರಾರಿನ ಯಾದಾಸ್ತು.

೧೩. ಗೇಣಿಚೀಟುಗಳೂ ಅವುಗಳ ಎದುರ್ನುಡಿಗಳೂ:—*b)* ಯಾವ ದಂಡವಾಗಲೀ ವಟ್ಟವಾಗಲೀ ಸಲ್ಲಿಸುವ ತರ್ತ ಇಲ್ಲದೆ ಒಬ್ಬ ವ್ಯವಸಾಯಗಾರನು ಬರಕೊಡುವ ಗೇಣಿಚೀಟು; ಇದರಲ್ಲಿ ನಿರಖು ವಾಯಿದೆ ನಮೂದಿಸಿ, ಸದರಿ ವಾಯಿದೆ ಒಂದು ಸಂವತ್ಸರಕ್ಕೆ ಮೀರದೆ ಇದ್ದರೆ, ಅಥವಾ ಅದರ ವರ್ಷಾವಧಿ ಗೇಣಿ ೧೦೦ ರೂಪಾಯಿಗೆ ಮೀರದಿದ್ದರೆ; *c)* ಒಬ್ಬ ವ್ಯವಸಾಯಗಾರನಿಗೆ ಕೊಡುವ ಗೇಣಿಚೀಟಿನ ಎದುರ್ನುಡಿ.

೧೪. ರಶೀದಿ:—*a)* ಕ್ರಮವಾಗಿ ತಸೇ ಮೇಲೆ ಅದಂಥಾ ಯಾವ ದಸ್ತಾವೇಜನಲ್ಲಾಗಲೀ ನಮೂದಿಸಿರುವ ಪ್ರತಿಫಲ ಬಂತೆಂದು ಅಥವಾ ಅದರಿಂದ ಭದ್ರ ಪಡಿಸಿರುವ ಅಸಲು ಆಗಲೀ ಬಡ್ಡಿ ಆಗಲೀ ವರ್ಷಾಸನವಾಗಲೀ ಕಾಲಾವಧಿ ಸಂದಾಯವಾಗ ತಕ್ಕ ಬೇರೆ ಹಣವಾಗಲೀ ಬಂತೆಂದು ಕೊಡುವ ರಶೀದಿ; *b)* ಪ್ರತಿಫಲವಿಲ್ಲದೆನೇ ಹಣ ಪಾವತಿ ಅದ್ದಕ್ಕೆ ರಶೀದಿ; *k)* ಒಬ್ಬ ಸಾವಕಾರನ ಕೈಯ ತೀವಣಿ ಇಟ್ಟ ಹಣದ ಬಗ್ಗೆ ಯಾ ಹಣದ ಖಾತರೀ ಬಗ್ಗೆ ಕೊಡುವ ರಶೀದಿ. ಪರಂತು ಸದರಿ ಹಣಕ್ಕಾಗಿ ಯಾರಿಗೆ ಉತ್ತರ ಹೇಳ ತಕ್ಕದ್ದೋ ಅವನಿಗೆ ಹೊರ್ತು ಬೇರೆ ಯಾರಾದರೂ ಈಸಿಕೊಳ್ಳುವಂತೆ ನಮೂದಿಸಿರ ಬಾರದು. ಈ ಮಾಫಿಯು ಒಂದು ಸಂಘದ ಹಿಸೆಗೆ, ಅಥವಾ ಹಿಸೆಯ ನಿರ್ಣಯಪತ್ರದ ಪ್ರಕಾರ ಕೊಡೋಣಾಗುವ ಇಲ್ಲವೆ ತೀವಣಿ ಇಡೋಣಾಗುವ ಹಣಕ್ಕಾಗಿ ಕೊಡುವ ರಶೀದಿಗೆ ಸಮ್ಮಂಧಿಸುವದಿಲ್ಲ.

೧೬. ಮೇಲ್‌ಚೀಟು ಯಾನೆ ಎಂಡಾರಸ್ ಮೂಲಕವಾಗಿ ವಟಾಯಿಸ ತಕ್ಕ ಹುಂಡಿ, ಚೆಕ್ಕ್, ಇಲ್ಲವೆ ಪ್ರೊಮಿಸರಿ ನೋಟನ್ನು ವರ್ಗ ಯಾನೆ ಪರಾಧೀನ ಮಾಡುವ ಪತ್ರ.

ಟಪ್ಪಾಲಿನ ವಿಷಯ ಮುಖ್ಯ ಕ್ರಮಗಳು.

ಮುಂದಿನ ಕ್ರಮಗಳು ಹಿಂದುಸ್ಥಾನದಲ್ಲಿಯೂ ಅದರ ನೆರೆತೀವೆಗಳಲ್ಲಿಯೂ ನಡಿಯುವ ಟಪ್ಪಾಲ ಸಮ್ಮಂಧವಾಗಿರುತ್ತವೆ.

ಕೋವಿಮದ್ದು ಮುಂತಾದ ಜ್ವಲನಾತ್ಮದವಾದ ಒಡವೆಗಳು, ಗಾಜಿನ ಸಾಮಾನು, ತೆಳುಜೀನಸು, ಇಂಥಾದ್ದನ್ನು ಟಪ್ಪಾಲಿನಲ್ಲಿ ರವಾನಿಸ ಬಾರದು; ಪರಂತು ಔಷಧ ಮುಂತಾದ್ದು ಗಾಜಿನ ಬಾಟ್ಲಿಯಲ್ಲಿ ಹಾಕಿದಾಗ್ಯೂ ಅಲ್ಲಾಡದಂತೆ ಬಂದೋಬಸ್ತಾಗಿ ಕಟ್ಟಿದ್ದರೆ, ರವಾನಿಸುವದಕ್ಕೆ ಅಡ್ಡಿ ಇರುವದಿಲ್ಲ. ಅದಲ್ಲದೆ ಬಂಡು ತರದ ಬರಹ, ಭಾವೆ, ಚಿತ್ರ, ನಕ್ಷೆ ಇಂಥಾದ್ದನ್ನು ಟಪ್ಪಾಲಿನ ದ್ವಾರಾ ರವಾನಿಸಗೊಡುವದಿಲ್ಲ.

ಒಬ್ಬನು ತನ್ನ ಹೆಸರಿಗೆ ಬಂದ ಲಖೋಟೆ ಇಲ್ಲವೆ ಕಟ್ಟನ್ನು ತೆರಿಯದೆ ವಾಪಸು ಮಾಡ ಬಹುದು; ಹಾಗೆ ವಾಪಸು ಮಾಡಿದ ಪಕ್ಷಕ್ಕೆ, ಅವನು ಅದರ ದಸ್ತೂರಿ ತೆರಲಿಕ್ಕೆ ಬದ್ಧನಾಗುವದಿಲ್ಲ. ಒಂದು ಲಖೋಟೆ ಇಲ್ಲವೆ ಕಟ್ಟು ಹೊಂದಿದವನು ಒಂದು ವೇಳೆ ಅದನ್ನು ತೆರದಾಗ್ಯೂ, ಅವನ ಮೇಲೆ ದ್ವೇಷದಿಂದ ಯಾರಾದರೂ ಕಳುಹಿಸಿದ್ದೆಂತ ಅದು ತಲ್ಪಿದ ಪೋಸ್ಟ್‌ಮಾಸ್ತರಿಗೆ ಕಂಡರೆ, ಆ ಆಫಿಸರು ಅದರ ದಸ್ತೂರಿಯನ್ನು ಮಾಫು ಮಾಡ ಬಹುದು.

ಟಪ್ಪಾಲಿಗೆ ಹಾಕಿದ ಯಾವ ಲಿಫಾಪೆಗೆ ಯಾ ಕಟ್ಟಿಗೆ ರಶೀದಿ ತಿಕ್ಕುವದಿಲ್ಲವೋ, ಅಂಥಾದ್ದನ್ನು ಟಪ್ಪಾಲಿಗೆ ಹಾಕಿದ ಗಸ್ತಿನುತಿಗಾಗಿ ಸರ್ಟಿಫಿಕೇಟನ್ನು ಪೋಸ್ಟ್ ಆಫಿಸಿನಿಂದ ಪಡಕೊಳ್ಳ ಬಹುದು. ಹ್ಯಾಗಂದರೆ, ರಶೀದಿಯನ್ನು ಅಪೇಕ್ಷಿಸುವವನು ತನ್ನ ಲಿಫಾಪೆಯ ಯಾ ಕಟ್ಟಿನ ಮೇಲೆ ಬರದ ಮೇಲುವಿಳಾಸದ ಯಥಾ ಪ್ರತಿ ನಕಲನ್ನು ಬೇರೊಂದು ಕಾಗಸದ ಮೇಲೆ ಬರದು, ಅದಕ್ಕೆ ಅರ್ಧ ಆಣೆಯ ಒಂದು ಟಪ್ಪಾಲಚೀಟು ಹಚ್ಚಿ, ಅವೆರಡನ್ನು ಹಾಜರು ಮಾಡಿದ್ದಲ್ಲಿ ಪೋಸ್ಟ್ ಆಫಿಸಿನವರು ಅದರ ಚೀಟನ್ನು ರದ್ದು ಮಾಡಿ ತಾರೀಕಿನ ಮುದ್ರೆಯನ್ನು ಸಹ ಅದಕ್ಕೆ ಒತ್ತಿ, ಅದನ್ನು ಹಾಜರು ಮಾಡಿದ ಮನುಷ್ಯನಿಗೆ ವಾಪಸು ಕೊಡುವರು. ಇದು ಸದರಿ ಲಿಫಾಪೆ ಇಲ್ಲವೆ ಕಟ್ಟು ಟಪ್ಪಾಲಿಗೆ ಹಾಕಿದ್ದಕ್ಕೆ ಕೊಡಲ್ಪಡುವ "ಸರ್ಟಿಫಿಕೇಟು" ಅನ್ನಿಸಿ ಕೊಳ್ಳುತ್ತದೆ.

ಒಂದು ಲಿಫಾಪೆಗೆ ಇಲ್ಲವೆ ಮುಂದೆ ಹೇಳಿರುವ ಬುಕ್ ಯ ಪೆಟರ್ನ್‌ಪೆಕೆಟ್ ಎಂಬ ಕಟ್ಟಿಗೆ ದಸ್ತೂರಿ ಮುಂದಾಗಿ ಹಚ್ಚದೆ ಇದ್ದರೆ, ಇಲ್ಲವೆ ಹಚ್ಚಿದ ದಸ್ತೂರಿ ನಿರಖಿಗೆ ಕಡಿಮೆಯಾದರೆ, ಆ ಲಿಫಾಪೆಯನ್ನು ಯಾ ಕಟ್ಟನ್ನು ಹೊಂದುವವನು ಆ ದಸ್ತೂರಿಯ ಇಲ್ಲವೆ ಕಡಿಮೆಯಾದದರ ಇಮ್ಮಡಿ ಹಾಸಲ ತೆರ ಬೀಕು. ಈ ಮೇರೆಗೆ ಚೀಟು ಹಚ್ಚದೆ ರವಾನಿಸುವದಕ್ಕೆ "ಬೇರಿಂಗ್" (Bearing) ಅನ್ನುತ್ತಾರೆ.

ಒಂದು ಲಿಫಾಪೆ ಇಲ್ಲವೆ ಕಟ್ಟನ್ನು ತೆರಿಯದೆ ಬೇರೊಂದು ವಿಳಾಸಕ್ಕೆ ತಿರಿಗಿ ರವಾನಿಸ ಬಹುದು; ಆ ಪ್ರಕಾರ ರವಾನಿಸಿದ್ದಾದರೆ, ಅದಕ್ಕೆ ಪ್ರತ್ಯೇಕ ದಸ್ತೂರಿ ಕೊಡ ಬೇಕೆಂತಿಲ್ಲ.

(Letter Post) ಕಾಗದಟಪ್ಪಾಲು.

ಎಲ್ಲಾ ಲಖೋಟೆಗಳೂ, ಟಪ್ಪಾಲ ಕಾರ್ಡುಗಳೂ ೨೦ ತೊಲೆಗೆ ಮೀರದ ಪೆಕೆಟುಗಳೂ ಈ ಟಪ್ಪಾಲಿನ ದ್ವಾರಾ ಹೋಗುವವು.

	ಆ.	ಪೈ.
ಭಾರದಲ್ಲಿ ½ ತೊಲೆಗೆ ಮೀರದಿದ್ದರೆ	೦	೬
" ೧ " "	೧	೦
ಹೆಚ್ಚಿಗೆ ಪ್ರತಿ ೧ ತೊಲೆಗೆ ಯಾ ಅದರಂಶಕ್ಕೆ	೧	೦
ಟಪ್ಪಾಲ ಕಾರ್ಡು ಒಂದಕ್ಕೆ	೦	೬
ಉತ್ತರ ತಿಗತಕ್ಕ ಕಾರ್ಡು ಒಂದಕ್ಕೆ	೦	೯

ಕಾರ್ಡಿನ ಮುಂದಗಡೆ ವಿಳಾಸ ಮಾತ್ರ ಹೊರ್ತು, ಹೆಚ್ಚಿಗೇನೂ ಬರಿಯ ಬಾರದು.

೬ ಪೈ ಕಾರ್ಡುಗಳೂ, ೯ ಪೈ ಉತ್ತರದ ಕಾರ್ಡುಗಳೂ, ½, ೧, ೧½, ೩, ೬, ೪, ೬, ೯ ಆಣೇ, ೧ ರೂಪಾಯಿ ಮೌಲ್ಯದ ಟಪ್ಪಾಲಚೀಟುಗಳೂ, ½ ಆಣೆ, ೧ ಆಣೆ ಇಲ್ಲವೆ ೪½ ಆಣೆಯ ಚೀಟುಳ್ಳ ಲಖೋಟೆಗಳೂ ಮಾರಾಟಕ್ಕೆ ತಿಗುತ್ತವೆ.

ಕಾಗದಟಪ್ಪಾಲಿನ ದ್ವಾರಾ ಕಳುಹಿಸುವ ಲಿಫಾಪೆ ೨೦ ತೊಲೆಗೆ ಮೀರ ಬಾರದು.

ಒಂದು ಲಿಫಾಪೆ, ಟಪ್ಪಾಲ ಕಾರ್ಡು, ಇಲ್ಲವೆ "ಪೆಕೆಟು" ಎಂಬ ಖುಲ್ಲಾ ಕಟ್ಟು ಹೆಚ್ಚು ಭದ್ರತೆಯಿಂದ ತಲಪ ಬೇಕೆಂಬವರು ಎರಡು (೨) ಆಣೆ ಕೊಟ್ಟು ಅದನ್ನು ರಿಜಿಸ್ತ್ರಿ ಮಾಡಿಸ ಬಹುದು. ಉದಾಹರಣೆಗಂದರೆ: ರವಾನಿಸುವವನು ಅದಕ್ಕೆ ಮೇಲ್ವಿಳಾಸ ಬರದು, ಅದರ ಎಡಭಾಗದ ಕೆಳಗೆ ತನ್ನ ಹೆಸರು ವಿಳಾಸ ಸಹ ಬರದು, ಅದಕ್ಕೆ ನಿರಖು ಇರುವ ಚೀಟು ಮತ್ತು ರಿಜಿಸ್ತ್ರಿ ಬಗ್ಗೆ ಎರಡು ಆಣೇ ಚೀಟು ಸಹ ಹಚ್ಚಿ, ಟಪ್ಪಾಲು ಕೈದು ಮಾಡುವ ಮುಂಚೆ ಟಪ್ಪಾಲುಕಟ್ಟೆಯಲ್ಲಿ ಒಪ್ಪಿಸ ಬೇಕು; ಅವರು ಅದನ್ನು ರಿಜಿಸ್ತ್ರಿ ಮಾಡಿ, ಛಾಪಾ ರಶೀದಿ ಕೊಡುವರು. ಮತ್ತು ಸದರಿ ಲಿಫಾಪೆ ಹೊಂದಿದವನಿಂದ ಪಾವತಿರಶೀದಿ ತರಿಸಿ ಕೊಡ ಬೇಕಾದರೆ, ಹೆಚ್ಚಿಗೆ ೧ ಆಣೆ ಚೀಟು, ಮತ್ತು ಸದರಿ ಪೆಕೆಟು ಹೊಂದಿದವನಿಂದ ಪಾವತಿರಶೀದಿ ತರಿಸಿ ಕೊಡ ಬೇಕಾದರೆ, ೧ ಆಣೆ ರೊಕ್ಕ ಸಹ ಹಾಜರು ಮಾಡ ಬೇಕು.

ಟಪ್ಪಾಲ ದಸ್ತೂರಿಯನ್ನು ತಪ್ಪಿಸಿಕೊಳ್ಳುವ ಬಗ್ಗೆ, ಬೇರೆ ಬೇರೆಯವರಿಗೆ ಪ್ರತ್ಯಪ್ರತ್ಯೇಕವಾಗಿ ಬರದ ಲೇಖನಗಳನ್ನು ಒಂದೇ ಲಿಫಾಪೆಯಲ್ಲಿ ಹಾಕಿ ಕಳುಹಿಸುವಂಥವರು ತಿಕ್ಷೆಗೆ ಗುರಿಯಾಗುತ್ತಾರೆ.

(Banghy Post) ಬಂಗಿಟಪ್ಪಾಲು.

೨೦ ತೊಲೆಗೆ ಮೀರಿದ (Book Packet and Pattern Packet) "ಬುಕ್‌ಪೆಕೆಟ್" ಮತ್ತು "ಪೆಟರ್ನ್‌ಪೆಕೆಟ್" ಎಂತಲೂ, (Parcel) "ಪಾರ್ಸೆಲ್" ಎಂತಲೂ ಎರಡು ವಿಧದ ಕಟ್ಟುಗಳು ಈ ಟಪ್ಪಾಲ ದ್ವಾರಾ ರವಾನಿಸಲಾಗುತ್ತದೆ. ಇವುಗಳ ಟಪ್ಪಾಲು ಹಾಸಲಿನ ದರ ಹ್ಯಾಗಂದರೆ:—

ಬುಕ್‌ಪೆಕೆಟ್ ಮತ್ತು ಪೆಟರ್ನ್‌ಪೆಕೆಟ್		
	ಆ.	ಪೈ.
ಭಾರದಲ್ಲಿ ೧೦ ತೊಲೆಗೆ ಮೀರದಿದ್ದರೆ	೦	೬
ಹೆಚ್ಚಿಗೆ ಪ್ರತಿ ೧೦ " ಯಾ ಅದರಂಶಕ್ಕೆ	೦	೬

ಒಂದು ಪೆಕೆಟು ೩ ಫೂಟ್ ಉದ್ದ ೧ ಫೂಟ್ ಅಗಲ ಆಥವಾ ದಪ್ಪಕ್ಕೆ ಮೀರ ಬಾರದು. ಬುಕ್ ಪೆಕೆಟಿನ ಭಾರದ ವಿಷಯದಲ್ಲಿ ಪ್ರತ್ಯೇಕ ನಿರಖು ಇಲ್ಲ; ಆದರೆ ಪೆಟರ್ನ್ ಪೆಕೆಟು ಭಾರದಲ್ಲಿ ೪೦ ತೊಲೆಗೆ ಮೀರ ಬಾರದು.

ಪಾರ್ಸೆಲ್		
	ಆ.	ಪೈ.
ಭಾರದಲ್ಲಿ ೨೦ ತೊಲೆಗೆ ಮೀರದಿದ್ದರೆ	೪	೦
" ೪೦ " "	೯	೦
ಹೆಚ್ಚಿಗೆ ಪ್ರತಿ ೪೦ " ಯಾ ಅದರಂಶಕ್ಕೆ	೪	೦

ಇದರ ಟಪ್ಪಾಲ ಹಾಸಲು ರೊಕ್ಕವಾಗಿ ತೆರಬೇಕು. ಪಾರ್ಸೆಲು ಭಾರದಲ್ಲಿ ೩೫ ಶೇರು (೨೦೦ ತೊಲೆ) ಗಳಿಗೆ ಮೀರ ಬಾರದು; ಮತ್ತು ಅದರ ಗಾತ್ರ ಆಕಾರ, ಕಟ್ಟಿದ ರೀತಿ, ಇವುಗಳ ದೆಶೆಯಿಂದ ವೈಯಲಿಕ್ಕೆ ತೊಂದರೆಯೂ ಜೋಕುಮೂ ಇರ ಬಾರದು.

"ಬುಕ್‌ಪೆಕೆಟ್" ಮತ್ತು "ಪೆಟರ್ನ್‌ಪೆಕೆಟ್":—(1) ಖಾಲಿ ಇಲ್ಲವೆ ಛಾಪೆಯಾದ ಪುಸ್ತಕ, ವರ್ತಮಾನಪತ್ರ, ಚಿತ್ರ, ನಕ್ಷೆ (ಇಂಥಾದ್ದಕ್ಕೆ ಸಮ್ಮಂಧವಾದ ಕೈಬರಹವಿದ್ದರೆ, ಅದರ ಸಮೇತ); ಬರದು ತಿಳಿಸುವ ಯಾ ಲೇಖನಸ್ವಭಾವದ್ದಾಗಿರದೆ, ಕಾರ್ಯಸಮ್ಮಂಧವಾಗಿ ಬರೆಯಲ್ಪಟ್ಟ ದಸ್ತಾವೇಜು, ಭರಾವಣೆಚೀಟು, ಸಾಮಾನುಪಟ್ಟಿ, ಲೆಬ್ಬದ ವಟ್ಟ ಎಂಬೀ ತರದ ಕಾಗದಗಳು; ಯಾವದೊಂದು ವರ್ತಮಾನ ಪತ್ರದಲ್ಲಿ ಇಲ್ಲವೆ ಪುಸ್ತಕವಾಗಿ ಛಾಪಿಸುವದಕ್ಕಾಗಿ ಯಾವದೊಂದು ಛಾಪಖಾನೆಗೆ ರವಾನಿಸಲ್ಪಡುವ ಕೈ ಬರಹವ ಕಾಗದಗಳು,—ಇಂಥಾದ್ದೆಲ್ಲ "ಬುಕ್‌ಪೆಕೆಟಿನಲ್ಲಿ" ಶೇರುತ್ತವೆ. ಆದರೆ ಮುನಃಪೂರ್ವಕವಾಗಿ ವ್ಯಾಪಾರದ ನಕಲೂನೆ ಯಾ ಕೆಲಸದ ಮಾದರಿಯುಳ್ಳ ಯಾವದೊಂದು ಕಟ್ಟು, ಅದಕ್ಕೆ ಕ್ರಯ ಹಿಡಿಯದೆ ರವಾನಿಸಲ್ಪಟ್ಟ ಪಕ್ಷಕ್ಕೆ, ಅಂಥಾದ್ದು "ಪೆಟರ್ನ್‌ಪೆಕೆಟಿನಲ್ಲಿ" ಶೇರುತ್ತದೆ. (2) ಪೆಕೆಟು ಉಭಯ ಕಡೆಗಳ

ಲ್ಲಿಯೂ ಖುಲ್ಲಾ ಬಿಟ್ಟು, ಅದರೊಳಗಿರುವದನ್ನು ಬಿಚ್ಚಿ ನೋಡುವ ಹಾಗೆ, ಕಟ್ಟ ತರ ಬೇಕು. (3) ಈ ಉಭಯ ತರದ ಪೆಕೆಟುಗಳಿಗೂ ನಿರಬಿರುವ ದಸ್ತೂರಿ ಮುಂದಾಗಿ ಹಚ್ಚ ಬೇಕು; ಹಚ್ಚದೆ ರವಾನಿಸಿದರೆ, ಆ ಪೆಕೆಟು ಹೊಂದುವವನು ಆ ದಸ್ತೂರಿಯ ದುಡಾರೆ, ಇಲ್ಲವೆ ಹಚ್ಚಿದ ದಸ್ತೂರಿ ಕಡಿಮೆಯಾಗಿ ಹೋದರೆ, ಆ ಬಾಕಿಯ ದುಡಾರೆ ಹಾಸಲು ರೊಕ್ಕವಾಗಿ ತರ ಬೇಕು. (4) ಪೆಕೆಟು ಟಪ್ಪಾಲಿಗೆ ಹಾಕಿದ್ದಕ್ಕೆ ರಶೀದಿ ತಿಕ್ಕುವದಿಲ್ಲ; ಆದರೆ ಅದನ್ನು ರಿಜಿಸ್ತ್ರಿ ಮಾಡಿಸಿದ್ದಾದರೆ, ರಶೀದಿ ಕೊಡೋಣಾಗುತ್ತದೆ.

ಯಾವದೊಂದು ವರ್ತಮಾನಪತ್ರದ ಮಾಲಿಕನಾಗಲೀ ಪ್ರಸಿದ್ಧಕನಾಗಲೀ ತಾನು ಕಾಲಾವಧಿಯಾಗಿ ಟಪ್ಪಾಲಿಗೆ ಹಾಕುವ ತನ್ನ ಪತ್ರಕ್ಕಾಗಿ ಇಂತಿಷ್ಟು ಕಾಲಕ್ಕೆಂತ ಒಮ್ಮೆಯೇ ಹಾಸಲಿನ ಹಣ ನಗದಾಗಿ ಕೊಟ್ಟು ತೀರಿಸ ಬಹುದು. ಹಾಗೆ ಮಾಡಿದಂಥಾ ಪತ್ರವನ್ನು ಟಪ್ಪಾಲ ಚೀಟಲ್ಲದೆ, ಮತ್ತು ಪ್ರತ್ಯೇಕ ಹಾಸಲಿಗೆ ಗುರಿಯಾಗದೆ ರವಾನಿಸ ಬಹುದು. ಈ ಪ್ರಕಾರ ಮುಂಗಡವಾಗಿ ತೆರುವ ಹಾಸಲಿನ ಅವಧಿಯು ಸಾಮಾನ್ಯ

ವರ್ತಮಾನಪತ್ರದ ಒಂದೊಂದು ಪ್ರತಿಯು		
೩ ತೊಲೆಗೆ	೧೦ ತೊಲೆಗೆ	ಪ್ರತಿ ಹೆಚ್ಚಿಗೆ ೧೦ ತೊಲೆಗೆ
ಮಾರದಿದ್ದರೆ		ಯಾ ಅದರ ಅಂಶಕ್ಕೆ
೩ ಪೈ	೬ ಪೈ	೬ ಪೈ

೩ ತಿಂಗಳಾಗಿರುವದು. ಮುಂಗಡ ದಸ್ತೂರಿಯನ್ನು ಎಣಿಸುವಲ್ಲಿ, ವರ್ತಮಾನಪತ್ರಕರ್ತರು ತಮ್ಮೊಳಗೆ ಉಚಿತಾರ್ಥವಾಗಿ ಬದಲಾಯಿಸಿಕೊಳ್ಳುವಂಥಾ ಪ್ರತಿಗಳಿಗೆ ಟಪ್ಪಾಲ ಹಾಸಲು ಪೂರಾ ಮಾಫಿಯಾಗಿಯೂ, ಮೂರಾಟದ ಬಗ್ಗೆ ಏಜೆಂಟರಿಗೆ ರವಾನಿಸುವ ಪತ್ರಿಕೆಪ್ರತಿಗಳ ಕಟ್ಟುಗಳು ಇಲ್ಲಿ ನಮೂದಿಸಿರುವ ಹಾಸಲಿನ ಅರೆವಾಸಿಗೂ, ಉಳಿದ ಪ್ರತಿಗಳು ಪೂರಾ ಹಾಸಲಿಗೂ ಗುರಿಯಾಗಿಯೂ ಇರುವವು.

"ಪಾರ್ಸೆಲು":—(1) ಪೂರಾ ಬಂದು ಮಾಡಿ ಕಟ್ಟ ತರ ಬೇಕು. (2) (ಹಿಂದೆ ನಿಷೇಧಿಸಲ್ಪಟ್ಟ ಸಾಮಾನುಗಳ ಎನಹ) ಬೇರೇನಾದರೂ ಇದರಲ್ಲಿ ಗರ್ಭಿಸ ಬಹುದು. (3) ಆದರೆ, ಇದರಲ್ಲಿ ಒಂದಕ್ಕಿಂತ ಹೆಚ್ಚಿಗೆ ಲೇಖನಪತ್ರದ ಸ್ವಭಾವದ್ದೇನಾದರೂ ಹಾಕ ಬಾರದು. (4) ಇದನ್ನು ರಿಜಿಸ್ತ್ರಿ ಮಾಡುವದು ಅವಶ್ಯವಿಲ್ಲ; ಯಾಕಂದರೆ ಇದನ್ನು ಟಪ್ಪಾಲಿಗೆ ಹಾಕಿದ್ದಕ್ಕೆ ರಶೀದಿ ತಿಕ್ಕುತ್ತದೆ; ಮತ್ತು ಅದು ತಲ್ಪಿದ್ದಕ್ಕೆ ಪಾರ್ಸೆಲು ಹೊಂದಿದವನಿಂದ ಸಹ ರಶೀದಿ ಪಡಕೊಳ್ಳೋಣಾಗುತ್ತದೆ. (5) ಇದಕ್ಕೆ ದಸ್ತೂರಿ ಮುಂಗಾಗಿ ಕೊಡಲೂ ಬಹುದು, ಕೊಡದೆ ಇರಲೂ ಬಹುದು; ಎರಡನೇ ಸಂಗತಿಯಲ್ಲಿ ಪಾರ್ಸೆಲು ಹೊಂದಿದವನು ಆ ದಸ್ತೂರಿಯ ಮೌಲ್ಯ ಮಾತ್ರ ಕೊಡ ಬೇಕು; ಆದರೆ ದಸ್ತೂರಿ ಮುಂದಾಗಿ ಸಲ್ಲಿಸಿದರೂ, ಅದು ನಿರಬಿಗೆ ಕಡಿಮೆಯಾದರೆ, ಅದನ್ನು ಮುಂಜೂರು ಮಾಡೋಣಾಗಲಿಕ್ಕಿಲ್ಲ.

(Value Payable Article) "ವೇಲ್ಯು ಪೇಯಬ್‌ಲ್ ಆರ್ಟಿಕಲ್" ಅಂದರೆ ಪೋಸ್ಟ್ ಆಫಿಸಿನವರು ತಮ್ಮ ವತಕ್ಕೆ ಬಂದ ಕಟ್ಟನ್ನು ಅದರ ಮೇಲ್‌ವಿಳಾಸಕ್ಕೆ ಮುಟ್ಟಿಸಿ, ಅದರ ಮೇಲೆ ವಾಗ್ರೂಪ ಪಡಿಸಿರುವ ಮೌಲ್ಯವನ್ನು ಆ ಕಟ್ಟು ಹೊಂದಿದವನಿಂದ ವಸೂಲು ಮಾಡಿ ಆ ಕಟ್ಟು ರವಾನಿಸಿದವನಿಗೆ ಕೊಡುತ್ತಾರೆ. ಈ ಪ್ರಕಾರ ಪಾರ್ಸೆಲುಗಳಾಗಲೀ ರಿಜಿಸ್ತ್ರಿ ಮಾಡಲ್ಪಟ್ಟ ಪೆಕೆಟುಗಳಾಗಲೀ ಲಖೋಟೆಯಾಗಲೀ ಮನಿ ಆರ್ಡರ್ ಆಫಿಸುಳ್ಳ ಯಾವ ಪೋಸ್ಟ್ ಆಫಿಸಿನಲ್ಲಾದರೂ ಟಪ್ಪಾಲಿಗೆ ಹಾಕ ಬಹುದು. ಇವುಗಳ ಮೌಲ್ಯ ಮಾತ್ರ ೬೦೦ ರೂಪಾಯಿಗೆ ಮೀರ ಬಾರದು, ಮತ್ತು ಅದರಲ್ಲಿ ಒಂದು ಆಣೆಯ ಅಂಶವೂ ಇರ ಬಾರದು. ಹೀಗೆ ರವಾನಿಸುವವನು ಟಪ್ಪಾಲುಕಟ್ಟೆಯಲ್ಲಿ ಮಾಫಿಯಾಗಿ ತಿಕ್ಕುವ ಒಂದು ಛಾಪಾಕಾಗದದ ಮೇಲೆ ಅದರ ಮೌಲ್ಯವನ್ನು ಕುರಿತು ಬರದು ಅದರ ಸಂಗಡ ಕೊಡ ಬೇಕು. ಈ ಪ್ರಕಾರ ಮೌಲ್ಯ ವಸೂಲು ಮಾಡ ತಕ್ಕ ಕಟ್ಟು ಇಲ್ಲವೆ ಲಿಫಾಪೆ ಅದರ ತಿಕಾಣೆಗೆ ಬಂದು ಮುಟ್ಟಲಾಗಿ ಆ ಪೋಸ್ಟ್ ಆಫಿಸಿನಿಂದ ಅದನ್ನು ಹೊಂದ ತಕ್ಕವನಿಗೆ ಅದನ್ನು ಕುರಿತು ಚೀಟು ಬರದು ತಿಳಿಸಲಾಗಿ, ಅದರ ಮೇಲೆ ಆತನು ದಸ್ತತು ಹಾಕಿ ಅದರ ಮೌಲ್ಯ ಸಮೇತ ಅದೇ ಪೋಸ್ಟ್ ಆಫಿಸಿಗೆ ರವಾನಿಸಲಾಗಿ ಆ ಕಟ್ಟು ಅವನಿಗೆ ಒಪ್ಪಿಸೋಣಾಗುವದು.

(Insurance) "ಇನ್ಶ್ಯೂರೆನ್ಸ್". ರಿಜಿಸ್ತ್ರಿ ಆಗ ತಕ್ಕ ಲಿಫಾಪೆಗಳಾಗಲೀ ಪಾರ್ಸೆಲುಗಳಾಗಲೀ ಭದ್ರತೆಯಿಂದ ತಲಪಿಸುವ ವಿಷಯದಲ್ಲಿ ಟಪ್ಪಾಲಿನವರು ಜವಾಬದಾರಿಯನ್ನು ವಹಿಸಿಕೊಳ್ಳುತ್ತಾರೆ. ಈ ಪ್ರಕಾರ ಹೊಣೆಗಾರಿಕೆ ವಹಿಸಿ ಕೊಟ್ಟು ರವಾನಿಸುವ ಕಾಗದದ ಲಖೋಟೆಯು ಘಟ್ಟಿ ತರದ ಕಾಗದದ್ದಾಗಿದ್ದು ಭದ್ರವಾಗಿ ಬಂದು ಮಾಡಲ್ಪಟ್ಟು, ಅಂಚುಗಳಲ್ಲಿ ಎರಡೆರಡು ಇಂಚುಗಳಿಗೆ ಮೊಹರು ಮಾಡಿದ್ದಾಗಿ ಇರ ಬೇಕು; ಅದೇ ಪ್ರಕಾರ ಕಟ್ಟು ಸಹ ಅದರ ಹೊಲಿಗೆಯಲ್ಲಿ ಮೂರು ಮೂರು ಇಂಚುಗಳಿಗೆ ಮೊಹರು ಹಾಕಿದ್ದಾಗಿರ ಬೇಕು; ಮತ್ತು ಮೇಲ್‌ವಿಳಾಸ ಬರದು ಅದರ ಮೇಲ್ಗಡೆಯಲ್ಲಿ ಅಕ್ಷರದಿಂದಲೂ ಅಂಕೆಯಿಂದಲೂ ಅದರ ವಾಜಿಬಿ ಮೌಲ್ಯವನ್ನು ಬರಿಯ ಬೇಕು; ಬರಿಯುವಾಗ ಚಿತ್ತು ಮಾಡ ಬಾರದು. ಇದರ ಯಾವತ್ತು ದಸ್ತೂರಿ ಮುಂದಾಗಿ ತೆರಲೇ ಬೇಕು. ಈ ಪ್ರಕಾರ ಇನ್ಶ್ಯೂರೆನ್ಸ್ ಮಾಡ ತಕ್ಕ ಲಖೋಟೆಯಾಗಲೀ ಪಾರ್ಸೆಲಾಗಲೀ ಟಪ್ಪಾಲಕಟ್ಟೆಗೆ ಹಾಜರು ಮಾಡುವಾಗ ಅದರ ಸಂಗಡ ಅದರ ಮಲಪುಪುಗಳನ್ನೂ ಮೌಲ್ಯವನ್ನೂ ಕುರಿತು (ಟಪ್ಪಾಲುಕಟ್ಟೆಯಿಂದ ಮಾಫಿಯಾಗಿ ತಿಕ್ಕುವ ಛಾಪಾಕಾಗದದಲ್ಲಿ) ವಾಗ್ರೂಪ ಬರದು ತರ ಬೇಕು.

೫೦೦ ರೂಪಾಯಿ ಮೌಲ್ಯದೊಳಗಿನ ಕಟ್ಟು ತಲಪುತ್ತಲೇ ಅದು ಹೊಂದ ತಕ್ಕವನಿಗೆ ಸಾಧಾರಣ ರೀತಿಯಂತೆ ಒಪ್ಪಿಸೋಣಾಗುವದು; ಅದರೆ ೫೦೦ ರೂಪಾಯಿಗೆ ಮೀರಿದ ಮೌಲ್ಯವುಳ್ಳ ಕಟ್ಟು ಟಪ್ಪಾಲಕಟ್ಟೆಯಲ್ಲಿಯೇ ಒಪ್ಪಿಸಲಾಗುವದು. ಕಟ್ಟು ಹೊಂದಿದವನಿಂದ ಅದು ತಲಪಿದ್ದಕ್ಕೆ ರಶೀದಿ ಪಡಕೊಂಡು, ಕಟ್ಟು ರವಾನಿಸಿದವನಿಗೆ ಮುಟ್ಟಿಸೋಣಾಗುವದು.

(Value Payable Commission) ಮೌಲ್ಯವನ್ನು ಮಾಡಿ ಕೊಡಿಸುವ ಬಗ್ಗೆ ವಟ್ಟು:

	ಆ.	ಪೈ.
ಕಟ್ಟಿನ ಮೌಲ್ಯ ೧೦ ರೂಪಾಯಿಗೆ ಮೀರದಿದ್ದರೆ	೨	೦
" ೨೫ " "	೪	೦
ಹೆಚ್ಚಿಗೆ ಪ್ರತಿ ೨೫ " ಯಾ ಅದರಂತಕ್ಕೆ	೪	೦

ಕಟ್ಟುರವಾನಿಸಿದವನಿಗೆ ತರಿಸಿಕೊಡ ತಕ್ಕ ಹಣದಿಂದ ಈ ದರದಲ್ಲಿ ವಟ್ಟು ವಜಾ ಮಾಡಲಾದೀತು. ಅದರೆ ಕಟ್ಟು ಹೊಂದ ತಕ್ಕವನು ಅದು ತನಗೆ ಬೇಡವೆಂದು ವಾಪಸು ಮಾಡಿದರೆ, ಅದನ್ನು ರವಾನಿಸಿದವನೇ ಅದರ ಟಪ್ಪಾಲ ಹಾಸಲು ತೆರುವದಕ್ಕೆ ಬದ್ಧನಾಗುವನು.

(Insurance) ಲಿಫಾಪೆಗಳಾಗಲೀ ಕಟ್ಟುಗಳಾಗಲೀ ಸುರಕ್ಷಿತವಾಗಿ ಮುಟ್ಟಿಸಿ ಕೊಡುತ್ತೇವೆಂದು ಹೊಣೆ ಮಾಡೋಣಾಗುವದಕ್ಕೆ ವಟ್ಟು:

	ಆ.	ಪೈ.
ಸೊತ್ತಿನ ಕ್ರಯ ರೂ. ೫೦ಕ್ಕೆ ಮೀರದಿದ್ದರೆ	೨	೦
" " ೧೦೦ "	೪	೦
ಹೆಚ್ಚಿಗೆ ಪ್ರತಿ " ೧೦೦ ಯಾ ಅದರಂತಕ್ಕೆ	೪	೦

ಈ ವಟ್ಟದ ಮೌಲ್ಯದಷ್ಟು ಚೀಟು ಲಿಫಾಪೆಗಾಗಲೀ ಕಟ್ಟಿಗಾಗಲೀ ಹಚ್ಚುವದು.

(Money Order) ಹಿಂದುಸ್ಥಾನದಲ್ಲಿ ಚಲಾವಣೆಯಾಗುವ "ಮನಿ ಆರ್ಡರ್" ಎಂಬ ಹುಂಡಿಚೀಟು.

ಪೋಸ್ಟ್‌ಮಾಸ್ತರು ಹಿಂದುಸ್ಥಾನದಲ್ಲಿ ಟಪ್ಪಾಲುಕಟ್ಟೆ ಇರುವ ಒಂದು ಊರಿನಿಂದ ಬೇರೆ ಯಾವ ಊರಿಗಾವರೂ ೧೫೦ ರೂಪಾಯಿಗೆ ಮೀರದಷ್ಟು ಹಣಕ್ಕೆ ಹುಂಡಿ ಕೊಡಬಹುದು.—ಹುಂಡೀ ದ್ವಾರಾ ಹಣ ಯಾರು ಯಾರಿಗೆ ಮುಟ್ಟಿಸ ಬೇಕೋ, ಅವರಿಬ್ಬರ ಹೆಸರು, ವಿಳಾಸ, ಹಣದ ಸಂಖ್ಯೆ ಮುಂತಾದ್ದನ್ನು, ಟಪ್ಪಾಲಕಟ್ಟೆಯಿಂದ ತಿಕ್ಕುವ ಭಾಷಾಕಾಗದದ ಮೇಲೆ ಎವರವಾಗಿ ಬರದು, ಹಣ, ವಟ್ಟು ಸಮೇತಾ ಟಪ್ಪಾಲಕಟ್ಟೆಯಲ್ಲಿ ಕೊಟ್ಟಲ್ಲಿ, ಅದಕ್ಕಾಗಿ ಅವರು ರಶೀದಿ ಕೊಟ್ಟು, ಹಣವನ್ನು ಹೊಂದ ತಕ್ಕವನಿಗೆ ಅವರೇ ಹುಂಡೀಚೀಟು ತೀಪಾ ರವಾನಿಸಿ ಮುಟ್ಟಿಸುವರು; ಅಂದರೆ ಹಣ ಹೊಂದ ತಕ್ಕವನು ಟಪ್ಪಾಲ ದ್ವಾರಾ ಭಾಷಾ ಹುಂಡೀಚೀಟು ಹೊಂದುವನು. ಅದನ್ನು ಅವನು ಅದರಲ್ಲಿ ನಮೂದಿಸಿದ ಟಪ್ಪಾಲುಕಟ್ಟೆಯಲ್ಲಿ ಹಾಜರು ಮಾಡಿ, ಅದರ ಹಿಂಬದಿಯಲ್ಲಿ ರಶೀದಿ ಕೊಟ್ಟು ಹಣ ಪಡಕೊಳ್ಳುವನು. ಒಮ್ಮೆ ಕೊಟ್ಟ ಹುಂಡೀಚೀಟು, ಹಣ ಪಾವತಿಯಾಗುವದಕ್ಕೆ ಮುಂಚೆ ಕಳದು ಹೋದರೆ, ಪುನಹಾ ಮೇಲಿನ ದರದಲ್ಲಿ ವಟ್ಟಾ ಕೊಟ್ಟಲ್ಲಿ ಎರಡನೇ ಹುಂಡೀಚೀಟು ತಿಕ್ಕುವದು. ಈ ತರದ ಹುಂಡಿಯನ್ನು ಒಬ್ಬನ ಹೆಸರಿನಿಂದ ಇನ್ನೊಬ್ಬನವಕ್ಕೆ ಬದಲಿಸ ಕೂಡದು. ಈ ಹುಂಡಿಯ ತಾರೀಕಿನಿಂದ ಒಂದು ತಿಂಗಳವರೆಗೆ ಹಣ ಪಡಕೊಳ್ಳದಿದ್ದರೆ, ಆ ಮೇಲೆ ಅದಕ್ಕೆ ಅವಧಿ ತಟ್ಟುತ್ತದೆ; ಅದರೆ ಪ್ರಥಮದಲ್ಲಿ ತೆತ್ತಷ್ಟೆ ವಟ್ಟ ಪುನಹ ಕೊಟ್ಟು ಹುಂಡೀಚೀಟು ತಕ್ಕೊಂಡು ಹಾಜರು ಮಾಡಿದ್ದಲ್ಲಿ ಹಣ ತಿಕ್ಕುವದು. ಪರಂತು ಎರಡು ತಿಂಗಳು ಕಳದು ಹೋದರೆ, ಆ ಚೀಟು ಪೂರಾ ರದ್ದಾಗುವದು, ಮತ್ತು ಅದರಲ್ಲಿ ನಮೂದಿಸಿದ ಹಣ ತಿಕ್ಕಲಿಕ್ಕಿಲ್ಲ.—ಅದಲ್ಲದೆ ಚಿಲ್ಲರೆ ಹಣ ರವಾನಿಸುವ ಬಗ್ಗೆ ಮೂರು ತರದ (Postal Notes) ಅಂದರೆ ಟಪ್ಪಾಲ ನೋಟುಗಳು ಚಲಾವಣೆಯಾಗುತ್ತವೆ. ಅಂಥಾದ್ದನ್ನು ಕೊಂಡುಕೊಂಡವನು ಅದರ ಹಿಂದುಗಡೆಯಲ್ಲಿ ಆ ಹಣ ಯಾರಿಗೆ ಮುಟ್ಟಿಸ ಬೇಕೋ ಅವನ ಹೆಸರು ಬರದು, ಅತನಿಗೆ ರವಾನಿಸ ಬೇಕು. ತಲಪುತ್ತಲೇ ಹಣ ಹೊಂದ ತಕ್ಕವನು ಅದರ ಹಿಂಬದಿಯಲ್ಲಿ ಹಣ ತೆರ ತಕ್ಕ ಟಪ್ಪಾಲ ಕಟ್ಟೆಯ ಹೆಸರು ಬರದು, ತನ್ನ ದಸ್ಕತು ಮಾಡಿ, ಅದನ್ನು ಆ ಟಪ್ಪಾಲಕಟ್ಟೆಗೆ ಹಾಜರು ಮಾಡಲಾಗಿ ಹಣ ಕೊಡೋಣಾಗುವದು. ಇಲ್ಲವೆ ಟಪ್ಪಾಲ ನೋಟನ್ನು ರವಾನಿಸುವವನು ಅದನ್ನು ಅರ್ಧ ಆಣೆ ಚೀಟು ಮತ್ತು ಅದನ್ನು ಕುರಿತು ಬರದ ಕಾರ್ಡು ಸಹಿತ ಟಪ್ಪಾಲುಕಟ್ಟೆಗೆ ರವಾನಿಸಿದ್ದಲ್ಲಿ ಅವರು ಅದಕ್ಕಾಗಿ ರಶೀದಿ ಕೊಟ್ಟು ಆ ನೋಟನ್ನು ತೀಪಾ ರವಾನಿಸಿ ಅದನ್ನು ಹೊಂದ ತಕ್ಕವನಿಗೆ ಟಪ್ಪಾಲ ವೇದೆಯ ಮುಖಾಂತರ

ವಟ್ಟದ ದರ:	ಆ.	ಪೈ.
ಹುಂಡೀ ಹಣ ರೂ. ೧೦ಕ್ಕೆ ಮೀರದಿದ್ದರೆ,	೨	೦
" " " ಮೀರಿ, ರೂ. ೨೫ಕ್ಕೆ ಮೀರದಿದ್ದರೆ	೪	೦
ಹೆಚ್ಚಿಗೆ ಪ್ರತಿ ೨೫ ರೂಪಾಯಿಗೆ ಯಾ ಅದರ ಅಂತಕ್ಕೆ	೪	೦

(ಕಪ್ಪುಚೀಟು) ರೂ. ೨ ಆ. ೪ಕ್ಕೆ ವಟ್ಟು:	ಆ.	೧	
(ಕೆಂಪುಚೀಟು) " ೧ " ೦ " "	ಪೈ.	೬	
(ನೀಲಚೀಟು) " ೦ " ೯ " "	ಪೈ.	೬	

ಹಣ ಮುಟ್ಟಿಸುವರು. ಇಂಥಾ ನೋಟು, ೬ ತಿಂಗಳೊಳಗೆ ಹಣ ಪಡಕೊಳ್ಳದಿದ್ದರೆ, ಅವಧಿಯಿಂದ ಆತಂಕ ಸಲ್ಲಡುವದು. ಆದರೆ, ಪುನಹಾ ವಜ್ಜಾ ಕೊಟ್ಟು ಅದು ಜಾರಿಗೆ ತರ ಬಹುದು; ಹ್ಯಾಗೂ ೬ ತಿಂಗಳ ವರೆಗೆ ಹಣ ಪಡಕೊಳ್ಳದಿದ್ದರೆ, ಅದು ಪೂರಾ ರದ್ದಾಗುವದು.

(India Stock Notes) ಇಂಡಿಯಾ ಸ್ಟೋಕ್ ನೋಟುಗಳು.

ಟಪ್ಪಾಲಕಟ್ಟೆಗಳಲ್ಲಿ ರೂಪಾಯಿ ೧೦೦, ರೂಪಾಯಿ ೨೫, ಮತ್ತು ರೂಪಾಯಿ ೫೦ ಮೌಲ್ಯಗಳ ಸ್ಟೋಕ್‌ನೋಟುಗಳೆಂಬವು ಮಾರೋಣಾಗುತ್ತವೆ. ಇವುಗಳಿಗೆ ಶೇಕಡಾ ೪ರ ಮೇರೆಗೆ ಬಡ್ಡಿ ಎಣಿಸಲ್ಪಟ್ಟು, ಅಂಥಾ ನೋಟುಳ್ಳವನು ಬಡ್ಡಿಯನ್ನು ವರ್ಷಂಪ್ರತಿ ಖಜಾನೆಯಿಂದ ಪಡಕೊಳ್ಳ ಬಹುದು.

(Post Office Savings Bank) ಟಪ್ಪಾಲಕಟ್ಟೆಯಲ್ಲಿ ಹಣ ಠೇವಣಾತಿ ಇಡೋಣ.

ಈ ಬೇಂಕಿನಲ್ಲಿ ಯಾವ ಪುರುಷನಾಗಲೀ ಸ್ತ್ರೀಯಾಗಲೀ ಮಗುವಿಗೋಸ್ಕರವಾಗಲೀ ಹಣವನ್ನು ಠೇವಣಾತಿಯಾಗಿ ಇಡ ಬಹುದು. ನಾಲ್ಕು ಆಣೆಗಿಂತ ಕಡಿಮೆ ಮೊಬಲಗನ್ನಾಗಲೀ ನಾಲ್ಕು ಆಣೆಯ ಅಂತವಿರುವ ಮೊಬಲಗನ್ನಾಗಲೀ ತೆಗದುಕೊಳ್ಳುವದಿಲ್ಲ; ಮತ್ತು ಒಂದು ವರ್ಷದೊಳಗೆ ಒಟ್ಟು ಕೂಡಿ ಐನೂರು ರೂಪಾಯಿಗಿಂತ ಜಾಸ್ತಿ ಮೊಬಲಗನ್ನು ಠೇವಣಾತಿಯಾಗಿ ಇಡ ಕೂಡದು.

ಈ ಪ್ರಕಾರ ಠೇವಣಾತಿ ಮಾಡಿದವನು ತನ್ನ ಹಣದಿಂದ ವಾರದಲ್ಲಿ ಒಂದಾವರ್ತಿ ವಾಪಸು ಪಡಕೊಳ್ಳ ಬಹುದು. ಆದರೆ ತನ್ನ ಪೂರಾ ಲೇವಾದೇವಿ ತೀರಿಸುವಾಗ ಅಲ್ಲದೆ, ಒಬ್ಬನು ಒಂದು ಸಾರಿಗೆ ನಾಲ್ಕು ಆಣೆಗಿಂತ ಕಡಿಮೆಯಾಗಲೀ ಅದರ ಅಂತ ಕೂಡಿದ ಯಾವ ಮೊಬಲಗಾಗಲೀ ವಾಪಸು ಪಡಕೊಳ್ಳ ಕೂಡದು.

ಈ ವಿಷಯದಲ್ಲಿ ಇನ್ನೊಂದು ಹುಕುಂ ಕೊಡುವ ವರೆಗೆ, ಪೂರಾ ಐದೈದು ರೂಪಾಯಿಯ ಮೊಬಲಗಿನ ಮೇಲೆ ತಿಂಗಳು ಒಂದಕ್ಕೆ ಮೂರು ಪೈ ಮೇರೆಗೆ (ಅಂದರೆ ವರ್ಷಕ್ಕೆ ಶೇಕಡಾ ೬ ರೂಪಾಯಿ ೧೨ ಆಣೆ ಮೇರೆಗೆ) ಬಡ್ಡಿ ಕೊಡೋಣಾಗುತ್ತದೆ. ಮತ್ತು ವರ್ಷಂಪ್ರತಿ ಬಡ್ಡಿಯನ್ನು ಅಸಲಿಗೆ ಕೂಡಿಸೋಣಾಗುವದು.

(Telegraph) ತಂತಿಟಪ್ಪಾಲು.

ತಂತಿಟಪ್ಪಾಲಿನ ದ್ವಾರಾ ವರ್ತಮಾನವನ್ನು ಕಳುಹಿಸುವದಕ್ಕೆ ಮುಖ್ಯ ಮೂರು ವಿಧದ ದರ ಉಂಟು:

	ಮೊದಲನೆ ೯ ಶಬ್ದಗಳಿಗೆ ಯಾ ೬ ಅಂಕೆಗಳುಳ್ಳ ಸಂಖ್ಯೆಗೆ	ಹೆಚ್ಚಿಗೆ ಪ್ರತಿ ೧ ಶಬ್ದಕ್ಕೆ
(Deferred Message) "ಅವಕಾಶ ವರದಿ" ಅಂದರೆ ಆಫಿಸಿನ ಕೆಲಸದ ಹೊತ್ತಿನಲ್ಲಿ ಕೊಡಲ್ಪಟ್ಟು, ತಂತಿಟಪ್ಪಾಲಿನವರ ಸಂದರ್ಭದಲ್ಲಿ ರವಾನಿಸಿ, ಮರುದಿನ ಬೆಳಗ್ಯೆ ಅದರ ಏಳಾಸಕ್ಕೆ ಮುಟ್ಟಿಸುವಂಥಾದ್ದಾಗಿದ್ದರೆ.	ರೂ. ೦ ಆ. ೯	ರೂ. ೦ ಆ. ೧
(Ordinary Message) "ಸಾಧಾರಣ ವರದಿ" ಅಂದರೆ ಆಫಿಸಿನ ಕೆಲಸದ ಹೊತ್ತಿನಲ್ಲಿ ಒಪ್ಪಿಸಲ್ಪಟ್ಟು, ಚಾಲತಿ ಕ್ರಮದಲ್ಲಿ ರವಾನಿಸಿ ಮುಟ್ಟಿಸುವಂಥಾದ್ದಾಗಿದ್ದರೆ	ರೂ. ೧ ಆ. ೦	ರೂ. ೦ ಆ. ೩
(Urgent Message) "ಜರೂರು ವರದಿ" ಅಂದರೆ ಆಫಿಸಿನ ಕೆಲಸದ ಹೊತ್ತಿನಲ್ಲಿ ಕೊಡಲ್ಪಟ್ಟು, ಕೂಡಲೇ ರವಾನಿಸಿ ಸಾಧಾರಣ ವರದಿಗಿಂತ ಮುಂದಾಗಿ ಮುಟ್ಟಿಸ ತಕ್ಕದ್ದಾಗಿದ್ದರೆ . .	ರೂ. ೩ ಆ. ೦	ರೂ. ೦ ಆ. ೪

ವರದಿ ಹೊರಡುವ ಮತ್ತು ತಲಪುವ ಠಾಣೆಗಳ ಹೆಸರುಗಳು, ವರದಿ ರವಾನಿಸುವವನ ಮತ್ತು ಹೊಂದುವವನ ಹೆಸರು ಏಳಾಸಗಳು ಲೆಖ್ಖಕ್ಕೆ ಹಿಡಿಯುವದಿಲ್ಲ.

"ಭಾಪಖಾನೇ ವರದಿಗಳು" (ಅಂದರೆ ವರ್ತಮಾನಪತ್ರಗಳಿಗೆ ಬರಿಯಲ್ಪಡುವ ವರದಿಗಳು) ರವಾನಿಸುವದಕ್ಕೆ ಮೇಲಿನ ದರದಲ್ಲಿ ಅದರ ೪ ಪಾಲು ಶಬ್ದಗಳು ಎಣಿಸೋಣಾದಾವು.

ದಕ್ಷಿಣ ಕನ್ನಡ ಜಿಲ್ಲೆಯ ಸರಕಾರ ಉದ್ಯೋಗಸ್ಥರು.

I. District Officials ಜಿಲ್ಲಾ ಉದ್ಯೋಗಸ್ಥರು.

Civil ಸಿವಿಲ್.

1. District Court ಡಿಸ್ಟ್ರಿಕ್ಟ್ ಕೋರ್ಟ್.

J. W. Best Esq. ಜೆ. ವ. ಬೆಸ್ಟ್ ಥೊರೆಗಳು—ಡಿಸ್ಟ್ರಿಕ್ಟ್ ವ ಶೆಸ್ಯನ್ ಜಜ್ಜರು.
ಮಿಸ್ತರ್ ಜು. ನ. ಸಾಲ್ಡಾಞ್ಞ—ತಿರಸ್ತೇದಾರ್.
ಪ. ರಾಮರಾವ್—ಹೆಡ್‌ಕ್ಲರ್ಕ್.
ಜೆ. ಬಿ. ಫೆರ್ನಂಡೆಸ್—ಟ್ರನ್ಸ್‌ಲೇಟರ್.
ಎ. ಬಿ. ಗೊನ್ಸಾಲ್ವೆಸ್—ರಿಕಾರ್ಡಕೀವರ್.
ಉ. ರಾಘವೇಂದ್ರರಾವ್—2ನೇ. ಕ್ಲರ್ಕ್.
ಬಿ. ಮಂಗೇಶರಾವ್—ಕೆಂಟ್ರಲ್ ನಾಜರ್.
ಎ. ಲೋಬೊ—ಕಾಪಿಸ್ಟರ ಜೆ. ಸುವರಿಂಟಿಂಡೆಂಟ್.

2. Subordinate Judge's Court ಸಬೋರ್ಡಿನೇಟ್ ಜಜ್ಜರ ಕೋರ್ಟ್.

M. R. Ry. C. Venkobacharya Avargal ಮ.ರಾ.ರಾ. ಸಿ. ವೆಂಕೋಬಾಚಾರ್ಯರವರು—ಸಬೋರ್ಡಿನೇಟ್ ಜಜ್ಜರು.
ಕಾಮಿಲ ಕೊಯಿಲೊ—ತಿರಸ್ತೇದಾರ್.
ತೋ. ನೊರೋಞ—ಹೆಡ್‌ಕ್ಲರ್ಕ್.
ಕೊ. ಶಾಮರಾವ್—ರಿಕಾರ್ಡಕೀವರ್.

Pleaders ಡಿಸ್ಟ್ರಿಕ್ಟ್ ಕೋರ್ಟ ವಕೀಲರು.

ಅ. ಸುಬ್ಬರಾವ್, ಬಿ. ಎ., ಬಿ. ಎಲ್. | ಮದ್ರಾಸ ಹೈ
ಅ. ರಾಮಯ್ಯಪೂಂಜ, ,, ,, | ಕೋರ್ಟ
ಮ. ಮುಂಡಪ್ಪಬಂಗೆರಾ, ,, ,, | ವಕೀಲರು.

ಕ. ಮಂಜುನಾಥಯ್ಯ.	ಲೊ. ಲೋಬೊ.
ಬ. ಲಕ್ಷ್ಮಯ್ಯ.	ಬ. ರಾಮಪ್ಪಾ.
ನ. ಶಿವರಾವ್.	ತ. ಭವಾನಿರಾವ್.
ಗೊ. ವೆಂಕಟರಾವ್.	ಸು. ರಾಮರಾವ್.
ಕಾ. ಭಾ. ರಾಮರಾವ್.	ಮು. ಶಿವರಾವ್.
ಕ. ಶಾಮರಾವ್.	ನ. ಮಂಜುನಾಥಯ್ಯ.
ವ. ವರಮೇಶ್ವರಯ್ಯ.	ಜೆ. ಎಫ್. ಡಿಸೋಜಾ.
ಹ. ಕೃಷ್ಣರಾವ್.	ಕೊ. ದೇವರಾವ್.
ಮ. ತೇ. ರಾನುರಾವ್.	ವ. ಸುಬ್ಬರಾವ್.
ಮ. ರಾಮಚಂದ್ರಯ್ಯ.	ಚ. ಆನಂದ್ರಾವ್.
ಕಾ. ಸಾಂತಯ್ಯ.	ಉ. ಕೃಷ್ಣಭಟ್ಟ, ಬಿ. ಎ., ಬಿ. ಎಲ್
ಕೋ. ರಾಮಪ್ಪಾ.	ಎಫ್. ಬಿ. ಮಸ್ಕರೇಞ.
ಮ. ಸುಬ್ಬರಾವ್.	ವಿ. ನರ್ಸಪ್ಪಯ್ಯ.
ಸಾ. ಫೆ. ಬ್ರಿತೊ.	ಪೆ. ಜಿ. ಸುಬ್ರಾವ್.

District Registrar ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್.

M. R. Ry. A. S. Venkata Rao Avargal, B. A. ಮ.ರಾ.ರಾ. ಎ. ಸ. ವೆಂಕಟರಾಯರು, ಬಿ. ಎ.—ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್.

Revenue and Magisterial ರೆವೆನ್ಯು ಮತ್ತು ಮೆಜಿಸ್ಟ್ರೇಟ್.

1. Huzur Office ಹಜೂರು.

J. Sturrock Esq ಜೆ. ಸ್ಟರ್ರಕ್ ಥೊರೆಗಳು—ಕಲ್ಲೆಕ್ಟರ್ ವ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು.
P. F. Fernandez Esq. ಪಿ. ಫ. ಫೆರ್ನಂಡೆಜರು-ಖಜಾನಾ ಡಿಪ್ಯುಟಿ ಕಲ್ಲೆಕ್ಟರ್.
ಮೂ. ರಾ. ಆ. ವೆಂಕಪ್ಪಪೂಂಜರು—ತಿರಸ್ತೇದಾರ್.
ಜೊ. ಲು. ಫೆರ್ನಂಡೆಜರು—ಹೆಡ್‌ಕ್ಲರ್ಕ್.
ಮತ್ತುಭಂಡಾರಿಗಳು-ಇಂಗ್ಲಿಷ ಹೆಡ್ ಎಕೌಂಟಾಂಟ್.
ಉ. ರಘುನಾಥಯ್ಯನವರು.—ಟ್ರನ್ಸ್‌ಲೇಟರ್.
ಅ. ವಾಸುದೇವಯ್ಯಗಳು—ದೇಶಭಾಷಾ ಹೆಡ್‌ಕ್ಲರ್ಕ್.
ರ. ರಾಮರಾವರು—ಮೆಜಿಸ್ಟ್ರೇಟ್ ಕ್ಲರ್ಕ್.
ಬೊ. ಶೀವಯ್ಯ— ಇಂಗ್ಲಿಷ ರಿಕಾರ್ಡಕೀವರ್.
ಇ. ಶಿ. ರುಜಾರಿಯೊ—ದೇಶಭಾಷಾ ,,
ಜಾ. ಮಿ. ಗೊನ್ಸಾಲ್ವೆಸ್—ಟ್ರೆಜರರ್ (ಖಜಾನಚಿ).

2. Head Assistant Collector ಹೆಡ್ ಅಸಿಸ್ಟಾಂಟ್ ಕಲ್ಲೆಕ್ಟರ್.

H. Bradley Esq. ಹ. ಬ್ರೇಡ್ಲಿ ಥೊರೆಗಳು—ಅ. ಹೆಡ್ ಅಸಿಸ್ಟಾಂಟ್ ಕಲ್ಲೆಕ್ಟರ್ ಮತ್ತು 1ನೇ ಕ್ಲಾಸ ಮೆಜಿಸ್ಟ್ರೇಟರು.
ಪಿ. ಸಿ. ಕಾಸ್ತಲಿನೊ—ಹೆಡ್‌ಕ್ಲರ್ಕ್.

3. Deputy Collectors ಡಿಪ್ಯುಟಿ ಕಲ್ಲೆಕ್ಟರರು.

M. R. Ry. K. Rama Rao Avargal ಮ. ರಾ. ರಾ. ಕಜಾಡ ರಾಮರಾಯರವರು—ಜನರಲ್ ಜ್ಯೂಟಿ ಡಿಪ್ಯುಟಿ ಕಲ್ಲೆಕ್ಟರ್ ಮತ್ತು 1ನೇ ಕ್ಲಾಸ ಮೆಜಿಸ್ಟ್ರೇಟರು.
ರ. ಮಂಜುನಾಥಯ್ಯ—ಹೆಡ್‌ಕ್ಲರ್ಕ್.
I. M. Coelho Esq. ಇ. ಮೂ. ಕೊಯಿಲೊಯವರು—ಟೆಂಪೊರೆರಿ ಡಿಪ್ಯುಟಿ ಕಲ್ಲೆಕ್ಟರ್ ವ 1ನೇ ಕ್ಲಾಸ ಮೆಜಿಸ್ಟ್ರೇಟರು.
ಮು. ಪಾಂಡುರಂಗ—ಹೆಡ್‌ಕ್ಲರ್ಕ್.

4. Bench Magistrates

ಮಂಗಳೂರ ಶಹರಿನ ಬೆಂಚು ಮೆಜಿಸ್ಟ್ರೇಟರು.

ಮಂಗಳೂರ ಟೌನ್ ಮೆಜಿಸ್ಟ್ರೇಟರು—ಪ್ರೆಸಿಡೆಂಟ್.
ಬೆನಿಡಿಕ್ಟ್ ಎಕ್ಟರ್ ಡಿ. ರುಜಾರಿಯೊ ಸಾಹೇಬರು.
ಮಹಾರಾಜಶ್ರೀ ಉಳ್ಳಾಲ ಮಂಗೇಶಯ್ಯನವರು.
,, ನೆಲ್ಲಿಕಾಯಿ ಗುಂಡುರಾಯರು.
,, ಮಂಗಳೂರ ರಾಮಚಂದ್ರಯ್ಯನವರು.
,, ಚಿಲ್ಮಿ ಅಮಿರುದ್ದೀನ್ ಸಾಹೇಬರು.
,, ನವರೋಜ ಜೆಮಶಟ್‌ಜ ಶೇಟರು.

Police Department
ಪೊಲೀಸ್ ಇಲಾಖೆ.

J. E. E. A. Boyd Esq. ಜೆ. ಇ. ಇ. ಎ. ಬೋಯ್ಡ್ ಧೊರೆಗಳು—ಪೊಲೀಸ್ ಸುಪರಿಂಟೆಂಡೆಂಟರು.

ಮಿಸ್ತರ್ ಡಿ. ರಸ್ಕಿಞ್ಯ—ಹೆಡ್‌ಕ್ವಾರ್ಟರ್ ಇನ್‌ಸ್ಪೆಕ್ಟರರು, 3ನೇ ಕ್ಲಾಸ್.

" ಜೇಮ್ಸ್ ಮೋರ್ಗೆನ್—ರಿಜರ್ವ್ ಇನ್‌ಸ್ಪೆಕ್ಟರ್, 3ನೇ ಕ್ಲಾಸ್.

ಕೋ. ರಾಮರಾವ್—ಸ್ಕೂಲ ಪ ಕೋರ್ಟ ಇನ್‌ಸ್ಪೆಕ್ಟರ್, ೨ನೇ ಕ್ಲಾಸ್.

Salt Revenue Department
ಸಾಲ್ಟ ರೆವೆನ್ಯು ಇಲಾಖೆ.

C. Powell Esq. ಪಿ. ಪೊವೆಲ್ ಧೊರೆಗಳು—ಇನ್‌ಸ್ಪೆಕ್ಟರು, ಮಂಗಳೂರು ಸರ್ಕಲ್.

ಕಾ. ಅನಂದರಾವ್—ಹೆಡ್‌ಕ್ಲರ್ಕ್.

G. F. Nepean Smith Esq. ಜಿ. ಎಫ್. ನೇಪಿಯನ್ ಸ್ಮಿತ್ ಧೊರೆಗಳು—ಇನ್‌ಸ್ಪೆಕ್ಟರ್, ಕುಂದಾಪುರ ಸರ್ಕಲ್.

ಕ. ರಾಮರಾವ್—ಹೆಡ್‌ಕ್ಲರ್ಕ್.

Public Works Department
ಇಂಜಿನಿಯರ ಇಲಾಖೆ.
Imperial ಇಂಪೀರಿಯಲ್.

Sergt. MacAlister ಸಾರ್ಜೆಂಟ್ ಮೆಕ್ ಎಲಿಸ್ಟರ್ ಧೊರೆಗಳು—ಅಸಿಸ್ಟಾಂಟ್ ಇಂಜನಿಯರ್.

Local Fund ಲೋಕೆಲ ಫಂಡ್.

Capt. T. Smither ಕೆಪ್ಟನ್ ಟಿ. ಸ್ಮಿದರ್ ಧೊರೆಗಳು—ಇಂಜಿನಿಯರ್.

Forest Department ಜಂಗ್ಲಿ ಇಲಾಖೆ.

Mr. T. P. Peak ಟಿ. ಪಿ. ಪೀಕ್ ಧೊರೆಗಳು—ಅಸಿಸ್ಟಾಂಟ್ ಕನ್ಸರ್ವೇಟರ್.

Marine Department ನೌಕಾ ಇಲಾಖೆ.

H. D. Baddeley Esq. ಹ. ಡಿ. ಬದಲ್ಲೆ ಧೊರೆಗಳು—ಪೋರ್ಟ ಆಫಿಸರ್ ಪ ಮಂಗಳೂರ ಅಳವೆ ಸಾಯರ ಸುಪರಿಂಟೆಂಡೆಂಟ್.

Postal Department ಟಪ್ಪಾಲಇಲಾಖೆ.

M. R. Ry. V. Kanakasabhai Pillay, B.A., B.L. ಮ. ರಾ. ರಾ. ವಿ. ಕನಕಸಭ್ಯಾ ಪಿಳ್ಳೈಯವರು—ಪೋಸ್ಟ ಆಫಿಸ್ ಸುಪರಿಂಟೆಂಡೆಂಟ್, ಕಲಿಕೋಟೆ ಡಿವಿಜನ್.

ಪಿ. ಅಪ್ಪಾಸಾಮಿಪಿಳ್ಳೈ—ದಕ್ಷಿಣ ಕನ್ನಡ ಪೋಸ್ಟ ಆಫಿಸ್ ಇನ್‌ಸ್ಪೆಕ್ಟರ್.

Mr. W. G. Samuel ಮಿಸ್ತರ್ ವಿ. ಜಿ. ಸಾಮುವೇಲ್—ಪೋಸ್ಟ್‌ಮಾಸ್ಟರ್, ಮಂಗಳೂರು.

Telegraph ತಂತಿಟಪ್ಪಾಲ್.

Mr. F. S. D'Souza ಮಿಸ್ತರ್ ಎಫ್. ಎಸ್. ಡಿಸೌಜಾ—ಟಿಲೆಗ್ರಾಫ್‌ಮಾಸ್ತರ್.

Educational Department
ವಿದ್ಯಾ ಇಲಾಖೆ.

E. Marsden Esq. ಇ. ಮಾರ್ಸ್‌ಡನ್ ಧೊರೆಗಳು—7ನೇ ಡಿವಿಜನ್ ಕೊಡಗು ಮತ್ತು ದಕ್ಷಿಣ ಕನ್ನಡ ಶಾಲಾ ಇನ್‌ಸ್ಪೆಕ್ಟರ್.

ಕ. ಶಾಂತಪ್ಪಾ—ಶಾಲಾ ಡಿ. ಇನ್‌ಸ್ಪೆಕ್ಟರ್, ಉತ್ತರತುಕಡಿ.

ಮಿಸ್ತರ್ ರಾ. ಸ. ಸೊರೋಜಾ—" ದಕ್ಷಿಣ "

C. W. Burroughs Esq. LL. D., Barrister-at-Law ಸಿ. ವ್ಹಿ. ಬರೊಸ್ ಧೊರೆಗಳು—ಗವರ್ನಮೆಂಟ ಪ್ರೊವಿನ್ಶಲ್ ಕೊಲೆಜ್ ಆಕ್ಟಿಂಗ್ ಹೆಡ್‌ಮಾಸ್ತರ್.

ಉ. ಕೃಷ್ಣಯ್ಯ, ಬಿ. ಎ.—ಆಕ್ಟಿಂಗ್ ಫರ್ಸ್ಟ್ ಅಸಿಸ್ಟಾಂಟ ಮಾಸ್ತರ್.

ಬಿ. ರಾಘವೇಂದ್ರರಾವ್—ಮಂಗಳೂರ ನೋರ್ಮಲ್ ಶಾಲೆಯ ಹೆಡ್‌ಮಾಸ್ತರ್.

Medical Department
ವೈದ್ಯ ಇಲಾಖೆ.

Surgeon W. A. Lee ವ್ಹಿ. ಎ. ಲೀ ಧೊರೆಗಳು—ಅ. ಜಿಲ್ಲಾ ಸರ್ಜನ್ ಪ ಜೈಲಸುಪರಿಂಟೆಂಡೆಂಟ್.

Assistant Surgeon Avid Noronha ಅವಿದ್ ನೊರೋಞ ಸಾಹೇಬರು—ಅಸಿಸ್ಟಾಂಟ ಸರ್ಜನರು.

ಸಿವಿಲ ಆಸ್ಪತ್ರಿಯಲ್ಲಿ: ಟಿ. ಎ. ಸೊಲೊಮೊನ್—3ನೇ ದರ್ಜೆ ಸಿವಿಲ್ ಆಸ್ಪಿಟಲ್ ಅತಿಸ್ಟಾಂಟ್.

ಅ. ರಾಮುಂಣಿ— " " "

ಕೆ. ಗೋವಿಂದನಾಯರ್— " " "

ನ. ಗಣಪತಿಕಣಿ—ಸಿವಿಲ್ " "

ಕಲ್ಲೆಕ್ಟರ ಸಿಬಂದಿಗೆ:

ಎ. ಕೆ. ಪಂಗುಂಣಿ ನಾಯರ್—" "

ಹೆ. ಆ. ಕಲ್ಲೆಕ್ಟರ ಸಿಬಂದಿಗೆ:

ತಿ. ಪಿ. ನರ್ಗೀಸ್— " "

ಜೈಲ ಆಸ್ಪತ್ರಿಯಲ್ಲಿ:

ಪಿ. ತಿ. ನಾಗಪ್ಪಪಿಳ್ಳೈ—2ನೇ ದರ್ಜೆ "

ಪೊಲೀಸ್ ಆಸ್ಪತ್ರಿಯಲ್ಲಿ:

ಇ. ಜ. ಡಿಕ್ರುಜ್—3ನೇ ದರ್ಜೆ " "

Vaccination ದಾಕು ಹಾಕುವ ಇಲಾಖೆ.

ಎ. ಕೃಷ್ಣನ್‌ನಾಯರ್—ಉತ್ತರ ಡಿ. 1ನೇ } ಡಿ. ಇನ್‌
ಪಿ. ಕಣ್ಣನ್— ದಕ್ಷಿಣ ಡಿ. 2ನೇ } ಸ್ಪೆಕ್ಟರರು

Agricultural ವ್ಯವಸಾಯ ಇಲಾಖೆ.

ಮು. ನಾರಾಯಣರಾವ್—ಜಾನವಾರ ರೋಗಗಳ ಲೋಕೆಲ್ ಫಂಡ್ ಇನ್‌ಸ್ಪೆಕ್ಟರ್.

Madras Bank ಮದ್ರಾಸ್ ಬೇಂಕ್.

E. B. Palmer Esq. ಇ. ಬಿ. ಪಾಮರ್ ಥೊರೆಗಳು—ಏಜೆಂಟ್, ಮದ್ರಾಸ ಬ್ರೇಂಚ ಬೇಂಕ್, ಮಂಗಳೂರು.

ನಾರಾಯಣ ಭಂಡಾರಿ—ಕೆಷಿಯರ್ (ಸರಾಫ).

Members of the Local Fund Board
ಲೋಕೆಲ್ ಫಂಡ್ ಬೋರ್ಡ ಮೆಂಬರರು.

ಡಿಸ್ಟ್ರಿಕ್ಟ್ ಕಲೆಕ್ಟರರು—ಪ್ರೆಸಿಡೆಂಟರು.
ಹೆಡ್‌ಅಸಿಸ್ಟಾಂಟ್‌ಕಲೆಕ್ಟರರು—ವ್ಯಾಸ್‌ಪ್ರೆಸಿಡೆಂಟರು.
ವ್ಹಿ. ಎ. ಲೀ ಥೊರೆಗಳು—ಶಿವಿಲ್ ಸರ್ಜನ್.
ಪಿ. ಎಫ್ ಫೆರ್ನಾಂಡೀಜರು—ಡಿ. ಕಲ್ಲೆಕ್ಟರರು.
ಕಡಾಡ ರಾಮರಾಯರು—ಡಿಸ್ಟ್ಯಟ ಕಲ್ಲೆಕ್ಟರರು.
ಜಿ. ಫ. ಡೇವಿಡ್ಸನ್‌ಥೊರೆಗಳು—ಎಕ್ಸಿ.ಇಂಜಿನಿಯರರು.
ಮೆಕ್‌ಎಲಿಸ್ಟರ್ ಥೊರೆಗಳು—ಅಸಿಸ್ಟಂಟ "
ಇ. ಮಾರ್ಸ್‌ಡನ್ ಥೊರೆಗಳು—ಶಾಲಾಇನ್ಸ್‌ಪೆಕ್ಟರ್.
ಕ. ಸಾಂತಪ್ಪಯ್ಯನವರು—ಶಾಲಾ ಡಿ. ಇ. ಉತ್ತರ ಡಿ.
ರಾ. ಸ. ನೊರೋನ್ಹರು— " ದಕ್ಷಿಣ "
ನಿ. ಬ್ರಿತೊನವರು—ಮಂಗಳೂರ ತಹಶೀಲ್‌ದಾರರು.
ತಿ. ಫ್ಲೈದರರ್ ಥೊರೆಗಳು.
ಎ. ಮು. ಫೆರ್ನಾಂಡೆಸರು.
ತೊಂಭತ್ತ ಸುಬ್ಬರಾಯರು.
ನೆಲ್ಲಿಕಾಯಿ ಗುಂಡುರಾಯರು.
ಮಂಗಳೂರು ರಾಮಚಂದ್ರಯ್ಯನವರು.
ಏ. ಪೆ. ಕುವೇಲರು.
ಪದ್ಮರಾಜ ಬಲ್ಲಾಳ ಯಾನೆ ಚನ್ನರಾಯ ಸಾವಂತರು.
ಚಂದಾರೆ ಕಂಮಾರನವರು.
ಕುಂಞಮಾಯಿ ಕುಟ್ಟೀಬ್ಯಾರಿಗಳು.
ಮುಂಜೇಶ್ವರ ಶಿವರಾಯರು.
ಉಪ್ಪಿನಂಗಡಿ ಮಾಧವಭಟ್ಟರು.
ಕೆಂ. ಬೆಳ್ಳಿಪಾಡಿ ನರಶಿಂಗರೈಗಳು.
ಹಾಜಿ ಹಾರುನ್ ಶೇಟರು.
ಹಂದಾಡಿ ಮೋನಪ್ಪ ಶೆಟ್ರು.
ಬಸರೂರು ಮಂಜು ಶೆಟ್ರು.
ವಡೇರಹೋಬಳಿ ನಾಗಪ್ಪ ಕಾರಾಂತರು.
ಕೆ. ರಾಮರಾವ್—ಹೆಡ್ ಕ್ಲರ್ಕ್.

Municipal Commissioners ಮಂಗಳೂರ ಶಹರಿನ ಮ್ಯುನಿಶಿಪಲ್ ಕಮ್ಮಿಶನರುಗಳು.

ಡಿಸ್ಟ್ರಿಕ್ಟ್ ಕಲ್ಲೆಕ್ಟರರು—ಪ್ರೆಸಿಡೆಂಟರು.
ಜೊನ್ ಬೋಲ್ ಸಾಹೇಬರು—ವೈಸ್‌ಪ್ರೆಸಿಡೆಂಟ್.
ಕರ್ನೆಲ್ ಸ. ಟಿ. ಗ್ರೆಂಟ್ ಥೊರೆಗಳು—ಕಮ್ಮೆಂಡಿಂಗ್ ಆಫಿಸರ್.
ಜೊ. ಇ. ಇ. ಎ. ಬೋಯ್ಡ್ ಥೊರೆಗಳು—ಪೊಲೀಸ್ ಸುಪರಿಂಟೆಂಡೆಂಟ್.
ವ್ಹಿ. ಎ. ಲೀ ಥೊರೆಗಳು—ಶಿವಿಲ್ ಸರ್ಜನ್.
ಇ. ಮಾರ್ಸರ್ಡನ್‌ಥೊರೆಗಳು—ಶಾಲಾಇನ್‌ಸ್ಪೆಕ್ಟರ್.
ಕ. ಸಾಂತಪಯ್ಯನವರು—ಶಾಲಾ ಡಿಪ್ಯುಟ "
ನಿ. ಬ್ರಿತೊರವರು—ಮು. ತಾ. ತಹಶೀಲದಾರರು.
ನೆಲ್ಲಿಕಾಯಿ ಗುಂಡುರಾಯರು.
ಅಮ್ಮೆಂಬಳ ಸುಬ್ಬರಾಯರು.
ಹುಂಡಿ ಮಂಜುನಾಥ ಕಮ್ತಿಗಳು.
ನಿ. ಮು. ಫೆರ್ನಂಡೆಸ್ ಸಾಹೇಬರು
ಸ. ಫ. ಬ್ರಿತೊರವರು.
ಬಿ. ಎಸ್. ಸಾಲ್ಡಾಞ್ಞರು.
ಉಳ್ಳಾಲ ಮಂಗೇಶಯ್ಯನವರು.
ಉಳ್ಳಾಲ ರಾಘವೇಂದ್ರರಾಯರು.
ಅತ್ತಾವರ ಸುಬ್ರಾಯರು.
ಬಯಿಲ್ ಅಬ್ಬು ಬ್ಯಾರಿಗಳು.
ಸು. ಆನಂದರಾವ್—ಮೆನೇಜರ್.
ಎ. ಇ. ಆರೊಸ್ಸ—ಇನ್‌ಸ್ಪೆಕ್ಟರ್.

II Taluk Officials ತಾಲೂಕು ಉದ್ಯೋಗಸ್ಥರು.

1. Mangalore Taluk
ಮಂಗಳೂರ ತಾಲೂಕು.

Civil ಶಿವಿಲ್.

ಅ. ವೆಂಕಟರಮಣಯ್ಯಗಳು-ಮಂಗಳೂರ ಮುನಸಿಫ್ (1ನೇ ದರ್ಜೆ).

ಕಾ. ಸಲ್ಡಾಞ್ಞ—ಅ. ಹೆಡ್‌ಕ್ಲರ್ಕ್.

Registration ರಿಜಿಸ್ಟ್ರಿ.

ಜೆ. ಬಿ. ಪಿಂತೊ— ಸಬ್ ರಿಜಿಸ್ಟ್ರಾರ್, ಬಂಟವಾಳ.
ಪಿ. ರಾಮಕೃಷ್ಣಯ್ಯ— " " ಮುಲ್ಕಿ.

Revenue and Magisterial
ರೆವೆನ್ಯೂ ಮತ್ತು ಮೆಜಿಸ್ಟ್ರೇಟ್.

ಮಿಸ್ತರ್ ನಿ. ಬ್ರಿತೊ— ತಾಲೂಕು ತಹಶೀಲ್‌ದಾರ್ ಮ 2ನೇ ಕ್ಲಾಸ ಮೆಜಿಸ್ಟ್ರೇಟ್.
ತ್ರಾ. ಗೋಪಾಲಕೃಷ್ಣಯ್ಯರು—ತಿರಸ್ತೇದಾರ್ ಮ 3ನೇ ಕ್ಲಾಸ ಮೆಜಿಸ್ಟ್ರೇಟ್.
ಬೊ. ಬಾಬುರಾಯರು — ಮಂಗಳೂರ ಶಹರ ಅ. 2ನೇ ಕ್ಲಾಸ ಮೆಜಿಸ್ಟ್ರೇಟ್.
ಮಿಸ್ತರ್ ಕಾ. ಸ. ಮ. ಆಬ್ರೆವೊ—ಬಂಟವಾಳ ಡಿಪ್ಯುಟಿ ತಹಶೀಲ್‌ದಾರ್ ಮ 2ನೇ ಕ್ಲಾಸ ಮೆಜಿಸ್ಟ್ರೇಟ್.

Police ಪೊಲೀಸ್

ಟಿ. ಸೋಮಪ್ಪಾ—3ನೇ ಕ್ಲಾಸ ಇನ್‌ಸ್ಪೆಕ್ಟರ್, ಮಂಗಳೂರ ಶಹರ.

ಲಾ. ನರಸಿಂಗರಾವ್—2ನೇ ಕ್ಲಾಸ್ ಇನ್‌ಸ್ಪೆಕ್ಟರ್, ಮಂಗಳೂರ ತಾಲೂಕ.

ಪಿ. ಬಿ. ಕೃಷ್ಣಯ್ಯ-ಸಬ್‌ಇನ್‌ಸ್ಪೆಕ್ಟರ್.

ಮ. ಶಂಕರನಾರ್ಣಪ್ಪ—4ನೇ ಕ್ಲಾಸ ಇನ್‌ಸ್ಪೆಕ್ಟರ್, ಬಂಟವಾಳ ಡಿವಿಜನ್.

Sea-Customs ಅಳವೆಸಾಯರ.

ಮಂಗಳೂರು: ಎಚ್. ಡಿ. ಬಡ್ಡೆಲ್ಲಿ ಫೊರೆಗಳು—ಸುಪರಿಂಟಿಂಡೆಂಟ್.

ಸೀಟರ ಫೆರ್ನಾಂಡೆಸ್ — ಅಸಿಸ್ಟಾಂಟ ಸುಪರಿಂಟಿಂಡೆಂಟ್ ವ ಹೆಡ್ ಕ್ಲರ್ಕ್.

ಮುಲ್ಕಿ: ಮೂ. ಸಲ್ದಾಞ—ಸುಪರಿಂಟಿಂಡೆಂಟ್.

Dispensary ಔಷಧಿಶಾಲೆಯಲ್ಲಿ:

ಬಂಟವಾಳ: Mr. C. F. Francis ಮಿಸ್ತರ್ ಸಿ. ಫ. ಫ್ರಾನ್ಸಿಸ್—ಶಿವಿಲ್ ಎಪೊತ್‌ಕೆರಿ.

Postal ಟಪ್ಪಾಲ್.

ಎ. ಲೋಬೊ—ಸಬ್‌ಪೋಸ್ಟಮಾಸ್ಟರ್, ಬಂಟವಾಳ.

ಬಿ. ಶ್ರೀನಿವಾಸರಾವ್ ,, ಮುಲ್ಕಿ.

2. Kasaragod Taluk
ಕಾಸರಗೋಡ ತಾಲೂಕು.

Civil ಶಿವಿಲ್.

ಮಿಸ್ತರ್ ಇ. ಪಿ. ಫೆರ್ನಾಂಡೆಜ್—ಚೇಕಲ (ಕಾಸರಗೋಡ) ಮುನಸಿಫ್ (2ನೇ ದರ್ಜೆ).

ಬ. ಗಣಪಯ್ಯ—ಹೆಡ್ ಕ್ಲರ್ಕ್.

Registration ರಿಜಿಸ್ಟ್ರಿ.
ಸಬ್‌ರಿಜಸ್ಟ್ರಾರರು.

ಕ. ರಾಮರಾವ್— 3ನೇ ಗ್ರೇಡ್, ಕಾಸರಗೋಡ.

ಮು. ಮುಕುಂದರಾವ್—ಪಿ. ಎ.—6ನೇ ,, ಹೊಸದುರ್ಗ.

ಕೊ. ನಾರಾಯಣರಾವ್— ,, ,, ಮಂಜೇಶ್ವರ.

ಕಾ. ನಾರಾಯಣರಾವ್—4ನೇ ,, ಎಟ್ಲು.

Revenue and Magisterial
ರೆವೆನ್ಯೂ ಮತ್ತು ಮೆಜಿಸ್ಟ್ರೇಟ್.

ಮಿಸ್ತರ್ ಜೊ. ಲು. ಸಲ್ದಾಞ—ಆ. ತಾಲೂಕು ತಹತಿಲ್‌ದಾರ್ ವ 2ನೇ ಕ್ಲಾಸ ಮೆಜಸ್ಟ್ರೇಟ್.

ಮ. ವೆಂಟರಾಯರು-ತಿರಸ್ತೇದಾರ್ ವ 2ನೇ ಕ್ಲಾಸ ಮೆಜಿಸ್ಟ್ರೇಟ್.

ಹ. ಕೊರಗಪ್ಪ—ನೀಲೇಶ್ವರ ಡಿಪ್ಯುಟಿ ತಹತಿಲ್‌ದಾರ್ ವ 2ನೇ ಕ್ಲಾಸ ಮೆಜಿಸ್ಟ್ರೇಟ್.

Police ಪೊಲೀಸ್.

ನಿ. ರಾಮಪ್ಪಾ—6ನೇ ಕ್ಲಾಸ ಇನ್‌ಸ್ಪೆಕ್ಟರ್, ಕಾಸರಗೋಡ ಡಿವಿಜನ್.

Sea-Customs ಅಳವೆಸಾಯರ.

ಕಾಸರಗೋಡ: ಎಫ್. ಡಿ. ರುಜಾರಿಯೊ—ಸುಪರಿಂಟಿಂಡೆಂಟ್. [ಟಿಂಡೆಂಟ್

ಮಂಜೇಶ್ವರ: ಫ್ಲೆ. ನುಸ್ಕರೆಂಞಾಸ್—ಅ. ಸುಪರಿಂ

ಕುಂಬಳೆ: ತೆವತೊನ್ ಸಾಲ್ದಾಞ— ,,

Dispensary ಔಷಧಿಶಾಲೆಯಲ್ಲಿ:

ಕಾಸರಗೋಡ: Mr. T. Korah ಮಿಸ್ತರ್ ಟಿ. ಕೊರಾ—ಶಿವಿಲ್ ಎಪೊತ್‌ಕೆರಿ.

Postal ಟಪ್ಪಾಲ್.

ಕೊ. ನಾಗಪ್ಪಾ—ಸಬ್ ಪೋಸ್ಟಮಾಸ್ಟರ್, ಕಾಸರಗೋಡ.

ಬೆ. ಮಂಗೇಶರಾವ್— ,, ಹೊಸದುರ್ಗ

ಮ. ಉಪೇಂದ್ರನಾಯ್ಕ— ,, ಮಂಜೇಶ್ವರ.

3. Uppinangadi Taluk.
ಉಪ್ಪಿನಂಗಡಿ ತಾಲೂಕು.

Civil ಶಿವಿಲ್.

ಮಿಸ್ತರ್ ಜೆ. ಲೋಬೊನವರು—ಪುತ್ತೂರ ಮುನ (ತಿಫ್ 2ನೇ ದರ್ಜೆ).

ಹ. ರಾಮಪ್ಪಾ—ಹೆಡ್ ಕ್ಲರ್ಕ್.

Registration ರಿಜಿಸ್ಟ್ರಿ.
ಸಬ್‌ರಿಜಸ್ಟ್ರಾರರು.

ಎ. ದೇವಪ್ಪ ಪೂಂಜ—7ನೇ ಗ್ರೇಡ್, ಪುತ್ತೂರು.

ಗೊಡ್‌ಫ್ರೆ ರೋಬರ್ಟ್ಸ್ ,, ಬೆಳತಂಗಡಿ.

Revenus and Magisterial
ರೆವೆನ್ಯೂ ಮತ್ತು ಮೆಜಿಸ್ಟ್ರೇಟ್.

ಮಿಸ್ತರ್ ಮ. ಲ. ತಿಕೇರ—ಆ. ತಾಲೂಕು ತಹತಿಲ್‌ದಾರ್ ವ 2ನೇ ಕ್ಲಾಸ ಮೆಜಿಸ್ಟ್ರೇಟ್.

ಮಿಸ್ತರ್ ನೋರ್ಬರ್ಟ್ ಫೆರ್ನಂಡೆಜ್—ಆ. ತಿರಸ್ತೇದಾರ್ ವ ಮೆಜಿಸ್ಟ್ರೇಟ್

ವೊ. ರಾಮರಾಯರು—ಆ. ಡಿಪ್ಯುಟಿ ತಹತಿಲ್‌ದಾರ್ ವ 2ನೇ ಕ್ಲಾಸ ಮೆಜಿಸ್ಟ್ರೇಟ್, ಬೆಳತಂಗಡಿ.

Police ಪೊಲೀಸ್.

ಗು. ವೆಂಕಟರಾವ್—5ನೇ ಕ್ಲಾಸ ಇನ್‌ಸ್ಪೆಕ್ಟರ್, ಪುತ್ತೂರ ಡಿವಿಜನ್.

ಬಿ. ಶ್ರೀನಿವಾಸ—5ನೇ ಕ್ಲಾಸ ಇನ್‌ಸ್ಪೆಕ್ಟರ್, ಉಪ್ಪಿನಂಗಡಿ ಡಿವಿಜನ್.

Dispensary ಆಸ್ಪತ್ರಿಯಲ್ಲಿ:

ಪುತ್ತೂರು: Mr. F. H. Rego ಮಿಸ್ತರ್ ಪಿ. ಹ. ರೇಗೊ—ತಿವಿಲ ಎಪೊತ್‌ಕೆರಿ.

Postal ಟಪ್ಪಾಲ್,

ಟಿ. ಬಾಲಪ್ರಸಾದ್—ಸಬ್‌ಪೋಸ್ಟಮಾಸ್ಟರ್, ಪುತ್ತೂರ.
ಜಿ. ಮಾಧವರಾವ್— ,, ,, ಉಪ್ಪಿನಂಗಡಿ.
ಹ. ಅಣ್ಣಪ್ಪಾ— ,, ,, ಬೆಳತಂಗಡಿ.

4. Udipi Taluk ಉಡಪಿ ತಾಲೂಕು.

Civil ಶಿವಿಲ್.

ಕು. ಕೃಷ್ಣರಾಯರು, ಬಿ. ಎ.—ಉಡಪಿ ಮುನಸಿಫ್ (2ನೇ ದರ್ಜೆ).
ನ. ಶಾಂತಪ್ಪಾ—ಹೆಡ್ ಕ್ಲರ್ಕ್.
ಉ. ಸುಬ್ಬರಾಯರು—ಕಾರ್ಕಳ ಮುನಸಿಫ್ (4ನೇ ದರ್ಜೆ).
ಪು. ರಂಗಪ್ಪಾ—ಹೆಡ್ ಕ್ಲರ್ಕ್.

Registration ರಿಜಿಸ್ಟ್ರಿ.
ಸದ್‌ರಿಜಿಸ್ಟ್ರಾರರು.

ಗೊ. ವೆಂಕಟರಾವ್ ಬಿ. ಎ.—2ನೇ ಗ್ರೇಡ್ ಉಡಪಿ.
ಹ. ನಾರಾಯಣರಾವ್—4ನೇ ಗ್ರೇಡ್, ಬ್ರಹ್ಮಾವರ.
ಪ. ಕೃಷ್ಣರಾವ್—4ನೇ ಗ್ರೇಡ್ ಕಾರ್ಕಳ.

Revenue and Magisterial
ರೆವೆನ್ಯು ಮತ್ತು ಮೆಜಿಸ್ಟ್ರೇಟ್,

ಕು. ಗಣಪಯ್ಯನವರು — ಉಡಪಿ ತಾಲೂಕು ಅ. ತಹತಿಲ್‌ದಾರ್ ವ 2ನೇ ಕ್ಲಾಸ ಮಜಸ್ಟ್ರೇಟ್.
ಮಿಸ್ತರ್ ಫ್ರಾಂ. ಪಿಂತೊ — ತಿರಸ್ತೇದಾರ್ ವ 3ನೇ ಕ್ಲಾಸ ಮೆಜಸ್ಟ್ರೇಟ್
ನೊ. ರಾಮರಾಯರು—ಕಾರ್ಕಳ ಅ. ಡಿಪ್ಯುಟಿ ತಹತಿಲ್‌ದಾರ್ ವ 2ನೇ ಕ್ಲಾಸ ಮೆಜಸ್ಟ್ರೇಟ್.

Police ಪೊಲೀಸ್.

ಟಿ. ಬಾಬು—2ನೇ ಕ್ಲಾಸ ಇನ್‌ಸ್ಪೆಕ್ಟರ್, ಉಡಪಿ ಡಿವಿಜನ್.
ಮು. ಬ್ರಿತೊ—ಸಬ್ ಇನ್‌ಸ್ಪೆಕ್ಟರ್.

Sea-Customs ಅಳವೆಸಾಯರ.

ಮಲ್ಪೆ (ಉಡಪಿ): ತೊ. ಡೀಲೆಂಗ್—ಸುಪರಿಂಟೆಂಡೆಂಟ್.
ಹಂಗಾರಕಟ್ಟಾ: ಮು ಆನಂದರಾವ್— ,,

Dispensary ಆಸ್ಪತ್ರಿಯಲ್ಲಿ:

ಉಡಪಿ: Mr. G. Narainaswami Naidu ಮಿಸ್ತರ್ ಜಿ. ನಾರಾಯಣಸಾಮಿ ನಾಯಿಡು—1ನೇ ಕ್ಲಾಸ ಅಸ್ಪಿಟಲ್ ಅಸಿಸ್ಟಾಂಟ್.
ಕಾರ್ಕಳ: B. Raghavendra Rao ಬಿ. ರಾಘವೇಂದ್ರರಾವ್ — ತಿವಿಲ್ ಎಪೊತ್‌ಕೆರಿ.

Postal ಟಪ್ಪಾಲ್.

ಫ. ಸ. ಡಿಸೋಜಾ—ಸಬ್‌ಪೋಸ್ಟಮಾಸ್ಟರ್, ಉಡಪಿ.
ಸೀಮೋನ ಪ್ಯಾಸ್— ,, ,, ಬಾರಕೂರ.
ಕೆ. ಶೇಷಯ್ಯ ,, ,, ಕಾರ್ಕಳ.

Kundapur Taluk.
ಕುಂದಾಪುರ ತಾಲೂಕು.

Civil ಶಿವಿಲ್.

ಉ. ಬಾಬುರಾಯರು, ಬಿ. ಎಲ್.—ಕುಂದಾಪುರ ಮುನಸಿಫ್ (4ನೇ ದರ್ಜೆ).
ಅನಂತಯ್ಯ—ಹೆಡ್ ಕ್ಲರ್ಕ್.

Registration ರಿಜಿಸ್ಟ್ರಿ.

ತ. ಮಂಗೇಶರಾವ್, ಬಿ. ಎ.—3ನೇ ಗ್ರೇಡ್ ಸದ್ ರಿಜಿಸ್ಟ್ರಾರ್.

Revenue and Megisterial
ರೆವೆನ್ಯು ಮತ್ತು ಮೆಜಿಸ್ಟ್ರೇಟ್.

ಮಾವಿಲರಾಮಯ್ಯನವರು—ತಾಲೂಕು ಅ. ತಹತಿಲ್‌ದಾರ್ ವ 2ನೇ ಕ್ಲಾಸ ಮೆಜಸ್ಟ್ರೇಟ್.

Police ಪೊಲೀಸ್.

ಕಮಾಲಹಮ್ಮದ್—4ನೇ ಕ್ಲಾಸ ಇನ್‌ಸ್ಪೆಕ್ಟರ್, ಕುಂದಾಪುರ ಡಿವಿಜನ್.

Sea-Customs ಅಳವೆಸಾಯರ.

ಗಂಗೊಳ್ಳಿ (ಕುಂದಾಪುರ): ಮಿಸ್ತರ್ ಎ. ಜೆ. ಫೆರ್ನಾಂಡೆಜ್— ಸುಪರಿಂಟೆಂಡೆಂಟ್.
ಬೈಂದೂರ: ಹೊನ್ನಾವರ ತಿವಪ್ಪಾ— ,,

Dispensary ಆಸ್ಪತ್ರೆಯಲ್ಲಿ:

ಕುಂದಾಪುರ: Mr. G. Gasnoyne ಮಿಸ್ತರ್ ಜಿ. ಗೆಸ್ನೊಯಿನ್—ತಿವಿಲ ಎಪೊತ್‌ಕೆರಿ.

Postal ಟಪ್ಪಾಲ್.

ಬಿ. ವಿ. ಕೊಯಿಲೊ—ಸಬ್ ಪೋಸ್ಟಮಾಸ್ಟರ್, ಕುಂದಾಪುರ.
ಹ. ಸುಬ್ಬರಾವ್ ,, ,, ಗಂಗೊಳ್ಳಿ.
ಚ. ವೆಂಕಟರಾವ್ ,, ,, ಬೈಂದೂರು.
ಬಿ. ಕೃಷ್ಣಯ್ಯ ,, ,, ಕೊಲ್ಲೂರು.

೧೮೮೫ನೇ ವರ್ಷದ ಹಬ್ಬಗಳು.

*ಈ ಗುರುತು ಸುವಾರ್ತಾಪಕ್ಷದವರಿಗೂ ರೋಮನ್ ಕಥೋಲಿಕರಿಗೂ ಕೂಡ ಇರುವ ಹಬ್ಬಗಳನ್ನೂ,
†ಈ ಗುರುತು ರೋಮನ್ ಕಥೋಲಿಕರಿಗೆ ಮಾತ್ರ ಇರುವ ಹಬ್ಬಗಳನ್ನೂ,
§ಈ ಗುರುತು ಸರಕಾರ ರಜಾ ಇರುವ ದಿನಗಳನ್ನೂ ಸೂಚಿಸುತ್ತವೆ.

ಕ್ರೈಸ್ತ ಹಬ್ಬಗಳು.

CHRISTIAN FESTIVALS.

ಜನವರಿ ೧ *ನವಸಂವತ್ಸರದ ಹಬ್ಬ (New Year's Day)§.
,, ೬ *ಪ್ರತ್ಯಕ್ಷತೆಯ ಹಬ್ಬ (Epiphany).
ಫೆಬ್ರುವರಿ ೨ †ಮರಿಯಳ ಶುದ್ಧೀಕರಣ.
,, ೧೯ †ಉಪೋಷ್ಯದ ಮೊದಲನೇ ದಿನ §.
ಮಾರ್ಚ ೨೫ †ಮರಿಯಳಿಗಾದ ಶುಭವಾರ್ತೆ.
,, ೨೬ †ಮರಿಯಳ ಸಪ್ತವ್ಯಥೆಗಳ ಹಬ್ಬ.
,, ೨೯ *ಪಾಮ್‌ಸಂಡೆ (Palm Sunday).
ಎಪ್ರಿಲ್ ೨ †ಮೊಂಡಿ ಥರ್ಸ್‌ಡೆ ಹಬ್ಬ.
,, ೩ *ಕ್ರಿಸ್ತನ ಮರಣದಿನ (Good Friday)§.
,, ೪ †ಪರಿಶುದ್ಧ ಶನಿವಾರ §.
,, ೫ *ಪಸ್ಕ ಹಬ್ಬ (Easter Sunday).
,, ೬ †ಪಸ್ಕದ ಮೇಲಿನ ಸೋಮವಾರ.
,, ೭ †ಪಸ್ಕದ ಮೇಲಿನ ಮಂಗಳವಾರ.
ಮೇ ೧೪ *ದಿವಾರೋಹಣದ ಹಬ್ಬ (Ascension Day)§.
,, ೨೪ *ಪಂಚಾಶತ್ತಿನ ಹಬ್ಬ (Pentecost).
,, ೩೧ *ತ್ರಿತ್ವೈಕತ್ವದ ಹಬ್ಬ (Trinity).
ಜೂನ್ ೪ †ಕೊರ್ಪುಸ್ ಕ್ರಿಸ್ತೀ ಹಬ್ಬ §.
,, ೨೪ †ಸ್ನಾನಿಕ ಯೋಹಾನನ ಜನ್ಮದಿನ.
,, ೨೯ †ಪೇತ್ರನ ಮತ್ತು ಪೌಲನ ದಿನ.
ಜುಲಾಯಿ ೨ †ಮರಿಯಳ ಸಂದರ್ಶನ
,, ೧೬ †ಕಾರ್ಮೆಲ ಬೆಟ್ಟದ ಮರಿಯಳ ದಿನ.
,, ೨೧ †ಇಗ್ನಾಸಿಯುಸ್ ಲೊಯೋಲನ ದಿನ.
ಅಗೊಸ್ತು ೨ †ಪೊರ್ಸಿಯುಂಕುಲ ಹಬ್ಬ.
,, ೧೦ †ರಕ್ತಸಾಕ್ಷಿಯಾದ ಲಾರೆನ್ಸನ ದಿನ.
,, ೧೫ †ಮರಿಯಳ ಸ್ವರ್ಗಾರೋಹಣ §.
ಸಪ್ತಂಬರ ೮ †ಮರಿಯಳ ಜನ್ಮದಿನ.
ಒಕ್ತೋಬರಳ †ಅಸ್ಸೀಸಿಯ ಸೆಂತ್ ಫ್ರಾನ್ಸಿಸನ ದಿನ.
ನವಂಬರ ೧ †ಸಮಸ್ತ ಪರಿಶುದ್ಧರ ದಿನ.
,, ೨ †ಸಮಸ್ತ ಪ್ರಾಣಿಗಳ ದಿನ.
,, ೨೯ *ಕ್ರಿಸ್ತನ ಆಗಮನ (Advent).
ದಶಂಬರ ೬ †ಸೆಂತ್ ಫ್ರಾನ್ಸಿಸ್ ಕ್ಸವೀರನ ದಿನ.
,, ೮ †ಮರಿಯಳ ಶುದ್ಧೋತ್ಪತ್ತಿ.
,, ೨೧ †ಅಪೊಸ್ತಲ ತೋಮನ ದಿನ.
,, ೨೫ *ಕ್ರಿಸ್ತನ ಜನನದ ಹಬ್ಬ (Nativity of our Lord Jesus Christ)§.
,, ೨೬ †ರಕ್ತಸಾಕ್ಷಿ ಸ್ತೆಫನನ ದಿನ.

ಮಹಮ್ಮದೀ ಹಬ್ಬಗಳು.

MAHOMMEDAN FESTIVALS.

ಜನವರಿ ೧೯ ರಬೀಲಾಖರ್ ತಿಂಗಳ ಆರಂಭ.
ಫೆಬ್ರುವರಿ ೧೭ ಜಮಾದಿಲಾವಲ್,, ,,
ಮಾರ್ಚ ೧೯ ಜಮಾದಿಲಾಖರ್,, ,,
ಎಪ್ರಿಲ್ ೧೭ ರಜಬ್ ,, ,,
ಮೇ ೧೭ ಶಾಬಾನ್ ,, ,,
,, ೨೯ ಶಬೀಬರಾತ್ ಪಬ್ಬ §.
ಜೂನ್ ೧೫ ರಮ್‌ಜಾನ್ (ಉಪವಾಸ) §.
ಜುಲಾಯಿ ೧೫ ,, ,, ಕಡೇ ದಿನ §.
,, ೧೪ ಶವ್ವಾಲ್ ಹಬ್ಬ (ಪೆರುನಾಳ್) §.
ಅಗೊಸ್ತು ೧೩ ಜಲ್ಖಾಯದ್ ತಿಂಗಳ ಆರಂಭ.
ಸಪ್ತಂಬರ ೧೧ ಜಲ್‌ಹಜ್ ,, ,,
,, ೨೦ ಬಕ್ರೀದ್ ಹಬ್ಬ (ಪೆರುನಾಳ್) §.
ಒಕ್ತೋಬರ ೧೦ ಮೊಹರಮ್ ಹಬ್ಬದ ಆರಂಭ §.
,, ೧೯ ,, ,, ಕಡೇ ದಿನ §.
ನವಂಬರ ೯ ಸಫರ್ ತಿಂಗಳ ಆರಂಭ.
ದಶಂಬರ ೨ ಅಖರ್‌ಚಾರ್‌ತುಂಬು.
,, ೯ ರಬೀಲಾವಲ್ ತಿಂಗಳ ಆರಂಭ.

ಹಿಂದು ಹಬ್ಬಗಳು.
HINDOO FESTIVALS.

ಜನವರಿ ೧೫ ಮಕರಸಂಕ್ರಮಣ (ಮುಹೂರ್ತ).
,, ೨೬ ರಥಸಪ್ತಮಿ ಕ್ಷ.
,, ೨೪ ಭೀಷ್ಮಾಷ್ಟಮಿ.
,, ೨೫ ಮಧ್ವನವಮಿ.
ಫೆಬ್ರವರಿ ೧೩ ಮಹಾಶಿವರಾತ್ರಿ (ಮರುದಿನ ರಜೆಕ್ಷ).
,, ೨೮ ಹೋಳೀಹಬ್ಬ (ಕಾಮದಹನ).
ಮಾರ್ಚಿ ೧ ಹೋಳೀ ಹಬ್ಬದ ಕಡೇ ದಿನ ಕ್ಷ.
,, ೧೭ ಚಾಂದ್ರಮಾನ ಯುಗಾದಿ ಕ್ಷ.
,, ೨೪ ರಾಮನವಮಿ ಕ್ಷ.
ಏಪ್ರಿಲ್ ೧೩ ಸೌರಮಾನ ಯುಗಾದಿ ಕ್ಷ.
,, ೧೭ ಅಕ್ಷತೃತೀಯಾ, ವರಶುರಾಮ ಜಯಂತೀ.
,, ೨೭ ನರಸಿಂಹಜಯಂತೀ.
ಜುಲಾಯಿ ೯ ಪ್ರಥಮೈಕಾದಶೀ.
,, ೯ ಪ್ರಥಮದ್ವಾದಶೀ ಕ್ಷ.
,, ೧೫ ಕರ್ಕಾಟಕ ಸಂಕ್ರಮಣ ಕ್ಷ.
16	Tu	೧೬	ಮ		೫	೪೦- ೯	ಪುನರ್ವಸೂ	೪೫-೧೫		೨		೧೯
17	W	೧೭	ಬು	ಕಾರ್ತಿಕ ಶುಕ್ಲ ಪಕ್ಷ	೬	೩೭-೪೦	ಪುಷ್ಯ	೪೨-೩೯		೩		೨೦
18	Th	೧೮	ಗು		೭	೩೩-೨೪	ಆಶ್ಲೇಷಾ	೩೯- ೨		೪		೨೧
19	F	೧೯	ಶು		೮	೨೫- ೩	ಮಘಾ	೩೫- ೨		೫		೨೨
20	S	೨೦	ಶ		೯	೧೮-೧೧	ಹುಬ್ಬಾ	೩೧-೩೧		೬		೨೩
21	SUN	೨೧	ಆ		೧೦	೧೨- ೩	ಉತ್ತರಾ	೨೫-೧೩		೭		೨೪
22	M	೨೨	ಚ		೧೧	೫-೨೧	ಹಸ್ತಾ	೧೯-೨೩		೮		೨೫
23	Tu	೨೩	ಮ		೧೩	೫೧-೧೨	ಚಿತ್ರಾ	೧೪-೨೦		೯		೨೬
24	W	೨೪	ಬು		೧೪	೪೭-೨೧	ಸ್ವಾತೀ	೧೧-೫೬		೧೦		೨೭
25	Th	೨೫	ಗು		●	೪೫-೪೭	ವಿಶಾಖಾ	೧೧-೨೪		೧೧		೨೮
26	F	೨೬	ಶು	ಕಾರ್ತಿಕ ಕೃ. ಪ.	೧	೪೪-೫೬	ಅನುರಾಧಾ	೧೧- ೨		೧೨		೨೯
27	S	೨೭	ಶ		೨	೪೪-೫೬	ಜ್ಯೇಷ್ಠಾ	೧೧-೨೩		೧೩		೩೦
28	SUN	೨೮	ಆ		೩	೪೫-೧೧	ಮೂಲಾ	೧೨-೪೧		೧೪	ಜುಮಾದಿಲ್ ಅವ್ವಲ್	೧
29	M	೨೯	ಚ		೪	೪೬-೫೯	ಪೂರ್ವಾಷಾಢ	೧೫-೫೫		೧೫		೨
30	Tu	೩೦	ಮ		೫	೪೮-೫೫	ಉತ್ತರಾಷಾಢ	೧೮-೫೯		೧೬		೩

ಇಗೋ, ಯೆಹೋವನ ಮನೆಯಲ್ಲಿ ಪ್ರತಿ ರಾತ್ರಿ ನಿಲ್ಲುವವರಾದ ಯೆಹೋವನ ಸೇವಕರೆಲ್ಲರೇ, ಯೆಹೋವನನ್ನು ಕೊಂಡಾಡಿರಿ. ಕೀರ್ತ. ೧೩೪, ೧.

1886 NOVEMBER—ನವಂಬರ ೧೮೮೬

ತಾರೀಖು	ಸೂರ್ಯ: ಉದಯ ಘ.	ಸೂರ್ಯ: ಉದಯ ನಿ.	ಸೂರ್ಯ: ಅಸ್ತ ಘ.	ಸೂರ್ಯ: ಅಸ್ತ ನಿ.	ಚಂದ್ರ: ಉದಯ ಘ.	ಚಂದ್ರ: ಉದಯ ನಿ.	ಚಂದ್ರ: ಉಚ್ಚ ಘ.	ಚಂದ್ರ: ಉಚ್ಚ ನಿ.	ಚಂದ್ರ: ಅಸ್ತ ಘ.	ಚಂದ್ರ: ಅಸ್ತ ನಿ.
೧	೫	೫೬	೫	೫೨	೧೦	೨೫	೪	೧೬	೧೦	೯
೨	೫	೫೬	೫	೫೨	೧೧	೧೧	೫	೫	೧೧	೦
೩	೫	೫೬	೫	೫೧	೧೧	೫೭	೫	೫೫	೧೧	೫೦
೪	೫	೫೭	೫	೫೧	೧೨	೪೧	೬	೭೯	ಪ್ರಾತಃ.	
೫	೫	೫೭	೫	೫೦	೧	೧೨	೭	೭೫	೧೨	೭೯
೬	೫	೫೭	೫	೫೦	೧	೪೨	೮	೮೨	೧೨	೪೯
೭	೫	೫೮	೫	೫೦	೨	೪೨	೮	೮೬	೧	೫೮
೮	೫	೫೮	೫	೫೦	೨	೭೭	೯	೯೨	೧	೨೭
೯	೫	೫೮	೫	೫೦	೩	೧೧	೧೦	೧೬	೧	೫೬
೧೦	೫	೫೮	೫	೫೦	೩	೪೪	೧೦	೧೦	೨	೨೬
೧೧	೫	೫೮	೫	೫೦	೩	೭೭	೧೧	೧೪	೨	೫೬
೧೨	೫	೫೯	೫	೫೦	೪	೧೦	೧೧	೫೮	೩	೨೬
೧೩	೫	೫೯	೫	೪೯	೪	೪೩	೧೨	೪೨	೩	೫೬
೧೪	೫	೫೯	೫	೪೯	೪	೭೭	೧೨	೭೬	೪	೨೬
೧೫	೫	೫೯	೫	೪೯	೫	೧೦	೧೩	೧೦	೪	೫೬
೧೬	೫	೫೯	೫	೪೯	೫	೪೩	೧೩	೪೩	೫	೨೬
೧೭	೫	೫೯	೫	೪೯	೫	೭೬	೧೩	೭೬	೫	೫೬
೧೮	೫	೫೯	೫	೪೯	೬	೧೦	೧೪	೧೦	೬	೨೬
೧೯	೫	೫೯	೫	೪೯	೬	೪೩	೧೪	೪೩	೬	೫೬
೨೦	೫	೫೯	೫	೪೯	೬	೭೬	೧೪	೭೬	೭	೨೬
೨೧	೫	೫೯	೫	೪೯	೭	೧೦	೧೫	೧೦	೭	೫೬
೨೨	೫	೫೯	೫	೪೯	೭	೪೩	೧೫	೪೩	೮	೨೬
೨೩	೫	೫೯	೫	೪೯	೭	೭೬	೧೫	೭೬	೮	೫೬
೨೪	೫	೫೯	೫	೪೯	೮	೧೦	೧೬	೧೦	೯	೨೬
೨೫	೫	೫೯	೫	೪೯	೮	೪೩	೧೬	೪೩	೯	೫೬
೨೬	೫	೫೯	೫	೪೯	೮	೭೬	೧೬	೭೬	೧೦	೨೬
೨೭	೫	೫೯	೫	೪೯	೯	೧೦	೧೭	೧೦	೧೦	೫೬
೨೮	೫	೫೯	೫	೪೯	೯	೪೩	೧೭	೪೩	೧೧	೨೬
೨೯	೫	೫೯	೫	೪೯	೯	೭೬	೧೭	೭೬	೧೧	೫೬
೩೦	೫	೫೯	೫	೪೯	೧೦	೧೦	೧೮	೧೦	೧೨	೨೬

ಕುಜಾದಿ ಪಂಚಗ್ರಹರ ಉದಯೋಚ್ಚಾಸ್ತಮಯಗಳನ್ನು ತೋರಿಸುವ ಪಟ್ಟಿ

ಗ್ರಹ	ತಾರೀಖು	ಉದಯ	ಉಚ್ಚ	ಅಸ್ತ
ಕುಜ		ಪ್ರಾತಃ.	ಮಧ್ಯಾ.	ಸಾಯಂ
		ಘ. ನಿ.	ಘ. ನಿ.	ಘ. ನಿ.
	೬	೬ ೪೦	೨ ೨೬	೯ ೪
	೧೬	೬ ೪೪	೨ ೨೧	೮ ೪೬
	೨೬	೬ ೩೯	೨ ೧೪	೮ ೪೨
ಬುಧ		ಪ್ರಾತಃ.	ಮಧ್ಯಾ.	ಸಾಯಂ
		ಘ. ನಿ.	ಘ. ನಿ.	ಘ. ನಿ.
	೬	೭ ೩೪	೧ ೧೧	೭ ೪೮
	೧೬	೭ ೪೧	೧ ೧೨	೭ ೪೩
	೨೬	೭ ೭	೧೨ ೪೪	೭ ೩೧
ಗುರು		ಪ್ರಾತಃ.	ಪ್ರಾತಃ.	ಸಾಯಂ
		ಘ. ನಿ.	ಘ. ನಿ.	ಘ. ನಿ.
	೬	೪ ೨೭	೧೦ ೧೯	೪ ೧೨
	೧೬	೪ ೪೪	೯ ೪೮	೪ ೪೧
	೨೬	೪ ೬	೯ ೧೭	೪ ೬
ಶುಕ್ರ		ಪ್ರಾತಃ.	ಹಗಲು	ಸಾಯಂ
		ಘ. ನಿ.	ಘ. ನಿ.	ಘ. ನಿ.
	೬	೪ ೨೨	೧೧ ೨೦	೪ ೬
	೧೬	೪ ೪೬	೧೧ ೬೦	೪ ೧೪
	೨೬	೫ ೧	೧೧ ೪೨	೪ ೩೬
ಶನಿ		ರಾತ್ರಿ	ಪ್ರಾತಃ.	ಪ್ರಾತಃ.
		ಘ. ನಿ.	ಘ. ನಿ.	ಘ. ನಿ.
	೬	೧೦ ೧೬	೪ ೬೨	೧೦ ೪೬
	೧೬	೯ ೬೬	೬ ೪೬	೧೦ ೧೬
	೨೬	೯ ೪೪	೬ ೧೨	೯ ೬೨

1886 DECEMBER

31 DAYS

೧೮೮೬ ದಶಂಬರ

೩೧ ದಿವಸಗಳು

ದಶಂಬರ ೩ ◐ ಶುಕ್ಲಾರ್ಧಚಂದ್ರ, ಸಾಯಂಕಾಲ ಘಂಟೆ ೭ ನಿಮಿಷ ೨೪
„ ೧೧ ○ ಮಾರ್ಗಶಿರ ಪೂರ್ಣಿಮೆ, ಮಧ್ಯಾಹ್ನ „ ೨ „ ೩೦
„ ೧೯ ◑ ಕೃಷ್ಣಾರ್ಧಚಂದ್ರ, ಪ್ರಾತಃಕಾಲ „ ೧೧ „ ೩೪
„ ೨೫ ● ಮಾರ್ಗಶಿರ ಅಮಾವಾಸ್ಯೆ, ಮಧ್ಯಾ. „ ೨ „ ೫೪

ಚಂದ್ರಸ್ಥಿತಿಗಳು

ಅಂಗ್ಲ				ಚಾಂದ್ರಮಾನ			ನಕ್ಷತ್ರ		ಸಾರಮಾನ		ಮಹಮ್ಮದಿ	
Date	Day	ತಾರೀಕು	ವಾರ	ತಿಂಗಳು	ತಿಥಿ	ಘಳಿಗೆ ವಿಘಳಿಗೆ	ಜನ್ಮ ನಕ್ಷತ್ರ ಹೆಸರು	ಘಳಿಗೆ ವಿಘಳಿಗೆ	ಮಾಸ	ದಿನ	ತಿಂಗಳು	ತಿಥಿ
1	W	೧	ಬು		೬	೫೨- ೫	ಶ್ರವಣಾ	೨೫-೨೬		೧೭		೪
2	Th	೨	ಗು		೭	೫೪-೨೫	ಧನಿಷ್ಠಾ	೨೭-೫೫		೧೮		೫
3	F	೩	ಶು		೮	೬೦- ೦	ಶತಭಿಷಾ	೫೫-೧೧		೧೯		೬
4	S	೪	ಶ	ಪುಷ್ಯ	೮	೫-೪೨	ಪೂರ್ವಾಭಾದ್ರ	೫೯-೨೯	[ಜನವರಿ	೨೦		೭
5	SUN	೫	ಆ	ಮಾರ್ಗಶಿರ	೯	೮-೫೫	ಉತ್ತರಾಭಾದ್ರ	೪೫- ೭		೨೧		೮
6	M	೬	ಚ		೧೦	೧೫-೫೮	ರೇವತೀ	೫೧-೨೭		೨೨		೯
7	Tu	೭	ಮ		೧೧	೧೮-೨೫	ಅಶ್ವಿನೀ	೫೮- ೯		೨೫		೧೦
8	W	೮	ಬು		೧೨	೨೨- ೫	ಭರಣೀ	೬೦- ೦		೨೪		೧೧
9	Th	೯	ಗು		೧೫	೨೫-೧೪	ಭರಣೀ	೨-೨೫		೨೫		೧೨
10	F	೧೦	ಶು		೧೪	೨೫- ೯	ಕೃತ್ತಿಕಾ	೪-೫೭	ಫೆ	೨೬		೧೫
11	S	೧೧	ಶ		○	೨೪-೫೨	ರೋಹಿಣೀ	೬-೧೧	ಬ್ರು	೨೭		೧೪
12	SUN	೧೨	ಆ		೧	೨೨-೫೬	ಮೃಗಶಿರಾ	೬- ೯		೨೮		೧೫
13	M	೧೩	ಚ		೨	೨೦-೧೧	ಆರ್ದ್ರಾ	೫-೫೨		೨೯		೧೬
14	Tu	೧೪	ಮ		೩	೧೬-೨೫	ಪುನರ್ವಸೂ	೪-೧೨		೧		೧೭
15	W	೧೫	ಬು		೪	೧೩-೪೫	ಪುಷ್ಯಾ	೦-೪೯		೨		೧೮
16	Th	೧೬	ಗು		೫	೫-೫೮	ಆಶ್ಲೇಷಾ	೪೯-೫೫		೩		೧೯
17	F	೧೭	ಶು	ಪುಷ್ಯ	೬	೫೧-೧೨	ಹುಬ್ಬಾ	೪೫-೫೨		೪		೨೦
18	S	೧೮	ಶ	ಮಾರ್ಗಶಿರ	೮	೪೭-೫೪	ಉತ್ತರಾ	೪೫-೨೭		೫		೨೧
19	SUN	೧೯	ಆ		೯	೪೫-೫೬	ಹಸ್ತಾ	೪೦- ೮		೬		೨೨
20	M	೨೦	ಚ		೧೦	೪೦-೧೨	ಚಿತ್ರಾ	೪೯-೨೭		೭		೨೩
21	Tu	೨೧	ಮ		೧೧	೪೫-೫೧	ಸ್ವಾತೀ	೫೭-೧೪		೮		೨೪
22	W	೨೨	ಬು		೧೨	೫೦-೪೦	ವಿಶಾಖಾ	೫೫-೧೫		೯		೨೫
23	Th	೨೩	ಗು		೧೫	೨೭- ೦	ಅನುರಾಧಾ	೫೧-೫೭		೧೦		೨೬
24	F	೨೪	ಶು		೧೪	೨೪-೨೫	ಜ್ಯೇಷ್ಠಾ	೫೧-೧೧		೧೧		೨೭
25	S	೨೫	ಶ		●	೨೫- ೫	ಮೂಲಾ	೫೧-೧೮		೧೨		೨೮
26	SUN	೨೬	ಆ		೧	೨೫-೧೭	ಪೂರ್ವಾಷಾಢ	೫೨-೪೭		೧೫		೨೯
27	M	೨೭	ಚ	ಪುಷ್ಯ	೨	೨೫- ೨	ಉತ್ತರಾಷಾಢ	೫೫-೫೫	ಫೆ	೧೪		೧
28	Tu	೨೮	ಮ	ಮಾರ್ಗಶಿರ	೩	೨೫-೧೫	ಶ್ರವಣಾ	೫೮-೫೪		೧೫	ರಬಿಉಲ್ಲಾಖರ್	೨
29	W	೨೯	ಬು		೪	೨೫- ೧	ಧನಿಷ್ಠಾ	೪೪-೨೧		೧೬		೩
30	Th	೩೦	ಗು		೫	೨೬-೫೫	ಶತಭಿಷಾ	೫೧-೧೨		೧೭		೪
31	F	೩೧	ಶು		೬	೪೨-೪೨	ಪೂರ್ವಾಭಾದ್ರ	೫೬-೨೭		೧೮		೫

ಯೆಹೋವನನ್ನು ಸ್ತುತಿಸಿರಿ; ಯಾಕಂದರೆ ನಮ್ಮ ದೇವರನ್ನು ಕೀರ್ತಿಸುವದು ಒಳ್ಳೇದು; ಯಾಕಂದರೆ ಸ್ತೋತ್ರವು ರಮ್ಯವೂ ಯೋಗ್ಯವೂ ಆಗಿದೆ. ಕೀರ್ತ. ೧೪೭, ೧.

1886 DECEMBER—ದಶಂಬರ ೧೮೮೬

ತಾರೀಖು	ಸೂರ್ಯ ಉದಯ ಘಂಟೆ	ಸೂರ್ಯ ಉದಯ ನಿಮಿಷ	ಸೂರ್ಯ ಅಸ್ತ ಘಂಟೆ	ಸೂರ್ಯ ಅಸ್ತ ನಿಮಿಷ	ಚಂದ್ರ ಉದಯ ಘಂಟೆ	ಚಂದ್ರ ಉದಯ ನಿಮಿಷ	ಚಂದ್ರ ಉಚ್ಚ ಘಂಟೆ	ಚಂದ್ರ ಉಚ್ಚ ನಿಮಿಷ	ಚಂದ್ರ ಅಸ್ತ ಘಂಟೆ	ಚಂದ್ರ ಅಸ್ತ ನಿಮಿಷ
೧	೬	೯	೫	೫೦	ಪ್ರಾತಃ.		ಸಾಯಂ.		ಸಾಯಂ.	
೨	೬	೯	೫	೫೦	೧೦	೫೫	೪	೫೨	೧೦	೫೦
೩	೬	೧೦	೫	೫೧	೧೧	೫೮	೫	೧೭	೧೧	೧೮
೪	೬	೧೦	೫	೫೧	೧೧	೫೮	೬	೨	ಪ್ರಾತಃ.	
೫	೬	೧೧	೫	೫೧	ಮಧ್ಯಾನ್ಹ					
೬	೬	೧೧	೫	೫೧	೧೨	೫೮	೬	೪೪	೧೨	೬
೭	೬	೧೧	೫	೫೧	೧	೫೭	೭	೨೯	೧	೧೨
೮	೬	೧೧	೫	೫೧	೨	೫೭	೭	೫೯	೧	೧೯
೯	೬	೧೨	೫	೫೧	೩	೫೭	೮	೨೯	೨	೨೬
೧೦	೬	೧೨	೫	೫೦	೪	೫೭	೮	೫೯	೩	೩೩
೧೧	೬	೧೨	೫	೫೦	೫	೫೭	೯	೨೯	೩	೪೦
೧೨	೬	೧೩	೫	೫೦	೬	೫೭	೯	೫೯	೪	೪೭
೧೩	೬	೧೩	೫	೫೦	೭	೫೭	೧೦	೨೯	೪	೫೪
೧೪	೬	೧೩	೫	೫೦	೮	೫೭	೧೦	೫೯	೫	೫೯
೧೫	೬	೧೪	೫	೪೯	೯	೫೭	೧೧	೨೯	೬	೪
೧೬	೬	೧೪	೫	೪೯	೧೦	೫೭	೧೧	೫೯	೭	೧೦
೧೭	೬	೧೪	೫	೪೯	೧೧	೫೭	ಮಧ್ಯಾನ್ಹ			
೧೮	೬	೧೫	೫	೪೮	ಪ್ರಾತಃ.		೧	೨೯	೮	೧೭
೧೯	೬	೧೫	೫	೪೮	೧೨	೫೭	೧	೫೯	೯	೨೪
೨೦	೬	೧೫	೫	೪೮	೧	೫೭	೨	೨೯	೧೦	೩೨
೨೧	೬	೧೬	೫	೪೭	೨	೫೭	೨	೫೯	೧೧	೪೦
೨೨	೬	೧೬	೫	೪೭	೩	೫೭	೩	೨೯	೧೨	೪೮
೨೩	೬	೧೬	೫	೪೭	೪	೫೭	೩	೫೯	೧೩	೫೭
೨೪	೬	೧೭	೫	೪೬	೫	೫೭	೪	೨೯	೧೪	೬
೨೫	೬	೧೭	೫	೪೬	೬	೫೭	೪	೫೯	೧೫	೧೫
೨೬	೬	೧೭	೫	೪೬	೭	೫೭	೫	೨೯	೧೬	೨೪
೨೭	೬	೧೮	೫	೪೫	೮	೫೭	೫	೫೯	೧೭	೩೩
೨೮	೬	೧೮	೫	೪೫	೯	೫೭	೬	೨೯	೧೮	೪೨
೨೯	೬	೧೮	೫	೪೫	೧೦	೫೭	೬	೫೯	೧೯	೫೦
೩೦	೬	೧೯	೫	೪೪	೧೧	೫೭	೭	೨೯	೨೦	೫೮
೩೧	೬	೧೯	೫	೪೪	೧೨	೫೭	೭	೫೯	೨೨	೭

ಕುಜಾದಿ ಪಂಚಗ್ರಹರ ಉದಯೋಚ್ಚಾಸ್ತಮಯಗಳನ್ನು ತೋರಿಸುವ ಪಟ್ಟಿ

ಗ್ರಹ	ತಾರೀಖು	ಉದಯ	ಉಚ್ಚ	ಅಸ್ತ
ಕುಜ		ಪ್ರಾತಃ.	ಮಧ್ಯಾ.	ಸಾಯಂ
		ಘ. ನಿ.	ಘ. ನಿ.	ಘ. ನಿ.
	೧	೮ ೫೨	೨ ೯	೭ ೪೬
	೧೬	೮ ೨೪	೨ ೯	೭ ೪೨
	೩೧	೮ ೧೬	೧ ೪೬	೭ ೩೬
	೩೧	೮ ೧೬	೧ ೪೪	೭ ೩೪
ಬುಧ		ಪ್ರಾತಃ.	ಪ್ರಾತಃ.	ಸಾಯಂ
		ಘ. ನಿ.	ಘ. ನಿ.	ಘ. ನಿ.
	೧	೪ ೫೪	೧೧ ೧೬	೪ ೪೮
	೧೬	೪ ೪೬	೧೦ ೪೯	೪ ೧೩
	೩೧	೪ ೪೯	೧೦ ೪೯	೪ ೯
	೩೧	೪ ೪೬	೧೦ ೪೪	೪ ೧೪
ಗುರು		ಪ್ರಾತಃ.	ಪ್ರಾತಃ.	ಮಧ್ಯಾ.
		ಘ. ನಿ.	ಘ. ನಿ.	ಘ. ನಿ.
	೧	೭ ೪೩	೯ ೪೪	೧ ೪೪
	೧೬	೭ ೨೦	೯ ೧೧	೧ ೧
	೩೧	೬ ೪೪	೮ ೪೪	೧ ೧೪
	೩೧	೬ ೪೩	೮ ೪೪	೧ ೧೩
ಶುಕ್ರ		ಪ್ರಾತಃ.	ಹಗಲು	ಸಾಯಂ
		ಘ. ನಿ.	ಘ. ನಿ.	ಘ. ನಿ.
	೧	೬ ೧೯	೧೧ ೪೬	೪ ೪೪
	೧೬	೬ ೪೪	೧೨ ೧೧	೪ ೪೯
	೩೧	೬ ೪೦	೧೨ ೩೬	೬ ೪
	೩೧	೬ ೪೪	೧೨ ೩೬	೬ ೧೧
ಶನಿ		ಸಾಯಂ	ರಾತ್ರಿ	ಪ್ರಾತಃ.
		ಘ. ನಿ.	ಘ. ನಿ.	ಘ. ನಿ.
	೧	೬ ೧೦	೨ ೬೧	೬ ೪೨
	೧೬	೬ ೨೯	೧ ೪೯	೬ ೧೦
	೩೧	೬ ೪೪	೧ ೬	೬ ೩೬
	೩೧	೬ ೨೯	೧೨ ೪೯	೬ ೧೦

ಋತುಗಳು.

ಇಂಗ್ಲಿಷ ತಾರೀಕು	ಸಂಸ್ಕೃತ	ಚಾಂದ್ರಮಾನ	ಸೌರಮಾನ	ಕನ್ನಡ
೧೧. ಫೆಬ್ರವರಿ—೧೧. ಏಪ್ರಿಲ್	ಶಿಶಿರ	ಮಾಘ, ಫಾಲ್ಗುಣ	ಕುಂಭ, ಮೀನ	ಚಗುರಿಡುವ ಕಾಲ
೧೩. ಏಪ್ರಿಲ್—೧೩. ಜೂನ್	ವಸಂತ	ಚೈತ್ರ, ವೈಶಾಖ	ಮೇಷ, ವೃಷಭ	ಬಿಸುಲುಕಾಲ
೧೩. ಜೂನ್—೧೪. ಆಗೊಸ್ತು	ಗ್ರೀಷ್ಮ	ಜ್ಯೇಷ್ಠ, ಆಷಾಢ	ಮಿಥುನ, ಕರ್ಕಾಟಕ	ಘಾಳಿಕಾಲ
೧೪. ಆಗೊಸ್ತು—೧೪. ಒಕ್ತೋ.	ವರ್ಷ	ಶ್ರಾವಣ, ಭಾದ್ರಪದ	ಸಿಂಹ, ಕನ್ಯಾ	ಮಳೆಕಾಲ
೧೬. ಒಕ್ತೋಬರ—೧೬. ದಶಂಬರ	ಶರತ್ತು	ಆಶ್ವೀಜ, ಕಾರ್ತಿಕ	ತುಲಾ, ವೃಶ್ಚಿಕ	ಬೆಳದಿಂಗಳಕಾಲ
೧೪. ದಶಂಬರ—೧೦. ಫೆಬ್ರವರಿ.	ಹೈಮಂತ	ಮಾರ್ಗಶಿರ, ಪುಷ್ಯ	ಧನು, ಮಕರ	ಛಳಿಕಾಲ

೧೪೪೬ನೇ ವರ್ಷದ ಸೂಕ್ಷ್ಮನೂತನ ದೃಕ್ಸಿದ್ಧಾಂತ ಪಂಚಾಂಗವು.

ಈ ೧೪೪೬ನೇ ವರ್ಷದ ಆದಿಯಲ್ಲಿ ಚಿತ್ರಾ ನಕ್ಷತ್ರದ ಅಯನಾಂಶ ಭಾಗ ೨೨ ಕಲೆ ೧೫ ವಿಕಲೆ ೬ ಎಂದೂ, ವರ್ಷದ ಅಂತ್ಯದಲ್ಲಿ ಅಯನಾಂಶ ಭಾಗ ೨೨ ಕಲೆ ೧೫ ವಿಕಲೆ ೫೨ ಎಂದೂ ಗಣಿಸಲ್ಪಟ್ಟಿದೆ.

ಮಹಾ ನಕ್ಷತ್ರವೆಂಬ ಸೂರ್ಯನಕ್ಷತ್ರ ಆರಂಭಿಸುವ ಕಾಲ.

ಇಂಗ್ಲಿಷ ತಾರೀಕು	ವಾರ	ಘಂಟೆ	ನಿಮಿಷ	ಇಂಗ್ಲಿಷ ತಾರೀಕು	ವಾರ	ಘಂಟೆ	ನಿಮಿಷ
ಉತ್ತರಾಷಾ.	ಜನವರಿ	೯	ಪ್ರಾತಃ.	೬	ಪುಷ್ಯಾ	ಜುಲಾಯಿ	೧೯	ಪ್ರಾತಃ.	೧೧
ಶ್ರವಣಾ	"	೨೧	"	೯	ಆಶ್ಲೇಷಾ	ಆಗೊಸ್ತು	೧	"	೧೦
ಧನಿಷ್ಠಾ	ಫೆಬ್ರವರಿ	೪	"	೧೧	ಮಘಾ	"	೧೫	"	೬೫
ಶತಭಿಷಾ	"	೧೬	ಸಾಯಂ.	೪೫	ಪುಬ್ಬಾ	"	೨೯	"	೩
ಪೂರ್ವಾಭಾ.	ಮಾರ್ಚ	೨	ರಾತ್ರಿ	೧೦	ಉತ್ತರಾ	ಸಪ್ತಂಬರ	೧೧	ಸಾಯಂ.	೫
ಉತ್ತರಾಭಾ.	"	೧೬	ಪ್ರಾತಃ.	೩	ಹಸ್ತಾ	"	೨೫	ಹಗಲು	೧
ರೇವತೀ	"	೨೯	ಸಾಯಂ.	೪೫	ಚಿತ್ರಾ	ಒಕ್ತೋಬರ	೯	ಪ್ರಾತಃ.	೧
ಅಶ್ವಿನೀ	ಏಪ್ರಿಲ್	೧೨	ಪ್ರಾತಃ.	೩	ಸ್ವಾತೀ	"	೨೨	ಹಗಲು	೧೨
ಭರಣೀ	"	೨೫	ರಾತ್ರಿ	೧೦	ವಿಶಾಖಾ	ನವಂಬರ	೪	ರಾತ್ರಿ	೯
ಕೃತ್ತಿಕಾ	ಮೇ	೯	ಸಾಯಂ.	೬	ಅನುರಾಧಾ	"	೧೯	ಪ್ರಾತಃ.	೨
ರೋಹಿಣೀ	"	೨೩	"	೩	ಜ್ಯೇಷ್ಠಾ	ದಶಂಬರ	೧	"	೬
ಮೃಗಶಿರಾ	ಜೂನ್	೬	ಹಗಲು	೧	ಮೂಲಾ	"	೧೪	"	೨
ಆರ್ದ್ರಾ	"	೨೦	"	೧೨	ಪೂರ್ವಾಷಾ.	"	೨೭	"	೧೧
ಪುನರ್ವಸೂ	ಜುಲಾಯಿ	೪	ಪ್ರಾತಃ.	೧೧					

ದೃಕ್ಸಿದ್ಧ ಸಂಕ್ರಮಣಕಾಲದ ಘಳಿಗೆ ವಿಘಳಿಗೆಗಳು.

(ಮಧ್ಯ ಸೂರ್ಯೋದಯಾದಿ.)

ಇಂಗ್ಲಿಷ	ತಾರೀಕು	ವಾರ	ಘಳಿಗೆ ವಿಘಳಿಗೆ	ರಾಶಿ	ಇಂಗ್ಲಿಷ	ತಾರೀಕು	ವಾರ	ಘಳಿಗೆ ವಿಘಳಿಗೆ	ರಾಶಿ
ಜನವರಿ	೧೨	ಮಂಗಳವಾರ	೧೫-೪೩	ಮಕರ	ಜುಲಾಯಿ	೧೪	ಬುಧವಾರ	೪೧-೪೪	ಕರ್ಕಾಟ
ಫೆಬ್ರವರಿ	೧೦	ಬುಧವಾರ	೪೯-೧೦	ಕುಂಭ	ಆಗೊಸ್ತು	೧೫	ಆದಿತ್ಯವಾರ	೨-೪೩	ಸಿಂಹ
ಮಾರ್ಚ	೧೨	ಶುಕ್ರವಾರ	೪೧- ೪	ಮೀನ	ಸಪ್ತಂಬರ	೧೫	ಬುಧವಾರ	೧೨-೧೪	ಕನ್ಯಾ
ಏಪ್ರಿಲ್	೧೨	ಚಂದ್ರವಾರ	೨-೫೭	ಮೇಷ	ಒಕ್ತೋಬರ	೧೫	ಶುಕ್ರವಾರ	೭-೨	ತುಲಾ
ಮೇ	೧೨	ಬುಧವಾರ	೪೯-೧೩	ವೃಷಭ	ನವಂಬರ	೧೪	ಆದಿತ್ಯವಾರ	೩೦-೫೨	ವೃಶ್ಚಿಕ
ಜೂನ್	೧೩	ಆದಿತ್ಯವಾರ	೧೪-೫೧	ಮಿಥುನ	ದಶಂಬರ	೧೪	ಮಂಗಳವಾರ	೭-೫೯	ಧನು

೧೪೪೬ರಲ್ಲಿ ಕುಜಾದಿ ಗ್ರಹಗಳ ರಾಶಿಪ್ರವೇಶಕಾಲಗಳು.

ಗ್ರಹ	ಯಾವ ಸಮಯದಿಂದ		ಯಾವ ಸಮಯದ ವರೆಗೆ					ಎಲ್ಲಿ
	ತಿಂಗಳು	ತಾ.	ತಿಂಗಳು	ತಾ.	ಹೊತ್ತು	ಘ.	ನಿ.	
Mars ಕುಜನಿಂದ ♂	ಜನವರಿ	೧	ಜನವರಿ	೨	ಹಗಲು	೧೨	೨	ಸಿಂಹದಲ್ಲಿ
	"	೨	ಫೆಬ್ರುವರಿ	೧೬	ರಾತ್ರಿ	೧೧	೫೪	ಕನ್ಯಾ
	ಫೆಬ್ರುವರಿ	೧೬	ಜೂನ್	೧೫	ಸಾಯಂಕಾಲ	೬	೨೪	ಸಿಂಹದಲ್ಲಿ ವಕ್ರ
	ಜೂನ್	೧೫	ಅಗೊಸ್ತು	೯	"	೬	೫	ಕನ್ಯಾ
	ಅಗೊಸ್ತು	೧೯	ಸಪ್ತಂಬರ	೨೪	ಹಗಲು	೨	೨೩	ತುಲಾ
	ಸಪ್ತಂಬರ	೨೪	ನವಂಬರ	೫	ಪ್ರಾತಃಕಾಲ	೫	೩೪	ವೃಶ್ಚಿಕ
	ನವಂಬರ	೫	ದಶಂಬರ	೧೪	ಹಗಲು	೧೧	೪೪	ಧನು
	ದಶಂಬರ	೧೪	"	೩೧	ವರೆಗೆ			ಮಕರ
Mercury ಬುಧನಿಂದ ☿	ಜನವರಿ	೧	ಜನವರಿ	೨೯	ಹಗಲು	೨	೧೦	ಧನುವಿನಲ್ಲಿ
	"	೨೯	ಫೆಬ್ರುವರಿ	೧೩	ಪ್ರಾತಃಕಾಲ	೫	೪	ಮಕರ
	ಫೆಬ್ರುವರಿ	೧೩	ಮಾರ್ಚಿ	೫	"	೩	೧೧	ಕುಂಭ
	ಮಾರ್ಚಿ	೫	"	೨೪	ರಾತ್ರಿ	೧೧	೩೭	ಮೀನ
	"	೨೪	ಏಪ್ರಿಲ್	೫	ಪ್ರಾತಃಕಾಲ	೪	೨೯	ಮೇಷ
	ಏಪ್ರಿಲ್	೫	ಮೇ	೯	"	೫	೩೫	ಮೀನದಲ್ಲಿ ವಕ್ರ
	ಮೇ	೯	"	೨೯	"	೧೦	೩೩	ಮೇಷ
	"	೨೯	ಜೂನ್	೧೨	ರಾತ್ರಿ	೬	೩೪	ವೃಷಭ
	ಜೂನ್	೧೨	"	೨೩	ಪ್ರಾತಃಕಾಲ	೧೦	೫೫	ಮಿಥುನ
	"	೨೩	ಜುಲಾಯಿ	೧೪	"	೬	೩೩	ಕರ್ಕಾಟಕ
	ಜುಲಾಯಿ	೧೪	ಅಗೊಸ್ತು	೧೩	ರಾತ್ರಿ	೧೨	೫೦	ಸಿಂಹ
	ಅಗೊಸ್ತು	೧೩	ಸಪ್ತಂಬರ	೧	ರಾತ್ರಿ	೧೨	೩	ಕರ್ಕಾಟಕ ವಕ್ರ
	ಸಪ್ತಂಬರ	೧	"	೨೧	ಬೆಳಿಗ್ಯೆ	೬	೩	ಸಿಂಹ
	"	೨೧	ಒಕ್ತೋಬರ	೯	"	೯	೪೮	ಕನ್ಯಾ
	ಒಕ್ತೋಬರ	೯	"	೨೩	ರಾತ್ರಿ	೧೦	೫೮	ತುಲಾ
	"	೨೩	ದಶಂಬರ	೩೧	ವರೆಗೆ			ವೃಶ್ಚಿಕ
Jupiter ಗುರುನಿಂದ ♃	ಜನವರಿ	೧	ನವಂಬರ	೫	ರಾತ್ರಿ	೧೧	೨೨	ಕನ್ಯೆಯಲ್ಲಿ
	ನವಂಬರ	೫	ದಶಂಬರ	೩೧	ವರೆಗೆ			ತುಲಾ
Venus ಭಾರ್ಗವನಿಂದ ♀	ಜನವರಿ	೧	ಏಪ್ರಿಲ್	೨೯	ರಾತ್ರಿ	೬	೫೬	ಕುಂಭದಲ್ಲಿ
	ಏಪ್ರಿಲ್	೨೯	ಮೇ	೨೭	"	೬	೨೩	ಮೀನ
	ಮೇ	೨೭	ಜೂನ್	೨೩	ಹಗಲು	೧	೨೧	ಮೇಷ
	ಜೂನ್	೨೩	ಜುಲಾಯಿ	೧೯	ಬೆಳಿಗ್ಯೆ	೬	೨೩	ವೃಷಭ
	ಜುಲಾಯಿ	೧೯	ಅಗೊಸ್ತು	೧೩	ಹಗಲು	೧೨	೧೦	ಮಿಥುನ
	ಅಗೊಸ್ತು	೧೩	ಸಪ್ತಂಬರ	೭	ಪ್ರಾತಃಕಾಲ	೪	೨೦	ಕರ್ಕಾಟಕ
	ಸಪ್ತಂಬರ	೭	ಒಕ್ತೋಬರ	೧	ಹಗಲು	೧೧	೯೯	ಸಿಂಹ
	ಒಕ್ತೋಬರ	೧	"	೨೫	"	೧೨	೨	ಕನ್ಯಾ
	"	೨೫	ನವಂಬರ	೧೯	"	೯	೪೯	ತುಲಾ
	ನವಂಬರ	೧೯	ದಶಂಬರ	೧೨	ಪ್ರಾತಃಕಾಲ	೬	೬	ವೃಶ್ಚಿಕ
	ದಶಂಬರ	೧೨	"	೩೧	ವರೆಗೆ			ಧನು
Saturn ಶನಿನಿಂದ ♄	ಜನವರಿ	೧	ಒಕ್ತೋಬರ	೧೪	ಪ್ರಾತಃಕಾಲ	೬	೫೧	ಮಿಥುನದಲ್ಲಿ
	ಒಕ್ತೋಬರ	೧೪	ನವಂಬರ	೨೪	ಸಾಯಂಕಾಲ	೪	೫೦	ಕರ್ಕಾಟಕ
	ನವಂಬರ	೨೪	ದಶಂಬರ	೩೧	ವರೆಗೆ			ಮಿಥುನ ವಕ್ರ
Moon's ascending node ಪಾತನಿಂದ ☊	ಜನವರಿ	೧	ದಶಂಬರ	೩೧	ವರೆಗೆ	ಸದಾ		ಸಿಂಹದಲ್ಲಿ

೧೯೪೬ನೇ ಇಸವಿಯಲ್ಲಿ ಸಂಭವಿಸುವ

ಗ್ರಹಣಗಳು.

ಈ ವರ್ಷದಲ್ಲಿ ಸೂರ್ಯಗ್ರಹಣಗಳು ಮಾತ್ರ ಎರಡು ಅವೆ. ಮಂಗಳೂರಿಗೆ ತೋರುವ ಗ್ರಹಣವಿಲ್ಲ.

I. ಮಾರ್ಚಿ ೫ನೆಗೆ ಸೂರ್ಯಕ್ಕೆ ಕಂಕಣಗ್ರಹಣ; ರಾತ್ರಿ ೧೨ ಘಂಟೇ ಮೇಲೆ ೧ ನಿಮಿಷ ಕಳದು ಅದರ ಆರಂಭವು, ತಾರೀಕು ೬ನೇ ಬೆಳಿಗ್ಯೆ ೬ ಘಂಟೆ ೯ ನಿಮಿಷಕ್ಕೆ ಅಂತ್ಯ. ಅಮೇರಿಕ ಔಸ್ತ್ರಾಲ್ಯಗಳಲ್ಲಿಯೂ ಶಾಂತಸಾಗರದಲ್ಲಿಯೂ ಕಾಣುವಂಥಾದ್ದು.

II. ಅಗೊಸ್ತು ೨೯ನೆಗೆ ಸೂರ್ಯಕ್ಕೆ ಪೂರ್ಣಗ್ರಹಣ; ಹಗಲು ೩ ಘಂಟೆ ೧೮ ನಿಮಿಷಕ್ಕೆ ಆರ್ಭಂಭ, ರಾತ್ರಿ ೮ ಘಂಟೆ ೩೨ ನಿಮಿಷಕ್ಕೆ ಅಂತ್ಯ. ಮದಗಸ್ಕರ ದಕ್ಷಿಣ ಅಫ್ರಿಕ ಅಮೇರಿಕ ಇವುಗಳಲ್ಲಿ ದೃಶ್ಯ.

ಕಾಲಮಾನನಿರ್ಣಯ.

೧. ದಿನವನ್ನು ವಿಭಾಗಿಸುವ ರೀತಿ ಹಿಂದು ಜನರಲ್ಲಿ ಬೇರೆ, ವಿಲಾಯಿತಿಯವರಲ್ಲಿ ಬೇರೆ; ಹ್ಯಾಗಂದರೆ:

ಹಿಂದು ರೀತಿ:		ವಿಲಾಯಿತಿ ರೀತಿ:	
೧ ದಿನಕ್ಕೆ	೬೦ ಘಳಿಗೆ	೧ ದಿನಕ್ಕೆ	೨೪ ತಾಸು (ಹೋರ)
೧ ಘಳಿಗೆಗೆ	೬೦ ವಿಘಳಿಗೆ	೧ ತಾಸಿಗೆ	೬೦ ಮಿನಿಟು (ನಿಮಿಷ)
೧ ವಿಘಳಿಗೆಗೆ	೬ ಪ್ರಾಣ	೧ ಮಿನಿಟಿಗೆ	೬೦ ಸೆಕೆಂದ (ಕ್ಷಣ)

ಈ ಪ್ರಕಾರ ೧ ತಾಸಿಗೆ ೨½ ಘಳಿಗೆ
೧ ಘಳಿಗೆಗೆ ೨೪ ಮಿನಿಟು
೧ ವಿಘಳಿಗೆಗೆ ೨೪ ಸೆಕೆಂದ
೧ ಪ್ರಾಣಕ್ಕೆ ೪ ಸೆಕೆಂದ ಸಮವಾಗಿವೆ.

೨. **ದಿನಮಾನ.** ಸೂರ್ಯವು ಒಂದು ಸ್ಥಳದ ಮಧ್ಯಾನ್ಹರೇಖೆ ದಾಟಿ, ತಿರಿಗಿ ಅಲ್ಲಿಗೆ ಬರುವಷ್ಟು ಕಾಲಕ್ಕೆ "ಸೌರದಿನ" ಅನ್ನುವರು. ಒಂದು ಸೂರ್ಯೋದಯ-ಹಿಡಿದು ಮತ್ತೊಂದು ಸೂರ್ಯೋದಯ ಪರ್ಯಂತರ "ಸಾವನದಿನ"ವೆಂದೆನ್ನಿಸುವದು. ವಿಲಾಯಿತಿಯವರು ಮಧ್ಯರಾತ್ರಿ ೧೨ ಘಂಟೆಯಿಂದ ಪುನಃ ಮಧ್ಯರಾತ್ರಿ ೨೪ ಘಂಟೇ ವರೆಗೆ ಒಂದು ದಿನವೆಂದೆಣಿಸುತ್ತಾರೆ.

೩. **ಮಾಸಮಾನ.** ಚಂದ್ರವು ಒಂದು ಅಮಾವಾಸ್ಯೆಯಿಂದ ಮತ್ತೊಂದು ಅಮಾವಾಸ್ಯೆಯ ತನಕ ಪೃಥ್ವಿಯ ಸುತ್ತಲು ಒಂದು ಪ್ರದಕ್ಷಿಣ ಮಾಡುವದಕ್ಕೆ ಹಿಡಿಯುವ ಕಾಲವು "ಚಾಂದ್ರಮಾಸ"ವೆಂದು ವರ್ತಿಸುವದು. ಆದರೆ ಪೃಥ್ವಿಯು ಮಾಡುವ ಸೂರ್ಯಪ್ರದಕ್ಷಿಣದ ಫಲದಿಂದ ಸೂರ್ಯವು ದ್ವಾದಶರಾಶಿಗಳಲ್ಲಿ ಒಂದನ್ನು ಸಂಕ್ರಮಿಸಿ ಮತ್ತೊಂದಕ್ಕೆ ಹೋಗುವದಕ್ಕೆ ಬೇಕಾದ ಕಾಲವು "ಸೌರಮಾಸ"ವೆಂದೆನ್ನಿಸುವದು.

೪. **ಸಂವತ್ಸರಮಾನ.** ಪೃಥ್ವಿಯು ತನ್ನ ಕಕ್ಷದಲ್ಲಿ ಸೂರ್ಯದ ಸುತ್ತಲು ಒಂದು ಪ್ರದಕ್ಷಿಣ ಮಾಡುವದಕ್ಕೆ ೩೬೫ ದಿನ, ೬ ತಾಸು, ೯೮ ಮಿನಿಟು, ೪೮ ಸೆಕೆಂದ (ಅಂದರೆ ೩೬೫ ದಿನ, ೧೪ ಘಳಿಗೆ, ೩೨ ವಿಘಳಿಗೆ) ಹಿಡಿಯುವದು.

೫. **ಅಯನಗಳು.** ಸೂರ್ಯನು ಮಕರನಿಂದ ಮಿಥುನಾಂತ್ಯ ವರೆಗೆ ಉತ್ತರಕ್ಕೆ ಗಮಿಸುವದರಿಂದ ಉತ್ತರಾಯಣವೆಂದೂ ಕರ್ಕಾಟಕದಿಂದ ಧನು ಅಂತ್ಯ ವರೆಗೆ ದಕ್ಷಿಣಕ್ಕೆ ಗಮಿಸುವದರಿಂದ ದಕ್ಷಿಣಾಯನವೆಂದೂ ಹೇಳುತ್ತಾರೆ.

ವರ್ತಮಾನ ಸಂಗ್ರಹ.

"ನಾವು ಸಕಲ ಭಕ್ತಿಯಿಂದಲೂ, ಮರ್ಯಾದೆಯಿಂದಲೂ, ಶಾಂತವಾಗಿಯೂ, ಸಮಾಧಾನವಾಗಿಯೂ ಕಾಲಕ್ಷೇಪ ಮಾಡುವ ಹಾಗೆ, ಎಲ್ಲಾ ಮನುಷ್ಯರಿಗೋಸ್ಕರವೂ, ಅರಸರಿಗೋಸ್ಕರವೂ, ಅಧಿಕಾರದಲ್ಲಿರುವವರೆಲ್ಲರಿಗೋಸ್ಕರವೂ, ಎಲ್ಲಾದಕ್ಕೆ ಮೊದಲು ಬಿನ್ನಹ ಪ್ರಾರ್ಥನೆ ವಿಜ್ಞಾಪನೆ ಸ್ತೋತ್ರಗಳನ್ನು ಮಾಡ ಬೇಕೆಂದು ಬುದ್ಧಿ ಹೇಳುತ್ತೇನೆ. ಒಬ್ಬೊಬ್ಬ ಮನುಷ್ಯನು ಮೇಲಾಗಿರುವ ಅಧಿಕಾರಕ್ಕೆ ವಿಧೇಯನಾಗಿರಲಿ. ದೇವರಿಂದಲೇ ಹೊರ್ತು ಯಾವ ಅಧಿಕಾರವೂ ಇಲ್ಲಾ; ಇರುವ ಅಧಿಕಾರಗಳು ದೇವರಿಂದ ನೇಮಿಸಲ್ಪಟ್ಟವೆ. ಅಧಿಕಾರವನ್ನು ಎದುರಿಸುವವನು ದೇವರ ನೇಮಕವನ್ನು ಎದುರಿಸುತ್ತಾನೆ; ಎದುರಿಸುವವರು ತಮಗೆ ತಾವೇ ಶಿಕ್ಷೆನಿರ್ಣಯವನ್ನು ಹೊಂದುವರು. ಕೆಟ್ಟದ್ದನ್ನು ಮಾಡಿದರೆ ಭಯ ಪಡು; ಅಧಿಕಾರಸ್ಥನು ಸುಮ್ಮನೆ ಕತ್ತಿಯನ್ನು ಧರಿಸಿಕೊಳ್ಳುವದಿಲ್ಲಾ. ಕೆಟ್ಟದ್ದನ್ನು ನಡಿಸುವವನಿಗೆ ಕೋಪಕ್ಕಾಗಿ ತೀರ್ಪು ಮಾಡುವ ದೇವರ ಸೇವಕನಾಗಿದ್ದಾನೆ. ಅತಿಶ್ರೇಷ್ಠನಾಗಿರುವ ಅರಸನಿಗೂ ಅಕ್ರಮಕಾರರನ್ನು ಶಿಕ್ಷಿಸುವದಕ್ಕೂ ಒಳ್ಳೇದನ್ನು ಮಾಡುವವರನ್ನು ಹೊಗಳುವದಕ್ಕೂ ಅವನಿಂದ ಕಳುಹಿಸಲ್ಪಡುವವರಾದ ಅಧಿಪತಿಗಳಿಗಾದರೂ ಮನುಷ್ಯರ ಅಧಿಕಾರಕ್ಕೆಲ್ಲಾ ಕರ್ತನಿಗೆಂದು ಒಳಗಾಗಿರಿ!" ಪವಿತ್ರಶಾಸ್ತ್ರದಲ್ಲಿರುವ ಈ ಸದ್ವಾಕ್ಯಗಳನ್ನು ಪಂಚಾಂಗ ಓದುವವರೂ ಮನಸ್ಸಿಗೆ ತಂದು, ಆ ಪ್ರಕಾರ ನಡಕೊಳ್ಳುವವರಾಗ ಬೇಕೆಂದು ಅಪೇಕ್ಷಿಸುತ್ತೇವೆ. ದೇವರು ಈ ಹಿಂದು ದೇಶಕ್ಕೆ ನೇಮಿಸಿದ ಈ ದಯಾಳು ಸರಕಾರವನ್ನು ಕಾಪಾಡಿ ಶಾಶ್ವತವಾಗಿ ಉಳಿಸುವವನಾಗ ಬೇಕೆಂದು ಪ್ರಾರ್ಥನೆ ಮಾಡ ತಕ್ಕದ್ದು; ಮತ್ತು ಪ್ರಜೆಗಳ ಹಿತಚಿಂತಕರಾದ ಸರಕಾರದವರೂ ಈ ಸರ್ವೇ ಜನರನ್ನು ನೀತಿನ್ಯಾಯದಲ್ಲಿ ಚನ್ನಾಗಿ ನಡಿಸಿಕೊಂಡು ಹೋಗುವ ಹಾಗೆ ಅವರಿಗೆ ಜ್ಞಾನ ಬುದ್ಧಿ ವಿಪುಲವಾಗಿ ದಯೆಪಾಲಿಸಲೆಂದೂ, ಶತ್ರುಗಳಿಂದಲೂ ದುಸ್ಥಾನರಿಂದಲೂ ರಾಜಕ್ಷೋಭೆಗಳು ಬಾರದೆ, ಶೀಮೆಯಲ್ಲೆಲ್ಲಾ ಸಮಾಧಾನವೂ ಒಳ್ಳೇ ವ್ಯವಸ್ಥೆಯೂ ಉಳಿಯುವಂತೆ ಕಾಪಾಡಲೆಂದೂ ಸ್ವಾಮಿ ದೇವರ ಮುಂದೆ ಸದಾ ಪ್ರಾರ್ಥನೆ ಮಾಡ ಬೇಕು. ಇದು ಪ್ರಜೆಗಳಾಗಿರುವವರ ಧರ್ಮವಾಗಿದೆ. ಇದನ್ನು ಪಂಚಾಂಗ ಓದುವವರ ನೆನಪಿಗೆ ತಂದು ಲೋಕವರ್ತಮಾನಸಂಗ್ರಹವನ್ನು ಪ್ರಾರಂಭಿಸುತ್ತೇವೆ.

ಉತ್ತರ ಹಿಂದುಸ್ಥಾನ.—ವೈಸರಾಯ ಅಂದರೆ ಉಪರಾಜರಾದ ಮಾರ್ಕ್ವೆಸ್ ಅಫ್ ರಿಪನ್ ಪ್ರಭುಗಳು ತಮ್ಮ ಹುದ್ದೆಯ ಅವಧಿಯನ್ನು ಮುಗಿಸಿ ಇಂಗ್ಲಾಂಡಿಗೆ ಹೋದರು. ರಾಜ್ಯಭಾರವು ಅವರ ಕೈಯಲ್ಲಿರುವಾಗ ಅವರು ಪ್ರಜೆಗಳ ಹಿತಚಿಂತಕರಾಗಿ, ಸರ್ವ ವಿಷಯಗಳಲ್ಲಿಯೂ ಜನರಿಗೆ ಮೇಲು ಆಗುವಂತೆ ಮಾಡಿದವರಾದದರಿಂದ ಜನರಂಜನೆಯನ್ನು ಪಡಕೊಂಡರು. ಈ ದೇಶದ ಜನರಿಗೆ ಅವರ ಕೈಯಿಂದಾದ ಉಪಕಾರಗಳನ್ನು ಒಂದೊಂದಾಗಿ ವಿವರ ಮಾಡುವದಕ್ಕೆ ಇಲ್ಲಿ ಸ್ಥಳವು ಸಾಲದು.

ಪ್ರಜೆಗಳು ಅವರ ಉಪಕಾರಗಳನ್ನು ನೆನವರಿಕೆ ಮಾಡಿ, ಅವರು ಶೀಮೆಗೆ ಹೋಗುವಾಗ ಆಯಾ ದೊಡ್ಡ ಪಟ್ಟಣಗಳ ನಿವಾಸಿಗಳು ಅವರಿಗೆ ಮಾನಪತ್ರಗಳನ್ನು ಓದಿದ್ದಲ್ಲದೆ ಅವರ ಜ್ಞಾಪಕವು ಶಾಶ್ವತವಾಗಿ ಉಳಿಯುವಂತೆ ಯಾವದಾದರೊಂದು ಕೃತ್ಯವು ಆಗ ತಕ್ಕದ್ದೆಂದು ಆಲೋಚನೆ ಮಾಡಿದರು. ಇವರ ಬದಲಿಗೆ ಲಾರ್ಡ್ ಡಫರಿನ್ ಧೊರೆಗಳು ಉಪರಾಜರಾಗಿ ನೇಮಕ ಪಟ್ಟು ಬಂದಿದ್ದಾರೆ. ಚಕ್ರವರ್ತಿನಿಯವರ ಕುಮಾರರಾದ ಡ್ಯೂಕ್ ಅಫ್ ಕನಾಟ ಇವರು ಮಾರಟನಲ್ಲಿರುವ ದಂಡಿಗೆ ದಳವಾಯಿಯಾಗಿ ಬಂದಿದ್ದವರು ಚಕ್ರವರ್ತಿನಿಯವರ ಅಪ್ಪಣೆ ಮೇರೆಗೆ ಇಂಗ್ಲಾಂಡಿಗೆ ತೆರಳಿ ಹೋದರು. ಮುಂಬಾಯಿಯ ಗವರ್ನರ ಸರ್ ಜೇಮ್ಸ್ ಫೆರ್ಗುಸನ್ ಧೊರೆಗಳೂ ಉದ್ಯೋಗದ ಅವಧಿಯನ್ನು ತೀರಿಸಿ ಶೀಮೆಗೆ ಹೋದರು; ಅವರ ಬದಲಿಗೆ ಲಾರ್ಡ್ ರೀ ಪ್ರಭುಗಳು ಗವರ್ನರ ಧೊರೆಗಳ ಸ್ಥಾನಕ್ಕೆ ಬಂದಿದ್ದಾರೆ. ನವೀನ ವೈಸರಾಯ ಧೊರೆಗಳು ರಾಜ್ಯಭಾರ ವಹಿಸಿಕೊಂಡ ಮೇಲೆ ಬಂಗಾಳದಲ್ಲಿ "ಟೆನೆನ್ಸಿ ಬಿಲ್" ಅಂದರೆ ಭೂಮಿಯ ಸಾಗುಸಂತಿನಲ್ಲಿ ಧನಿಒಕ್ಕಲನ್ನು ಸಂಬಂಧಿಸುವ ನವೀನ ಕಾಯಿದೆಯನ್ನು ಜಾಹೀರು ಪಡಿಸಿದರು.—ಕಲ್ಕತದಲ್ಲಿ ಭೂಕಂಪವು ಉಂಟಾಯಿತು. ಭೂಕಂಪದ ಗತಿ ದಕ್ಷಿಣದಿಂದ ಉತ್ತರಕ್ಕೆ ಇತ್ತು. ಕಂಪ ಉಂಟಾಗುವ ಹಿಂದಿನ ರಾತ್ರಿ ಭೂಮಿಯಲ್ಲಿ ಗುಡುಗಿನ ಗರ್ಜನೆಯಂತೆ ಮೊಳಗು ಕೇಳಿತು. ಮಲಗಿದವರು ಮಂಚಗಳಿಂದ ಕೆಳಗೆ ಬಿದ್ದು ಹೋದರು. ಎರಡು ಮೂರು ಮಾಳಿಗೆಗಳ ಮನೆಗಳು ಅಲ್ಲಾಡುವದು ಬಹು ಭಯಂಕರವಾಗಿತ್ತು; ಕೆಲವು ಮನೆಗಳಿಗೆ ಹಾನಿಯಾಯಿತು. ಹೂಗ್ಲಿ ನದಿಯ ನೆಲವು ಮೇಲೆ ಬಂದದ್ದೂ, ಊರಲ್ಲಿರುವ ಕೆರೆ ಕುಂಟೆಗಳ ನೀರು ಕದಲಿದ್ದೂ ಕಾಣ ಬಂತು. ಭೂಕಂಪದ ಪೆಟ್ಟು ಶ್ರೀರಾಮಪುರದಲ್ಲಿಯೂ ಸ್ಪರ್ಶವಾಗಿ, ಹಲವು ಮನೆಗಳು ಕದಲಿ, ಕೆಲವು ಬಿದ್ದು ಹೋದವು. ದಾರ್ಜಿಲಿಂಗ ಎಂಬಲ್ಲಿಯೂ ಇದೇ ಕಂಪ ಅನುಭವವಾಗಿ, ನೆಲದೊಳಗೆ ದೊಡ್ಡ ಬಕಾರ ಬಿದ್ದು ನೀರಿನಿಂದ ತುಂಬಿ ಹೋಯಿತು. ಕಾಶ್ಮೀರ ದೇಶದ ರಾಜಧಾನಿ ಶ್ರೀನಗರದಲ್ಲಿಯೂ ಎಡಬಲದಲ್ಲಿರುವ ಊರುಗಳಲ್ಲಿಯೂ ಭಯಂಕರವಾದ ಭೂಕಂಪವು ಸಂಭವಿಸಿತು; ಮನೆಮಾರು ಆಸ್ತಿಪಾಸ್ತಿ ನಷ್ಟವಾದದ್ದಲ್ಲದೆ ಹೇರಳ ಮನುಷ್ಯರೂ ಪಶುಗಳೂ ಸಹ ಸತ್ತು ಹೋಗುವದಾಯಿತು. ಭೂಕಂಪವು ಒಮ್ಮೆ ಆಗಿ ಹೋದದ್ದಲ್ಲಾ, ಕೆಲವು ದಿವಸಗಳ ವರೆಗೆ ಪದೇ ಪದೇ ಕಂಪಗಳು ಆಗುತ್ತಲೇ ಇದ್ದವು; ಇದು ವಿಚಿತ್ರ ಸಂಗತಿ; ಇಂಥಾದ್ದು ಮೊದಲು ಅಲ್ಲಿ ಸಂಭವಿಸಿದ್ದಿಲ್ಲಾ.—ದಿಲ್ಲಿಯಲ್ಲಿ ರಾಜ್ಯಭಾರ ಮಾಡುತ್ತಿದ್ದ ಮೊಗಲ ಪಾಚ್ಛಾಯರ ವಂಶದಲ್ಲಿ ಕಡೇ ಪುರುಷನು ಜ್ವಾನವಖತ್ ಎಂಬವನು, ೧೮೫೭ನೇ ಇಸವಿಯಲ್ಲಿ ಹಿಂದುಸ್ಥಾನದ ಶಿಪಾಯರು ಮಾಡಿದ ಕಾಟಕಾಯಿ ಅಣಗಿಸಲ್ಪಟ್ಟಂದಿನಿಂದ ಬರ್ಮ ದೇಶದಲ್ಲಿ ಸರಕಾರದ ಬಂದುಕಟ್ಟನಲ್ಲಿದ್ದವನು ತೀರಿಕೊಂಡನು; ಇವನಲ್ಲಿ ಮೊಗಲರಾಜ್ಯಸ್ವರೂಪವು ಸಮಾಪ್ತವಾಯಿತು.—ರಂಗೂನಿನಲ್ಲಿ ಮಳೆಗಾಲ ಪ್ರಾರಂಭವಾಗುವ ಸ್ವಲ್ಪ ಮೊದಲು ಪ್ರಚಂಡ ತುಫಾನು ಬಡಿದು ನೀರಿನ ಮೇಲಿದ್ದ ಹಲವು ನಗಗಳು ಮುಣುಗಿ ಹೋದದ್ದಲ್ಲದೆ ಮನೆಗಳೂ ಮುರಿದು ಬಿದ್ದು ಅನೇಕ ಮನುಷ್ಯರೂ ಸತ್ತು ಹೋದರು.

ದಖಣದಲ್ಲಿ ಕೆಲವು ವರ್ಷಗಳ ಮೊದಲು ದರೋಡೆಕಳ್ಳರ ಅವಾಂತರವು ಹೆಚ್ಚು ಇತ್ತು; ಆದರೆ ಸರಕಾರದವರು ಪ್ರಮುಖರನ್ನು ಹಿಡಿಸಿ ಶಿಕ್ಷಿಸಿದ ಮೇಲೆ

ದರೋಡೆಕಳವಿನ ಸುದ್ದಿ ಇರಲಿಲ್ಲಾ. ಇತ್ತಲಾಗೆ ಮತ್ತೂ ಅವರ ಅವಾಂತರ ತೊಡ ಗುವದಾಯಿತು; ಠಾಣಾ ಎಂಬ ತಾಲೂಕಿನಲ್ಲಿ ಆಯಾ ಹಳ್ಳಿಗಳಿಗೆ ಹೊಕ್ಕು ಹಗಲಿ ನಲ್ಲಿಯೇ ಮನೆಗಳನ್ನು ಲೂಟಾಯಿಸುವದಕ್ಕೆ ಹತ್ತಿದರು; ಆದರೆ ಇದು ಅಲ್ಲಿಂದಲ್ಲಿಗೆ ನಿಲ್ಲಿಸಲಾಯಿತು.--ದಕ್ಷಿಣ ಮಹಾರಾಷ್ಟ್ರದಲ್ಲಿ ದೊಡ್ಡ ಪಟ್ಟಣಗಳೆಲ್ಲಾ ಹೊಗೆಭಂಡಿರಸ್ತೆ ಯಿಂದ ಒಂದಕ್ಕೊಂದು ಕೂಡಿಯವೆ; ಬಳ್ಳಾರಿಯಿಂದ ಹೊಸಪೇಟೆಗೆ ರಸ್ತೆ ಸಿದ್ಧವಾಗಿ ಅಲ್ಲಿಂದ ಧಾರವಾಡಕ್ಕೆ ಮುಟ್ಟಿತು. ಬಳ್ಳಾರಿಯಲ್ಲಿ ಮದ್ರಾಸ ರಸ್ತೆ ಕೂಡುತ್ತದೆ; ಧಾರ ವಾಡಕ್ಕೂ ಬಳ್ಳಾರಿಗೂ ಮಧ್ಯೆ ರಸ್ತೆಯಾಗಿ ಗದಗಿನಲ್ಲಿ ಕೂಡುವದರಿಂದ ಧಾರವಾಡ ದಿಂದ ಮುಂಬಾಯಿಗೂ ಮದ್ರಾಸಿಗೂ ಸುಲಭದಲ್ಲಿ ಪ್ರಯಾಣ ಮಾಡ ಬಹುದು. ಹಿಂದು ದೇಶದಲ್ಲಿ ಹೊಗೆಭಂಡೀ ರಸ್ತೆಗಳಾದದರಿಂದ ವ್ಯಾಪಾರವು ವೃದ್ಧಿ ಪಡುವದ ಲ್ಲದೆ ಜನರೊಳಗೆ ಹೊಕ್ಕುಬಳಿಕೆಯೂ ಉಂಟಾಗಿ ಬಹಳ ಶ್ರೇಯಸ್ಸುಂಟಾಗುವದು; ಮುಖ್ಯತಾ ಕ್ಷಾಮಕಾಲದಲ್ಲಿ ದವಸಧಾನ್ಯ ತೀವ್ರದಲ್ಲಿ ಬೆಯುವದರ ದೆಶೆಯಿಂದ ಹೊಗೆ ಭಂಡಿಗಳ ಪ್ರಯೋಜನವು ಬಹಳವೆಂದು ಕಂಡು ಬರುತ್ತದಷ್ಟೆ.

ದಕ್ಷಿಣ ಹಿಂದುಸ್ಥಾನ.—ಕಳದ ವರುಷ ಕಲ್ಲಿಕೋಟೆಯ ಹತ್ತರ ಮೈಲಾಪುರ ದಲ್ಲಿ ಹನ್ನೆರಡು ಮಂದಿ ಪುಂಡರು ಮಾಪಿಳ್ಳೆಯರು ಕೂಡಿಕೊಂಡು, ಒಂದಾನೊಂದು ವ್ಯಾಜ್ಯ ಸಂಬಂಧವಾಗಿ ದಾವೆ ತೀರಿಸಿಕೊಳ್ಳುವದಕ್ಕೆ ಒಬ್ಬ ಹಿಂದುವಿನ ಮನೆಯೊಳಗೆ ಹೊಕ್ಕು, ಅವನನ್ನು ಕೊಂದು, ಅಲ್ಲಿಂದ ಮೈಲಾಪುರದ ದೇವಸ್ಥಾನದೊಳಗೆ ಹೊಕ್ಕು, ಪೂಜೆಭಟ್ಟನನ್ನು ಕೊಂದು, ಒಳಗೆ ಭದ್ರ ಮಾಡಿಕೊಂಡು ಕೂತರು. ಸರಕಾರದವರು ಕರಿಸಿದರೆ ಹೊರಗೆ ಬಾರದೆ ಕೋವಿ ಹೊಡೆದದರಿಂದ ದಂಡಿನವರನ್ನು ತರಿಸಿ ದೇವ ಸ್ಥಾನದ ಪಾಗಾರವನ್ನು ಕೆಡವಿ ಗುಂಡು ಹೊಡಿಸಿದ್ದಲ್ಲಿ ಆ ಹನ್ನೆರಡೂ ಮಂದಿ ಸತ್ತರು. ಈ ಧಾಂದಲಿಯ ದೆಶೆಯಿಂದ ಸರಕಾರದವರು ಕಲ್ಲಿಕೋಟೆ ವಳ್ಳುವನಾಡು ಏರನಾಡು ಎಂಬ ತಾಲೂಕುಗಳ ಜನರಿಂದ ಸರ್ವೇ ಆಯುಧಗಳನ್ನು ತೆಗಿಸಿದರು. ದಂಡಿನವರ ಸಹಾಯ ತೆಗದು ಅಧಿಕಾರಿಗಳು ಈ ಕೆಲಸ ಮಾಡಿದರು; ೫೦೦೦ ಕತ್ತಿಗಳೂ ಈಟಿಗಳೂ ೬೦೦೦ ಕೋವಿಗಳೂ ಸರಕಾರದವರಿಗೆ ಹಸ್ತಗತವಾದವು. ಇದಾಗಿ ಕೆಲವು ಕಾಲದ ಮೇಲೆ ತಿರೂರು ಎಂಬಲ್ಲಿ ಇನ್ನೊಮ್ಮೆ ಕೆಲವು ಮಾಪಿಳ್ಳೆಯರು ಚಿಕ್ಕ ಧಾಂದಲಿ ಮಾಡಿದರು. ಅಲ್ಲಿಯೂ ಅಲ್ಪವಾದ ನೆವನದ ಮೇಲೆ ದಾವೆ ತೀರಿಸಿಕೊಳ್ಳ ಬೇಕೆಂಬ ಹೇತುವಿನಿಂದ ಮಾಪಿಳ್ಳೆಗಳು ಕೆಲವರನ್ನು ಕೊಂದು, ಒಬ್ಬ ಬ್ರಾಹ್ಮಣನ ಮನೆಯೊಳಗೆ ಹೊಕ್ಕು ಕೂತುಕೊಂಡರು. ಆವಾಗಲೂ ದಂಡಿನವರನ್ನು ತರಿಸಿದ್ದಲ್ಲಿ ಅವರು ಆ ಮನೆಯನ್ನು ಮದ್ದು ಹಾಕಿ ಹಾರಿಸಿ, ಆ ಹದಿಮೂರು ಮಂದಿ ಮಾಪಿಳ್ಳೆ ಯರನ್ನು ಕೊಂದು ಬಿಟ್ಟರು.— ಮೊಹರಮ್ ಸಮಯದಲ್ಲಿ ಹೈದರಾಬಾದಿನಲ್ಲಿಯೂ ಅರಬಿಗಳು ಎರಡಾವರ್ತಿ ಭಯಂಕರವಾದ ದಂಗೆ ಮಾಡಿದರು. ಪೊಲೀಸಿನವರಿಗೂ ಅರಬಿಗಳಿಗೂ ತಕರಾರು ಆಗಿ ಕೆಲವು ಜೀವನಷ್ಟವಾಯಿತು. ಹಾಗೆಯೇ ಉತ್ತರ ದಲ್ಲಿ ಕೆಲವು ಊರುಗಳಲ್ಲಿಯೂ ಮೊಹರಮ್ ಹಬ್ಬದ ಸಮಯದಲ್ಲಿ ಮಾರಾಮಾರಿ ಸಂಭವಿಸಿತಂತೆ. ಈ ಪ್ರಕಾರ ತಂಟೆ ತಕರಾರು ಸಂಭವಿಸುವದು ಮೂರ್ಖತ್ವದ ಲಕ್ಷಣವೇ. ಸುಭಾಷಿತದಲ್ಲಿ ಹೇಳಿರುವದೇನಂದರೆ: ನೂರಾದರೂ ಕೊಟ್ಟು ಏವಾದ ಮಾಡ ಬಾರದೆಂಬದು ಬಲ್ಲವರ ಮತವಾಗಿದೆ; ಆದರೆ ಹೇತುವಿಲ್ಲದೆ ಜಗಳ ಮಾಡು

ವದು ಇದೇ ಮೂರ್ಖನ ಲಕ್ಷಣ. ಸಮಾಧಾನ ಮಾಡುವವರು ಭಾಗ್ಯವಂತರು, ಅವರೇ ದೇವರ ಮಕ್ಕಳೆಂದು ಅನ್ನಿಸಿಕೊಳ್ಳುವರೆಂದು ಯೇಸು ಕ್ರಿಸ್ತನ ವಾಕ್ಯವದೆ.— ತೆಂಕಲಾಗೆ ತಿನ್ನವೆಲ್ಲಿಯಲ್ಲಿಯೂ ಪಾರ್ಶ್ವಾಂತರದ ಊರುಗಳಲ್ಲಿಯೂ ವಾಂತಿಭೇದಿ ಪ್ರಬಲಗೊಂಡಿತ್ತು; ಆದರೂ ಇತರ ಶೀಮೆಗಳಲ್ಲಿ ಹಬ್ಬಿ ಪ್ರಬಲವಾಗಲಿಲ್ಲಾ. ತಂಜಾವೂರಿನಲ್ಲಿ ಪೂರ್ವದ ಮಹಾರಾಷ್ಟ್ರ ವಂಶದ ರಾಜಸ್ವರೂಪದವಳಾದ ರಾಜಕುಮಾರ್ತಿ ಮರಣ ಪಟ್ಟಳು; ಇವಳಲ್ಲಿ ಆ ರಾಜಸ್ವರೂಪವು ಸಮಾಪ್ತವಾಯಿತು.— ಮೈಸೂರ ಶೀಮೆಯಲ್ಲಿಯೂ ಬೆಂಗಳೂರಿನಲ್ಲಿಯೂ ಕೆಲವು ಸಮಯ ನೀರಿಗೆ ತತ್ವಾರವಾಗಿ, ಧಾನ್ಯಕಾಳು ತುಟ್ಟಿಯಾಗುತ್ತಾ ಮುಂದಿನ ಸ್ಥಿತಿ ಭಯಂಕರವಾಗಿ ತೋರುವದಾಯಿತು. ಆದರೂ ದೇವರ ದಯೆಯಿಂದ ತಕ್ಕ ಕಾಲದಲ್ಲಿ ಮಳೆಯಾಗಿ, ಭಯದ ಹೇತು ಪರಿಹಾರವಾಗಿ ಸುಕಾಲ ಬರುವದಾಯಿತು. ಹಿಂದುಸ್ಥಾನದ ಸರಕಾರದ ಅಪ್ಪಣೆಯ್ಕ ಪ್ರಕಾರ ಮೈಸೂರಿನ ರೆಸಿಡೆಂಟ್ ಧೊರೆಗಳು ಮೈಸೂರಿನ ಮಹಾರಾಜರಿಗೆ "ಸ್ಟಾರ್ ಅಫ್ ಇಂಡಿಯಾ" ಎಂಬ ಬಿರುದನ್ನು ಕೊಟ್ಟರು; ಈ ಸಂಬಂಧವಾಗಿ ಪಟ್ಣದಲ್ಲಿ ಉತ್ಸಾಹವೂ ಸಮಾರಂಭವೂ ಉಂಟಾಯಿತು.

ಅಫಘಾನಿಸ್ತಾನ.—ರುಸ್ಯರು ಮಧ್ಯ ಆಸ್ಯದ ಆಯಾ ಶೀಮೆಗಳನ್ನು ಕಟ್ಟಿಕೊಂಡು ಉತ್ತರದಿಂದ ದಕ್ಷಿಣಕ್ಕೆ ಅಫಘಾನಿಸ್ತಾನದ ಸರಹದ್ದಿನ ವರೆಗೆ ಬರುತ್ತಾ ರಾದ್ದರಿಂದ, ಹಾಗೆಯೇ ಬಿಟ್ಟರೆ ಅಫಘಾನಿಸ್ತಾನವನ್ನು ಕಟ್ಟಿಕೊಂಡು ಹಿಂದುಸ್ಥಾನವನ್ನು ವಶ ಮಾಡಿಕೊಳ್ಳುವರೆ ಆಗ್ರಹ ಪಡುವರೆಂದು ನಮ್ಮ ಸರಕಾರದವರು ತಿಳಿದು, ರುಸ್ಯರ ಹುಮ್ಮಸವನ್ನು ತಡಿಯುವದಕ್ಕೆ ಪ್ರಯತ್ನ ಮಾಡುವವರಾದರು. ಅಫಘಾನಿಸ್ತಾನದ ಮತ್ತು ರುಸ್ಯ ರಾಜ್ಯದ ಸರಹದ್ದು ಠರಾಯಿಸುವದು ಅವಶ್ಯವೆಂದು ಉಭಯ ಸರಕಾರಗಳವರು ಒಪ್ಪಿ, ಆ ಕೆಲಸಕ್ಕೆ ಪಂಚಾಯತರನ್ನು ಕಳುಹಿಸಬೇಕೆಂದು ತೀರ್ಮಾನ ಮಾಡಿದರು. ನಮ್ಮ ಸರಕಾರದ ಕಡೆಯಿಂದ ಪಂಚಾಯತರು ಗಡೀ ಸ್ಥಳಕ್ಕೆ ಹೋದರೂ ರುಸ್ಯರು ಬೇಕೆಂದು ಆಯಾ ನೆವನ ಹೇಳಿ, ತಮ್ಮ ಕಡೆ ಪಂಚಾಯತರನ್ನು ಕಳುಹುವರೆ ಕಾಲಹರಣೆ ಮಾಡಿದರು. ರುಸ್ಯರ ಸೈನ್ಯವು ಮುಂದರಿಸುತ್ತಾ ಬರುವದಾಯಿತು. ಸೈನ್ಯ ಹಿಂದಕ್ಕೆ ಕರಿಸಿಕೊಳ್ಳಿರೆಂಬ ಮಾತಿಗೆ ಅವರು ಕಿವಿ ಕೊಡಲಿಲ್ಲಾ. ತನ್ಮಧ್ಯೇ ಅಫಘಾನಿಸ್ತಾನದ ಅಮೀರರು ವೈಸರಾಯ ಧೊರೆಗಳ ಭೇಟಿಗೆ ಬಂದರು; ಅವರಿಗೆ ಯೋಗ್ಯರೀತಿಯಿಂದ ಸಾಭಿಮಾನ ಮಾಡಿದ್ದಾಯಿತು; ಮತ್ತು ಅವರಿಗೂ ವೈಸರಾಯ ಧೊರೆಗಳಿಗೂ ಕೆಲವು ಸಾರಿ ಮಿಲಾಖತು ಆಗಿ, ಸರಕಾರದ ಕಡೆಯಿಂದ ಉಚಿತ ಉಡಿಗೆರೆಗಳೂ ಕೊಡಲಾದವು. ಹೀಗಿರುವಾಗ ಅಫಘಾನಿಸ್ತಾನದ ಉತ್ತರದಲ್ಲಿ ಪೆಂಜದೆ ಎಂಬ ಗಡೀ ಸ್ಥಳದಲ್ಲಿ ಅಫಘಾನಿ ದಂಡಿನವರಿಗೂ ರುಸ್ಯರ ಸೈನ್ಯಕ್ಕೂ ಖಾಡಾಖಾಡಿ ಯುದ್ಧವಾಗಿ, ರುಸ್ಯರು ಬಲುಕಾಯಿಸಿ ಅಫಘಾನಿ ದಂಡನ್ನು ಸಂಹರಿಸಿದರು. ಇದು ದೊಡ್ಡ ಯುದ್ಧಕ್ಕೆ ಮೂಲವಾದೀತೆಂದು ನಮ್ಮ ಸರಕಾರದವರು ತಿಳಿದು, ಯುದ್ಧಕ್ಕಾಗಿ ಯಥೇಷ್ಟ ಸನ್ನಾಹವನ್ನು ಮಾಡಿಸಿ ಯುದ್ಧರಂಗಕ್ಕೆ ಕಳುಹುವದಕ್ಕೆ ಆಯಾ ದಂಡನ್ನು ನೇಮಿಸಿದರು. ಆದರೆ ಉಭಯ ಸರಕಾರಗಳಿಗೆ ಪತ್ರವ್ಯವಹಾರ ನಡೆದು, ತಮ್ಮ ತಮ್ಮೊಳಗೆ ಬಿದ್ದಿರುವ ವಾದವನ್ನು ವಿವೇಕದಿಂದ ತೀರಿಸ ಬೇಕೆಂದು ಒಪ್ಪಿಕೆಯಾಯಿತು. ಉಭಯ ಸಮ್ಮತಿಯಿಂದ ಪೆಂ

ಜದೆ ಊರನ್ನು ರುಸ್ಯರಿಗೆ ಬಿಟ್ಟದ್ದಾಯಿತು. ಮತ್ತು ಅಲ್ಲಿ ನಡೆದ ಕದನದಲ್ಲಿ ಯಾರು ತಪ್ಪುಗಾರರೆಂಬ ಸಂಗತಿ ಪಂಚಾಯತಿಯಿಂದ ಕಡೆ ಮಾಡುವದೆಂದು ದೆನ್ಮಾರ್ಕ ದೇಶದ ಅರಸನನ್ನು ಮಧ್ಯಸ್ಥರಾಗಿ ಆದುಕೊಂಡದ್ದಾಯಿತು. ರುಸ್ಯರಿಗೂ ಇಂಗ್ಲಿಷರಿಗೂ ಯುದ್ಧಪ್ರಸಂಗ ಒದಗಿದರೆ, ಹಣರೂಪವಾಗಿಯೂ ಸೈನ್ಯರೂಪವಾಗಿಯೂ ನೆರವು ಮಾಡುತ್ತೇವೆಂದು ಅನೇಕ ಹಿಂದುರಾಜರೂ ಮಾಂಡಲಿಕರೂ ಸರಕಾರದವರಿಗೆ ನಂಬಿಗೆ ಭಾಷೆ ಕೊಟ್ಟರು. ಇದರಿಂದ ನಮ್ಮ ಜನರ ಸ್ವಾಮಿಭಕ್ತಿಯು ಕಂಡುಬರುತ್ತದೆ.

ಮಿಸರ ದೇಶದ ತೆಂಕಣ ಶೀಮೆಯಾದ ಸೌದಾನಿನಲ್ಲಿ ಮೆಹದಿ ಎಂದನ್ನಿಸಿಕೊಳ್ಳುವವನ ಅವಾಂತರವನ್ನು ಅಣಗಿಸುವದಕ್ಕೆ, ಮಿಸರ ದೇಶದ ರಾಜನ ಸಮ್ಮತಿಯ ಮೇರೆಗೆ, ಇಂಗ್ಲಿಷರು ಗೊರ್ಡನ ಎಂಬ ಜಗದ್ವಿಖ್ಯಾತ ದಳವಾಯಿಯನ್ನು ಕಳುಹಿಸಿದರೆಂದು ಕಳದ ಸಾರಿ ಹೇಳಿದೆವು. ಈ ಗೊರ್ಡನ ದಳವಾಯಿ ಸೌದಾನಿನಲ್ಲಿರುವ ಖರ್ತೂಮ ಎಂಬ ಪಟ್ಣಕ್ಕೆ ಮುಟ್ಟಿ, ಕೆಲವು ಕದನಗಳಲ್ಲಿ ಮೆಹದಿಯ ಪಕ್ಷದವರನ್ನು ಸೋಲಿಸಿದನು. ಮತ್ತು ತನ್ನ ಸಂಗಡಲಿದ್ದ ಸೈನ್ಯ ಸಾಲದೆ ಹೋದದರಿಂದ ಒತ್ತಾಸೆಗೆ ಸೈನ್ಯ ಕಳುಹಿಸ ಬೇಕೆಂದು ಇಂಗ್ಲಿಷ ಸರಕಾರಕ್ಕೆ ಬರಕೊಂಡು, ಖರ್ತೂಮ ಪಟ್ಣದಲ್ಲಿ ಇರುವವನಾಗಿ, ಬಹು ಸಾಮರ್ಥ್ಯದಿಂದ ಪಟ್ಣವನ್ನು ಶತ್ರುಗಳ ಕೈಯಲ್ಲಿ ಬೀಳದಂತೆ ಕಾವಾಡಿದನು. ಒತ್ತಾಸೆಗೆ ಬರ ತಕ್ಕ ಸೈನ್ಯ ಒರುವದಕ್ಕೆ ವಿಳಂಬವಾಯಿತು. ಕಡೆಗೆ ಇಂಗ್ಲಾಂಡಿನಿಂದ ಕಳುಹಿಸಿದ ಫೌಜು ಖರ್ತೂಮಿಗೆ ಸಮೀಪ ಬರುವಷ್ಟರಲ್ಲಿ ಪಟ್ಣದೊಳಗಿದ್ದ ಅರಬಿಗಳು ಫಿತೂರಿ ಮಾಡಿ, ಮೆಹದಿಗೆ ಅಗಸೆ ಬಾಗಲು ತೆರದು ಕೊಟ್ಟದ್ದರಿಂದ ಶತ್ರುಗಳು ಒಳಹೊಕ್ಕು, ಗೊರ್ಡನನನ್ನು ಇತರರೊಂದಿಗೆ ಸಂಹಾರ ಮಾಡಿ ಬಿಟ್ಟರು. ಇವನ ಮರಣದ ವರ್ತಮಾನ ನಾಲ್ಕು ಕಡೆ ಹಬ್ಬುತ್ತಲೇ ಕೇಳಿದವರೆಲ್ಲರಿಗೂ ಮಹಾ ದುಃಖವಾಯಿತು. ಮೆಹದಿಯನ್ನು ಜಯಿಸುವದಕ್ಕೆ ಹಿಂದುಸ್ಥಾನದಿಂದಲೂ ಸೈನ್ಯ ಕಳುಹಿಸಲಾಯಿತು; ಮತ್ತು ಔಸ್ತ್ರಾಲ್ಯದಿಂದಲೂ ಕೆಲವು ಫೌಜು ನೆರವಿಗಾಗಿ ಸೌದಾನಿಗೆ ಬಂದು ತಲಪಿತು. ಮೆಹದಿಯ ಸಂಗಡ ನಡೆದ ಅನೇಕ ಕಾಳಗಗಳಲ್ಲಿ ಮೆಹದಿಯ ಸೈನ್ಯವು ಪರಾಜಯ ಪಟ್ಟು ಚಾನಾಹಾನಿಯಾಗುತ್ತಾ ಇತ್ತಾದರೂ, ಅವನನ್ನು ಪೂರ್ಣ ಅಣಗಿಸಿ ಆ ಸೌದಾನ ಶೀಮೆಯಲ್ಲಿ ಸ್ವಸ್ಥತೆಯೂ ವ್ಯವಸ್ಥೆಯೂ ಏರ್ಪಡಿಸಲಾಗಲಿಲ್ಲಾ; ಇದು ಸಹ ಬರಬರುತ್ತಾ ಸಾಧಿಸಲಾದೀತೆಂಬದು ಸಂಭಾವ್ಯವಾಗಿದೆ. ಅಷ್ಟರಲ್ಲಿ ಮೆಹದಿ ಸತ್ತು ಹೋದನು, ಮಿಸರ ದೇಶವು ಇಸ್ತಂಬೂಲಿನ ಸುಲ್ತಾನರ ರಾಜ್ಯವಾಗಿರುವದರಿಂದ ದಂಗೆಯನ್ನು ಮುರಿಯುವದು ಸುಲ್ತಾನರ ಕೆಲಸವಾಗಿತ್ತು. ಸುಲ್ತಾನರಿಗೆ ಅನಾನುಕೂಲವಾದದರಿಂದ ಇಂಗ್ಲಿಷ ಸರಕಾರದವರು ಅದಕ್ಕೆ ಕೈ ಹಾಕುವದು ಅವಶ್ಯ ಬಿತ್ತು.

ಅನ್ನಮ ಅಥವಾ ತೊಂಕ್ವಿನ ಎಂಬ ಶೀಮೆಯಲ್ಲಿರುವ ಲಾಂಗ್ಸನ್ ಎಂಬ ಊರನ್ನು ಫ್ರೆಂಚರು ವಶ ಮಾಡಿಕೊಳ್ಳುವದಕ್ಕೆ ಹೋದಾಗ ಚೀನಿಯರು ಶೀಮೆ ತಮ್ಮದೆಂದು ಹೇಳಿ ಕಾಳಗಕ್ಕೆ ಬಂದರೆಂದು ಕಳದ ಸಾರಿ ಹೇಳಿದೆವು. ಕಾಳಗದ ದೆಶೆಯಿಂದ ತಮಗೆ ನಷ್ಟವಾದದ್ದಕ್ಕೆ ಖಂಡಣೆ ಹಣ ಕೊಡ ಬೇಕೆಂದು ಫ್ರೆಂಚರು ಕೇಳಿದ್ದಕ್ಕೆ ಚೀನಿಯರು ಒಪ್ಪದೆ ಹೋಗಲಾಗಿ, ಫ್ರೆಂಚ ಸರಕಾರದ ಅಪ್ಪಣೆಯ ಮೇರೆಗೆ ಚೀನಿ ಸಮುದ್ರದಲ್ಲಿರುವ ಫ್ರೆಂಚ ಯುದ್ಧನಾವೆಗಳ ಅಧಿಪತಿಯು ಫೊರ್ಮೊಸಾ ದ್ವೀಪದ ಮೇಲೆ ಕೆಲುಂಗ

ಎಂಬ ಬಂದರಿನ ಮೇಲೆ ಗುಂಡು ಹಾರಿಸಿ ಬಹಳ ಹಾವಳಿ ಮಾಡಿದನು. ಚೀನಿ ಶಿಪಾಯರು ಫ್ರೆಂಚರ ಶೌರ್ಯಕ್ಕೆ ಈಡಾಗದೆ ಹೋದರು. ಹೀಗೆ ಎರಡು ರಾಜ್ಯಗಳ ವರಿಗೆ ಬಹಿರಂಗಯುದ್ಧವಾದೀತೆಂದು ತೋರಿತು. ಅಷ್ಟರಲ್ಲಿ ಚೀನಿ ದಂಡಿನವರು ಕವಾತಿನಲ್ಲಿ ಪ್ರವೀಣರಾಗಿ, ಲಾಂಗ್ಸನಿನಲ್ಲಿ ಫ್ರೆಂಚರ ಮೇಲೆ ಯುದ್ಧ ಕೊಟ್ಟು ಅವರನ್ನು ಹಿಮ್ಮೆಟ್ಟಿಸಿದರು; ಮತ್ತು ಆ ಊರಿನ ಹವೆಯೂ ಫ್ರೆಂಚ ಶಿಪಾಯರಿಗೆ ಸಂಕಟಕ್ಕೆ ಕಾರಣವಾಗಿ, ಫ್ರೆಂಚರು ಸಂಧಾನಕ್ಕೆ ಒಪ್ಪಿ, ಕೌಲು ಕರಾರು ಆಗಿ, ಫೊರ್ಮೊಸಾ ದ್ವೀಪವನ್ನು ಫ್ರೆಂಚರು ಬಿಟ್ಟರು; ಲಾಂಗ್ಸನನ್ನು ಚೀನಿಯರು ಕೊಟ್ಟರು. ಫ್ರೆಂಚ ಸೈನ್ಯಾಧಿಪತಿ ಯುದ್ಧದಲ್ಲಿ ಶಿಕ್ಕಿದ ಚೀನಿ ಶಿಪಾಯರ ಮೇಲೆ ಗುಂಡು ಹೊಡಿಸಿದನು; ಇದು ಯುದ್ಧಧರ್ಮಕ್ಕೆ ವಿರೋಧವಾಗಿದೆ. ಫೊರ್ಮೊಸದಲ್ಲಿರುವ ದೇಶೀಯ ಕ್ರೈಸ್ತರಿಗೂ ಫ್ರೆಂಚರು ಉಪದ್ರವ ಮಾಡಿದರಂತೆ.

ಜಾವಾ ದ್ವೀಪದಲ್ಲಿ ಪುನಹಾ ಜ್ವಾಲಾಮುಖಿಯ ಉತ್ಪಾತವು ಸಂಭವಿಸಿತು; ಅತ್ಯುನ್ನತವಾದ ಒಂದು ಪರ್ವತದ ಶಿಖರವು ಬೂದಿಯನ್ನು ಕಾರಿದನಂತರ ಕೆಲವು ದಿನಗಳಲ್ಲಿ ಲಾವಾ ಎಂಬುವ ಅಗ್ನಿವಾಹಕ ಶಿಲೆಯೂ ಕೆಸರೂ ಹೊರಗೆ ಬಂತು. ಪರ್ವತದ ಮಗ್ಗುಲಲ್ಲಿದ್ದ ಕೆಲವು ಕಾಫಿ ತೋಟಗಳ ಮೇಲೆ ಬೂದಿ ಹಾರಿ ಮರಮಟ್ಟು ಹಾಳಾಗಿ, ಒಂದು ತೋಟ ಲಾವಾ ಹೊಳೆಯಿಂದ ನಾಶನವಾಯಿತು.

ಜಾಪಾನ ದೇಶದವರು ಇತ್ತಲಾಗೆ ಕೆಲವು ವರ್ಷಗಳಿಂದ ವಿದ್ಯೆಯಲ್ಲಿ ನಾಗರಿಕತ್ವದಲ್ಲಿ ಬಹುಶಾ ಮುಂದರಿಸುತ್ತಾ ಬಂದಿದ್ದಾರೆ. ಅಮೇರಿಕದಿಂದಲೂ ಯುರೋಪಿನಿಂದಲೂ ಪಂಡಿತರನ್ನು ತರಿಸಿ ಶಾಲೆಗಳಲ್ಲಿ ಉಪಾಧ್ಯಾಯರಾಗಿ ಇರಿಸಿ, ವಿದ್ಯೆಯನ್ನೂ ನಾನಾ ಕಲಾಕೌಶಲ್ಯಗಳನ್ನೂ ಅಭಿವೃದ್ಧಿ ಮಾಡುತ್ತಾರೆ. ಕ್ರೈಸ್ತಧರ್ಮವೂ ಅಲ್ಲಿ ಹೆಚ್ಚೆಚ್ಚು ಪ್ರಬಲವಾಗುತ್ತದೆ; ಹೇರಳ ಜನರು ಹಳೇ ಮತವನ್ನು ಪರಿತ್ಯಾಗ ಮಾಡಿ ಕ್ರಿಸ್ತನ ಶಿಷ್ಯರಾಗುತ್ತಾರೆ.

ಇಂಗ್ಲಾಂಡಿನಲ್ಲಿ ಈ ವರೆಗೆ ರಾಜ್ಯಭಾರವನ್ನು ನಡಿಸಿದ ಪ್ರಧಾನಮಂತ್ರಿ ಗ್ಲಾಡ್‌ಸ್ಟನ್ ಧೊರೆ ಉದ್ಯೋಗಕ್ಕೆ ರಾಜಿನಾಮೆ ಕೊಟ್ಟರು. ಪ್ರಧಾನಮಂತ್ರಿ ರಾಜಿನಾಮೆ ಕೊಡುವಾಗ ಅವರ ಸಂಗಡಲಿರುವ ಸಹಮಂತ್ರಿಗಳು ಕೂಡಾ ಕೊಡ ಬೇಕಾಗುತ್ತದೆ. ಚಕ್ರವರ್ತಿನಿಯವರು ಅವರ ರಾಜಿನಾಮೆ ತೆಗದುಕೊಂಡು, ಲಾರ್ಡ ಸಾಲ್ಸಬರಿ ಪ್ರಭುಗಳನ್ನು ಕರಿಸಿ ಇವರನ್ನು ಆ ಉದ್ಯೋಗಕ್ಕೆ ನೇಮಿಸಲು, ಅವರು ತನ್ನ ಸಹಉದ್ಯೋಗಸ್ಥರಾಗಿ ಪ್ರಧಾನಿಮಂಡಳಿಯನ್ನು ಹೊಸದಾಗಿ ಅದುಕೊಂಡರು. ಅದದರಿಂದ ಈ ವರೆಗೆ ಆಳಿದ ಲಿಬರಲ್ ಪಕ್ಷದವರ ಬದಲಿಗೆ ಕನ್‌ಸರವೇಟಿವ್ ಪಕ್ಷದವರೂ ಮತ್ತೂ ಉದ್ಯೋಗಕ್ಕೆ ಬಂದವರಾದರು. ಲಂಡನಿನಲ್ಲಿ ಇಂಡಿಯನ್ ಮ್ಯುಸಿಯಮ ಎಂಬ ಮನೆಗೆ ಬೆಂಕಿ ತಾಗಿ ಬಹಳ ಒಡವೆ ಹಾಳಾದವು; ಇದರಲ್ಲಿ ಅನೇಕ ಸಾಧನ ದಸ್ತಾವೇಜುಗಳು ಸಂಗ್ರಹವಾಗಿರುತ್ತವೆ; ಆದದರಿಂದ ಭಾರಿ ನಷ್ಟ ಸಂಭವಿಸಿತೆಂಬುವದಕ್ಕೆ ಸಂದೇಹವಿಲ್ಲಾ. ಅದರ ನೆರೆಯಲ್ಲಿಯೇ ಸರ್ವರಾಜ್ಯಗಳ ಪ್ರದರ್ಶನದ ಹವೇಲಿ ಅನೆ; ಅದಕ್ಕೂ ಬೆಂಕಿ ತಾಗಲಿಕ್ಕಿತ್ತು, ಸ್ವಲ್ಪದರಲ್ಲಿ ತಪ್ಪಿತು. ಫೆನ್ಯನರು ಎಂಬ ಐರಿಶ ಜನರು ಮಹಾ ಕೇಡಾಳಿಗಳು ಪಾರ್ಲಿಮೆಂಟ ಸಭೆ ನೆರೆಯುವ ದೊಡ್ಡ ಹವೇಲಿಯನ್ನೂ ಇತರ ದೊಡ್ಡ ದೊಡ್ಡ ಹವೇಲಿಗಳನ್ನೂ ಮದ್ದು ಹಾಕಿ ಹಾರಿಸಿ ಬಿಡುವದಕ್ಕೆ ಪ್ರಯತ್ನ ಮಾ

ಡಿದರು. ಆದರೆ ಅಲ್ಪವಾದ ಕೇಡು ಉಂಟಾದದ್ದಲ್ಲದೆ ಅವರ ಕೆಟ್ಟ ಉದ್ದಿಶ್ಯ ನೆರವೇರಲಿಲ್ಲಾ. ಈ ಖೂಳರ ಪತ್ತೆ ಹಚ್ಚಿ ಕೆಲವರನ್ನು ಹಿಡಿದರು; ಅವರ ಮುಖ್ಯ ಕೂಟವು ಅಮೇರಿಕದಲ್ಲಿ ಉಂಟು; ಇದನ್ನು ಮುರಿಯ ಬೇಕೆಂದು ಅಮೇರಿಕದ ಸರಕಾರದವರು ಯೋಚಿಸುತ್ತಾರೆ. ಅರಸರನ್ನೂ ಶ್ರೀಮಂತರನ್ನೂ ಪ್ರಭುಗಳನ್ನೂ ಧ್ವಂಸ ಮಾಡ ಬೇಕೆಂಬದೇ ಈ ಫೆನ್ಯನರೆಂಬ ದುರುಳರ ಮುಖ್ಯ ಹೇತು. ಇದನ್ನು ನೆರವೇರಿಸುವ ದಕ್ಕೆ ಅವರು ನಾನಾ ಕುಯುಕ್ತಿ ದುಷ್ಕರ್ಮಗಳನ್ನು ಮಾಡುತ್ತಾರೆ. ಲೋಕದಲ್ಲಿ ದೊಡ್ಡ ಪಟ್ಟಣವಾದ ಲಂಡನನ್ನು ಕುರಿತು ಕೆಲವು ವಿಶೇಷಗಳು ಯಾವವಂದರೆ: ವರ್ಷಂ ಪ್ರತಿ ೨೮ ಮೈಲು ವಿಸ್ತೀರ್ಣವಾದ ಹೊಸ ಬೀದಿ ಮಾಡಲ್ಪಡುತ್ತದೆ; ಪ್ರತಿ ವರ್ಷ ೯೦೦೦ ಮನೆಗಳನ್ನು ಕಟ್ಟುತ್ತಾರೆ; ಈಗಲೇ ೫ ಲಕ್ಷ ಮನೆಗಳು ಕಟ್ಟಿಯಾಗಿವೆ; ದಿನಂ ಪ್ರತಿ ೧೦ ಸಾವಿರ ಪರದೇಶಸ್ಥರು ಪಟ್ಟದೊಳಗೆ ಪ್ರವೇಶಿಸುತ್ತಾರೆ; ೧೨೦,೦೦೦ ಪರದೇ ಶಸ್ಥರು ಪಟ್ಟದಲ್ಲಿ ವಾಸವಾಗಿದ್ದಾರೆ; ೧೯,೦೦೦ ಭಿಕ್ಷುಕರು ಪಟ್ಟವನ್ನು ಕಾಡುತ್ತಾರೆ; ೧೦,೦೦೦ ಪೊಲೀಸಿನವರು ಪಟ್ಟದ ಬಂದೋಬಸ್ತಿಗೆ ಇದ್ದಾರೆ; ೨,೦೦೦ ಪಾದ್ರಿಗಳು ಪ್ರತಿ ಆದಿತ್ಯವಾರ ಪ್ರಸಂಗ ಮಾಡುತ್ತಾರೆ; ೩,೦೦೦ ಕುದುರೆಗಳು ಪ್ರತಿ ಹಪ್ತೆಗೆ ಸಾಯುತ್ತವೆ; ೭ ಲಕ್ಷ ಬೆಕ್ಕುಗಳು ಬೆಳ್ದಿಂಗಳಲ್ಲಿ ಮನೆಗಳ ಮೇಲೆ ಕೂತಿರುತ್ತವೆ.

ಐರ್ಲಾಂಡಿನಲ್ಲಿ ನಾಲ್ಕೈದು ವರ್ಷಗಳ ಮೊದಲು ಬಹಳ ಅವ್ಯವಸ್ಥೆ ಇತ್ತು; ಸರಕಾರದವರು ಕಳುಹಿಸಿದ ಗವರ್ನರ್ ಧೊರೆಯನ್ನು ಕೊಂದರು, ಸರಕಾರ ಉದ್ಯೋಗಸ್ಥರಿಗೂ ತಂಟೆ ಮಾಡಿದರು. ಅಲ್ಲಿಯ ಜನರು ಸರಕಾರದವರಿಂದ ಕೇಳಿದ ಕೆಲವು ಹಕ್ಕು ಅವರಿಗೆ ಕೊಡಿಸಲಾದವು; ಇದರಿಂದಲೂ ಸರಕಾರದವರು ಒಳ್ಳೇ ಬಂದೋಬಸ್ತು ಮಾಡಿದ್ದರಿಂದಲೂ ಶೀಮೆಯಲ್ಲಿ ವ್ಯವಸ್ಥೆಯೂ ಸ್ವಸ್ಥತೆಯೂ ಉಂಟಾಯಿತು. ಇದನ್ನು ಇನ್ನೂ ಸುಧಾರಿಸುವದಕ್ಕೆ ಇತ್ತಲಾಗೆ ಚಕ್ರವರ್ತಿನಿಯವರ ಅಪ್ಪಣೆ ಮೇರೆಗೆ ಪ್ರಿನ್ಸ್ ಅಫ್ ವೇಲ್ಸ್ ಯುವರಾಜರು ಐರ್ಲಾಂಡಿಗೆ ಹೋದರು. ಅವರ ಆಗತ ಸ್ವಾಗತ ಮಾಡ ಬಾರದೆಂದು ಕೆಲ ಕೇಡಾಳಿಗಳು ಅಲ್ಲಲ್ಲಿ ದುರ್ಬೋಧನೆ ಮಾಡಿದರೂ ಅವರ ಸಾಹಸವು ನಡಿಯಲಿಲ್ಲಾ. ಯುವರಾಜರು ಊರಲ್ಲೆಲ್ಲಾ ಸಂಚರಿಸಿ, ರಾಣಿಯವರೊಡನೆ ಬಡವರು ಬಗ್ಗರ ಸ್ಥಿತಿಗತಿಯನ್ನು ಮಹಾನಿಗರ್ವಿತನದಿಂದ ವಿಚಾರಣೆ ಮಾಡಿ, ಜನರ ಮೆಚ್ಚಿಗೆ ಸಂಪಾದಿಸಿಕೊಂಡರು.

ಯುರೋಪಿನ ತೆಂಕಣ ಶೀಮೆಗಳ ಆಯಾ ಊರುಗಳಲ್ಲಿ ವಾಂತಿಭೇದಿ ಬಹಳ ಪ್ರಬಲವಾಯಿತು. ಇತಲಿ ದೇಶದ ನೇಪಲ್ಸ್ ಪಟ್ಟದಲ್ಲಿ ಎಷ್ಟು ಭಯಂಕರವಾಗಿತ್ತಂದರೆ, ಒಂದೇ ದಿನದಲ್ಲಿ ೧೦೦೦ ಜನರಿಗೆ ಹಿಡಿದು ೩೬೫ ಜನರು ಸತ್ತು ಹೋದರು. ಇತಲಿ ದೇಶದ ಅರಸನು ನಿರ್ಭೀತನಾಗಿ ರೋಗಗ್ರಸ್ಥರು ಇರುವಲ್ಲಿಗೆ ಹೋಗಿ, ಅವರ ಸಮಾಚಾರ ತೆಗದುಕೊಂಡು, ಜನರನ್ನು ಬಹಳ ಧೈರ್ಯ ಪಡಿಸಿದನು; ಕಡೆಗೆ ಹಾಗೆ ಮಾಡ ಬಾರದೆಂದು ಮಂತ್ರಿಗಳು ಪದೇ ಪದೇ ಬುದ್ಧಿ ಹೇಳಿದ್ದರಿಂದ ರಾಜಧಾನಿಗೆ ಹೋದನು.—ಸ್ಪೇನ ದೇಶದ ರಾಜಧಾನಿ ಮದ್ರಿದ ಪಟ್ಟದಲ್ಲಿಯೂ ಇನ್ನು ಕೆಲವು ಊರುಗಳಲ್ಲಿಯೂ ಭೂಕಂಪ ಉಂಟಾಗಿ ಹೇರಳ ನಷ್ಟವಾಯಿತು; ಅನೇಕ ಪಟ್ಟಗಳೂ ಊರುಗಳೂ ಹೆಚ್ಚುಕಡಿಮೆ ಹಾಳಾಗಿ ಹೋದವು. ಜನರು ಕಕ್ಕುಬೆಕ್ಕಾಗಿ ಮನೆಮಾರು ಬಿಟ್ಟು ಬೈಲಿನಲ್ಲಿ ಇಳುಕೊಳ್ಳುವವರಾದರು; ಸುಮಾರು ಸಾವಿರ ಒಂ

ದುವರೆ ಸಾವಿರ ಜನರು ಸತ್ತು ಹೋಗಿರ ಬಹುದೆಂದು ಹೇಳುತ್ತಾರೆ. ಇತ್ತಲಾಗೆ ಸ್ಪೇನ ದೇಶದ ಮುಖ್ಯ ಪಟ್ಟಣ ಮದ್ರಿದದಲ್ಲಿ ವಾಂತಿಭೇದಿ ಪ್ರಾರಂಭವಾಗಿ ಬಹು ಜನರು ಸಾಯುತ್ತಾರೆ. ಫ್ರಾನ್ಸ ದೇಶದ ದಕ್ಷಿಣದಲ್ಲಿ ವಾಂತಿಭೇದಿ ಪ್ರಬಲವಾಗಿತ್ತೆಂದು ಕಳದ ಸಾರಿ ಹೇಳಿದೆವು. ಅಲ್ಲಿ ಒಂದು ಪಟ್ಟಣದಲ್ಲಿ ಯೆಹೂದ್ಯರು ಶುಚಿಯನ್ನು ಕುರಿತು ಅನ್ನಪಾನವನ್ನು ಕುರಿತು ಬಹಳ ಜಾಗ್ರತೆ ಮಾಡಿದ ಕಾರಣ ಅವರಲ್ಲಿ ಬಹಳ ಮಂದಿ ಸಾಯಲಿಲ್ಲಾ. ಆದ್ದರಿಂದ ಸಾಂಕ್ರಾಮಿಕ ರೋಗಗಳು ಪ್ರಬಲವಾಗಿರುವಾಗ್ಯೆ ಕ್ಷೇಮಸೂತ್ರಗಳನ್ನು ಕೈಕೊಳ್ಳುವದು ಅಗತ್ಯವೆಂದು ತಿಳಿಯ ಬೇಕು.

ಅಮೇರಿಕ.—ಇತ್ತಲಾಗೆ ಕೆಲವು ವರ್ಷಗಳಲ್ಲಿ ಲೋಕದೊಳಗೆ ಬಹಳ ಹಾವಳಿ ಮಾಡಿದಂಥಾ ಭೂಕಂಪಗಳೂ ಏನೂ ಹಾವಳಿ ಮಾಡದ ಭೂಕಂಪಗಳೂ ಸಂಭವಿಸಿದವು. ಅಮೇರಿಕದ ಯುನೈಟೆಡ್ ಸ್ಟೇಟ್ಸ್ (ಅಂದರೆ ಸಂಯುಕ್ತ ಸಂಸ್ಥಾನಗಳು) ಶೀಮೆಯಲ್ಲಿ ಭೂಕಂಪದ ಸುದ್ದಿ ಇರಲಿಲ್ಲಾ. ಅಲ್ಲಿಯೂ ಭೂಕಂಪ ಉಂಟಾಗಿ ಅನೇಕ ಊರುಗಳಲ್ಲಿ ಸ್ಪರ್ಶವಾಯಿತು. ಭೂಕಂಪವೇನೆಂದು ಅರಿಯದ ಜನರು ಬಹಳ ಭಯ ಪಟ್ಟರು; ಒಬ್ಬನು ಭಯದಿಂದಲೇ ಸತ್ತು ಹೋದನು. ಆದರೆ ಕಂಪದಿಂದ ಎತ್ತರವಾದ ಮನೆಗಳ ಗೋಡೆಗಳು ಘಾಳಿಯಲ್ಲಿ ಎಲೆ ಅಲ್ಲಾಡುವಂತೆ ಅಲ್ಲಾಡಿದ್ದು ಅಲ್ಲದೆ ಜನರಿಗೂ ಮನೆಮಾರಿಗೂ ಹಾನಿಯಾಗಲಿಲ್ಲಾ. ಅಮೇರಿಕದವರು ವಶಿಂಗ್ಟನ ಎಂಬ ಪಟ್ಟಣದಲ್ಲಿ ೫೨೦ ಫೀಟು ಎತ್ತರವಾದ ಒಂದು ಗೋಪುರವನ್ನು ಕಟ್ಟಿ ತೀರಿಸಿದ್ದಾರೆ. ಯುರೋಪಿನಲ್ಲಿ ಕೊಲೊನ ಎಂಬ ಪಟ್ಟಣದಲ್ಲಿರುವ ದೇವಾಲಯದ ಗೋಪುರಕ್ಕಿಂತಲೂ ಇದು ಎತ್ತರವಾಗಿದೆ. ಆದರೆ ಫ್ರೆಂಚರು ಪರಿಸ ಪಟ್ಟಣದಲ್ಲಿ ೧೦೦೦ ಫೀಟು ಎತ್ತರವಾದ ಗೋಪುರ ಕಟ್ಟಲಿಕ್ಕೆ ನಿಶ್ಚಯಿಸಿದ್ದಾರೆಂದು ಕೇಳುತ್ತೇವೆ. ಯುನೈಟೆಡ್ ಸ್ಟೇಟ್ಸ್ ಶೀಮೆಗೆ ಕ್ಲೀವಲಂಡ್ ಎಂಬವರು ಹೊಸ ಅಧಿಪತಿ, ಪ್ರಜೆಗಳಿಂದ ಆರಿಸಲ್ಪಟ್ಟವರು ನೇಮಕವಾಗಿದ್ದಾರೆ. ಆ ರಾಜ್ಯ ಸ್ವತಂತ್ರವಾದಂದಿನಿಂದ ಆಳುತ್ತಾ ಬಂದ ಅಧಿಪತಿಗಳಲ್ಲಿ ಇವರು ಇಪ್ಪತ್ತೆರಡನೆಯವರು. ಉತ್ತರ ಅಮೇರಿಕದಲ್ಲಿ ಇಂಗ್ಲಿಷ ಸ್ವಾಸ್ಥ್ಯವಾಗಿರುವ ಕಾನದಾ ಎಂಬ ಶೀಮೆಯಲ್ಲಿ ಒಬ್ಬ ಪುಂಡುಗಾರನು ಎದ್ದು, ತನಗೆ ಜನರನ್ನು ಕೂಡಿಸಿಕೊಂಡು ಕಾಟಕಾಯಿ ಮಾಡಿದನು; ಆದರೆ ಸರಕಾರದವರು ಅವನನ್ನು ಹಿಡಿಸಿ ದಂಗೆಯನ್ನು ಮುರಿಸಿ ಬಿಟ್ಟರು.—ಅಮೇರಿಕದವರು ಕೈಗಾರಿಕೆ ವಿದ್ಯೆಯಲ್ಲಿ ಎಂಥಾ ಪ್ರವೀಣರು, ಸಾಹಸಿಗಳು ಎಂದು ಕೆಳಗಿನ ಉದಾಹರಣೆಯಿಂದ ತಿಳಿಯ ಬಹುದು. ಜೊರ್ಜಿಯ ಎಂಬ ಊರಿನಲ್ಲಿ ಒಂದು ಕಾರಖಾನೆಯವರು ಬೆಳಿಗ್ಯೆ ಕಾಡಿನಲ್ಲಿ ದೊಡ್ಡ ಮರ ಕಡಿಸಿ, ಅಂದು ಹಗಲಿಗೆ ಅದನ್ನು ಕೊಚ್ಚಿ ಗಂಜಿ ಮಾಡಿಸಿ, ಅದೇ ಬೈಸರಿಗೆ ಅದರಿಂದ ಕಾಗದ ಮಾಡಿ, ರಾತ್ರಿ ಅದೇ ಕಾಗದದ ಮೇಲೆ ವರ್ತಮಾನ ಛಾಪಿಸಿ, ಮಾರಣೆ ದಿನ ಬೆಳಿಗ್ಯೆ ಓದುವವರಿಗೆ ಹಂಚಿದರು. ಇನ್ನೊಂದು ಕಾರಖಾನೆಯವರು ಬೆಳಿಗ್ಯೆ ಗಿಡದಿಂದ ಹತ್ತಿ ಕೊಯಿದು, ಅದೇ ದಿನ ನೂಲು ಮಾಡಿ, ಸಂಜೆಯೊಳಗೆ ಬಟ್ಟೆ ಮಾಡಿ, ರಾತ್ರಿ ಚಿಂಸಿಗನನ್ನು ಕರಿಸಿ ಒಂದು ಜೋಡು ದುಸ್ತು ಮಾಡಿ, ಮಾರಣೆ ದಿನ ಮಾರಾಟಕ್ಕೆ ತಂದರು.

ಶ ರೀ ರ ಚಿ ಕಿ ತ್ಸೆ.

(೧೯೪೫ನೇ ಇಸವಿಯ ಪಂಚಾಂಗದಲ್ಲಿರುವ ವಿವರದಿಂದ ಮುಂದೆ.)

ರೋಗಾದಿಗಳೂ ಇವುಗಳಲ್ಲಿ ಪ್ರಯೋಗವಾಗುವ ಊರೌಷಧಗಳೂ, ಇವುಗಳನ್ನು ಕುರಿತು ನಿಘಂಟುರೂಪವಾದ ಸೂಚನಾಸಾರವು.

ನಿದ್ರೆಗೇಡು Sleeplessness.

ತಲೆವ್ಯಾಧಿಯ ಸಂಬಂಧವಾಗಿ ಉಂಟಾಗುವ ಈ ನಿದ್ರೆಗೇಡಿಗೆ ಸಾಸಿವೆ ಮಜ್ಜನ (೨೪೪[1]) ಮಾಡ ಬೇಕು. ಮತ್ತು ರಾತ್ರೆ ಮಲಗುವಾಗ ಬ್ರೊಮಾಯ್ಡ್ ಒಫ್ ಪೊಟಾಸಿಯಮ್ (Bromide of Potassium) ಎಂಬ ಲವಣ ೨೦ರಿಂದ ೩೦ ಗ್ರೇನ್ ವರೆಗೆ ಒಂದು ವ್ಯಾನ ಗ್ಲಾಸ್ (wine-glass) ನೀರಿನಲ್ಲಿ ಕಲಕಿಸಿ ತಕ್ಕೊಳ್ಳುವದು. ಈ ಪ್ರಕಾರ ಬಿಡದೆ ಕೆಲವು ದಿವಸಗಳ ಯಾ ವಾರಗಳ ವರೆಗೆ ತಕ್ಕೊಳ್ಳುವದರಿಂದ ನಿದ್ರೆಗೆ ಬಹಳ ಗುಣಕರವಾಗಿರುವದು ಮಾತ್ರವಲ್ಲ, ಇತರ ಕಠಿಣ ಅಮಲೌಷಧಗಳಷ್ಟು ಬಾಧಕಕರವೂ ಆಗಿರುವದಿಲ್ಲ. ಹುಣ್ಣು, ವಾತ ಮುಂತಾದವುಗಳ ನೋವಿನ ದೆಶೆಯಿಂದ ನಿದ್ರೆ ಬಾರದ ಪಕ್ಷಕ್ಕೆ, ಅಫೀಮಾಗಲೀ (೬೯[2]), ಉಮ್ಮತ್ತದ ಧೃತಿಯಾಗಲೀ (೧೭೩[3]) ರಾತ್ರೆ ಮಲಗುವಾಗ ತಕ್ಕೊಳ್ಳುವದು.

☞ ಮೇಲಿನ ವಿವರದಲ್ಲಿ ಔಷಧಗಳ ತೂಕವಾಗಲೀ ಅಳತೆಯಾಗಲೀ ಇಂಗ್ಲಿಷ ಹೆಸರಿನಿಂದ ಕೊಟ್ಟಿರುವಲ್ಲಿ ಅವುಗಳ ಒಂದೊಂದು ಈ ಊರಿನ ಯಾವ ತೂಕಕ್ಕೂ ಅಳತೆಗೂ ಸರಿ ಬೀಳುತ್ತದೆಂಬದು ಮುಂದಿನ ಪಟ್ಟಿಯಿಂದ ಗೊತ್ತು ಮಾಡಿಕೊಳ್ಳ ಬಹುದು. ಔಷಧಗಳನ್ನು ತಯಾರು ಮಾಡುವಾಗ ಇದನ್ನು ಸರಿ ನೋಡಿಕೊಳ್ಳ ಬೇಕು.

ತೂಕ:				ಅಳತೆ:		
೧ಗ್ರೇನ್	= ೧ಗುಲ್ಗಂಜಿ	= ೧/೪ ಮಂಜೂಟತೂಕ		೧ ಮಿನಿಮ್	= ೧ ಸಾಧಾರಣ ತಟುಕು*	
೫೦ „	= ೧/೩ ದ್ರಮ್	= ೨ ೧/೩ „		೬೦ „	= ೧ ದ್ರಮ್	= ೧ ಚಾಸೌಟು
೪೫ „	= ೧/೨ „	= ೧ ಪಾವಲಿತೂಕ		೪ ದ್ರಮ್	= ೧/೨ ಔನ್ಸ್	= ೧ ಮೇಜನಸೌಟು
೬೦ „	= ೧ „	= ೧೧/೨ „		೮ „	= ೧ „	= ೨ „
೯೦ „	= ೧೧/೨ „	= ೩/೪ ರೂ. ತೂಕ (ತೊಲೆ)		೧ ಔನ್ಸ್	= ಸುಮಾರು ೧/೩ ಕುಡುತೆ	
೧೮೦ „	= ೩ „	= ೧ „ „		೪ „	= „ „ ೧ „	= ೧/೨ ಸೇರು
೧ ಔನ್ಸ್	= ೮ „	= ಸುಮಾರು ೧/೨ „		೨೦ „	= ೧ ಪ್ಯಾಂಟ್	= ೧/೨ ತೀಸೆ
೨ „	= ೧೬ „	= „ „ ೩ „		೪೦ „	= ೨ „	= ೧ „

* ತಟುಕು ವಿದ್ಯಮಾನಾನುಸಾರವಾಗಿ ಚಿಕ್ಕದು ದೊಡ್ಡದು ಆಗುವದುಂಟು.

ಸಾಧಾರಣ ತರದ ಒಂದು ವ್ಯಾನ್‌ಗ್ಲಾಸ್ = ಒಂದುವರೆ ಔನ್ಸ್.

---

1) ೧೯೪೫ನೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿ ನೋಡು.

2) ೧೯೬೯ನೇ ಇಸವಿಯ ಪಂಚಾಂಗದ ೫೦ನೇ ಪಾನಿನಲ್ಲಿಯೂ ಅದರ ಟಿಪ್ಪಣಿಯಲ್ಲಿಯೂ ನೋಡು.

3) ೧೯೬೩ನೇ ಇಸವಿಯ ಪಂಚಾಂಗದ ೫೪-೫೫ನೇ ಪಾನುಗಳಲ್ಲಿ ನೋಡು.

ಪ್ರಲಾಪಸನ್ನಿ (ವಟ್ಟ) Convulsions in Adults.

(೧೮೭೮ನೇ ಇಸವಿಯ ಪಂಚಾಂಗದ ೪೪—೪೬ನೇ ಪಾನುಗಳಲ್ಲಿ ನೋಡು.)

ಮಕ್ಕಳಿಗೆ ಉಂಟಾಗುವ ಬಾಲಗ್ರಹ (ಮಕ್ಕಳ ಜೇಷ್ಟೆ) ಎಂಬ ರೋಗದಂತೆ ಪ್ರಾಯಪ್ರಬುದ್ಧರಿಗೂ ಆಗುವದುಂಟು. ಇದಕ್ಕೆ ತಣ್ಣೀರಿನ ಧಾರೆ (೫೮[1]), ಮತ್ತು ಕಾಲುಗಳಿಗೂ ಪಾದಗಳಿಗೂ ಸಾಸಿವೇ ಒತ್ತಡ (೬೨[2]), ಇಲ್ಲವೆ ಟರ್ಪೆಂಟಾಯಿನ ಎಣ್ಣೆಯ ಶೇಕ (೨೪[3]) ಕೊಟ್ಟು, ಜಾಫಲದ ಮಾತ್ರೆ (೫೯[4]), ಜಾಫಲದ ಎಣ್ಣೆ (೨೫೯), ಕರಿಜೀರಿಗೆಯ ಚೂರ್ಣ(೬೪[5]), ಇಂಥಾ ವಿರೇಚಕ ಔಷಧ ಕೊಟ್ಟು, ಚನ್ನಾಗಿ ಧೂಡಣೆ ಮಾಡಿಸುವದು. ರೋಗಿಯು ನುಂಗುವಷ್ಟು ಶಕ್ತಿಯಿಲ್ಲದವನಾಗಿದ್ದ ಪಕ್ಷಕ್ಕೆ, ಟರ್ಪೆಂಟಾಯಿನ ಎಣ್ಣೆಯ ಪಿಚಕಾರಿ (೬೩[6]) ಮಲದ್ವಾರದಿಂದ ಪ್ರಯೋಗಿಸ ಬಹುದು. ಈ ಅಪಸ್ಮಾರವು ಅನ್ನಕೋಶದಲ್ಲಿ ವಿಷಪ್ರಯೋಗ ಮುಂತಾದ್ದು ಆದ ದೆಶೆಯಿಂದ ಉಂಟಾಗಿದ್ದರೆ, ಅದಕ್ಕೆ ಬೇರೇನಾದರೂ ಚಿಕಿತ್ಸೆಮಾಡುವದಕ್ಕೆ ಮುಂಚೆ ಸಾಸಿವೆನೀರು (೫೪[7]), ಇಲ್ಲವೆ ಮೈಲತುತ್ತಿನ ನೀರು (೬೪[8]) ಕೊಟ್ಟು, ಪ್ರಥಮತಾ ವಾಂತಿ ಮಾಡಿಸ ಬೇಕು. ಅಪಸ್ಮಾರವು ಒಂದೊಂದು ಸಂಗತಿಯಲ್ಲಿ ವಿಾನಿನ ಎಣ್ಣೆ ಕೊಟ್ಟು ಗುಣವಾದದ್ದುಂಟು. ಅದರ ಸಂಗಡ ಮೈಲತುತ್ತಿನ ಚೂರ್ಣವನ್ನು, ಒಂದು ಸಾರಿಗೆ ಕಾಲು ಗ್ರೆಯಿನ್ ಪ್ರಕಾರ. ದಿನಕ್ಕೆ ಎರಡಾವರ್ತಿಯಾಗಲೀ, ಮೂರಾವರ್ತಿಯಾಗಲೀ ಕೊಡ ಬಹುದು. ಇದಕ್ಕೊಸ್ಕರ ಎರಡು ಗ್ರೆಯಿನ್ ಮೈಲತುತ್ತನ್ನು ಒಂದು ಔನ್ಸ್ ಓಮದ ನೀರಿನಲ್ಲಿ (೧೫೫) ಚನ್ನಾಗಿ ಕಲಕಿಸಿ, ಅದರಿಂದ ಒಂದು ಸಾರಿಗೆ ಚಾಸೌಟನಷ್ಟು ಕೊಡ ಬಹುದು.—ಅದಲ್ಲದೆ ಬೇರೆ ಎಲ್ಲಾ ಚಿಕಿತ್ಸೆಗಳಿಗಿಂತಲೂ ಅತಿ ಉತ್ತಮವಾದ ಔಷಧವು "ಬ್ರೊಮಾಯ್ಡ್ ಒಫ್ ಪೊಟಾಸಿಯಮ್" (Bromide of Potassium) ಎಂಬ ಲವಣವಾಗಿರುತ್ತದೆ. ಇದನ್ನು ಸಾರಿಗೆ ೧೦ ಇಲ್ಲವೆ ೧೫ ಗ್ರೆಯಿನ್ ಪರಿಮಾಣದಲ್ಲಿ ಒಂದು ವ್ಯಾನ್‌ಗ್ಲಾಸಿನಷ್ಟು ನೀರಿನಲ್ಲಿ ಹಾಕಿ ಕಲಕಿಸಿ, ದಿನಕ್ಕೆ ಮೂರು ಸಾರಿ ಕೊಡುವದು. ಈ ಪ್ರಕಾರ ಕೊಡುವದರಿಂದ ರೋಗವು ಈಳಿಗೆಯಾಗದೆ ಇದ್ದ ಪಕ್ಷಕ್ಕೆ, ಆ ಲವಣದ ಪರಿಮಾಣವನ್ನು ಕ್ರಮೇಣವಾಗಿ ಹೆಚ್ಚಿಸುತ್ತಾ, ಇಮ್ಮಡಿ ಮಾಡಿ, ಇಲ್ಲವೆ ಮುಮ್ಮಡಿ ಮಾಡಿ ಕೊಡ ಬಹುದು. ಈ ಔಷಧವೆ ರೋಗದ ಎಷ್ಟು ಪ್ರಾರಂಭಸ್ಥಿತಿಯಲ್ಲಿ ಕೊಡಲಾಗುತ್ತದೋ ಅಷ್ಟು ಅಧಿಕವಾಗಿ ರೋಗ ವಾಶಿಯಾಗುವ ಸಂಭವವಿರುವದು. ಅದಲ್ಲದೆ ಅಪಸ್ಮಾರದ ಉರುಬು ಜೋರಾಗಿ, ಅದು ಪದೇ ಪದೇ ಉಂಟಾಗಿ, ಅದರ ದೆಶೆಯಿಂದಾಗುವ

---

1) ೧೮೭೭ನೇ ಇಸವಿಯ ಪಂಚಾಂಗದ ೨೭-೨೪ನೇ ಪಾನುಗಳಲ್ಲಿ ನೋಡು.
2) ಅದೇ ಪಂಚಾಂಗದ ೨೫ನೇ ಪಾನಿನಲ್ಲಿ ನೋಡು.
3) ೧೮೭೭ನೇ ಇಸವಿಯ ಪಂಚಾಂಗದ ೩೨ನೇ ಪಾನಿನಲ್ಲಿ ನೋಡು.
4) ೧೮೭೭ನೇ ಇಸವಿಯ ಪಂಚಾಂಗದ ೪೪ನೇ ಪಾನಿನಲ್ಲಿಯೂ ಅದರ ಟಪ್ಪಣಿಯಲ್ಲಿಯೂ ನೋಡು.
5) ೧೮೭೯ನೇ ಇಸವಿಯ ಪಂಚಾಂಗದ ೩೭ನೇ ಪಾನಿನಲ್ಲಿ ನೋಡು.
6) ೧೮೭೭ನೇ ಇಸವಿಯ ಪಂಚಾಂಗದಿ ೩೭ನೇ ಪಾನಿನಲ್ಲಿ ನೋಡು.
7) ೧೮೭೮ನೇ ಇಸವಿಯ ಪಂಚಾಂಗದ ೪೭ನೇ ಪಾನಿನಲ್ಲಿ ನೋಡು.
8) ೧೮೭೭ನೇ ಇಸವಿಯ ಪಂಚಾಂಗದ ೪೯ನೇ ಪಾನಿನಲ್ಲಿ ನೋಡು.

ಮೂರ್ಛೆ, ಸಾಧಾರಣ ಸಂಗತಿಯಲ್ಲಿ ರಾತ್ರಿಯಲ್ಲಿ ಮಾತ್ರ ಬರುತ್ತಿರಲಾಗಿ, ಕಠಿಣ ಸ್ಥಿತಿಯಲ್ಲಿ ಹಗಲುಹೊತ್ತಿನಲ್ಲಿ ಸಹ ಬರುವಂಥಾದ್ದಾಗಿದ್ದರೆ, ಸಾಮಾನ್ಯವಾಗಿ ಆ ಲವಣವು ಅಧಿಕ ಪ್ರಯೋಜನಕರವಾಗಿ ಪ್ರವರ್ತಿಸುವದು. ಏವಂಚ ಅದು ಅಪಸ್ಮಾರದ ಚಿಕಿತ್ಸೆಯಲ್ಲಿ ಪ್ರಯೋಜನವುಳ್ಳದ್ದೆಂಬದಕ್ಕೆ ಸಂದೇಹವಿಲ್ಲ; ಆದದರಿಂದ ಆ ರೋಗದಲ್ಲಿ ಕೊಟ್ಟು ಪರೀಕ್ಷಿಸಿ ನೋಡುವದು ಉಚಿತವೇ.

ಮಕ್ಕಳ ಅಪಸ್ಮಾರಕ್ಕೆ ಇದೇ ಪಂಚಾಂಗದ ೪೮-೪೯ನೇ ಪಾನುಗಳಲ್ಲಿಯೂ, ಬಾಳಂತಿಗಳಿಗೆ ಆಗುವ ಪ್ರಸೂತಸನ್ನಿ ಎಂಬ ಅಪಸ್ಮಾರಕ್ಕೆ ೪೪ನೇ ಪಾನಿನಲ್ಲಿಯೂ ಚಿಕಿತ್ಸೆ ಹೇಳಿರುತ್ತದೆ.

೨೫೯[1]. ಶುದ್ಧ ಮಾಡಿದ ಜಾಫಲವನ್ನು ಅರದು, ತೆಗದ ಎಣ್ಣೆಯು ಕಠಿಣ ತರದ ವಿರೇಚಕ ಔಷಧವಾಗಿರುತ್ತದೆ. ಅದರ ಒಂದು ತಟುಕನ್ನು ಇಲ್ಲವೆ ಕಡಿಮೆ ಪರಿಮಾಣವನ್ನು ತೆಗದು, ಒಂದು ರೊಟ್ಟಿ ತುಂಡಿನ ಮೇಲೆಯಾಗಲೀ, ಸಕ್ಕರೆಯಲ್ಲಿಯಾಗಲೀ, ಹಾಕಿ ಕೊಡುವದು. ಒಂದು ತಟುಕು ಸಾಲದಿದ್ದರೆ, ಎರಡು ಯಾ ಮೂರು ತಟುಕು ವರೆಗೆ ಕೊಡ ಬಹುದು. ಅಪಸ್ಮಾರ ಮೂರ್ಛೆ ಮುಂತಾದವುಗಳಲ್ಲಿ ರೋಗಿಯು ನುಂಗಲಿಕ್ಕೆ ಅಶಕ್ತನಾದರೆ, ರವಷ್ಟು ಆ ಎಣ್ಣೆಯನ್ನು ತೆಗದು ನಾಲಿಗೆ ತುದಿಗೆ ಹಚ್ಚಿದರೆ ಸಾಕು. ಏವಂಚ ಅದರ ಪ್ರಯೋಗವನ್ನು ಸಾಧಾರಣವಾಗಿ ಬಹಳ ಜಾಗ್ರತೆಯಿಂದ ಮಾಡ ಬೇಕು, ಮತ್ತು ಪ್ರಾಯಪ್ರಬುದ್ಧರಿಗೆ ಹೊರತು ಮಕ್ಕಳಿಗೆ ಅದನ್ನು ಕೊಡಲೇ ಬಾರದು. ಅದಲ್ಲದೆ ಕೊಡುವಾಗ ಹಾಳಿತವು ಮಿಕ್ಕಿ ಹೋದ ಪಕ್ಷಕ್ಕೆ ವಿಷ ಪ್ರಯೋಗವಾದೀತು.

ಪ್ರಸವವೇಧನೆ Labour.

ಇದರ ಚಿಕಿತ್ಸೆಗೆ ಅನಾವಶ್ಯಕವಾಗಿ ಕೈಹಾಕ ಬಾರದು. ಸಾಧಾರಣವಾದ ಪ್ರಸವವೇಧನೆಗಳಲ್ಲಿ ಪ್ರಕೃತಿ, ತನ್ನಷ್ಟಕ್ಕೆನೆ ಬಿಟ್ಟರೆ, ಅದರ ಕಾರ್ಯವನ್ನು ಸುರಕ್ಷಿತವಾಗಿ ಮಾಡುವದು. ಬುದ್ಧಿಗೇಡಿ ಸೂಲಗಿತ್ತಿಯರು ಅನಾವಶ್ಯಕವಾಗಿ ಕೈಹಾಕೋಣದರಿಂದ ಎಷ್ಟೋ ಹೆರುವ ಹೆಂಗಸರ ಪ್ರಾಣನಷ್ಟವಾದದ್ದುಂಟು. ಹೆರುವ ವೇಧನೆಯು, ಗರ್ಭಕೋಶದ ನಿಶ್ಚೇತನದಿಂದಾಗಲೀ, ದುರ್ಬಲತೆಯಿಂದಾಗಲೀ, ಬಹಳ ದೀರ್ಘವಾದ ಪಕ್ಷಕ್ಕೆ, ಬಿಳಿಗಾರ (೨೦೯[2]) ಕೊಡುವದು. ರಕ್ತಸ್ರಾವ ಉಂಟಾದರೆ, ಕಾಲಹರಣ ಮಾಡದೆ ತಣ್ಣೀರಿನ ಧಾರೆ ಕೊಟ್ಟು (೨೬೦), ತರುವಾಯ ಶಿರ್ಕ (೪[3]) ಬಾಹ್ಯಲೇಪನವಾಗಿ ಪ್ರಯೋಗಿಸುವದು. ಪ್ರಸೂತವಾದ ಮೇಲೆ ಹೋಗ ತಕ್ಕ ನಂಜಿನ ನೀರು (lochia) ಸರಿಯಾಗಿ ಹೋಗದಿದ್ದರೆ, ಇಲ್ಲವೆ ನಿಂತು ಹೋದರೆ, ಬಿಸಿ ನೀರಿನ ಶೇಕ (೧೦೯[4]) ಕೊಡುವದು. ಪ್ರಸೂತವಾದನಂತರ ಉಂಟಾಗುವ ವೇಧನೆಗೆ ಅಫೀ

1) ೧೯೯೫ನೇ ಇಸವಿಯ ಪಂಚಾಂಗದ ೫೬ನೇ ಪಾನಿನಲ್ಲಿ ತೀರಿದ ೨೫ನೇ ಅಂಕೆಯಿಂದ ಮುಂದೆ.

2) ೧೯೯೬ನೇ ಇಸವಿಯ ಪಂಚಾಂಗದ ೨೦೯ನೇ ಪಾನಿನಲ್ಲಿ ನೋಡು.

3) ೧೯೭೬ನೇ ಇಸವಿಯ ವಂಚಾಂಗದ ೨೪ನೇ ಪಾನಿನಲ್ಲಿ ನೋಡು.

4) ೧೯೯೩ನೇ ಇಸವಿಯ ಪಂಚಾಂಗದ ೪೧ನೇ ಪಾನಿನಲ್ಲಿ ನೋಡು.

ಮು (೨೦ಲ[1]) ಕೊಡುವದು. ಬಾಳಂತಿಗಳಿಗೆ ಉಂಟಾಗುವ ಪ್ರಸೂತಸನ್ನಿಯಲ್ಲಿ ಕೈಕಾಲುಗಳ ತುದಿಗಳಿಗೆ ಟರ್ಪೆಂಟಾಯಿನಿನ ಶೀಕ ಇಲ್ಲವೆ ಸಾಸಿವೇ ಒತ್ತಡ (೬೨[2]) ಕೊಟ್ಟು, ತಲೆಗೆ ಶಿರ್ಕದ ನೀರು (೨೨[3]) ಹಾಕುವದು. ಅದಲ್ಲದೆ, ಕರ್ಪೂರ ಮತ್ತು "ಕೆಲೊಮೆಲ್" (calomel) ಇವುಗಳ ಮಾತ್ರೆ (೨೬೧), ಇಲ್ಲವೆ ಬಿಳಿಗಾರ ಮತ್ತು ದಾಲ್ಚೀನಿ ಚೂರ್ಣ (೨[4]) ಹೊಟ್ಟೆಗೆ ಜೀರ್ಣಕರವಾಗಿ ಕೊಡ ಬಹುದು.

೨೬೦. ಪ್ರಸೂತವಾದ ಮೇಲೆ ಉಂಟಾಗುವ ರಕ್ತಸ್ರಾವಕ್ಕೆ ತಣ್ಣೀರಿನ ಧಾರೆಯಷ್ಟು ಗುಣಕರವಾದದ್ದು ಬೇರೊಂದಿಲ್ಲ. ತಣ್ಣೀರನ್ನು ಸಪುರ ಧಾರೆಯಾಗಿ ಸ್ವಲ್ಪ ಜೋರಿನಿಂದ ಕಿರಿಹೊಟ್ಟೆಯ ಮೇಲೆ ಎತ್ತರದಿಂದ ಹೊಯ್ಯ ಬೇಕು. ಅದಲ್ಲದೆ, ನಯವಾದ ಒಂದು ಬಟ್ಟೆಯನ್ನು ಸುತ್ತಿ ಬತ್ತಿಯಂತೆ ಮಾಡಿ, ತಣ್ಣೀರಿನಲ್ಲಿ ಅಗಲೀ, ಶಿರ್ಕ ಬೆರಿಸಿದ ನೀರಿನಲ್ಲಿ ಅಗಲೀ ನೆನಿಸಿ, ಗರ್ಭಕೋಶದ ದ್ವಾರದಲ್ಲಿ ಇಡ ಬೇಕು. ರಕ್ತಸ್ರಾವ ನಿಂತ ತರುವಾಯವೂ ತಣ್ಣೀರು ಇಲ್ಲವೆ ಶಿರ್ಕದ ನೀರಿನ ಪ್ರಯೋಗವು ಸ್ವಲ್ಪ ಸಮಯದ ತನಕ ಮಾಡ ತಕ್ಕದ್ದು.

ಸೂಚನೆ: ಹೆರುವ ಕಾಲದಲ್ಲಿ ಮೇಲೆ ಹೇಳಿದ ತರದ ಅನುಪತ್ಯಕ್ಕೋಸ್ಕರ ಎರಡು ಯಾ ಮೂರು ಕೊಡ ತಣ್ಣೀರನ್ನು ಮುಂಚಿತವಾಗಿ ತಯಾರು ಮಾಡಿಟ್ಟುಕೊಳ್ಳುವದು ಅಗತ್ಯ. ಯಾಕಂದರೆ ನೀರು ತರುವದಕ್ಕೆ ತಡವಾಗಿ, ರಕ್ತಸ್ರಾವವನ್ನು ಬೇಗ ನಿಲ್ಲಿಸದೆ ಇರುವದರಿಂದ, ಬಾಳಾಂತಿಯು ಸಾಯುವದುಂಟು.

೨೬೧. ಪ್ರಸೂತಾಪಸ್ಮಾರದಲ್ಲಿ ಮುಂದೆ ಹೇಳುವ ಮಾತ್ರೆಗಳು ಗುಣಕರವಾದವು: ಕರ್ಪೂರ ೫ ಗ್ರೇನ್, ಕೆಲೊಮೆಲ್ (ರಸಕರ್ಪೂರದ ಧಾತು calomel[5]) ೫ ಗ್ರೇನ್, ಇವೆರಡನ್ನು ಸ್ವಲ್ಪ ಜೇನುತುಪ್ಪದಲ್ಲಿ ಚನ್ನಾಗಿ ಅರದು, ಎಕಡು ಮಾತ್ರೆಗಳಾಗಿ ಮಾಡುವದು. ಇವುಗಳಲ್ಲಿ ಒಂದನ್ನು ಕೊಟ್ಟು, ಒಂದು ತಾಸಿನ ಬಳಿಕ ಹರಳೆಣ್ಣೆಯಾಗಲೀ, ಬೇರೆ ವಿರೇಚಕ ಔಷಧವಾಗಲೀ ಕೊಟ್ಟು ಝಾಡಣೆ ಮಾಡಿಸುವದು.

ಪ್ಲೀಹೋದರ Enlargement of Spleen.

ಗಲಲಂನೇ ಇಸವಿಯ ಪಂಚಾಂಗದ ೩೭—೩೮ನೇ ಪಾನುಗಳಲ್ಲಿ ನೋಡು.

ಬಗುಳುಸನ್ನಿ Epilepsy.

ಇದೇ ಪಂಚಾಂಗದ ೪೨—೪೩ನೇ ಪಾನುಗಳಲ್ಲಿ ನೋಡು.

ಬಲಹೀನತ್ವ Debility, Weakness.

ಗಲಿರ್ನೇ ಇಸವಿಯ ಪಂಚಾಂಗದ ೪೧—೪೨ನೇ ಪಾನುಗಳಲ್ಲಿ ನೋಡು.

---

1) ಗಲಲಂನೇ ಇಸವಿಯ ಪಂಚಾಂಗದ ೫೮ನೇ ಪಾನಿನಲ್ಲಿ ನೋಡು.
2) ಗಲಲಲನೇ ಇಸವಿಯ ಪಂಚಾಂಗದ ೫೫ನೇ ಪಾನಿನಲ್ಲಿ ನೋಡು.
3) ಗಲಲಲನೇ ಇಸವಿಯ ಪಂಚಾಂಗದ ೫೧ನೇ ಪಾನಿನಲ್ಲಿ ನೋಡು.
4) ಅದೇ ಪಂಚಾಂಗದ ೫೪ನೇ ಪಾನಿನಲ್ಲಿ ನೋಡು.
5) ಇದು ಎಲಾಯತಿಯ ಔಷಧಗಳನ್ನು ಮಾರುವ ಅಂಗಡಿಗಳಲ್ಲಿ ದೊರಿಯುವದು.

ಬವಳಿ (ಕಣ್ಣುಕತ್ತಲೆ) Fainting.

೧೮೮೧ನೇ ಇಸವಿಯ ಪಂಚಾಂಗದ ೫೦—೫೧ನೇ ಪಾನುಗಳಲ್ಲಿ ನೋಡು.

ಬಹುಮೂತ್ರ Diabetes.

ಕೊರತೆಯುಳ್ಳ ಶರೀರಧಾತುವಿನಲ್ಲಿ ಆಹಾರವು ಸರಿಯಾಗಿ ಪಚನವಾಗದೆ ಇರುವ ಕಾರಣದಿಂದ ಮೂತ್ರವು ಅತಿರೇಕ ಹೋಗುವದು. ಅದರಲ್ಲಿ ಸೀ ಪರಮಾಣುಗಳು ಹೆಚ್ಚಿ, ಭಾರದಲ್ಲಿ ಮಿತಕ್ಕಿಂತ ಹೆಚ್ಚು ಕಡಿಮೆಯಾಗಿ ವಿಾರುವದು.

ಚಿಕಿತ್ಸೆ: ಪ್ರಾರಂಭ ಸ್ಥಿತಿಯಲ್ಲಿ ಹಬೆಯ ಮಜ್ಜನ (೨೧೭[1]), ಮತ್ತು ಪಟಿಕಾರದ ಮಜ್ಜಿಗೆ (೨೬೨), ಸುಣ್ಣದ ತಿಳೀನೀರು (೧೮೯,೧೯[2]) ಕೊಡುವದು; ಮತ್ತು ರಾತ್ರೆ ಮಲಗುವಾಗ ಅಫೀಮು (೨೬೩) ಕೊಡುವದು; ಇವುಗಳು ರೋಗವನ್ನು ಅಣಗಿಸುವದಕ್ಕೆ ಬಹಳ ಪ್ರಯೋಜನಕರವಾದಾವು. ಇವುಗಳಿಗೆ ಸಹಾಯಕವಾಗಿ ತುಂಬ್ಯಾ ಮಾಂಸ ಆಹಾರ ಕೊಡ ಬೇಕು; ಅನ್ನ ಮುಂತಾದ ಧಾನ್ಯದ ಆಹಾರವನ್ನೂ ಸ್ತ್ರೀಸಂಗವನ್ನೂ ವರ್ಜಿಸ ತಕ್ಕದ್ದು; ಉಡಿಗೆ ತೊಡಿಗೆಗಳು ಬೆಚ್ಚಗೂ ನಿರ್ಮಲವೂ ಆಗಿರಿಸ ಬೇಕು.

೨೬೨. ಮುಂದೆ ಹೇಳುವ ಪಟಿಕಾರದ ಮಜ್ಜಿಗೆ ಎಂಬದು ಸೇವನೆಗೆ ಬಹಳ ಒಳ್ಳೇದು: ೨ ದ್ರವ್ ಪಟಿಕಾರದ ಹುಡಿಯನ್ನು ಒಂದು ಪ್ಯಾಂಟ್ ಹಾಲಿನಲ್ಲಿ ಹಾಕಿ, ೧೦ ನಿಮಿಷಗಳ ವರೆಗೆ ಬೇಯಿಸಿ ಗಾಳಿಸ ಬೇಕು. ಇದರಿಂದ ½—೨ ಔನ್ಸುಗಳಷ್ಟು ದಿನಕ್ಕೆ ಮೂರಾವರ್ತಿ ಕೊಡುವದು. ಜ್ವರ ಇದ್ದ ಪಕ್ಷಕ್ಕೆ, ಅಥವಾ ರೋಗದ ಲಕ್ಷಣಗಳು ಹೆಚ್ಚಾದ ಪಕ್ಷಕ್ಕೆ, ಇದನ್ನು ಕೂಡಲೇ ನಿಲ್ಲಿಸ ಬೇಕು. ಬಹುಮೂತ್ರದಲ್ಲಿ ಈ ಮಜ್ಜಿಗೆಯನ್ನು ಗುಣಕರವಾಗಿ ಪ್ರಯೋಗಿಸ ಬಹುದು. ಇದರಿಂದ ಬಹುಶಾ ಮೂತ್ರದ ಪರಿಮಾಣವು ಕಡಿಮೆ ಆದೀತು.

೨೬೩. ಬಹುಮೂತ್ರವು ಮುಖ್ಯವಾಗಿ ಪ್ರಾಯ ಸಂದವರಿಗೆ ಉಂಟಾದ್ದಲ್ಲಿ, ಅಫೀಮು ಬಹಳ ಗುಣಕರವಾಗಿ ಪ್ರವರ್ತಿಸುತ್ತದೆ. ಅದನ್ನು (೧೮೫೫ನೇ ಅಂಕೆಯಲ್ಲಿ ಹೇಳಿದಂತೆ) ತುಂಬಾ ಪರಿಮಾಣದಲ್ಲಿ ಕೊಡ ತಕ್ಕದ್ದು, ಮತ್ತು ಅದರ ಫಲವನ್ನು ಜಾಗ್ರತೆಯಿಂದ ಕಾದು ನೋಡಿ, ತಲೆವೇಧನೆ ಮುಂತಾದ ಅದರ ದುರ್ಲಕ್ಷಣಗಳು ಕಂಡು ಬಂದ ಪಕ್ಷದಲ್ಲಿ ಈ ಔಷಧದ ಪರಿಮಾಣವನ್ನು ಕಡಿಮೆ ಮಾಡಲೂ ಬಹುದು, ಅದನ್ನು ಪೂರ್ಣ ನಿಲ್ಲಿಸಲೂ ಬಹುದು. ಹ್ಯಾಗೂ ಸಾಧಾರಣವಾಗಿ ಬಹುಮೂತ್ರದ ರೋಗವುಳ್ಳವರು ಅಫೀಮಿಯನ್ನು ವಿಶೇಷ ಪರಿಮಾಣದಲ್ಲಿ ತಕ್ಕೊಂಡರೂ ಬಾಧಕ ಪಡುವದಿಲ್ಲ.

ಬಾಯಿನೋವು (ಹರಿವಾತ ಅಥವಾ ಶ್ರೋಣಿತವಾತ ಸಮ್ಮಂಧವಾದದ್ದು) Tic Douloureux, Face-ache, Neuralgic or Rheumatic.

ಚಿಕಿತ್ಸೆ: ನವಸಾಗರ (೧೩೬[3]), ಅನ್ನಭೇದಿ (೨೬೪), ಇಲ್ಲವೆ ಏಾನಿನ ಎಣ್ಣೆ (೭[4]) ಹೊಟ್ಟೆಯಲ್ಲಿ ಕೊಡುವದು; ಉಮ್ಮತ್ತದ ಒತ್ತಡ (೧೩೭[5]), ಸಾಸಿವೆಯ ಒತ್ತಡ

1) ೧೮೮೪ನೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿ ನೋಡು.
2) ೧೮೭೬ನೇ ಇಸವಿಯ ಪಂಚಾಂಗದ ೭೦ನೇ ಪಾನಿನಲ್ಲಿ ನೋಡು.
3) ೧೮೮೧ನೇ ಇಸವಿಯ ಪಂಚಾಂಗದ ೪೯ನೇ ಪಾನಿನಲ್ಲಿ ನೋಡು.
4) ೧೮೭೬ನೇ ಇಸವಿಯ ಪಂಚಾಂಗದ ೩೬ನೇ ಪಾನಿನಲ್ಲಿ ನೋಡು.
5) ೧೮೮೧ನೇ ಇಸವಿಯ ಪಂಚಾಂಗದ ೪೮—೪೯ನೇ ಪಾನುಗಳಲ್ಲಿ ನೋಡು.

(೬೨[1]), ಇಲ್ಲವೆ ಶುಂಠಿಯ ಲೇಪ (೨೪೭[2]) ಸಹ ನೋವುಳ್ಳ ಜಾಗಕ್ಕೆ ಹಚ್ಚುವದು. ಈ ಹೊರ ಒಳ ಚಿಕಿತ್ಸೆಗಳನ್ನು ಸರಿಯಾಗಿ ಮಾಡುವದರಿಂದ ಬಹುಶಾ ಗುಣವಾಗುವದು. ಈ ರೋಗವು ಕಾಲಾವಧಿಯಾಗಿ ಬರುವಂಥಾದ್ದಾಗಿದ್ದರೆ, ಅಂಥಾ ಸಂಗತಿಯಲ್ಲಿ ಕ್ವಿನಿನಿಗೆ (quinine) ಸರಿಯಾದ ಬೇರೊಂದು ಔಷಧವಿಲ್ಲ. ನೋವು ಬರುವದಕ್ಕೆ ಮುಂಚೆ ಅದನ್ನು ಒಂದು ಗ್ರೇನ್ ಪರಿಮಾಣದಲ್ಲಿ ಒಂದಿಷ್ಟು ದ್ರಾಕ್ಷಾರಸ (wine)ದಲ್ಲಿ ಕಲಕಿಸಿ ಕೊಡುವದು; ಇಲ್ಲವೆ ಅದನ್ನೇ ಬರಿದಾಗಿ, ಸಾರಿಗೆ ೩ ಗ್ರೇನ್ ಪ್ರಕಾರ, ದಿನಕ್ಕೆ ಮೂರಾವರ್ತಿ ಕೊಡುವದು.

೨೬೪. ಹರಿವಾತ ಇಲ್ಲವೆ ಶ್ರೋಣಿತವಾತ ಸಮ್ಬಂಧವಾದ ಬಾಯಿನೋವು ಕಾಲಾವಧಿಯಾಗಿ ಬರುವಂಥಾದ್ದಾಗಿದ್ದು, ರಕ್ತಬಲವಿಲ್ಲದ ಅಶಕ್ತರಿಗೆ ಉಂಟಾದರೆ, ಅವರಿಗೆ ಅನ್ನಭೇದಿ ೨ ಯಾ ೩ ಗ್ರೇನ್ ದಿನಕ್ಕೆ ಮೂರಾವರ್ತಿ ಕೊಟ್ಟಲ್ಲಿ ಒಳ್ಳೇ ಫಲದೋರುವದು. ಅದನ್ನು ಮಾತ್ರೆಯಾಗಿ ದಾಲ್ಚಿನ್ನೀ ಹುಡಿ ಮತ್ತು ಜೇನುತುಪ್ಪದ ಸಂಗಡವಾಗಲೀ, ತೆಳುವಾಗಿ ಕಿರ್ಯಾತಿನ[3] ಇಲ್ಲವೆ ಅಮೃತಬಳ್ಳಿಯ[4] ಕಲ್ಕದ ಸಂಗಡವಾಗಲೀ ಇನ್ನಷ್ಟು ಗುಣಕರವಾಗಿ ಕೊಡ ಬಹುದು.

ಬಾಯಿಹುಣ್ಣು Sore Mouth.

ಇದಕ್ಕೆ ೧೮೬ನೇ ಇಸವಿಯ ಪಂಚಾಂಗದ ೫೦–೫೧ನೇ ಪಾನುಗಳಲ್ಲಿರುವ ಚಿಕಿತ್ಸೆಯನ್ನು ಮಾಡುವದು.

ಬಾಲಗ್ರಹ (ಮಕ್ಕಳ ಅಪಸ್ಮಾರ) Convulsions of Children.

(೧೮೬೭ನೇ ಇಸವಿಯ ಪಂಚಾಂಗದ ೪೪—೪೬ನೇ ಪಾನುಗಳಲ್ಲಿ ಅಪಸ್ಮಾರಕ್ಕೆ ಹೇಳಿದ ಚಿಕಿತ್ಸೆಯನ್ನೂ, ಇದೇ ಪಂಚಾಂಗದ ೪೨—೪೩ನೇ ಪಾನುಗಳಲ್ಲಿ ಹೇಳಿರುವ ಚಿಕಿತ್ಸೆಯನ್ನೂ ಸರಿ ನೋಡು.)

ಚಿಕಿತ್ಸೆ: ಮಕ್ಕಳ ಅಪಸ್ಮಾರದಲ್ಲಿ ಬಿಸಿ ನೀರಿನ ಮಜ್ಜನ ಕೊಟ್ಟು (೨೬೫), ತರುವಾಯ ಹರಳೆಣ್ಣೆ (೧೫೦[5]) ಕೊಡ ಬೇಕು. ಆ ಮೇಲೆ "ಕೆಲೊಮೆಲ್" (calomel[6]) ಎಂಬ ರಸಕರ್ಪೂರದ ಧಾತು ಹತ್ತರವಿದ್ದರೆ, ಅದರ ಒಂದು ಯಾ ಎರಡು ಗ್ರೇನ್ ಅಗಲೀ, ಹಿಂಗಿನ ವಿಶ್ರವಾಗಲೀ, (೧೦೭ನೆಯ ಟಿಪ್ಪಣಿ ೨[7]) ಕೊಡುವದು. ಅದಲ್ಲದೆ, ಅಪಸ್ಮಾರದ ಕಾರಣವೇನೂ ಗೊತ್ತಾಗದ ಸಂಗತಿಯಲ್ಲಿ "ಬ್ರೊಮಾಯ್ಡ್ ಒಫ್ ಪೊಟಾಸಿಯಮ್" (Bromide of Potassium[8]) ಎಂಬ ಲವಣವನ್ನು (೨೬೭) ಕೊಡುವದು. ರೋಗದ ಜೋರಿನಿಂದ ಮಗುವು ಬಹಳ ಬಳಲಿ ಹೋದ ಪಕ್ಷಕ್ಕೆ, ಪ್ರಾಯಕ್ಕೆ ಅನುಸಾರವಾಗಿ "ಬ್ರಾಂಡಿಯ" ಕೆಲವು ತಟುಕುಗಳನ್ನು (೩ರಿಂದ ೬ ವರೆಗೆ) ಕೊಡ

---

1) ೧೮೬೭ನೇ ಇಸವಿಯ ಪಂಚಾಂಗದ ೫೫ನೇ ಪಾನಿನಲ್ಲಿ ನೋಡು.

2) ೧೮೬೫ನೇ ಇಸವಿಯ ಪಂಚಾಂಗದ ೪೯ನೇ ಪಾನಿನಲ್ಲಿ ನೋಡು.

3) ೧೮೬೬ನೇ ಇಸವಿಯ ಪಂಚಾಂಗದ ೩೮ನೇ ಪಾನಿನಲ್ಲಿರುವ ೧೦ನೇ ಅಂಕೆಯನ್ನು ನೋಡು.

4) ಅದೇ ಪಂಚಾಂಗದ ೫೯ನೇ ಪಾನಿನಲ್ಲಿರುವ ೧೪ನೇ ಅಂಕೆಯನ್ನು ನೋಡು.

5) ೧೮೬೧ನೇ ಇಸವಿಯ ಪಂಚಾಂಗದ ೫೫ನೇ ಪಾನಿನಲ್ಲಿಯೂ, ಅದರ ೬ನೇ ಟಿಪ್ಪಣಿಯಲ್ಲಿಯೂ ನೋಡು.

6) ಇವು ಎಲಾಯತೀ ಔಷಧಗಳನ್ನು ಮಾರುವ ಅಂಗಡಿಗಳಲ್ಲಿ ದೊರೆಯುವವು.

7) ೧೮೬೦ನೇ ಇಸವಿಯ ಪಂಚಾಂಗದ ೬೯ನೇ ಪಾನಿನಲ್ಲಿ ನೋಡು.

ಬಹುದು. ಮಕ್ಕಳ ಅಪಸ್ಮಾರವು ಅನೇಕ ಸಾರಿ ಹಲ್ಲು ಬರೋಣಕ್ಕೆ ಸಮ್ಮಂಧಿಸಿರುತ್ತದೆ. ಆದದರಿಂದ ವಸಡುಗಳನ್ನು ಶಸ್ತ್ರದಿಂದ ಬಿಡಿಸುವದರಿಂದ, ಬಹುಶಾ ವಿಶೇಷ ಪ್ರಯೋಜನವಾಗುವದುಂಟು. ಅಪಸ್ಮಾರವು ಮತ್ತು ನರಗಳ ಸಮ್ಮಂಧವಾದ (ಅಂದರೆ ಭಯ ಕಂಪಾದಿಗಳುಳ್ಳ) ರೋಗಗಳು ಮಲಕೋಶದಲ್ಲಿ ಹುಳಗಳು ವೃದ್ಧಿಯಾದ ದೆಶೆಯಿಂದಲೂ ಬಹುಶಾ ಆಗುವದುಂಟು. ಅಲ್ಲಿ ಅವುಗಳ ಇರೋಣವು ಹೊರಗಿನ ಬೇರೆ ಯಾವ ಕುರುಹುಗಳಿಂದಾದರೂ ಏನೂ ತಿಳಿಯದೆ ಇರ ಬಹುದು. ಆದದರಿಂದ ಈ ರೋಗಕ್ಕೆ ಸಾವಮಾನ್ಯ ಚಿಕಿತ್ಸೆ ಹಿಡಿಯದ ಪಕ್ಷಕ್ಕೆ, ಹುಳಗಳ ಝಾಡಣೇ ಬಗ್ಯೆ ಹೇಳಿದ ಚಿಕಿತ್ಸೆಯನ್ನು ಮಾಡಿ ನೋಡುವದು ಬಹಳ ಒಳ್ಳೇದು.

೨೬೫. ಮಕ್ಕಳ ಅಪಸ್ಮಾರದ ಚಿನ್ಹೆಗಳು ಕಾಣ ಬರುತ್ತಲೇ, ಕಿಂಚಿತ್ತಾದರೂ ವಿಳಂಬಿಸದೆ, ಮಗುವಿಗೆ ಬಿಸಿ ನೀರಿನ ಮಜ್ಜನವನ್ನು ಕೊಡ ಬೇಕು. ತಲೇ ಮಾತ್ರ ಎತ್ತಿ ತಣ್ಣೀರಿನಿಂದ ಒದ್ದೆ ಮಾಡಿದ ವಸ್ತ್ರದಿಂದ ಮುಚ್ಚ ಬೇಕು. ಈ ಪ್ರಕಾರ ಬಿಸಿ ನೀರಿನ ಮಜ್ಜನ, ತಲೆಗೆ ತಣ್ಣೀರಿನ ಶೀಕ, ತರುವಾಯ ಇವುಗಳಿಗೆ ಸಹಾಯಕವಾಗಿ ಹೊಟ್ಟೆಗೆ ಒಂದಿಷ್ಟು ಹರಳೆಣ್ಣೆ ಕೊಡುವದರಿಂದ ಅಪಸ್ಮಾರವು ಶೀಘ್ರವಾಗಿ ಬಹುಶಾ ಉಪಶಮನವಾಗುವದು. ಮಜ್ಜನ ಮಾಡಿಸ ತಕ್ಕ ನೀರು ಶುಮಾರು ೯೮° F. (ಡಿಗ್ರಿ) ಅಂದರೆ ತಾಳಿಕೊಳ್ಳುವಷ್ಟು ಬಿಸಿ ಇರ ಬೇಕು. ಈ ಮಜ್ಜನವು ೧೦ ಯಾ ೧೫ ಮಿನಿಟುಗಳ ವರೆಗೆ ಮಾಡಿಸಿದರೆ ಸಾಕು. ಆದರೆ ತಲೆಗೆ ಕೊಡ ತಕ್ಕ ತಣ್ಣೀರಿನ ಶೀಕವು ಕೆಲವು ತಾಸುಗಳ ವರೆಗೂ ಕೊಡ ಬಹುದು. ಅಪಸ್ಮಾರವು ತಿರಿಗಿ ತೊಡಗಿದ ಪಕ್ಷಕ್ಕೆ, ಮಜ್ಜನವನ್ನು ಸಹ ಪುನಹ ಮಾಡಿಸ ಬಹುದು. ಮತ್ತು ಅಂಗಾಲುಗಳಿಗೆ ಸಾಸಿವೆ ಒತ್ತಡ (೬೨[1]) ಹಾಕ ಬಹುದು. ಬಿಸಿ ನೀರಿನ ಮಜ್ಜನವು ಮಕ್ಕಳಿಗೆ ಉಂಟಾಗುವ ಉದರ ಶೂಲೆಗೂ ಬಹಳ ಗುಣಕರವಾಗಿರುವದು.

೨೬೬. ಬಾಲಗ್ರಹವೆಂಬ ಮಕ್ಕಳ ಅಪಸ್ಮಾರದಲ್ಲಿ, ಅದು ಹಲ್ಲು ಬರೋಣ ಮುಂತಾದ್ದಕ್ಕೆ ಸಮ್ಮಂಧವಾಗಿರದೆ, ಬೇರೆ ಯಾವ ಕಾರಣದಿಂದಾದದ್ದೆಂದು ಸ್ಪಷ್ಟವಾಗಿ ತಿಳಿಯದ ಪಕ್ಷಕ್ಕೆ, "ಬ್ರೊಮಾಯ್ಡ್ ಒಫ್ ಪೊಟಾಸಿಯಮ್" (Bromide of Potassium) ಎಂಬ ಲವಣದಿಂದ ಬೇರೆ ಯಾವ ಔಷಧಗಳಿಗಿಂತಲೂ ಅಧಿಕ ಪ್ರಯೋಜನವಾಗುವದು. ಆರು ವಾರಗಳೊಳಗಿನ ಕೂಸಿಗೆ ½ ಗ್ರೇನ್, ಮೂರು ತಿಂಗಳೊಳಗಿನ ಕೂಸಿಗೆ ¾ ಗ್ರೇನ್, ಒಂಭತ್ತು ತಿಂಗಳೊಳಗಿನದಕ್ಕೆ ೧ ಗ್ರೇನ್, ಮತ್ತು ಹೀಗೆ ೩—೪ ವರುಷದ ತನಕ ವರ್ಷ ಒಂದಕ್ಕೆ ಹೆಚ್ಚಿಗೆ ಒಂದೊಂದು ಗ್ರೇನ್ ಪ್ರಕಾರ ಎಣಿಸಿ ಕೊಡುವದು. ಈ ಪರಿಮಾಣಗಳಲ್ಲಿ ೨, ೩ ಯಾ ೪ ತಾಸುಗಳಿಗೆ ಒಂದೊಂದು ಸಾರಿ ಪ್ರಕಾರ ಅಪಸ್ಮಾರ ಉತ್ತರಾಗುವ ತನಕ ಕೊಡುವದು.

ಬಾಲಪೀಡೆ (ಕುಟಿಲವಾತ, ಗ್ರಹಣಿ, ಹಳ್ಳಿರೋಗ) Rickets.

ಗಿಲಲಾನೇ ಇಸವಿಯ ಪಂಚಾಂಗದ ೫೭—೫೯ನೇ ಪಾನುಗಳಲ್ಲಿ ನೋಡು.

[1]) ಗಿಲಲಾನೇ ಇಸವಿಯ ಪಂಚಾಂಗದ ೫೫ನೇ ಪಾನಿನಲ್ಲಿ ನೋಡು.

ಬಾವು (ಕುರು, ಬೀಗು) Abscess.

ಚಿಕಿತ್ಸೆ: ಪ್ರಾರಂಭಸ್ಥಿತಿಯಲ್ಲಿ ಬಿಸಿ ನೀರಿನ ಶೇಕ (೧೦೯[1]) ಕೊಡುವದು. ಬಹಳ ಉರುಪೂ ಬೇನೆಯೂ ಇದ್ದರೆ, ಜಿಗಳೆಗಳನ್ನು ಕಚ್ಚಿಸುವದು.[2] ಮತ್ತು ಬಾವಿನ ಮೇಲೆ ನವಸಾಗರದ ನೀರಿನಿಂದಾಗಲೀ (೨೬೭), ಶಿರ್ಕದ ನೀರಿನಿಂದಾಗಲೀ (೨೨[3]) ತೋಯಿಸಿದ ಅರಿವೆ ಇಟ್ಟೇ ಇರ ಬೇಕು. ಅದರಲ್ಲಿ ಕೀವು ಉಂಟಾಗುವ ಪಕ್ಷಕ್ಕೆ ಅಕ್ಕಿ ಪೋಲ್ಟೀಸು (೧೧೮೮[4]) ಕಟ್ಟಿ, ಆಗ್ಯಾಗ್ಯೆ ಬದಲಿಸುತ್ತಾ ಇರ ಬೇಕು. ಬಾವು ಮೇಲೆ ಬಂದು, ಬೆರಳಿಗೆ ಮೆತ್ತಗಾಗಿ ತೋರುತ್ತಲೇ ಅದರ ತುದಿಯಲ್ಲಿ ಶಸ್ತ್ರದಿಂದ ಬಾಯಿ ಮಾಡಿ, ಕೀವೆಲ್ಲಾ ಹೊರಹಾಕ ಬೇಕು. ಪೂರ್ಣವಾಗಿ ಕೀವು ಸೋರಿ ಹೋದ ಮೇಲೆ, ಅಕ್ಕಿ ಪೋಲ್ಟೀಸನ್ನು ಪುನಹಾ ಕಟ್ಟಿ, ದಿನಕ್ಕೆ ೨, ೩ ಸಾರಿ ಬದಲಿ ಸುತ್ತಾ ಇರ ಬೇಕು. ನೋವು ಇನ್ನೂ ಕಡಿಮೆ ಆಗದೆ ರಾತ್ರೆ ನಿದ್ರೆಗೆ ಅಭ್ಯಂತರವಾ ದ ಪಕ್ಷಕ್ಕೆ, ಅಫೀಮಾಗಲೀ (೬೯[5]), ಉಮ್ಮತ್ತದ ಧೃತಿಯಾಗಲೀ (೨೫೩[6]) ರಾತ್ರೆಗೆ ಮಲಗುವಾಗ ತಕ್ಕೊಳ್ಳ ಬಹುದು. ಬಹಳ ಕೀವು ಸೋರಿ ರೋಗಿಯು ಅಶಕ್ತನಾಗಿದ್ದ ಪಕ್ಷಕ್ಕೆ, ಪುಷ್ಟಿಕರ ಆಹಾರ ಯಥೇಷ್ಟ ಕೊಡ ಬೇಕು. ಮತ್ತು ಕಿಯರ್ಗಾತಿನ ಕಲ್ಕ ಇಲ್ಲವೆ ಧೃತಿ (೧೦, ೧೧[7]), ಸುಗಂಧಿ ಬೇರಿನ ಕಲ್ಕ (೧೩[8]), ಬೇವಿನ ಚಕ್ಕೆಯ ಕಷಾಯ (೪೯[9]) ಮುಂತಾದ ಅಗ್ನಿವರ್ಧಕ ಔಷಧಗಳನ್ನು ಕೊಡ ತಕ್ಕದ್ದು. ಬಾವು ಕೊರಳಿ ನಲ್ಲಿ ಆದ ಪಕ್ಷಕ್ಕೆ, ಅದನ್ನು ವೈದ್ಯ ಪಂಡಿತನಿಂದಾಗಲೀ, ಅಂಗಶೋಧನವಿದ್ಯೆ ಬಲ್ಲ ಬೇರೆ ಯಾವನಿಂದಾಗಲೀ ತೆರಿಸ ಬೇಕು.

೨೬೭. ಹೆತ್ತ ಮೇಲೆ ಮತ್ತು ಮೊಲೆ ಕೊಡುವ ಕಾಲದಲ್ಲಿ ತಾಯಿಗಳಿಗೆ ಸ್ತನ ಕ್ಕೆ ಬಾವು ಉಂಟಾದರೆ, ಅದು ಪ್ರಥಮಸ್ಥಿತಿಯಲ್ಲಿ, ಕೀವು ಉಂಟಾಗುವದಕ್ಕಿಂತ ಮುಂಚೆ, ಈ ಔಷಧದಿಂದ ವಾಸಿ ಆಗುವದು. ಯಾವದಂದರೆ—ಒಂದು ದ್ರಮ್ ನವಸಾಗರ, ಒಂದು ಔನ್ಸ್ ಕಳ್ಳು, ಒಂದು ಪ್ಯಾಂಟ್ ಗುಲಾಬಿನ ನೀರು, ಇವ ನ್ನು ಕೂಡಿಸಿ ಮಾಡಿದ ಮಿಶ್ರದಲ್ಲಿ ಒಂದು ಅರಿವೆ ತುಂಡನ್ನು ಅದ್ದಿ, ಆ ಬೀಗಿನ ಮೇಲೆ ಇಟ್ಟು, ಅದನ್ನು ಆಗ್ಯಾಗ್ಯೆ ತೋಯಿಸುತ್ತಾ ಇರ ಬೇಕು. ಅದಲ್ಲದೆ ಬಾವು ಒಡದ ಮೇಲೆ ಸಹ ಅಲ್ಲಿ ಏನಾದರೂ ಘಟ್ಟಿ ಇದ್ದ ಪಕ್ಷಕ್ಕೆ, ಈ ಮಿಶ್ರದ ಲೇಪನದಿಂದ ಅದು ಮೆತ್ತಗಾಗಿ ಹೋಗುವದು. ಸ್ತನದಲ್ಲಿ ಮಾತ್ರವಲ್ಲ, ಮೈಯ ಇತರ ಭಾಗದಲ್ಲಿ ಸಹ ಉಂಟಾಗುವ ಬಾವು, ಪ್ರಥಮಸ್ಥಿತಿಯಲ್ಲಿ ಕೀವು ಉಂಟಾಗುವದಕ್ಕಿಂತ ಮುಂಚೆ, ಈ ಮಿಶ್ರದಿಂದ ವಾಸಿ ಮಾಡಲಾಗುವದು.

---

1) ೧೮೯೦ನೇ ಇಸವಿ ಪಂಚಾಂಗದ ೪೧ನೇ ಪಾನಿನಲ್ಲಿ ನೋಡು.

2) ಅದೇ ಇಸವಿಯ ಪಂಚಾಂಗದ ೩೩—೩೫ನೇ ಪಾನುಗಳಲ್ಲಿ ನೋಡು.

3) ೧೮೭೭ನೇ ಇಸವಿಯ ಪಂಚಾಂಗದ ೩೧ನೇ ಪಾನಿನಲ್ಲಿ ನೋಡು. ಅದಲ್ಲದೆ ೧೮೮೦ನೇ ಇಸವಿಯ ಪಂಚಾಂಗದ ೪೭ನೇ ಪಾನಿನಲ್ಲಿರುವ ೧೧ನೇ ಟಿಪ್ಪಣಿಯನ್ನು ಸರಿ ನೋಡು.

4) ೧೮೮೦ನೇ ಇಸವಿಯ ಪಂಚಾಂಗದ ೪೫ನೇ ಪಾನಿನಲ್ಲಿ ನೋಡು.

5) ೧೮೭೭ನೇ ಇಸವಿಯ ಪಂಚಾಂಗದ ೫೦ನೇ ಪಾನಿನಲ್ಲಿ ನೋಡು.

6) ೧೮೮೫ನೇ ಇಸವಿಯ ಪಂಚಾಂಗದ ೫೭ನೇ ಪಾನಿನಲ್ಲಿ ನೋಡು.

7) ೧೮೭೭ನೇ ಇಸವಿಯ ಪಂಚಾಂಗದ ೬೦ನೇ ಪಾನಿನಲ್ಲಿ ನೋಡು.

8) ಅದೇ ಪಂಚಾಂಗದ ೬೮—೭೪ನೇ ಪಾನುಗಳಲ್ಲಿ ನೋಡು.

9) ೧೮೭೭ನೇ ಇಸವಿಯ ಪಂಚಾಂಗದ ೧೮೦-೧೮೫ನೇ ಪಾನುಗಳಲ್ಲಿಯೂ ಅದರ ಟಿಪ್ಪಣಿಯಲ್ಲಿಯೂ ನೋಡು.

ಬಿಕ್ಕು ಹಿಡಿಯೋಣ Hiccup.

ಇದು, ವಾಯುವಿನಿಂದಾಗಲೀ, ಅಜೀರ್ಣದಿಂದಾಗಲೀ, ಅನ್ನಕೋಶದ ಹುಳಿವಿನಿಂದಾಗಲೀ, ಉಂಟಾಗುವದು.

ಚಿಕಿತ್ಸೆ: ಫಕ್ಕನೆ ಶೀತಸ್ಪರ್ಶ ಮಾಡಿದದರಿಂದಾಗಲೀ, ೨—೩ ಸಾರಿ ಬಾಯಿ ತುಂಬಾ ತಣ್ಣೀರು ಹಿಡಿದುಕೊಳ್ಳುವದರಿಂದಾಗಲೀ, ನೀರುಗಡ್ಡೆ (ಹತ್ತರವಿದ್ದರೆ) ಚಿಕ್ಕ ತುಂಡು ತಿಂದು ಬಿಡುವದರಿಂದಾಗಲೀ, ಒಂದು ಚಿಮಟೆ ನಶೆ ಪುಡಿ ಹಾಕಿ ಕೊಳ್ಳುವದರಿಂದಾಗಲೀ, ಬಿಕ್ಕು ನಿವಾರಣೆ ಆದೀತು[1].

ಬಿಸಿಲುಮೂರ್ಛೆ, ಬಿಸಿಲುಹೊಡತ Coup-de-Soleil, Sunstroke.

ಇದಕ್ಕೆ ೧೮೭೭ನೇ ಇಸವಿಯ ಪಂಚಾಂಗದ ೨೩ನೇ ಪಾನಿನಲ್ಲಿಯ ೫೮ನೇ ಅಂಕೆಯಲ್ಲಿ ಹೇಳಿರುವ ಚಿಕಿತ್ಸೆಯನ್ನು ಮಾಡ ಬೇಕು.

"ಬ್ಲಿಸ್ತರ್" ಎಂಬ ಜಳ್ಳೆ ಎಬ್ಬಿಸುವಿಕೆ Blister.

೧೮೮೩ನೇ ಇಸವಿಯ ಪಂಚಾಂಗದ ೪೭—೪೮ನೇ ಪಾನುಗಳಲ್ಲಿ ೧೦೯ನೇ ಅಂಕೆಯನ್ನೂ ಅದರ ಟಿಪ್ಪಣಿಯನ್ನೂ ನೋಡು.

ಬೋಧ ತಪ್ಪುವದು (ಬುದ್ಧಿಭ್ರಮಣ) Delirium Tremens.

ಇದರಿಂದ ಉಂಟಾಗುವ ಅನಿದ್ರೆಯೂ ಘಾಬ್ರಿಯೂ ನಿವಾರಣೆಯಾಗುವ ಬಗ್ಯೆ, ಅಫೀಮು ಮತ್ತು ಕರ್ಪೂರದ ಮಾತ್ರೆ (೨೬೪) ಕೊಡುವದು; ಅಥವಾ ಅದಕ್ಕಿಂತಲೂ ಉತ್ತಮವಾಗಿ (Bromide of Potassium) ಎಂಬ ಲವಣ ಕೊಡುವದು. (ಇದರ ಪರಿಮಾಣವನ್ನು ಕುರಿತು ಇದೇ ಪಂಚಾಂಗದ ೪೧ನೇ ಪಾನಿನಲ್ಲಿ ನೋಡು.) ಅದ ಲ್ಲದೆ ಸಾಸಿವೆಯ ಮಜ್ಜನ (೨೪೪[2]), ಇಲ್ಲವೆ ಒದ್ದೆ ವಸ್ತ್ರದ ಮಡಿಕೆ ಹಾಕ ಬೇಕು (೧೩೮[3]). ಶಕ್ತಿವರ್ಧನೆ ಬಗ್ಯೆ "ಬ್ರಾಂಡಿಮಿಶ್ರ"ವನ್ನೂ (೯[4]) ಪುಷ್ಟಿಕರ ಆಹಾರವ ನ್ನೂ ಕೊಡುವದು.

೨೬೪. ಬೋಧ ತಪ್ಪಿದವರಿಗೆ ನಿದ್ರೆ ಬರುವದಿಲ್ಲ; ಘಾಬ್ರಿಯೂ ಅವಿಶ್ರಾಂತಿ ಯೂ ಇರುವದು. ಅದಕ್ಕೆ ಒಂದು ಗ್ರೇನ್ ಅಫೀಮನ್ನು (ಇಲ್ಲವೆ ೧೫ ಶಟುಕು ಅಫೀ ಮಿನ ಸತ್ವ laudanum) ಮತ್ತು ನಾಲ್ಕು ಯಾ ಐದು ಗ್ರೇನ್ ಕರ್ಪೂರವನ್ನು ಒಟ್ಟು ಕೂಡಿಸಿ ಚನ್ನಾಗಿ ಮರ್ದಿಸಿ, ಮಾತ್ರೆಯನ್ನು ಕಟ್ಟಿ, ರಾತ್ರಿ ಮಲಗುವಾಗ ಕೊಡುವದು. ಅದಲ್ಲದೆ ಕರ್ಪೂರ ಮಾತ್ರವೇ ೨—೩ ಗ್ರೇನ್ ಪ್ರಕಾರ ಮೂರು ಅಥವಾ ನಾಲ್ಕು ತಾ ಸುಗಳಿಗೆ ಒಂದು ಸರ್ತಿ ಕೊಡುವದರಿಂದ ಉಪಶಮನವಾದೀತು; ಹೀಗೆ ಕರ್ಪೂರ ಮಾತ್ರವೇ ಕೊಡುವ ಕಾಲದಲ್ಲಿ ಸಹ, ಅವಶ್ಯ ಬಿದ್ದರೆ, ಒಂದು ಗ್ರೇನ್ ಅಫೀಮಿ ರಾತ್ರೆಗೆ ಮಲಗುವಾಗ ಕೊಡುವದು.

---

1) "Enquire Within Upon Everything", ಎಂಬ ಪುಸ್ತಕದ 2170ನೇ ಅಂಕೆಯಲ್ಲಿ ನೋಡು.
2) ೧೮೮೪ನೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿ ನೋಡು.
3) ೧೮೮೧ನೇ ಇಸವಿಯ ಪಂಚಾಂಗದ ೪೯ನೇ ಪಾನಿನಲ್ಲಿ ನೋಡು.
4) ೧೮೭೭ನೇ ಇಸವಿಯ ಪಂಚಾಂಗದ ೧೭ನೇ ಪಾನಿನಲ್ಲಿ ನೋಡು.

ಬೆಂದ ಹುಣ್ಣು (ಸುಟ್ಟಗುಳ್ಳೆ) Burns and Scalds.

ಬೆಂಕಿಯಾಗಲೀ, ಕಾಸಿದ ಎಣ್ಣೆಯಾಗಲೀ ಲೋಹವಾಗಲೀ, ತಾಗಿ ಉಂಟಾಗುವ ಬೆಂದ ಹುಣ್ಣುಗಳಿಗೆ ಕೂಡಲೆ ಸುಣ್ಣದ ಮುಲಾಮು (೨೬೯) ಇಲ್ಲವೆ ಎಳ್ಳೆಣ್ಣೆ (೧೬೬[1]) ಹಚ್ಚಿ, ಅದರ ಮೇಲೆ ನಯವಾದ ಅಕ್ಕಿ ಹಿಟ್ಟನ್ನು ದಪ್ಪವಾಗಿ ಚೆಲ್ಲಬೇಕು; ಅಥವಾ ಎಣ್ಣೆ ಹಚ್ಚದೆ, (೧೧೮ಲ[a]ನೇ[2] ಅಂಕೆಯಲ್ಲಿ ಹೇಳಿದಂತೆ) ಬರೇ ಅಕ್ಕಿ ಹಿಟ್ಟು ಚೆಲ್ಲಿದರೂ ಆದೀತು. ಮುಖ್ಯತಾ ಸುಟ್ಟ ಜಾಗಕ್ಕೆ ಘಾಳಿ ಸ್ಪರ್ಶವಾಗದ ಹಾಗೆ ನೋಡ ಬೇಕಷ್ಟೆ. ಮೇಲೆ ಹೇಳಿದ ಎಣ್ಣೆಯ ಲೇಪನವನ್ನಾಗಲೀ, ಅಕ್ಕಿ ಹಿಟ್ಟು ಹಚ್ಚಿದ್ದನ್ನಾಗಲೀ ಬೇಗ ತೆಗಿಯದೆ, ೨೪ ತಾಸುಗಳ ವರೆಗಾದರೂ ಇರಿಸ ಬೇಕು; ಅನಂತರವೂ ಅವುಗಳನ್ನು ಅವಶ್ಯವಿದ್ದಂತೆ ಪ್ರಯೋಗಿಸ ಬಹುದು. ಬೆಂದ ಜಾಗದಲ್ಲಿ ತರುವಾಯ ಹುಣ್ಣು ಆದ ಪಕ್ಷಕ್ಕೆ, ಜೇನುತುಪ್ಪದ ಮಧುತೈಲ್ಯವನ್ನಾಗಲೀ (೭೨[3]), ಬಿಳೀ ದಾಮರದ ಮುಲಾಮನ್ನಾಗಲೀ (೭೧[3]) ಹಚ್ಚುವದು. ಬೆಂದ ಜಾಗವು ವಿಸ್ತಾರವಾಗಿ ಇದ್ದ ಪಕ್ಷಕ್ಕೆ, ಅದರ ದೆಸೆಯಿಂದ ದೇಹವು ಕ್ಷೀಣವಾಗದಂತೆ, ಒಳ್ಳೇ ಪುಷ್ಟಿಕರವಾದ ಆಹಾರವನ್ನೂ, ಬ್ರಾಂಡಿಮಿಶ್ರ ಮುಂತಾದ ಉತ್ತೇಜಕಗಳನ್ನೂ, ಬೇರೆ ಧಾತು ವರ್ಧಕ ಔಷಧಗಳನ್ನೂ ಕೊಡ ತಕ್ಕದ್ದು. ವಿಶೇಷ ನೋವಾಗಲೀ, ಬಹಳ ಅವಿಶ್ರಾಂತಿಯಾಗಲೀ ಇದ್ದ ಪಕ್ಷಕ್ಕೆ, ರಾತ್ರೆ ಮಲಗುವಾಗ ಅಫೀಮು ಕೊಡ ಬೇಕು. ಇಂಥಾ ಸುಟ್ಟ ಹುಣ್ಣು ಮೈಗಂಟಿನಲ್ಲ್ಯಾಗಲೀ ಕುತ್ತಿಗೆಯಲ್ಲ್ಯಾಗಲೀ, ಅದಕ್ಕೆ ಸಮೀಪವಾಗಿಯಾಗಲೀ ಉಂಟಾದ ಪಕ್ಷಕ್ಕೆ, ಆ ಭಾಗವನ್ನು ನೆಟ್ಟಗೆ ಯಾ ನೀಡಿ ಇರಿಸುವದು ಬಹಳ ಅಗತ್ಯ; ಇಲ್ಲವಾದರೆ, ಹುಣ್ಣು ಮಾದು, ವಾಸಿ ಆಗುತ್ತಾ ಬರುವಾಗ ಆ ಭಾಗವು ಸೊಟ್ಟಗಾದೀತು.

೨೬೯. ಬೆಂದ ಹುಣ್ಣು, ಗುಳ್ಳೆಗಳಿಗೆ ಸುಣ್ಣದ ಮುಲಾಮಿನಷ್ಟು ಉತ್ತಮವಾದ ಔಷಧ ಬೇರೊಂದಿಲ್ಲವೆನ್ನ ಬಹುದು. ಸುಣ್ಣದ ತಿಳೀನೀರು ಮತ್ತು ಇಪ್ಪೇ ಎಣ್ಣೆ[4] ಸಮಭಾಗ ತೆಗದು, ಮಿಶ್ರ ಮಾಡಿ, ಚನ್ನಾಗಿ ಕಡೆಯುವದು. ಈ ಮಿಶ್ರಣವನ್ನು ಬೆಂದ ಜಾಗಕ್ಕೆ ಧಾರಾಳವಾಗಿ ಹಚ್ಚಿ, ಅದರಲ್ಲಿ ಅದ್ದಿದ ಒಂದು ವಸ್ತ್ರದ ಚಿಂದಿಯಿಂದ ಆ ಬೆಂದ ಜಾಗವನ್ನು ಮುಚ್ಚಿ, ಅವಶ್ಯವಿದ್ದಂತೆ ಕೆಲವು ದಿನಗಳ ವರೆಗಾದರೂ ಬಿಡದೆ ತೋಯಿಸುತ್ತಾ ಇರ ಬೇಕು. ಈ ತೈಲ್ಯವನ್ನು ಮೈಲೆಗಜ್ಜಿಯ ಹುಣ್ಣುಗಳಿಗೆ ಸಹ ಹಚ್ಚಿದ್ದಾದರೆ, ಅವು ವಾಸಿಯಾಗಿ, ಅವುಗಳ ಮೇಲೆ ಗುಣಿ ಬೀಳುವದಿಲ್ಲವಂತೆ.

ಬೆವರುಸಾಲೆ Prickly Heat.

ಶೆಕೆಕಾಲದಲ್ಲಿ ವಿಶೇಷವಾಗಿ ವಸ್ತ್ರ ಯಾವಾಗಲೂ ಮುಚ್ಚಿ ಇರುವ ಮೈಭಾಗದಲ್ಲಿ ಬೆವರು ಬಹಳ ಬಂದು, ಉಂಟಾಗುವ ಬೆವರುಸಾಲೆ ಎಂಬ ಈ ತುರಿಖಜ್ಜಿಯನ್ನು, ಬಹಳವಾಗಿ ಬಿಳಿಗಾರದ ನೀರಿನಿಂದ (೧೫೯[5]) ತೊಳದು, ತರುವಾಯ ಅಕ್ಕಿ ಪುಡಿಯಿಂದಾಗಲೀ (೧೧೮ಲ[a]), ಗಂಧದ ಪುಡಿಯಿಂದಾಗಲೀ ತಿಕ್ಕುವದರಿಂದ ವಾಸಿಯಾಗುವದು.

---

1) ೧೬೬ನೇ ಇಸವಿಯ ಪಂಚಾಂಗದ ೫೦ನೇ ಪಾನಿನಲ್ಲಿ ನೋಡು.
2) ೧೧೮ನೇ ಇಸವಿಯ ಪಂಚಾಂಗದ ೪೫ನೇ ಪಾನಿನಲ್ಲಿ ನೋಡು.
3) ೭೨ನೇ ಇಸವಿಯ ಪಂಚಾಂಗದ ೫೦ನೇ ಪಾನಿನಲ್ಲಿಯೂ, ಅದರ ಟಪ್ಪಣಿಯಲ್ಲಿಯೂ ನೋಡು.
4) ಇದು ತಿಕ್ಕದಿದ್ದರೆ (linseed oil ಎಂಬ) ಅಗಸೆ ಬೀಜದ ಎಣ್ಣೆಯಾದರೂ ಪ್ರಯೋಗಿಸ ಬಹುದು.
5) ೧೫೯ನೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿ ನೋಡು.

ಬೋಳುತಲೆ Baldness.

ಪ್ರಾಯದ ತಾರತಮ್ಯವಿಲ್ಲದೆ, ದೀರ್ಘಕಾಲದ ಅಸ್ವಸ್ಥದಿಂದಾಗಲೀ, ಮಲಿನತೆಯಿಂದಾಗಲೀ, ಅಶಕ್ತಿಯಿಂದ ಚರ್ಮ ಶಿಥಿಲವಾದ ದೆಶೆಯಿಂದಾಗಲೀ, ಕೂದಲುಗಳು ಉದುರಿ ತಲೆ ಬೋಳಾದದ್ದಕ್ಕೆ ಬಹಳ ತರದ ತೈಲ್ಯಗಳು ಒಳ್ಳೇದೆಂದು ಹೇಳುತ್ತಾರೆ. ಆದರೆ ಬಾಲ್ಯ ಪ್ರಾಯದವರಿಗೆ ಉಂಟಾಗುವಂಥಾ ಈ ವಿಲಕ್ಷಣಕ್ಕೆ ಒಂದೆರಡು ಸುಲಭ ಚಿಕಿತ್ಸೆ ಇಲ್ಲಿ ಹೇಳ ಬಹುದು. ಯಾವವಂದರೆ—ನೀರುಳ್ಳಿಯನ್ನು ಸ್ವಲ್ಪ ಜಜ್ಜಿ, ಬೋಳಾದ ಭಾಗಕ್ಕೆ ದಿವಸಂಪ್ರತಿ ಕೆಲವು ದಿವಸಗಳ ವರೆಗೆ ತಿಕ್ಕುತ್ತಾ ಇರುವದು. ಇಲ್ಲವೆ 'ಬೊಕ್ಸ್‌ವುಡ್' (boxwood) ಎಂಬ ಮರದ ಚೆಕ್ಕೆಯನ್ನು ಮೂರು ಪ್ಯಾಂಟ್ ನೀರುಳ್ಳ ಮಣ್ಣಿನ ಪಾತ್ರೆಯಲ್ಲಿ ಹಾಕಿ, ಒಂದು ಕಾಲು ತಾಸಿನ ವರೆಗೆ ಬೇಯಿಸಿ, ಆ ಮೇಲೆ ಸುಮಾರು ಹತ್ತು ಯಾ ಹನ್ನೆರಡು ತಾಸುಗಳ ವರೆಗೆ ಒತ್ತಟ್ಟಿಗಿರಿಸುವದು. ಆ ಮೇಲೆ ಕಸವನ್ನು ಚನ್ನಾಗಿ ಗಿವಚಿ, ಕಷಾಯವನ್ನು ಗಾಳಿಸಿ ತೆಗದು, ಅದಕ್ಕೆ ಒಂದು ಔನ್ಸ್ (Eau-de-Cologne[1] ಇಲ್ಲವೆ Lavender Water[1]) ಎಂಬ ಪರಿಮಳ ದ್ರವವನ್ನು ಹಾಕಿ, ಚನ್ನಾಗಿ ಕಲಕಿಸುವದು. ಈ ಮಿಶ್ರಣವನ್ನು ಒಂದು ಬಾಟ್ಲಿಯಲ್ಲಿ ಹಾಕಿ, ಬಿಗಿಯಾಗಿ ಬಿರಿಡೆ ಹಾಕಿ, ಒಳಗೆ ಘಾಳಿ ಹೋಗದಂತೆ ಬಂದು ಮಾಡಬೇಕು. ಈ ಮಿಶ್ರಣದಿಂದ ತಲೆಯ ಬೋಳು ಭಾಗವನ್ನು ದಿನಾಲು ಬೆಳಿಗ್ಯೆ ತೊಳೆಯ ಬೇಕು[2].

ಭಗಂದರ Carbuncle or Rajah Boil.

ಗಿಲಿಲನೇ ಇಸವಿಯ ಪಂಚಾಂಗದ ೪೮—೫೨ನೇ ಪಾನುಗಳಲ್ಲಿ ನೋಡು.

ಮಂದಸನ್ನಿ Convulsions in Adults.

ಇದೇ ಪಂಚಾಂಗದ ೪೨—೪೩ನೇ ಪಾನುಗಳಲ್ಲಿ ನೋಡು.

ಮಕ್ಕಳ ಅಶಕ್ತಿ Debility of Children.

ಮಕ್ಕಳು ಬಚ್ಚಿ ಕೃಶವಾಗಿ, ರಕ್ತಛಾಯೆಯಿಲ್ಲದೆ ಹೋದದ್ದಕ್ಕೆ ಸುಗಂಧಿ ಬೇರಿನ ಕಲ್ಕವನ್ನೂ (೧೫[3]), ಮಾನಿನ ಎಣ್ಣೆಯನ್ನೂ (೭[4]) ಕೊಡುವದು. ಅದಲ್ಲದೆ ಪುಷ್ಟಿಕರವಾದ ಆಹಾರವನ್ನು ಸಹ ಜೀರ್ಣಕ್ಕೆ ಬಾಧಕವಾಗದಂತೆ ಕ್ರಮವಾಗಿಯೂ ಮಿತಿಯಾಗಿಯೂ ಕೊಡುವದು. ಸಾಧಾರಣವಾದ ವಿಹಾರ ಮಾಡಿಸುವದು ಒಳ್ಳೇದು. ಹವೆ ಬದಲಿಸುವದರಿಂದ ಬಹುಶಾ ಔಷಧಕ್ಕಿಂತಲೂ ಅಧಿಕ ಗುಣಾಂಶ ಶಿಕ್ಕುವದು. ಮಕ್ಕಳ ಮಲಬದ್ಧತೆ, ಉದರಶೂಲೆ, ಅತಿಸಾರ ಮುಂತಾದವುಗಳ ಚಿಕಿತ್ಸೆಯನ್ನು ಕುರಿತು ಆಯಾಯ ಹೆಸರಿನಲ್ಲಿ ನೋಡು.

---

1) ಇವು ವಿಲಾಯತಿಯ ಸಾಮಾನುಗಳನ್ನು ಮಾರುವ ಸಾಧಾರಣ ಅಂಗಡಿಗಳಲ್ಲಿ ದೊರಿಯುವವು.

2) "Enquire Within Upon Everything" ಎಂಬ ಪುಸ್ತಕದ 2175—2176ನೇ ಅಂಕೆಗಳಲ್ಲಿ ನೋಡು.

3) ೧೪೭೬ನೇ ಇಸವಿಯ ಪಂಚಾಂಗದ ೩೪ನೇ ಪಾನಿನಲ್ಲಿ ನೋಡು.

4) ಅದೇ ಇಸವಿಯ ಪಂಚಾಂಗದ ೩೬ನೇ ಪಾನಿನಲ್ಲಿಯೂ, ಅದರ ಟಪ್ಪಣಿಯಲ್ಲಿಯೂ ನೋಡು.

ಕರಳುಗಳ ಭದ್ರತೆಗಾಗಿ ಇರುವ (mesenteric) ಗುಲ್ಮ ಎಂಬ ಮಾಂಸಗ್ರಂಥಿಗಳ ಆಕ್ರಮದಿಂದ ಮಕ್ಕಳಿಗೆ ಉಂಟಾಗುವ ತಾಮರೆ ಎಂಬ ಈ ರೋಗದಲ್ಲಿ ಮಕ್ಕಳು ಸೊರಗಿ ಹೋಗಿ, ರಕ್ತದ ದುರ್ಬಲತೆ ಪಡುವದುಂಟು. ಇದಕ್ಕೆ ವಿಾನಿನ ಎಣ್ಣೆ ಅತ್ಯುತ್ತಮ ಔಷಧವಾಗಿರುತ್ತದೆ. ಅದಲ್ಲದೆ ಮೇಲೆ ಹೇಳಿದಂತೆ ಧಾತು ವರ್ಧಕ ಔಷಧಗಳನ್ನು ಕೊಡುವದು.

ಮಲಕಟ್ಟು, ಮಲಬದ್ಧತೆ Constipation.

ಮಲಬದ್ಧತೆಯ ನಿವಾರಣೆಗಾಗಿ ವಿರೇಚಕ ಔಷಧಗಳು ಬೇಕಾಗುತ್ತವೆ. ಹರಳೆಣ್ಣೆ (೧೫ಂ[1]), ಸೋನಾಮಕ್ಕಿ ಎಲೆಯ (ನೆಲಾವರಿಕೆಸೊಪ್ಪಿನ) ಕಷಾಯ (೧೮೬[2]) ಮಕ್ಕಳಿಗೂ ಅಶಕ್ತ ಸ್ತ್ರೀಯರಿಗೂ ತಕ್ಕದಾದ ಮಲಶೋಧಕಗಳಾಗಿರುತ್ತವೆ. ರಕ್ತ ಬೋಳವು (೧[3],೨೦೭[4]) ತಿಂಗಳಗಟ್ಟಿ (ಮುಟ್ಟು) ಆಗದೆ, ಅಕ್ರಮವಾದ ಇಲ್ಲವೆ ಪೂರ್ಣನಿಂತು ಹೋದ ಸ್ತ್ರೀಯರಿಗೂ, ಅಳಲೆಕಾಯಿಯ ಕಷಾಯ (೭೫[5]) ಮತ್ತು ಕರಿಜೀರಿಗೆ ಚೂರ್ಣ (೭೪[6]) ಅನ್ಯಥಾ ಸ್ವಸ್ಥವುಳ್ಳವರಿಗೂ, ಜಾಫಲದ ಮಾತ್ರೆ (೫೯[7]) ಇಲ್ಲವೆ ಜಾಫಲದ ಎಣ್ಣೆ ಕಠಿಣವಾದ ಮಲಶೋಧನೆ ಆಗ ಬೇಕನ್ನುವವರಿಗೂ, ತಕ್ಕದ್ದಾಗಿರುತ್ತವೆ. ಸೂತಿಕವಾಯುವುಳ್ಳ ಸ್ತ್ರೀಯರಿಗೆ ಉಂಟಾಗುವ ಮಲಬದ್ಧತೆಯಲ್ಲಿ ರಕ್ತಬೋಳ ಮತ್ತು ಹಿಂಗಿನ ಮಾತ್ರೆಗಳನ್ನು (೨೦೭[4]) ಕೊಟ್ಟು ಗುಣವಾಗುವದು. ಅಭ್ಯಾಸಕ್ಕೆ ಬಿದ್ದ ಮಲಬದ್ಧತೆಯಲ್ಲಿ ರಕ್ತಬೋಳವನ್ನು (೨೭೦) ಕೊಡುತ್ತಾರೆ. ಮಕ್ಕಳ ಮಲಬದ್ಧತೆಯಲ್ಲಿ ವಿಾನಿನ ಎಣ್ಣೆ ಕೊಟ್ಟು, ಪಥ್ಯಕ್ಕಾಗಿ ಟೋಕೆಗೋಧಿ (oatmeal) ಹುಡಿಯ ಮಣ್ಣಿ ಕೊಡುವದು. ಮಕ್ಕಳಿಗಾಗಲೀ, ದೊಡ್ಡವರಿಗಾಗಲೀ, ಅಭ್ಯಾಸಕ್ಕೆ ಬಿದ್ದ ಮಲಬದ್ಧತೆಯಲ್ಲಿ ತೀಜವರ್ಧಕ ಔಷಧಗಳನ್ನು ಕೊಡಬೇಕಲ್ಲದೆ, ವಿರೇಚಕ ಔಷಧಗಳು ಸರಿ ಬೀಳುವದಿಲ್ಲ.

ಸೂಚನೆ: ಪದೇ ಪದೇ ಮಲಶೋಧಕ ಔಷಧಗಳನ್ನು ಕೊಡುವದರಿಂದ ತರುವಾಯ ಬಹಳ ಕೇಡಿಗೆ ಕಾರಣವಾಗುವದುಂಟು. ಈ ದೇಶದಲ್ಲಿ ಹೆಂಗಸರು ಮಕ್ಕಳ ಮಲಬದ್ಧತೆಗೆಂದು ಹೊಗೆಸೊಪ್ಪಿನ ದಂಟನ್ನು ಮಕ್ಕಳ ಗುದದಲ್ಲಿ ಹಾಕಿ ಅಲ್ಲಾಡಿಸುವದು ಸರ್ವಥಾ ಒಳ್ಳೇದಲ್ಲ.

೨೭೦. ಅಭ್ಯಾಸಕ್ಕೆ ಬಿದ್ದ ಮಲಬದ್ಧತೆಯಲ್ಲಿ ಮುಂದೆ ಹೇಳಿದ ಮಾತ್ರೆಗಳನ್ನು ಸರಿಯಾಗಿ ಕೊಡುವದರಿಂದ ಬಹಳ ಗುಣವುಂಟಾಗುವದು. ಶುದ್ಧ ಮಾಡಿದ ರಕ್ತ ಬೋಳ ೧೮ ಗ್ರೇನ್, ಅನ್ನಭೇದಿ ೩೦ ಗ್ರೇನ್, ಇವೆರಡನ್ನು ಚನ್ನಾಗಿ ಕುಟ್ಟಿ ಪುಡಿ ಮಾಡಿ, ಜೀನುತುಪ್ಪದಲ್ಲಿ ಅರದು, ೨೪ ಮಾತ್ರೆಗಳಾಗಿ ಮಾಡುವದು. ಇವುಗಳಿಂದ ಸರ್ತಿಗೆ ಒಂದೊಂದು ಮಾತ್ರೇ ಮೇರೆಗೆ ದಿನಕ್ಕೆ ಮೂರಾವರ್ತಿ ಊಟವಾದ ಕೂಡಲೇ ಕೊಡುವದು; ಈ ಪ್ರಕಾರ ಮೆಲ್ಲಗೆ ಕರಳುಗಳಲ್ಲಿ ಈ ಮಾತ್ರೆಗಳು ಪ್ರವ

---

1) ೧೫ಂನೇ ಇಸವಿಯ ಪಂಚಾಂಗದ ೫೯ನೇ ಪಾನಿನಲ್ಲಿಯೂ, ಅದರ ಟಿಪ್ಪಣಿಯಲ್ಲಿಯೂ ನೋಡು.

2) ೧೮೬ನೇ ಇಸವಿಯ ಪಂಚಾಂಗದ ೪೯ನೇ ಪಾನಿನಲ್ಲಿಯೂ, ಅದರ ಟಿಪ್ಪಣಿಯಲ್ಲಿಯೂ ನೋಡು.

3) ೧೮೭೬ನೇ ಇಸವಿಯ ಪಂಚಾಂಗದ ೩೪ನೇ ಪಾನಿನಲ್ಲಿ ನೋಡು.

4) ೧೯೦೭ನೇ ಇಸವಿಯ ಪಂಚಾಂಗದ ೫೬–೫೭ನೇ ಪಾನುಗಳಲ್ಲಿಯೂ, ಅದರ ಟಿಪ್ಪಣಿಯಲ್ಲಿಯೂ ನೋಡು.

5) ೧೮೭೯ನೇ ಇಸವಿಯ ಪಂಚಾಂಗದ ೬೦ನೇ ಪಾನಿನಲ್ಲಿಯೂ, ಅದರ ಟಿಪ್ಪಣಿಯಲ್ಲಿಯೂ ನೋಡು.

6) ಅದೇ ಇಸವಿಯ ಪಂಚಾಂಗದ ೬೭ನೇ ಪಾನಿನಲ್ಲಿಯೂ, ಅದರ ಟಿಪ್ಪಣಿಯಲ್ಲಿಯೂ ನೋಡು.

7) ೧೮೭೭ನೇ ಇಸವಿಯ ಪಂಚಾಂಗದ ೩೮ನೇ ಪಾನಿನಲ್ಲಿಯೂ, ಅದರ ಟಿಪ್ಪಣಿಯಲ್ಲಿಯೂ ನೋಡು.

ರ್ತಿಸುವ ವರೆಗೆ ಮಾಡ ಬೇಕು. ಆ ಮೇಲೆ ಅವನ್ನು ದಿನಕ್ಕೆ ಎರಡಾವರ್ತಿ ಕೊಡ ಬಹುದು. ಒಂದೆರಡು ವಾರಗಳನಂತರ ಇನ್ನೊಂದು ಮಾತ್ರೆ ಕಡಿಮೆ ಮಾಡ ಬಹುದು. ಮತ್ತು ಒಂದು ತಿಂಗಳಲ್ಲಿ ಒಂದೇ ಮಾತ್ರೆ ಹಪ್ತೆಗೆ ಎರಡು ಯಾ ಒಂದಾವರ್ತಿ ಸಾಕಾದೀತು. ಯಾವ ಸಂಗತಿಯಲ್ಲಿಯಾದರೂ ಮಲಶೋಧನೆ ಬಹಳವಾಗಿ ಆದ ಪಕ್ಷಕ್ಕೆ, ಸ್ವಲ್ಪ ಕಾಲಕ್ಕೆ ಅವನ್ನು ಬಿಟ್ಟುಬಿಡ ಬಹುದು.

ಮಾಂಸಗ್ರಂಥಿ ಉಬ್ಬೋಣ Enlarged Glands.

ಚಿಕಿತ್ಸೆ: ವಿವಿಧ ಕಾರಣಗಳಿಂದ ಮಾಂಸಗ್ರಂಥಿಗಳು ಬಾತು ಹೋಗುವ ಈ ರೋಗಕ್ಕೆ ಪ್ರಾರಂಭಸ್ಥಿತಿಯಲ್ಲಿ ನವಸಾಗರದ ನೀರನ್ನಾಗಲೀ (೧೧೭[1]), ಕರ್ಪೂರದ ಎಣ್ಣೆಯಾಗಲೀ (೧೧೯[2]), ಅಫೀಮಿಯ ಮುಲಾಮನ್ನಾಗಲೀ (೫೯) ಹಚ್ಚುವದು; ಇಲ್ಲವೆ ವೀಳ್ಯದೆಲೆಯ ಶೇಕ ಕೊಡುವದು (೧೫೬[4]). ಮಾಂಸಗ್ರಂಥಿಯಲ್ಲಿ ಕೀವು ಉಂಟಾದ ಪಕ್ಷಕ್ಕೆ. ಕುರು ಎಂಬಂತೆ ಚಿಕಿತ್ಸೆಯನ್ನು ಮಾಡಿ, ಹೊಟ್ಟೆಯಲ್ಲಿ ವಿಾನಿನ ಎಣ್ಣೆ ಕೊಡುವದು.

ಮೂಗಿನಿಂದ ನೆತ್ತ್ರರ ಮುಂತಾದದ್ದು ಸೋರೋಣ Hæmorrhage etc. from the Nose.

ತಲೆವ್ಯಾಧಿ ಮುಂತಾದ ಬೇರೆ ಬೇರೆ ಅಸ್ವಸ್ಥಗಳ ಲಕ್ಷಣವಾಗಿರುವ, ಮೂಗಿನಿಂದ ನೆತ್ತ್ರರ ಹರಿಯೋಣವು ಮುಂದೆ ಹೇಳಿದ ಸುಲಭ ಉಪಾಯಗಳಿಂದ ಸಾಮಾನ್ಯವಾಗಿ ನಿಂತು ಹೋಗುವದು. ೧, ಬೀಗದ ಕೈ, ಹಿಮದ (ಬರ್ಫ) ಗಡ್ಡೆ ಮುಂತಾದ ತಣುಸು ಪದಾರ್ಥಗಳನ್ನು ಹೆಗ್ಗತ್ತಿಗೆ ಹಚ್ಚೋಣ; ೨, ಒಂದು ಮೂಗಿನ ಸೊಳ್ಳೆಯಿಂದ ನೆತ್ತ್ರರ ಹರಿದ ಪಕ್ಷಕ್ಕೆ, ಇನ್ನೊಂದು ಸೊಳ್ಳೆಯನ್ನು ಒತ್ತಿ ಹಿಡಿಯೋಣ; ೩, ನೆಟ್ಟಗೆ ನಿಂತು, ಕೈ ತೋಳುಗಳನ್ನು ಕೆಲವು ನಿಮಿಷಗಳ ವರೆಗೆ ಎತ್ತಿ ಹಿಡಿಯೋಣ. ಈ ಉಪಾಯಗಳಲ್ಲಿ ಯಾವದಾದರೂ ಹಿಡಿಯದಿದ್ದ ಪಕ್ಷಕ್ಕೆ, ಪಟಿಕಾರದ ಚೂರ್ಣ (೫೭[5]), ಇಲ್ಲವೆ ೨೦ ಗ್ರೇನ್ ಪಟಿಕಾರ ೨ ಔನ್ಸ ನೀರಿನಲ್ಲಿ ಕಲಕಿಸಿ ಆ ನೀರಿನಿಂದಾಗಲೀ, ವೈಲತು ತ್ತಿನ ನೀರಿನಿಂದಾಗಲೀ (೨೭೧), ಸಿರ್ಕದ ನೀರಿನಿಂದಾಗಲೀ (೪[3]), ಮೂಗಿನಲ್ಲಿ ಪಿಚಕಾರಿ ಹೊಡಿಯ ಬಹುದು. ಇಲ್ಲವೆ ಅದರಲ್ಲಿ ಅರಿವೆ ತುಂಡನ್ನು ತೋಯಿಸಿ, ಮೂಗಿನಲ್ಲಿ ಇಡ ಬಹುದು. ಜ್ವರವಿದ್ದ ಪಕ್ಷಕ್ಕೆ, ೧೮೭೭ನೇ ಇಸವಿಯ ಸಂಚಾಂಗದ ೨೦ನೇ ಪಾನಿನಲ್ಲಿ ಅನ್ನಕೋಶ ಮುಂತಾದ ಅಂತರೇಂದ್ರಿಯಗಳಿಂದ ನೆತ್ತ್ರರ ಹರಿಯುವ ರೋಗದ ಚಿಕಿತ್ಸೆಯಲ್ಲಿ ಹೇಳಿದಂತೆ ಮಾಡುವದು.

ಮೂಗಿನಲ್ಲಿ ಪಿನಾಶಿ ಎಂಬ ರೋಗದ ದೆಶೆಯಿಂದಾಗಲೀ, ಇತರ ಕಾರಣದಿಂದಾಗಲೀ ವ್ರಣ ಉಂಟಾಗಿ, ಅದರಿಂದ ಕೀವು ಸೋರುವದುಂಟು. ಇದಕ್ಕೆ ಸುಣ್ಣದ ತಿಳೀ

---

1) ೧೮೮೦ನೇ ಇಸವಿಯ ಪಂಚಾಂಗದ ೪೪--೪೫ನೇ ಪಾನುಗಳಲ್ಲಿ ನೋಡು.

2) ಅದೇ ಇಸವಿಯ ಪಂಚಾಂಗದ ೪೭ನೇ ಪಾನಿನಲ್ಲಿ ನೋಡು.

3) ೧೮೭೭ನೇ ಇಸವಿಯ ಪಂಚಾಂಗದ ೩೫ನೇ ಪಾನಿನಲ್ಲಿಯೂ, ೧೮೭೮ನೇ ಇಸವಿಯ ಪಂಚಾಂಗದ ೫೦ನೇ ಪಾನಿನ ೩ನೇ ಟಿಪ್ಪಣಿಯಲ್ಲಿಯೂ ನೋಡು.

4) ೧೮೮೦ನೇ ಇಸವಿಯ ಪಂಚಾಂಗದ ೪೫ನೇ ಪಾನಿನಲ್ಲಿ ನೋಡು.

5) ೧೮೭೭ನೇ ಇಸವಿಯ ಪಂಚಾಂಗದ ೩೩ನೇ ಪಾನಿನಲ್ಲಿ ನೋಡು. ಈ ಪ್ರಕಾರ ದಪ್ಪವಾಗಿ ಛಾಪಿಸಿರುವ ಅಂಕೆಯಿಂದ ಸೂಚಿಸಿದ ಔಷಧವು ವಿಶೇಷ ಗುಣವುಳ್ಳದ್ದೆಂದು ಎಣಿಸ ಬೇಕು.

6) ೧೮೭೭ನೇ ಇಸವಿಯ ಪಂಚಾಂಗದ ೩೪ನೇ ಪಾನಿನಲ್ಲಿ ನೋಡು.

ನೀರಿನಿಂದಾಗಲೀ (೧೬೩[1]), ಉಗುರುಬೆಚ್ಚಗೆ ಹಾಲುನೀರಿನಿಂದಾಗಲೀ ಪಿಚಕಾರಿ ಹೊಡಿಯುವದು, ಮತ್ತು ಹೊಟ್ಟೆಯಲ್ಲಿ ವಿಾನಿನ ಎಣ್ಣೆ ಕೊಡುವದು.

೨೬೧. ಮೂಗಿನಿಂದ ನೆತ್ತರ ಹರಿಯೋಣಕ್ಕೆ ೪ ಗ್ರೇನ್ ಮೈಲತುತ್ತನ್ನು ಒಂದು ಔನ್ಸ್ ನೀರಿನಲ್ಲಿ ಕಲಕಿಸಿ, ಆ ನೀರಿನ ತಟಕುಗಳನ್ನು ಮೂಗಿನಲ್ಲಿ ಬಿಡುವದರಿಂದ ರಕ್ತಹರಿಯೋಣ ನಿಲ್ಲುವದು. ಇದು ಪಟಕಾರಕ್ಕಿಂತಲೂ ಹೆಚ್ಚು ಪ್ರಯೋಜನವುಳ್ಳದ್ದೆಂದು ಕಂಡು ಬಂದದೆ. ಅದಲ್ಲದೆ ಮೈಲತುತ್ತಿನ ಸ್ವಲ್ಪ ಹುಡಿಯನ್ನು ಜಿಗಳೆ ಕಚ್ಚಿದರಿಂದಾದ ಘಾಯದ ಮೇಲೆ ಚಿಮಿಕಿಸುವದರಿಂದ ನೆತ್ತರ ಹರಿಯೋಣವು ಕೂಡಲೇ ನಿಲ್ಲುವದು.

ಮೂತ್ರಕೃಛ್ರ (ಉರಿಮೂತ್ರ) Scalding on passing Urine.

ಪ್ರಮೇಹದಿಂದಾಗಲೀ, ಮೂತ್ರದ್ವಾರದಲ್ಲಿ ಅಶ್ಮರಿ ಎಂಬ ಕಲ್ಲು ಸಿಕ್ಕಿಕೊಂಡದರಿಂದಾಗಲೀ ಮೂತ್ರದಲ್ಲಿ ಉರಿಯೂ ಬೇನೆಯೂ ಇದ್ದರೆ, ಪೆಟ್ಲುಪ್ಪಿನ ನೀರು (೨೫೪[2]), ಗಂಜಿನೀರು (೧೧೮[3]), ಬೆಂಡೇಕಷಾಯ (೨೫೫[4]), ಇಲ್ಲವೆ ಇಸಬ್‌ಗೋಲು ಬೀಜದ ಕಷಾಯ (೨೫೬[5]) ಕೊಡುವದರಿಂದಲೂ, ಸೊಂಟಕ್ಕೆ ಬಿಸಿ ನೀರಿನ ಶೇಕ (೧೦೯[6]) ಕೊಡುವದರಿಂದಲೂ ಶಮನವಾಗುವವು. ಮೂತ್ರಕಟ್ಟಿಗೆ ಅಫೀಮು (೨೬೨) ಕೊಡುವದು. ಮತ್ತು ಸೊಂಟಕ್ಕೂ ಉಪಸ್ಥಕ್ಕೂ ಬಿಸಿ ನೀರಿನ ಶೇಕ ಕೊಡುವದರಿಂದ ಇತ್ತಲಾಗೆ ಉಂಟಾದ ಮೂತ್ರಕೃಛ್ರ ಗುಣವಾದೀತು. ಈ ಚಿಕಿತ್ಸೆಗಳೆಲ್ಲವೂ ನಿಷ್ಫಲವಾದ ಪಕ್ಷಕ್ಕೆ, ಕಾಲಹರಣ ಮಾಡದೆ, ಬೇಗ ವೈದ್ಯನನ್ನು ಕರಿಸಿ, ಬೇರೆ ತಕ್ಕದಾದ ಚಿಕಿತ್ಸೆಯನ್ನು ಮಾಡಿಸ ಬೇಕು.

ಮೇಲೆ ಹೇಳಿದ ಕಾರಣಗಳಿಂದಲೇ ಉಂಟಾಗುವ ಮೂತ್ರಕೋಶದ ನೋವಿಗೂ ತಿನಸಿಗೂ ಅಫೀಮಿನಿಂದಾಗಲೀ (೨೬೩), ಬೆಂಡೇಕಷಾಯ (೨೫೫[4]), ಇಸಬ್‌ಗೋಲು ಬೀಜದ ಕಷಾಯ (೨೫೬[5]), ಇಲ್ಲವೆ ಗಂಜೀನೀರು (೧೧೮[3]) ಮುಂತಾದ ಶಮನಕರ ಔಷಧಗಳಿಂದಾಗಲೀ, ಸೊಂಟಕ್ಕೆ ಬಿಸಿ ನೀರಿನ ಶೇಕ (೧೦೯[6]) ಕೊಡುವದರಿಂದಾಗಲೀ ಗುಣವಾಗುವದು. ಮೂತ್ರಗುಡ್ಡುಗಳ ಉರುತಕ್ಕೂ ಬೇನೆಗೂ ಅದೇ ಚಿಕಿತ್ಸೆಯೇ ಉಪಶಮನಕರವಾದ್ದು. ಮೂತ್ರಗುಡ್ಡಗಳಿಂದ ನೆತ್ತರ ಹರಿಯೋಣಕ್ಕೆ ೧೮೭ನೇ ಇಸವಿಯ ಪಂಚಾಂಗದ ೧೯—೨೨ನೇ ಪಾನುಗಳಲ್ಲಿ ಹೇಳಿದ ಚಿಕಿತ್ಸೆಯನ್ನು ಮಾಡುವದು.

೨೬೨. ದುಂದುತನದ ದೆಶೆಯಿಂದ ಇಲ್ಲವೆ ಶಳವಿನಿಂದ ಮೂತ್ರದ್ವಾರವು ಸಪುರವಾಗಿ, ಮೂತ್ರ ಕಟ್ಟಿ ಹೋದದ್ದಕ್ಕೆ (ಇದು ಇತ್ತಲಾಗೆ ಉಂಟಾಗಿದ್ದು ಕಠಿಣ ತರದ್ದಲ್ಲವಾದ ಪಕ್ಷಕ್ಕೆ) ಬಿಸಿ ನೀರಿನ ಮಜ್ಜನ ಮಾಡಿಸಿ, ಅಫೀಮು ತುಂಬಾ ಪರಿಮಾಣದಲ್ಲಿ (೬೯[7])

---

1) ೧೬೮ನೇ ಇಸವಿಯ ಪಂಚಾಂಗದ ೪೯ನೇ ಪಾನಿನಲ್ಲಿ ನೋಡು.
2) ೧೬೮ನೇ ಇಸವಿಯ ಪಂಚಾಂಗದ ೫೫ನೇ ಪಾನಿನಲ್ಲಿ ನೋಡು.
3) ೧೬೭ನೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿ ನೋಡು.
4) ೧೬೮ನೇ ಇಸವಿಯ ಪಂಚಾಂಗದ ೫೬ನೇ ಪಾನಿನಲ್ಲಿ ನೋಡು.
5) ೧೬೮ನೇ ಇಸವಿಯ ಪಂಚಾಂಗದ ೪೧ನೇ ಪಾನಿನಲ್ಲಿ ನೋಡು.
6) ೧೬೬೪ನೇ ಇಸವಿಯ ಪಂಚಾಂಗದ ೫೦ನೇ ಪಾನಿನಲ್ಲಿಯೂ, ಅದರ ಟಿಪ್ಪಣಿಯಲ್ಲಿಯೂ ನೋಡು.

ಇಲ್ಲವೆ ಅದರ ಸತ್ವ (laudanum) ೨೫—೩೦ ತಟುಕುಗಳಷ್ಟು ಕೊಟ್ಟು, ತರುವಾಯ ಒಂದಿಷ್ಟು ಹರಳೆಣ್ಣೆ ಕೊಟ್ಟಲ್ಲಿ ಬಹುಶಾ ಸಾಕಷ್ಟು ಶಮನಕರವಾಗುವದು. ಅಫೀನಿಯು ಒಂದು ವೇಳೆ ಬಾಯಿಯಲ್ಲಿ ಕೊಟ್ಟು ಗುಣವಾಗದಿದ್ದಾಗ್ಯೂ, ೨—೩ ಔನ್ಸ್ ಗಂಜಿ ನೀರಿನಲ್ಲಿ ಕಲಕಿಸಿ, ಗುದದ್ವಾರದಿಂದ ಪಿಚಕಾರಿಯಾಗಿ ಕೊಟ್ಟಲ್ಲಿ ಸಹ ಕೆಲವು ಸಾರಿ ಗುಣ ಕಂಡದ್ದುಂಟು.

೨೭೩. ಅಶ್ಮರಿ ಎಂಬ ಕಲ್ಲು ಶಿಕ್ಕಿಕೊಳ್ಳೋಣ ಮುಂತಾದ ಕಾರಣಗಳಿಂದ ಮೂತ್ರ ಕೋಶದಲ್ಲಿ ಉಂಟಾಗುವ ನೋವೂ ಉರಿಯೂ ಶಮನವಾಗುವದಕ್ಕೆ ಸಹ ಅಫೀಮಿನಷ್ಟು ಗುಣಕರವಾದದ್ದು ಬೇರೊಂದು ತೋರುವದಿಲ್ಲ. ಅದನ್ನು ತುಂಬಾ ಪರಿಮಾಣದಲ್ಲಿ ಕೊಡ ಬೇಕು. ಅದನ್ನು ಮತ್ತಷ್ಟು ಗುಣಕರವಾಗಿ ಮುಲಾಮಿನಂತೆ ಪ್ರಯೋಗಿಸ ಬಹುದು. ಹ್ಯಾಗಂದರೆ: ೨ ಗ್ರೇನ್ ಅಫೀಮು, ೪ ಗ್ರೇನ್ ಸಾಬೂನು, ಇವೆರಡನ್ನು ಅರದು, ಬಿರಿಡೆಯಂತೆ ಗುಳಿಗೆ ಮಾಡಿ, ಗುದದ್ವಾರದೊಳಗೆ ತೂರುವದು, ಇಲ್ಲವೆ ೩೦—೪೦ ತಟುಕು ಅಫೀಮಿನ ಸತ್ವವನ್ನು (laudanum) ೨ ಔನ್ಸ್ ತೆಳು ಗಂಜೀನೀರಿನಲ್ಲಿ ಕಲಕಿಸಿ, ಪಿಚಕಾರಿ ಹೊಡಿಯುವದು. ಹಾಗೆಯೇ ಅಫೀಮನ್ನು ಹುರಳಿಕಾಯಿಗಳೆಂಬ ಮೂತ್ರಗುಡ್ಡಗಳ (kidneys) ವೇಧನೆಗೂ, ಉರುತಕ್ಕೂ ಬಹು ಗುಣಕರವಾಗಿ ಕೊಡ ಬಹುದು.

ಮೂರ್ಛೆ Fainting.

೧೮೭೬ನೇ ಇಸವಿಯ ಪಂಚಾಗದ ೩೧—೩೨ನೇ ಪಾನುಗಳಲ್ಲಿಯೂ, ೧೮೮೧ನೇ ಇಸವಿಯ ಪಂಚಾಂಗದ ೫೦—೫೧ನೇ ಪಾನುಗಳಲ್ಲಿಯೂ, ಇದೇ ಪಂಚಾಂಗದ ೪೯ನೇ ಪಾನಿನಲ್ಲಿಯೂ ನೋಡುವದು.

ಮೂಲವ್ಯಾಧಿ, ಮೊಳೆರೋಗ Piles.

ಮಲಾಶಯದಲ್ಲಿ ಒಂದಾಗಲೀ ಹೆಚ್ಚಾಗಲೀ ಚಿಕ್ಕ ಚಿಕ್ಕ ಗುಳ್ಳೆಗಳಂತೆ ಏಳುವದಕ್ಕೆ ಮೂಲವ್ಯಾಧಿಯ ಮೊಳೆಗಳು ಅನ್ನುತ್ತಾರೆ. ಇವುಗಳು ಬಹಳ ಕಾಲ ಇದ್ದದರಿಂದ ಉರುತ, ಬೇನೆ ಮುಂತಾದ ವಿವಿಧ ಉಪದ್ರವಗಳಿಗೆ ಕಾರಣವಾಗುತ್ತವೆ. ಮಲಶೋಧನೆ ಮಾಡುವಾಗ ಬರೇ ನೆತ್ತರು ಹರಿಯುವದೂ ಉಂಟು.

ಚಿಕಿತ್ಸೆ: ಹೊಟ್ಟೆಯಲ್ಲಿ ಗಂಧಕ (೮೧[1]) ಕೊಟ್ಟು, ಮಾಚೀಕಾಯಿಯ ಮುಲಾಮು (೨೭೪) ಹಚ್ಚುವದು. ಅಥವಾ ಕರಿಜಲೀ ಮರದ ಚೆಕ್ಕೆಯ ಕಷಾಯ, ಇಲ್ಲವೆ ಅಳಲೆಕಾಯಿ ಕಷಾಯ ಮುಂತಾದ ಒಗರು ನೀರುಗಳಿಂದ ಪಿಚಕಾರಿ ಹೊಡಿಯುವದು ಸಾಧಾರಣ ಸಂಗತಿಗಳಲ್ಲಿ ಸಾಕಷ್ಟು ಗುಣಕರವಾಗಿರುವದು. ದೀರ್ಘಕಾಲದಿಂದ ಮೂಲವ್ಯಾಧಿಯುಳ್ಳ ಅಶಕ್ತ ರೋಗಿಗಳಿಗೆ ಕರಿಮೆಣಸಿನ ಲೇಹ್ಯ (೮೦[1]) ಬಹಳ ಪ್ರಯೋಜನಕರವಾಗಿರುವದು. ಉರಿಯೂ ಬೇನೆಯೂ ಇದ್ದ ಪಕ್ಷಕ್ಕೆ, ಸೊಂಟಕ್ಕೆ ಬಿಸಿ ನೀರಿನ ಶೇಕವಾಗಲೀ, ಗುದದ್ವಾರಕ್ಕೆ ಬಿಸಿ ನೀರಿನ ಹೊಗೆಯಾಗಲೀ ಕೊಟ್ಟು, ಬಿಳಿಗಾರದ (೧೭೭[1]) ನೀರು ಹಚ್ಚುವದು. ಮತ್ತು ಅಕ್ಕಿ ವೋಲ್ಟಿಸು (೧೧೮೮[3])

1) ೧೮೭೯ನೇ ಇಸವಿಯ ಪಂಚಾಂಗದ ೪೦ನೇ ಪಾನಿನಲ್ಲಿ ನೋಡು.
2) ೧೮೮೨ನೇ ಇಸವಿಯ ಪಂಚಾಂಗದ ೫೬ನೇ ಪಾನಿನಲ್ಲಿ ನೋಡು.
3) ೧೮೮೦ನೇ ಇಸವಿಯ ಪಂಚಾಂಗದ ೪೫ನೇ ಪಾನಿನಲ್ಲಿ ನೋಡು.

[ಅದಕ್ಕೆ ಅಫೀನಿ ಕೂಡಿಸಿಯಾಗಲೀ (೨೭೫), ಅದು ಇಲ್ಲದೆಯಾಗಲೀ] ಸಹ ಕಟ್ಟುವದರಿಂದ ಬಹಳ ಗುಣಾಂಶ ಶಿಕ್ಕುವದು. ಅದಲ್ಲದೆ ಇಂಥಾ ಸಂಗತಿಗಳಲ್ಲಿ (acetate of lead[1]) ಎಂಬ ಸೀಸದ ಲವಣದ ನೀರು (೧ಲಲಂನೇ ಇಸವಿಯ ಪಂಚಾಂಗದ ೪೪ನೇ ಪಾನಿನಲ್ಲಿ ಹೇಳಿದಂತೆ) ಮಾಡಿ, ಅದರಿಂದ ತೊಳಿಯುವದು ವಿಶೇಷ ಗುಣಕರವಾಗಿರುವದು. ಅದು ರೋಗಿಗೆ ಹಿತವಾಗುವಂತೆ ತಣ್ಣಗೆ ಆಗಲೀ, ಬಿಸಿ ಮಾಡಿ ಆಗಲೀ ಪ್ರಯೋಗಿಸ ಬಹುದು. ಮೂಲವ್ಯಾಧಿಯ ಮೊಳೆಗಳಿಂದ ನೆತ್ತರ ಹರಿಯೋಣಕ್ಕೆ ಪಟಕಾರವನ್ನು (೩[1]) ಕೊಟ್ಟು, ಅನ್ನಭೇದಿಯ ನೀರಿನಿಂದ (೭೯[1]) ಪಿಚಕಾರಿ ಹೊಡಿಯುವದು. ಉಷ್ಣ ಪ್ರದೇಶಗಳಲ್ಲಿ ನಿವಾಸಿಸುವವರಿಗೆ ನೆತ್ತರ ಹರಿಯುವ ಮೂಲವ್ಯಾಧಿಯು ದೀರ್ಘಕಾಲದ ವರೆಗಿದ್ದು ವಿಶೇಷವಲ್ಲದ ಪಕ್ಷಕ್ಕೆ, ಅದನ್ನು ಫಕ್ಕನೆ ನಿಲ್ಲಿಸುವದು ಒಳ್ಳೇದಲ್ಲ. ಯಾಕಂದರೆ ಆ ಪ್ರಕಾರ ನೆತ್ತರವು ನಿಂತು ಹೋದ ದೆಶೆಯಿಂದ ಕೆಲವು ಸಂಗತಿಗಳಲ್ಲಿ ಕಲಿಜವು ಬಾಧಕ ಪಟ್ಟು, ರಕ್ತಸ್ತಂಭನವೂ ಬೇಗೂ ಉಂಟಾಗಿ, ಬೇರೆ ಕೆಲವು ಸಂಗತಿಗಳಲ್ಲಿ ರಕ್ತ ತಲೆಗೇರಿ, ಕಠಿಣ ತಲೆಶಿಡಿತ ಆದದ್ದುಂಟು. ಅಂಥಾ ಸಂಗತಿಗಳಲ್ಲಿ ಸ್ವಾಭಾವಿಕ ಪ್ರಕೃತಿಯು ಕೀಳುಕರುಳುಗಳಲ್ಲಿ ಆಗುವ ವಿಶೇಷ ರಕ್ತಚಲನೆಯನ್ನು ಇಳಿಸುವ ಉದ್ದಿಶ್ಯವಾಗಿ ಮಾಡುವ ಅದರ ಕಾರ್ಯಕ್ಕೆ ಅಡ್ಡ ಬಾರದೆ, ಅದನ್ನು ಸ್ವಭಾವಕ್ಕೆನೇ ಬಿಡುವಂಥಾದ್ದು ಒಳ್ಳೇದು. ಆದರೆ ರಕ್ತ ಹರಿಯೋಣವು ವಿಪರೀತವಾಗಿ, ರೋಗಿಯು ಅಶಕ್ತನಾಗಿ ಹೋದ ಪಕ್ಷಕ್ಕೆ, ಅಂಥಾ ಹರಿಯೋಣವನ್ನು ಪೂರ್ಣ ನಿಲ್ಲಿಸುವದಕ್ಕಿಂತಲೂ ಕಡಿಮೆ ಮಾಡುವದಕ್ಕೆ ಮಾತ್ರವೆ ಲಕ್ಷಿಸ ತಕ್ಕದ್ದು.

೨೭೪. ಅಧಿಕ ಉಷ್ಣವಾಗಲೀ ಉರುತವಾಗಲೀ ಇಲ್ಲದ ಮೂಲವ್ಯಾಧಿಯಲ್ಲಿ ಬಹು ಪ್ರಯೋಜನಕರವಾದ ಮುಲಾಮು ಯಾವದಂದರೆ: ೧½ ದ್ರಮ್ ಮಾಚೀಕಾಯಿಯ ಪುಡಿಯನ್ನು ೧ ಔನ್ಸ್ ತುಪ್ಪದಲ್ಲಿ ಚನ್ನಾಗಿ ಅರದು, ಮುಲಾಮು ಮಾಡಿ ಗುದಕ್ಕೆ ಹಚ್ಚುವದು. ನೋವು ಹೆಚ್ಚಿದ ಪಕ್ಷಕ್ಕೆ ಆ ಮುಲಾಮಿಗೆ ½ ದ್ರಮ್ ಅಫೀಮು ಕೂಡಿಸ ಬಹುದು. ಆ ಮುಲಾಮನ್ನು ದಿನಕ್ಕೆ ಎರಡಾವರ್ತಿ ಹಚ್ಚ ಬಹುದು. ಅದಲ್ಲದೆ ಮಾಚೀಕಾಯಿಯ ಕಷಾಯದಿಂದ (೭೬[a]) ಪಿಚಕಾರಿ ಹೊಡಿಯುವದರಿಂದ ಸಹ ಗುಣಕರವಾಗುವದು.

೨೭೫. ವೇಧನೆಯುಳ್ಳ ಮೂಲವ್ಯಾಧಿಯಲ್ಲಿ ಬೀಗೂ ಉರಿಯೂ ಬಹಳ ಇದ್ದ ಪಕ್ಷಕ್ಕೆ, ಅಕ್ಕೀ ಪೋಲ್ಟೀಸನ್ನು ಮಾಡಿ, ಅದರ ಮೇಲೆ ಅಫೀಮಿನ ಸತ್ವವನ್ನಾಗಲೀ ಅಫೀಮು ತೈಲ್ಯವನ್ನಾಗಲೀ (೫[b]) ಚಿಮಿಕಿಸಿ, ಗುದದ್ವಾರಕ್ಕೆ ಕಟ್ಟುವದರಿಂದ ಬಹಳ ಶಮನವಾಗುವದು.

---

1) ಇದು ವಿಷಾಯತೀ ಔಷಧಗಳನ್ನು ನೂರುವ ಅಂಗಡಿಗಳಲ್ಲಿ ದೊರಿಯುವದು.

a) ೧೮೭೬ನೇ ಇಸವಿಯ ಪಂಚಾಂಗದ ೨೪ನೇ ಪಾನಿನಲ್ಲಿ ನೋಡು.

b) ೧೮೭೫ನೇ ಇಸವಿಯ ಪಂಚಾಂಗದ ೪೦ನೇ ಪಾನಿನಲ್ಲಿ ನೋಡು.

4) ೧೮೭೯ನೇ ಇಸವಿಯ ಪಂಚಾಂಗದ ೭೯ನೇ ಪಾನಿನಲ್ಲಿ ನೋಡು.

5) ೧೮೭೬ನೇ ಇಸವಿಯ ಪಂಚಾಂಗದ ೩೪ನೇ ಪಾನಿನಲ್ಲಿ ನೋಡು.

ಅಮೃತತ್ವಂ.

ಸರ್ವೇ ಜನಾ ಅಮೃತತ್ವಂ ಲಿಪ್ಸಂತೇ ಪರಂತು ತತ್ಸ್ವರೂಪೇ ತಲ್ಲಾಭೇಚ ಮತ ಭೇದೋ ವರ್ತತೇ । ಬ್ರಹ್ಮಣಿ ಲೀನತ್ವಮೇವಾಮೃತತ್ವಂ ತಚ್ಚ ಬ್ರಹ್ಮಜ್ಞಾನೇನ ಲಭ್ಯತ ಇತಿ ವೇದಾಂತಿನಃ । ಪರಂತು ಯತ್ರ ಕೆಲ್ಬಿಷಸ್ಯಾತ್ಯಂತಾಭಾವಃ ಸನ್ ಜ್ಞಾನಸ್ಯ ಪವಿತ್ರತ್ವಸ್ಯ ಸರ್ವೇಷಾಂ ಸದ್ಗುಣಾನಾಂ ಚಾನಂತಾ ವೃದ್ಧಿರ್ಭವತಿ ತತ್ರೈವಾಮೃತತ್ವಮಿತಿ ವಯಂ । ಅಧುನಾ ತಲ್ಲಾಭೇ । ಯಸ್ತ್ವಮದ್ವಿತೀಯಃ ಸತ್ಯ ಈಶ್ವರಸ್ತ್ವಯಾ ಪ್ರೇರಿತಶ್ಚ ಯೀಶುಃ ಖ್ರೀಷ್ಟ ಏತಯೋರುಭಯೋರ್ಜ್ಞಾನೇ ಪ್ರಾಪ್ತೇನಂತಾಯುರ್ಭವತಿ । ತಥಾ ಯೀಶುಃ ಕಥಿತವಾನಹಮೇವೋತ್ಥಾಪಯಿತಾ ಜೀವಯಿತಾ ಚ ಯಃ ಕಶ್ಚನ ಮಯಿ ವಿಶ್ವಸಿತಿ ಸ ಮೃತ್ವಾಪಿ ಜೀವಿಷ್ಯತಿ ಯಃ ಕಶ್ಚನ ಚ ಜೀವನ್ಮಯಿ ವಿಶ್ವಸಿತಿ ಸ ಕದಾಪಿ ನ ಮರಿಷ್ಯತಿ । ಈಶ್ವರೋಮಸ್ಮಭ್ಯಮನಂತಜೀವನಂ ದತ್ತವಾನ್ ತಚ್ಚ ಜೀವನಂ ತಸ್ಯ ಪುತ್ರೇ ವಿದ್ಯತೇ ಪುತ್ರಂ ಯೋ ಧಾರಯತಿ ಸ ಜೀವನಂ ಧಾರಯತಿ ಪುತ್ರಂ ಯೋ ನ ಧಾರಯತಿ ಸ ಜೀವನಂ ನ ಧಾರಯತಿ । ಈಶ್ವರ ಇತ್ಥಂ ಜಗದದಯತ ಯತ್ಸ್ವಮದ್ವಿತೀಯಂ ತನಯಂ ಪ್ರಾದದಾತ್ತತೋ ಯಃ ಕಶ್ಚಿತ್ತಸ್ಮಿನ್ ವಿಶ್ವಸಿಷ್ಯತಿ ಸೋಏನಾಶ್ಯಃ ಸನ್ನನಂತಾಯುಃ ಪ್ರಾಪ್ಸ್ಯತಿ । ಇಮಾನಿ ಚತ್ವಾರಿ ಗಂಧಪುಷ್ಪಾಣಿ ಖ್ರಿಷ್ಟೀಯ ಶಾಸ್ತ್ರ ವೃಕ್ಷಾದವಚಿತ್ಯ ಸಕಲಜನೇಭ್ಯಃ ಸಾದರಂ ನಿವೇದಿತಾನಿ । ತಾನಿ ಕದಾಪಿ ನ ಮ್ಲಾಯಂತಿ ತೇಷಾಂ ಸುವಾಸಶ್ಚ ನ ಹ್ರಸತಿ । ತದ್ಗಂಧಮುಪಾಘ್ರಾಯ ಪರಿಶ್ರಾಂತಾ ನಿರ್ವಿಣ್ಣಚೇತಸೋ ಜನಾಃ ಸಮಾಶ್ವಾಸಿತಾ ಭವಂತಿ । ಸರ್ವೈರಿದಂ ಸಮ್ಯಗ್ ಜ್ಞಾಯತಾಂ ಯಥಾ ಯಃ ಖ್ರಿಷ್ಟಮೇಕಂ ಶರಣಂ ವ್ರಜತ್ಯಾತ್ಮಾನಂ ತಸ್ಮೈ ನಿವೇದಯತಿ ಚ ಸ ಏವಾಮೃತತ್ವಂ ಲಭತೇ । ತದೇಹಾಪಿ ತಸ್ಯಾಯಮನುಭವಃ । ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ । ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾಪರೇ ॥ ತಸ್ಯ ಹೃದಯಂ ಪೂರ್ವವದ್ವಿಷಯಸುಖಾಸಕ್ತಂ ನ ಭವತಿ ಹೃದಯಸ್ಯ ಗ್ರಂಥಿರ್ಭಿದ್ಯತೇ । ಅಹೋ ಕೇನೋಪಾಯೇನ ಕೆಲ್ಬಿಷಾದ್ವಿಮುಚ್ಯೇಯಂ ಕರ್ಮಭಿರ್ವಾ ಜ್ಞಾನೇನ ವಾ ಭಕ್ತ್ಯಾ ವೇತ್ಯಾದಯಃ ಸಂಶಯಾಶ್ಛಿದ್ಯಂತೇ । ಕ್ಷೀಯಂತೇ ಚಾಸ್ಯ ಕರ್ಮಣಿ ಮಮ ಪುಣ್ಯ ಕರ್ಮಭಿಃ ಪ್ರಸನ್ನೋ ಭೂತ್ವೇಶ್ವರೋ ಮಾಂ ಸ್ವೀಕರಿಷ್ಯತೀತಿ ಸ್ವಕರ್ಮಾವಲಂಬಸ್ಯ ತ್ಯಾಗಃ ಕ್ರಿಯತೇ । ತಸ್ಮಿನ್ ಖ್ರೀಷ್ಟೇ । ಪರಾವರೇ ಪರಶ್ಚ ಪ್ರಥಮಶ್ಚೇತ್ಯಪರಶ್ಚ ಚರಮಶ್ಚೇತೀತಿ ಪರಾವರಃ । ತತಃ ಸ್ವದಕ್ಷಿಣ ಹಸ್ತಂ ಮಯಿ ನಿಧಾಯ ತೇನೋಕ್ತಮಹಂ ಪ್ರಥಮಶ್ಚರಮಶ್ಚೇತಿ ಶಾಸ್ತ್ರವಾಕ್ಯಾತ್ । ತಂ ಪರಾವರಂ ಖ್ರೀಷ್ಟಂ ದೃಷ್ಟ್ವಾ ತಸ್ಮಿನ್ ವಿಶ್ವಸ್ಯ ಚ ಪರಂ ಸುಖಮನುಭೂಯತ ಇತ್ಯರ್ಥಃ ॥

ದಕ್ಷಿಣ ಹಿಂದುಸ್ಥಾನದಲ್ಲಿ ರೂಢಿಯಾಗಿ ಎಣಿಸುವ

ಶಕಗಳ ಮೊಕಾಬಿಲೆ ಪಟ್ಟಿ.

ಕ್ರಿಸ್ತಶಕ A. D.		ಹಿಂದು ಶಕೆಗಳು				ಫಸಲಿ		ಮಹಮ್ಮದಿ ಹಿಜರಿ	
		ಚಾಂದ್ರಮಾನ		ಸೌರಮಾನ					
		ಸಂವತ್ಸರಗಳು	ಶಾಲಿವಾಹನ ಶಕ	ಮುಲಯಾಳ ಕೊಲ್ಲಮ್					
1807	1867	ಪ್ರಭವ	1729	1789	982	1042	1216	1276	1222	1284
1808	1868	ವಿಭವ	1730	1790	983	1043	1217	1277	1223	1285
1809	1869	ಶುಕ್ಲ	1731	1791	984	1044	1218	1278	1224	1286
1810	1870	ಪ್ರಮೋದೂತ	1732	1792	985	1045	1219	1279	1225	1287
1811	1871	ಪ್ರಜೋತ್ಪತ್ತಿ	1733	1793	986	1046	1220	1280	1226	1288
1812	1872	ಆಂಗೀರಸ	1734	1794	987	1047	1221	1281	1227	1289
1813	1873	ಶ್ರೀಮುಖ	1735	1795	988	1048	1222	1282	1228-29	1290
1814	1874	ಭಾವ	1736	1796	989	1049	1223	1283	1230	1291
1815	1875	ಯುವ	1737	1797	990	1050	1224	1284	1231	1292
1816	1876	ಧಾತು	1738	1798	991	1051	1225	1285	1232	1293
1817	1877	ಈಶ್ವರ	1739	1799	992	1052	1226	1286	1233	1294-95
1818	1878	ಬಹುಧಾನ್ಯ	1740	1800	993	1053	1227	1287	1234	1296
1819	1879	ಪ್ರಮಾಥಿ	1741	1801	994	1054	1228	1288	1235	1297
1820	1880	ವಿಕ್ರಮ	1742	1802	995	1055	1229	1289	1236	1298
1821	1881	ವಿಷು	1743	1803	996	1056	1230	1290	1237	1299
1822	1882	ಚಿತ್ರಭಾನು	1744	1804	997	1057	1231	1291	1238	1300
1823	1883	ಸ್ವಭಾನು	1745	1805	998	1058	1232	1292	1239	1301
1824	1884	ತಾರಣ	1746	1806	999	1059	1233	1293	1240	1302
1825	1885	ಪಾರ್ಥಿವ	1747	1807	1000	1060	1234	1294	1241	1303
1826	1886	ವ್ಯಯ	1748	1808	1001	1061	1235	1295	1242	1304
1827	1887	ಸರ್ವಜಿತು	1749	1809	1002	1062	1236	1296	1243	1305
1828	1888	ಸರ್ವಧಾರಿ	1750	1810	1003	1063	1237	1297	1244	1306
1829	1889	ವಿರೋಧಿ	1751	1811	1004	1064	1238	1298	1245	1307
1830	1890	ವಿಕೃತಿ	1752	1812	1005	1065	1239	1299	1246	1308
1831	1891	ಖರ	1753	1813	1006	1066	1240	1300	1247	1309
1832	1892	ನಂದನ	1754	1814	1007	1067	1241	1301	1248	1310
1833	1893	ವಿಜಯ	1755	1815	1008	1068	1242	1302	1249	1311
1834	1894	ಜಯ	1756	1816	1009	1069	1243	1303	1250	1312

ಕ್ರಿಸ್ತಶಕ		ಸಂವತ್ಸರಗಳು	ಶಾಲಿವಾಹನ ಶಕ		ಮಲಯಾಳ ಕೊಲ್ಲಮ್		ಫಸಲಿ		ಮಹಮ್ಮದಿ ಹಿಜರಿ	
1835	1895	ಮನ್ಮಥ	1757	1817	1010	1070	1244	1304	1251	1313
1836	1896	ದುರ್ಮುಖಿ	1758	1818	1011	1071	1245	1305	1252	1314
1837	1897	ಹೇವಿಳಂಬಿ	1759	1819	1012	1072	1246	1306	1253	1315
1838	1898	ವಿಳಂಬಿ	1760	1820	1013	1073	1247	1307	1254	1316
1839	1899	ವಿಕಾರಿ	1761	1821	1014	1074	1248	1308	1255	1317
1840	1900	ಶಾರ್ವರಿ	1762	1822	1015	1075	1249	1309	1256	1318
1841	1901	ಪ್ಲವ	1763	1823	1016	1076	1250	1310	1257	1319
1842	1902	ಶುಭಕೃತು	1764	1824	1017	1077	1251	1311	1258	1320
1843	1903	ಶೋಭಕೃತು	1765	1825	1018	1078	1252	1312	1259	1321
1844	1904	ಕ್ರೋಧಿ	1766	1826	1019	1079	1253	1313	1260	1322
1845	1905	ವಿಶ್ವಾವಸು	1767	1827	1020	1080	1254	1314	1261-62	1323
1846	1906	ಪರಾಭವ	1768	1828	1021	1081	1255	1315	1263	1324
1847	1907	ಪ್ಲವಂಗ	1769	1829	1022	1082	1256	1316	1264	1325
1848	1908	ಕೀಲಕ	1770	1830	1023	1083	1257	1317	1265	1326
1849	1909	ಸೌಮ್ಯ	1771	1831	1024	1084	1258	1318	1266	1327-28
1850	1910	ಸಾಧಾರಣ	1772	1832	1025	1085	1259	1319	1267	1329
1851	1911	ವಿರೋಧಿಕೃತು	1773	1833	1026	1086	1260	1320	1268	1330
1852	1912	ಪರಿಧಾವಿ	1774	1834	1027	1087	1261	1321	1269	1331
1853	1913	ಪ್ರಮಾದೀಚ	1775	1835	1028	1088	1262	1322	1270	1332
1854	1914	ಆನಂದ	1776	1836	1029	1089	1263	1323	1271	1333
1855	1915	ರಾಕ್ಷಸ	1777	1837	1030	1090	1264	1324	1272	1334
1856	1916	ನಳ	1778	1838	1031	1091	1265	1325	1273	1335
1857	1917	ಪಿಂಗಳ	1779	1839	1032	1092	1266	1326	1274	1336
1858	1918	ಕಾಳಯುಕ್ತಿ	1780	1840	1033	1093	1267	1327	1275	1337
1859	1919	ಸಿದ್ಧಾರ್ಥಿ	1781	1841	1034	1094	1268	1328	1276	1338
1860	1920	ರೌದ್ರಿ	1782	1842	1035	1095	1269	1329	1277	1339
1861	1921	ದುರ್ಮತಿ	1783	1843	1036	1096	1270	1330	1278	1340
1862	1922	ದುಂದುಭಿ	1784	1844	1037	1097	1271	1331	1279	1341
1863	1923	ರುಧಿರೋದ್ಗಾರಿ	1785	1845	1038	1098	1272	1332	1280	1342
1864	1924	ರಕ್ತಾಕ್ಷಿ	1786	1846	1039	1099	1273	1333	1281	1343
1865	1925	ಕ್ರೋಧನ	1787	1847	1040	1100	1274	1334	1282	1344
1866	1926	ಕ್ಷಯ	1788	1848	1041	1101	1275	1335	1283	1345

ಸೂಚನೆ: 1. ಕ್ರಿಸ್ತಶಕವೆಂಬ ಇಸವಿ ಜನವರಿ 1ನೇ ತಾರೀಕಿಗೆ ಪ್ರಾರಂಭವಾಗುವದು.
2. ಸಂವತ್ಸರವೂ ಶಾಲಿವಾಹನ ಶಕವೂ (ಒಂದೇ ದಿವಸ) ಮಾರ್ಚಿ-ಎಪ್ರಿಲಲ್ಲಿ ಪ್ರಾರಂಭವಾಗುವದು
3. ಮಲಯಾಳ ಕೊಲ್ಲಮ್ ಎಂಬ ಕೇರಳ ಶಕವು ಸಪಟಂಬರ ತಿಂಗಳಲ್ಲಿ "
4. ಫಸಲಿ ಜುಲಾಯಿ 1ನೇ ತಾರೀಕಿಗೆ "
5. ಮಹಮ್ಮದಿ ಹಿಜರಿ ಸಾಮಾನ್ಯವಾಗಿ ವರ್ಷ ವರ್ಷ ೧೧ ದಿವಸಕ್ಕೆ ಮುಂದಾಗಿ "

ಮೃತಸಂಜೀವನ.

ಲಾಜರನನ್ನು ಎಬ್ಬಿಸಿದ್ದು.

ರಾಗ ಲಾವಣಿ.

ಯೇಸು ಸಂಜೀವನವೆ ನರರಿಗೆ ಯೇಸು ಶಾಶ್ವತ ಜೀವನ ।
ಯೇಸುವಪಕಂಟಕವೆ ವರಿಹರ ಯೇಸು ಪಾಪಿಗೆ ಪಾವನ ॥ ಪಲ್ಲ ॥

ಬೆಂದು ದಿನದೊಳಗೇಸು ಶಿಷ್ಯರೊಳೆಂದನೊಂದುತ್ತರವನೂ ।
ಸಂದ ನಮ್ಮಯ ಮಿತ್ರ ಲಾಜರನೊಂದಿ ನಿದ್ರೆಯೊಳಿರ್ಪನೂ ॥ ೧ ॥

ಎಬ್ಬಿಸಲಿಕಾನೈದುವೆನು ಯೆನೆ ರಬ್ಬಿ ಕೇಳವ ನಿದ್ರೆಯಾ ।
ಮಬ್ಬು ಹರಿದರೆ ಗುಣವನೈದನೆ ವುಬ್ಬರದ ಘನ ಸುಪ್ತಿಯಾ ॥ ೨ ॥

ಇವನ ನಿಜ ವಿಶ್ರಾಂತಿ ನಿದ್ರೆಯ ಹವಣಿಗೆಂದವರೆನ್ನಲೂ ।
ತವೆ ದಯಾನ್ವಿತ ಸ್ಪಷ್ಟ ನುಡಿದನು ಯವನ ಮರಣದ ಹಂಬಲೂ ॥ ೩ ॥

ಸತ್ತಿಹನು ಲಾಜರನು ನಾನಿರದಿತ್ತಲಿಹ ಕಾರಣಕವಾ ।
ಮತ್ತು ನಿಮಗೋಸುಗವು ನಂಬುಗೆ ವರ್ತಿಸಲು ನಾಂ ಪೋಗುವಾ ॥ ೪ ॥

ದಿದುಮ ತೋಮನು ಜತೆಯ ಶಿಷ್ಯರೊಳೊದಗಿ ನುಡಿದನು ತೆರಳುವಾ ।
ಹದನ ಕಂಡಾವವನ ಸಂಗಡ ಬೆದರದೊಂದಿಗೆ ಸಾಯುವಾ ॥ ೫ ॥

ಸತ್ತು ನಾಲುಕು ದಿವಸವಾ ಮೇಲ್ ಕರ್ತನಲ್ಲಿಗೆ ಬರುತಿರೆ ।
ಮಾರ್ಥಳೆಂದಳು ವೊಡೆಯ ನೀನಿರೆ ಮತ್ಸಹೋದರ ಸಾವನೇ ॥ ೬ ॥

ಆದರೀನರಿತಿಹೆನು ದೇವರೊಳಾದರದಿ ನೀ ಬೇಡಿದಾ ।
ಆ ದಯಾನಿಧಿ ಕೊಡುವನೆನೆ ತವ ಸೋದರನು ಯೇಳುವನಿದಾ ॥ ೭ ॥

ಎನಲು ಪುನರುತ್ಥಾನಕೇಳುವನನುಜನೆನೆ ವಿಭು ನುಡಿದನೂ ।
ವನಿತೆ ಪುನರುತ್ಥಾನವಾನೇ ವನಘ ಶಾಶ್ವತ ಜೀವನೂ ॥ ೮ ॥

ಯೆನ್ನ ವಿಶ್ವಾಸಿಗಳು ಸತ್ತರು ನನ್ನಿ ಬದುಕುವರೆಂಬುದಾ ।
ಇನ್ನು ನಂಬುವುದೆನಲು ನಂಬಿದೆ ಸನ್ನುತನೆ ಘನ ತವ ಪದಾ ॥ ೯ ॥

ನೀನು ಲೋಕಕೆ ಬರುವ ದೇವರ ಮಾನದಾತ್ಮಜ ಕ್ರಿಸ್ತನೂ ।
ನಾನು ನಂಬಿದೆನೆಂದು ಕರದಳು ತಾನೇ ತತ್ಸೋದರಿಯನೂ ॥ ೧೦ ॥

ಮರಿಯಳಂದಾ ಯೇಸು ಚರಣಕೆರಗಿ ಯೆನ್ನ ಸಹೋದರಾ ||
ಕರುಣೆ ನೀನಿರೆ ಸಾಯನೆಂದಾದರಿಸಿದೆನು ಮತಿ ನಿರ್ಧರಾ || ೧೧ ||

ತರುಣಿ ಯೂ ಪರಿ ನುಡಿದು ಕಣ್ಣೀರ್ ಸುರಿಸೆ ನೆರದಿಹ ಯೂದರೂ |
ಮರುಕ ತಾಳದೆ ಯೇಸು ಮಮ್ಮಲ ಮರುಗಿ ಬಾಷ್ಪವ ಸುರಿಸಲೂ || ೧೨ ||

ಎಷ್ಟು ಪ್ರಿಯನೊ ಯೆಂದಯ್ಯೂದರು ದೃಷ್ಟಿ ಕೊಟ್ಟನು ಕುರುಡರಾ |
ಇಷ್ಟವಿದ್ದರೆ ಸಾಯದಂದದಿ ಕಷ್ಟ ಪಡನೆಯಾಪ್ತರಾ || ೧೩ ||

ಎಲ್ಲಿ ಯಿಟ್ಟಿರಿಯವನ ಶವವನು ನಿಲ್ಲದುಸುರೆನೆ ಕರ್ತನೂ |
ಬಲ್ಲಿದನೆ ಯಿಗೊ ಬಂದು ನೋಡೆನಲಲ್ಲಿಗುರೆ ಮುಂದಾದನೂ || ೧೪ ||

ಕರ್ತು ತಿರುಗಿ ಸಮಾಧಿಗುಹೆ ಬಳಿಗತ್ತಲೈತರುತೀಕ್ಷಿಸೀ |
ಪ್ರಸ್ತರವ ಕಿತ್ತೆತ್ತಿ ಬಿಸುಡೆನೆ ಮಾರ್ಥಳೆಂದಳು ದ.ಖಿಸೀ || ೧೫ ||

ನಾರುವನು ನಾಲ್ಕಾಯ್ತು ದಿವಸವು ಕಾರುಣಿಕನೇನ್ ಮಾಡುವಿ |
ನೀರೆ ವಿಶ್ವಾಸಿಸಲು ದೇವರ ಚಾರು ಮಹಿಮೆಯ ನೋಡುವಿ || ೧೬ ||

ಎಂದು ಮೇಲಕ್ಕೆತ್ತಿ ಕಣ್ಗಳ ತಂದೆ ನೀನೆ ಕಳುಹಿದೆ |
ಎಂದುವೀ ಜನವೃಂದ ನಂಬುವದಂದದಲಿ ವೊಲಿದೀವುದೇ || ೧೭ ||

ಚಿತ್ತ ನಿನ್ನದೆ ಯೆನುತ ಲಾಜರ ಮತ್ತು ಲಾಜರ ಬಾ ಯೆನೆ |
ಸತ್ತವನು ಸಂಜೀವಿಸುತ ಹೊರಡುತ್ತ ಬರಲದ್ಭುತವನೇ || ೧೮ ||

ನೋಡಿ ಕೈಕಾಲ್ ಮುಖವ ಸುತ್ತಿದ ಜೋಡು ವಸ್ತ್ರವ ಬಿಚ್ಚಲೂ |
ಹಾಡಿ ಪಾಡಿದರೊಡೆಯನನು ಕೊಂಡಾಡಿ ದೇವರ ನುತಿಸಲೂ || ೧೯ ||

ಮೆರವ ವಿಶ್ವಾಸದಲಿ ಯೂದರು ವರದ ಕ್ರಿಸ್ತನ ವಂದಿಸೀ |
ಪರಮ ಹರುಷಾನಂದ ಭಾವದಿ ತೆರಳಿದರು ಸಂತೋಷಿಸೀ || ೨೦ ||

ಒಬ್ಬ ದೇವರು ಕಳುಹಿದಾ ಸುತನೊಬ್ಬನನೆ ನರರರಿವುದು |
ಊರ್ಬಿಯೊಳಗಿದು ನಿತ್ಯಜೀವದ ಸರ್ಬಭಾಗ್ಯವ ಕೊಡುವದೂ || ೨೧ ||

ಮುಳ್ಳಿ ಕವಿ ರಾಮಕೃಷ್ಣಯ್ಯನ ಕೃತಿ.

ಕೃತಜ್ಞತೆ.

ತನ್ನಿಂದಾಗುವ ಸಹಾಯ ಪರರಿಗೆ ಮಾಡುವದು, ಅವರ ಕೆಲಸಕ್ಕೆ ಕೈಕೊಡುವದು, ಪ್ರತಿ ಒಬ್ಬ ಮನುಷ್ಯನ ಕರ್ತವ್ಯವೇ; ಈ ಮಾತು ಎಲ್ಲರಿಗೂ ಒಪ್ಪಿಕೆಯಾಗಿದೆ. ಪರರಿಂದ ಸಹಾಯ ಹೊಂದಿದವನು ಸಹಾಯ ಮಾಡಿದವರ ಮೇಲೆ ಯಾವ ಮನಸ್ಸು ತೋರಿಸ ಬೇಕೋ, ಅದೇ ಕೃತಜ್ಞತೆ; ಇದನ್ನು ಕುರಿತು ಹೇಳುವದು ಅಗತ್ಯ ವಿಲ್ಲಾ, ಕೃತಜ್ಞತೆ ತನ್ನಿಂದ ತಾನೇ ಹೃದಯದಲ್ಲಿ ಉತ್ಪನ್ನವಾಗುತ್ತದೆಂದು ಒಬ್ಬರು ನೆನಸುವರು; ಹಾಗೆ ನೆನಸ ಬಾರದು. ಕೃತಜ್ಞತೆ ಎಂಬ ಚಿಕ್ಕ ಸಸಿ ಒಮ್ಮೆ ಮನಸ್ಸಿನಲ್ಲಿ ಚಿಗುರಿದರೆ, ಬಹಳ ಜಾಗ್ರತೆಯಿಂದ ಅದನ್ನು ಜೋಕೆ ಮಾಡಿ ಬೆಳಿಸ ಬೇಕು. ಇಲ್ಲವಾದರೆ ಅದು ಬಾಡಿ ಒಣಗಿ ಹೋಗುವದು. ಕೃತಜ್ಞತೆಯು ಸ್ವಾಭಾವಿಕವಲ್ಲದಿದ್ದರೂ ಅದು ದೊಡ್ಡಸ್ತಿಕೆಯ ಲಕ್ಷಣವಾಗಿದೆ.

ಈ ಸೃಷ್ಟಿಯಲ್ಲಿ ಸರ್ವರಿಗೂ ದಾತರನಾಗಿರುವವನು ದೇವರೊಬ್ಬನೇ ಸರಿ. ನಿನಗೆ ಏನೇನು ಶಿಕ್ಕಿಯದೆಯೋ, ಅದೆಲ್ಲವೂ ಆತನ ಕೃಪೆಯಿಂದಲೇ ಶಿಕ್ಕಿದ್ದು. ಆತನು ಅನೇಕ ಮಾರ್ಗಗಳಿಂದ ನಮಗೆ ತನ್ನ ದಾನಗಳನ್ನು ಕಳುಹಿಸಿ ಕೊಡುತ್ತಾನೆ. ಆದ್ದರಿಂದ ಆತನ ಉಪಕಾರಸ್ತುತಿ ವಿಶೇಷವಾಗಿ ಮಾಡ ತಕ್ಕದ್ದು. ಆದರೆ ಮನುಷ್ಯರು ಮಾಡುತ್ತಾರೋ? ಒಬ್ಬಾನೊಬ್ಬ ಅರಸನು ನಿನಗೆ ಉಚಿತ ಉಡಿಗೆರೆ ಕಳುಹಿಸಿದರೆ, ಆ ಅರಸನನ್ನು ಹೊಗಳದೆ, ತಂದು ಕೊಟ್ಟವನಿಗೂ ವಂದನೆ ಮಾಡದೆ, ನಡಿ, ದಾರಿ ಹಿಡಿ ಎಂದು ಹೇಳುವಿಯೋ? ಸಮಾನಸ್ಕಂಧರಾದವರಾದರೂ ಏನಾದರೂ ಕಳುಹಿಸಿ ಕೊಟ್ಟರೆ, ಅವರಿಗೆ ಆ ಪ್ರಕಾರ ಮಾಡುವ ಪದ್ಧತಿ ಸಂಭಾವಿತರಲ್ಲಿ ಇಲ್ಲಾ. ಒಂದು ನಾಯಿಗೆ ಎಲುಬು ಬಿಸಾಡಿದರೆ, ಅದು ಬಾಲ ಅಲ್ಲಾಡಿಸಿ ಉಪಕಾರ ನೆನಸುವದು. ಪಶುಗಳು ಮಾತ್ರವಲ್ಲಾ, ಜಲಚರ ಪ್ರಾಣಿಗಳು ಸಹ ಉಪಕಾರ ನೆನಸಿದ ಉದಾಹರಣೆಗಳುಂಟು. ಎಷ್ಟು ಹೆಚ್ಚಾಗಿ ಮನುಷ್ಯನಲ್ಲಿ ಈ ಗುಣವಿರ ತಕ್ಕದ್ದು!

ಕೃತಜ್ಞಬುದ್ಧಿಯನ್ನು ಅವಶ್ಯವಾಗಿ ತೋರಿಸ ಬೇಕೆಂಬದಕ್ಕೆ ಒಂದು ಕಾರಣವೇನಂದರೆ, ಹೊಂದಿದ ಉಪಕಾರಕ್ಕೆ ಸರಿಯಾಗಿ ಪ್ರತಿ ಮಾಡುವದು ಬಹುಶಾ ನಮ್ಮ ಜೀವಮಾನದಲ್ಲಿ ಅಸದಳವಾಗಿದೆ. ಯಾವನು ನಿನಗೋಸ್ಕರ ಶ್ರಮೆ ತೆಗದುಕೊಂಡನೋ, ಅವನಿಗಾಗಿ ನೀನೂ ಅಷ್ಟೇ ಶ್ರಮೆ ತೆಗದುಕೊಳ್ಳುತ್ತೀಯೋ? ನಿನಗೋಸ್ಕರ ಅವನು ಖರ್ಚು ಮಾಡಿದ ಸಮಯವು ಲಕ್ಷಾವಧಿ ರೂಪಾಯಿಗಿಂತಲೂ ಬೆಲೆಯುಳ್ಳದ್ದು. ಅವನ ಸೇವೆಯಲ್ಲಿ ನೀನು ನಿನ್ನ ಸಮಯ ಖರ್ಚು ಮಾಡಿ ಅವನ ಉಪಕಾರ ಸಂದಾಯ ಮಾಡುವಿಯೋ? ಒಬ್ಬನು ನಿನಗೆ ಅಸ್ವಸ್ಥವಿರುವಾಗ ನಿನ್ನ ಸಮಾಚಾರ ತೆಗದುಕೊಂಡು ತನ್ನ ಕೈಯಿಂದ ನಿನಗೆ ಔಷಧೋಪಚಾರ ಮಾಡಿದನಾದರೆ, ಅವನ ಅಳತೆಯಿಂದಲೇ ನೀನು ಬದಲು ಅಳೆದು ಕೊಡುತ್ತೀಯೋ? ನಿನ್ನ ದೆಶೆಯಿಂದ ಕಣ್ಣೀರು ಸುರಿಸಿ, ಕಕುಲತೆಯಿಂದ ಕಣ್ಣುರೆಪ್ಪೆ ಮುಚ್ಚದೆ ನಿನ್ನನ್ನು ಆರೈಕೆ ಮಾಡಿದ ನಿನ್ನ ತಾಯಿಗಾಗಿ ನೀನು ಅದೇ ಪ್ರಕಾರ ಅಳುತ್ತಾ ಎಚ್ಚರಿಕೆ ಇರುತ್ತೀಯೋ? ಹಾಗೆ ಮಾಡು

ವದು ಅಗತ್ಯವೂ ಇಲ್ಲಾ, ಅದಕ್ಕೆ ಸಂದರ್ಭವೂ ಇಲ್ಲ ಎಂದು ನೀನು ಹೇಳುವಿ; ಇರಲಿ; ಬೇಕಾದಷ್ಟು ಬಾಯಿಯಿಂದ ಹೇಳುವದರಿಂದ ಅಲ್ಲಾ, ಕೃತ್ಯದಿಂದಲೇ ಉಪಕಾರಸ್ಮರಣೆ ಮಾಡ ತಕ್ಕದ್ದು.

ನಾವು ಎಷ್ಟು ಐಶ್ವರ್ಯವಂತರೂ ದೊಡ್ಡವರೂ ಸಮರ್ಥರೂ ಆಗಿದ್ದರೂ ಚಿಕ್ಕ ದೊಡ್ಡ ಕಾರ್ಯಗಳಲ್ಲಿ ಇತರರಿಗೆ ಹಂಗಾಳುಗಳಾಗಿದ್ದೇವೆ. ನಾವು ಅವರಿಗೆ ಪ್ರತ್ಯುಪಕಾರ ಮಾಡಿ ಸಲ್ಲಿಸಲಾರೆವು ಖರೆ, ಪರಂತು ಕೃತಜ್ಞಭಾವನೆ ಹಿಡಿದು ಸಂದರ್ಭ ಒದಗಿದಾಗ ನಮ್ಮ ಮೇಲೆ ಆದ ಉಪಕಾರವನ್ನು ಬೇರೆಯವರಿಗೆ ಮಾಡಿದರೆ, ಅಲ್ಪವಾಗಿ ಸಂದಾಯ ಮಾಡಿದ ಹಾಗಾಗುವದು. ಈ ಲೋಕವು ಕೆಟ್ಟು ಹೋದದ್ದು ಖರೆ, ಆದರೆ ದಯೆ ಕೃಪೆ ಕೃತಜ್ಞತೆ ಇವೇ ಲೋಕದ ಸೌಳುನೀರನ್ನು ಶೀ ಮಾಡುವದಕ್ಕೆ ಬಹಳ ಒಳ್ಳೇ ಸಾಧನಗಳಾಗಿವೆ. ಒಮ್ಮೆ ಒಬ್ಬನು ಮತ್ತೊಬ್ಬನಿಗೆ ದೊಡ್ಡ ಉಪಕಾರ ಮಾಡಿದನು; ಆವಾಗ ಉಪಕಾರ ಪಡದವನು, ನಿಮ್ಮ ಉಪಕಾರ ಹ್ಯಾಗೆಽಸಲ್ಲಿಸಲಿ? ಎಂದು ಉಪಕಾರ ಮಾಡಿದವನನ್ನು ಕೇಳಲು, ಅವನು ಹೇಳಿದನು — ನಾನು ನಿನಗೆ ಕಡವಾಗಿ ಕೊಟ್ಟ ಈ ಉಪಕಾರವನ್ನು ನೀನು ಮತ್ತೊಬ್ಬರಿಗೆ ಮಾಡು, ನನಗೆ ಅದು ಸಂದ ಹಾಗಾಯಿತು, ಎಂದು ನಾನು ತಿಳಿದೇನು. ಈ ಉತ್ತರ ಠೀಕಾಗಿದೆ. ಇದೇ ರೀತಿಯಿಂದ ಒಬ್ಬೊಬ್ಬ ಮನುಷ್ಯನು ಉಪಕಾರಸ್ಮರಣೆ ಮಾಡುವವನಾದರೆ, ಈ ಪೃಥ್ವಿಯು ಉಪಕಾರಸ್ಮರಣೆ ಎಂಬ ಚಿನ್ನದ ಸಂಕೋಲೆಯಿಂದ ವೇಷ್ಟಿತವಾಗಿ, ಆ ಮನುಷ್ಯನು ಸತ್ತರೂ, ಅವನ ಸತ್ಕೃತ್ಯಗಳು ಅಮರವಾಗಿ ಉಳಿದು ಅವನ ಹಿಂದೆ ಬೆಳಿಯುತ್ತಾ ಇರುವವು. ಫಲಾನಿ ಮನುಷ್ಯನಿಗೆ ನನ್ನ ಮೇಲೆ ಹಕ್ಕು ಉಂಟು, ನನಗೆ ಒಳ್ಳೇದು ಮಾಡುವದು ಅವನ ಕರ್ತವ್ಯ, ಅವನ ಹಂಗು ಎಂದು ಯಾರೂ ಹೇಳಲೂ ನೆನಸಲೂ ಬಾರದು. ಪ್ರೀತಿಯ ನೇಮದ ಮೇಲೆ ಉಪಕಾರ ಮಾಡುವದು ಅವನ ಕರ್ತವ್ಯವೇ ಖರೆ, ಆದರೆ ಅದೇ ಪ್ರೀತಿಯ ನೇಮದ ಮೇಲೆ ಉಪಕಾರ ನೆನಸುವದೂ ನಿನ್ನ ಹಂಗು; ಆದ್ದರಿಂದ ಉಪಕಾರ ಹೊಂದಿದ ಮೇಲೆ ಇದು ಕೇವಲ ಕೃಪೆಯಿಂದ ಆದದ್ದು ಎಂದು ಮನವರಿಕೆ ಮಾಡಿ, ನಿನ್ನಿಂದಾಗುವಷ್ಟು ಉಪಕಾರಸ್ಮರಣೆ ಮಾಡುವದಕ್ಕೆ ಪ್ರಯತ್ನ ಮಾಡು. ಇದು ದೇವರ ಮುಂದೆಯೂ ಮನುಷ್ಯರ ಮುಂದೆಯೂ ಹಿತವಾಗಿದೆ.

ಮನುಷ್ಯರ ಉಪಕಾರಸ್ಮರಣೆ ಮಾಡುವವನು ದೇವರ ಉಪಕಾರಸ್ಮರಣೆ ಮಾಡುವವನೂ ಆಗುತ್ತಾನೆ. ಮನುಷ್ಯರ ಉಪಕಾರ ನೆನಸದವನು ದೇವರ ಉಪಕಾರವನ್ನೂ ನೆನಸನು. ಪಾಪಿಗಳಾದ ನಮ್ಮನ್ನು ರಕ್ಷಣ್ಯ ಮಾಡುವದಕ್ಕೆ ದೇವರು ತನ್ನ ಮಗನಾದ ಯೇಸು ಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿದ್ದು ಇದು ಮಹದುಪಕಾರವೇ. ಈ ದಯವನ್ನು ನಾವು ಶಿರಸಾವಹಿಸಿಕೊಳ್ಳ ಬೇಕು. ರಕ್ಷಕ ಯೇಸು ಕ್ರಿಸ್ತನಲ್ಲಿ ವಿಶ್ವಾಸವಿಡ ಬೇಕು. ಇದೇ ದೇವರ ಚಿತ್ತವು. ಆತನನ್ನು ಅಂಗೀಕರಿಸುವವರಿಗೆ ಇನ್ನೂ ಹೆಚ್ಚಿನ ದಯೆ ಅಂದರೆ ದೇವರ ಮಕ್ಕಳಾಗುವ ಅಧಿಕಾರವು ಶಿಕ್ಕುತ್ತದೆ. ತನ್ನ ಒಬ್ಬನೇ ಹುಟ್ಟಿದ ಮಗನನ್ನು ಕರುಣಿಸದೆ ನಮಗಾಗಿ ಕೊಟ್ಟವನು ಆತನ ಮುಖಾಂತರ ನಮಗೆ ಎಲ್ಲವನ್ನು ದಯೆಪಾಲಿಸುವನು ಎಂಬ ಭರವಸವು ದೇವರ ಮಕ್ಕಳಾದವರಲ್ಲಿ ಪರಿಪೂರ್ಣವಾಗಿದೆ.

 ನೀವು ಒಬ್ಬರಿಗೊಬ್ಬರು ಪಾಪಗಳನ್ನು ಅರಿಕೆ ಮಾಡಿರಿ. ಯಾಕೋಬ. ೫, ೧೬.

ತಪ್ಪು ಸ್ವೀಕರಿಸುವದು.

ನಾವೆಲ್ಲರೂ ತಪ್ಪು ಮಾಡುತ್ತೇವೆ, ಎಂಬುವ ಮಾತು ನಿತ್ಯವೂ ನಮ್ಮ ಬಾಯಿಯಿಂದ ಬರುತ್ತದೆ. ಆದರೆ ನಾವು ತಪ್ಪು ಮಾಡಿದೆವೆಂದು ಮನುಷ್ಯರ ಮುಂದೆ ಹೇಳುವದಕ್ಕೆ ಸಿದ್ಧವಿದ್ದೇವೋ? ನಾವು ತಪ್ಪು ಸ್ವೀಕರಿಸಲಿಕ್ಕೆ ಇರುವಾಗ ಗರ್ವ ಅಹಂಕಾರ ಭಿಡೆ ಇವು ಮುಂದೆ ಬಂದು ನಮ್ಮನ್ನು ಹಿಂದೆ ಹಾಕುತ್ತವಲ್ಲಾ? ನಾವು ಒಬ್ಬರಿಗೆ ತಪ್ಪು ಮಾಡಿದ್ದಾದರೆ, ಅವರ ಬಳಿಗೆ ಹೋಗಿ ಕೈಜೋಡಿಸಿ ತಪ್ಪು ನಮ್ಮ ಮೇಲೆ ತೆಗದುಕೊಂಡು, ಪಾಲಿಸ ಬೇಕೆಂದು ಬೇಡುವದು ನ್ಯಾಯವಲ್ಲವೋ? ನಾವು ಮನುಷ್ಯರು, ನಮ್ಮ ಜ್ಞಾನ ಕಡಿಮೆ; ನಾವು ಹಿಂದೆ ಮುಂದೆ ನೋಡಿ ನಡಿಯುವದಿಲ್ಲಾ; ಈ ಕಾರಣದಿಂದ ನಾವು ಪದೇ ಪದೇ ಇತರರಿಗೆ ನೋಯಿಸುತ್ತೇವೆ; ತಪ್ಪು ಬಂತೆಂದು ತಿಳಿದ ಕೂಡಲೇ ಅವನ ಹತ್ತರ ಹೋಗಿ, ನಾನು ಮಾಡಿದ್ದು ತಪ್ಪು, ನನಗೆ ಕ್ಷಮೆ ಮಾಡ ಬೇಕು ಎಂದು ಹೇಳುವದಕ್ಕೆ ನಾಚಿಕೆ ಯಾಕೆ? ಒಬ್ಬರು ನಿನ್ನ ಬಳಿಯಲ್ಲಿ ಒಂದು ಒಡವೆ ಜೋಪಾಸನೆಯಿಂದ ಇಟ್ಟುಕೊಳ್ಳುವದಕ್ಕೆ ಕೊಟ್ಟದ್ದು ನೀನು ಕಳೆದರೆ, ಇಲ್ಲವೆ ಹಾಳಾದರೆ, ಏನು ಉಪಾಯ ಮಾಡ ಬೇಕು? ಹತ್ತೆಂಟು ದಿವಸ ಸುಮ್ಮನೆ ಮನಸ್ಸಿನಲ್ಲೇ ಹಲುಬಿಕೊಳ್ಳುವದೋ? ಅಥವಾ ಕೂಡಲೇ ಮಾಲಿಕನ ಬಳಿಗೆ ಹೋಗಿ, ತಪ್ಪು ಬಂತೆಂದು ಹೇಳಿ, ತನ್ನಿಂದಾದ ಮಟ್ಟಿಗೆ ನಷ್ಟ ಭರ್ತಿ ಮಾಡುವದೋ? ಈ ಕಡೆ ಮಾರ್ಗ ಹಿಡಿದರೆ, ನೀನು ಪ್ರಾಮಾಣಿಕ ಮನುಷ್ಯನೆಂದು ಆ ಮಾಲಿಕನು ತಿಳಿಯುವನು; ನಿನ್ನ ಮನಸ್ಸಿನಲ್ಲಿಯೂ ಕಕುಲತೆ ಹೋಗಿ ಸಮಾಧಾನ ಬರುವದು.

ಆದರೆ ತಪ್ಪು ಮತ್ತು ಪಾಪ ಇವುಗಳಿಗೆ ಭೇದ ಉಂಟಲ್ಲಾ? ಸುಳ್ಳಾಡುವದು, ಕಪಟ, ಕಳ್ಳತನ, ಹಾದರ, ಬೈಯುವದು, ಹೊಟ್ಟೆಕಿಚ್ಚು, ಇವುಗಳಿಗೆ ಏನು ಹೇಳ ಬೇಕು? ತಪ್ಪೋ? ಪಾಪವೋ? ಪವಿತ್ರ ಶಾಸ್ತ್ರದಲ್ಲಿ ಇವುಗಳಿಗೆ ಪಾಪವೆಂಬ ಹೆಸರು ಇಡಲ್ಪಟ್ಟಿದೆ. ದೇವರ ಅಪ್ಪಣೆಯ ಉಲ್ಲಂಘನವೇ ಪಾಪ, ಅನ್ಯಾಯ. ದೇವರು ದಯೆಪಾಲಿಸಿದ ಹತ್ತು ಆಜ್ಞೆಗಳು ಪವಿತ್ರವೂ ನ್ಯಾಯವಾದವೂ ಒಳ್ಳೇಯವೂ ಆಗಿವೆ. ಈ ಆಜ್ಞೆಗಳಲ್ಲಿ ಒಂದನ್ನಾದರೂ ಮೀರಿದರೆ, ಅದೇ ಪಾಪ. ನಾವೆಲ್ಲವರೂ ದೇವರ ಆಜ್ಞೆಗಳನ್ನು ಮೀರಿದವರೂ ಪಾಪಿಗಳೂ ಆಗಿದ್ದೇವೆ. ಆದದರಿಂದ ತಡ ಮಾಡದೆ, ದೇವರ ಮುಂದೆ ದುಃಖಪೂರ್ವಕವಾಗಿ ನಮ್ಮ ಸಹಸ್ರ ಪಾಪಗಳನ್ನು ಅರಿಕೆ ಮಾಡುವಾ. ದೇವರು ಕ್ಷಮಿಸುತ್ತಾನೋ? ಹೌದು, ಕ್ಷಮಿಸುತ್ತಾನೆ. ದೇವರ ಮಗನಾದ ಯೇಸು ಕ್ರಿಸ್ತನು ವಧಸ್ತಂಭದಲ್ಲಿ ನಮ್ಮ ಪಾಪಗಳ ಪ್ರಾಯಶ್ಚಿತ್ತವಾಗ ಬೇಕೆಂದು ಅನಿರ್ವಾಚ್ಯ ವೇದನೆಗಳನ್ನು ಸಹಿಸಿ, ಸ್ವಂತ ಪ್ರಾಣಾರ್ಪಣೆ ಮಾಡಿದನು. ಇದನ್ನು ನಾವು ಧ್ಯಾನಿಸಿದರೆ, ದೇವರ ದೃಷ್ಟಿಯಲ್ಲಿ ಪಾಪವು ಎಷ್ಟು ಭಯಂಕರ, ಅಘೋರವೆಂದು ತಿಳಿಯ ಬಹುದು. ಯೇಸು ಕ್ರಿಸ್ತನ ಪ್ರಾಯಶ್ಚಿತ್ತಾರ್ಥಕ ಮರಣದ ಮೂಲವಾಗಿ ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ; ನಮಗೆ ಪರಿಶುದ್ಧತ್ವವನ್ನು ಕೊಡುತ್ತಾನೆ; ನಾವು ಇನ್ನು ಮುಂದೆ ಪಾಪಮಾರ್ಗ ಬಿಟ್ಟು ನೀತಿಯಲ್ಲಿ ಭಕ್ತಿಯಲ್ಲಿ ನಡಿಯುವಂತೆ ತ್ರಾಣವನ್ನು ದಯೆಪಾಲಿಸುತ್ತಾನೆ. ಈ ಭಾಗ್ಯವನ್ನು ಸರ್ವರೂ ಪಡಕೊಳ್ಳುವವರಾಗಲಿ!

ರ ನೇ ತೀ ವ್ರ್

(೧೮೬೯ನೇ ಇಸವಿ Iನೇ ಆಕ್ಟಿನಲ್ಲಿರುವ ಪಟ್ಟಿಯಿಂದ ಎತ್ತಿ ತೆಗದು ಸಂಕ್ಷೇಪಿಸಿದ್ದು.)

ದಸ್ತಾವೇಜಿನ ವಿವರಣೆ:	ಸ್ಟಾಂಪ್ ಡಾಸಲು:

11. (Bill of Exchange or Promissory Note) ಬಿಲ್ ಒಫ್ ಎಕ್ಸ್‌ಚೇಂಜ್ ಯಾ ಪ್ರೊಮಿಸರಿ ನೋಟು (ಅಂದರೆ ವಟಾಯಿಸ ತಕ್ಕ ಪತ್ರ ಇದರಲ್ಲಿ ಚಕ್ಕ್, ದಸ್ತಾನೇಜು, ಬೀಂಕನೋಟು, ಇಲ್ಲವೆ ಕರೆನ್ಸಿನೋಟು ಕೇರುವದಿಲ್ಲ):—

a) ಕೇಳಿದಾಗಲೇ ಪಾವತಿ ಆಗ ತಕ್ಕದ್ದಾಗಿ, ಅದರ ಮೌಲ್ಯ ೨೦ ರೂಪಾಯಿಗೆ ಮಿಾರಿದರೆ . . . . . ೧ ಆಣೆ

ಒಂದಕ್ಕೆ: ದುಬಾರಿಪ್ರತಿಗೆ: ತಿಬಾರಿಪ್ರತಿಗೆ:

b) ಕೇಳಿದಾಗಲೇ ಅಲ್ಲದೆ ಅನ್ಯಥಾ ಪಾವತಿಯಾಗ ತಕ್ಕದ್ದಾಗಿ, ಬರದ ಯಾ ಕಂಡ ತಾರೀಕಿನಿಂದ ಒಂದು ಸಂವತ್ಸರಕ್ಕೆ ಮಿಾರದ ವಾಯಿದೆ ಇದ್ದರೆ:

	ರೂ.	ಆ.	ರೂ.	ಆ.	ರೂ.	ಆ.
ನಮೂದಿಸಿದ ರೂಪಾಯಿ ೨೦೦ಕ್ಕೆ ಮಿಾರದಿದ್ದರೆ	೦	೩	೦	೧	೦	೧
ರೂಪಾಯಿ ೨೦೦ಕ್ಕೆ ಮಿಾರಿ ೪೦೦ ,,	೦	೪	೦	೨	೦	೨
,, ೪೦೦ ,, ೬೦೦ ,,	೦	೬	೦	೩	೦	೩
,, ೬೦೦ ,, ೧೦೦೦ ,,	೦	೧೦	೦	೫	೦	೪
,, ೧೦೦೦ ,, ೧೩೦೦ ,,	೦	೧೩	೦	೬	೦	೪
,, ೧೩೦೦ ,, ೧೬೦೦ ,,	೧	೦	೦	೮	೦	೬
,, ೧೬೦೦ ,, ೨೫೦೦ ,,	೧	೮	೦	೧೩	೦	೮
೨೫೦೦ ರೂಪಾಯಿ ಮೇಲೆ ೧೦೦೦೦ ರೂ. ವರೆಗೆ ಪ್ರತಿ ರೂ. ೨೫೦೦ಕ್ಕೆ ಯಾ ಅದರ ಅಂಶಕ್ಕೆ.	೧	೮	೦	೧೩	೦	೮
೧೦೦೦೦ ರೂಪಾಯಿ ಮೇಲೆ ೫೦೦೦೦ ರೂಪಾಯಿ ವರೆಗೆ ಪ್ರತಿ ರೂಪಾಯಿ ೫೦೦೦ಕ್ಕೆ ಯಾ ಅದರ ಅಂಶಕ್ಕೆ. . .	೫	೦	೧	೮	೧	೦
೫೦೦೦೦ ರೂಪಾಯಿ ಮೇಲೆ ಪ್ರತಿ ರೂಪಾಯಿ ೧೦೦೦೦ಕ್ಕೆ ಯಾ ಅದರ ಅಂಶಕ್ಕೆ	೬	೦	೫	೦	೨	೦

c) ಬರದ ತಾರೀಕಿನಿಂದ ಇಲ್ಲವೆ ಕಂಡ ತಾರೀಕಿನಿಂದ ಒಂದು ಸಂವತ್ಸರದ ಮೇಲೆ ಪಾವತಿ ಆಗ ತಕ್ಕದ್ದಾದರೆ— ೧೫ನೇ ಅಂಕೆಯಲ್ಲಿ ಹೇಳಿರುವಷ್ಟೇ ತಸೆ

12. (Bill of Lading) ಬಿಲ್ ಒಫ್ ಲೇಡಿಂಗ್ ಎಂಬ ಸಾಮಾನು (ಜಹಜಿನ ಮೇಲೆ) ಭರಾವಣಿಚೀಟು . . . . . ೪ ಆಣೆ

13. ದಸ್ತಾವೇಜು (ಈ ಆಕ್ಟಿನಿಂದ ಅನ್ಯಥಾ ನಿಬಂಧಿಸಲ್ಪಡದೆ ಇರುವಂಥಾದ್ದು):—

ಇದರ ಮೊಬಲಗು ೧೦ ರೂಪಾಯಿಗೆ ಮಿಾರದಿದ್ದರೆ . .	೨ ಆಣೆ
೧೦ ರೂಪಾಯಿಗೆ ಮಿಾರಿ ೫೦ ರೂಪಾಯಿಗೆ ಮಿಾರದಿದ್ದರೆ. .	೪ ಆಣೆ
೫೦ ,, ,, ೧೦೦ ,, ,, . .	೮ ಆಣೆ
೧೦೦ರೂ.ಮೇಲೆ ೧೦೦೦ರೂ. ವರೆಗೆ ಪ್ರತಿ ರೂ.೧೦೦ಕ್ಕೆ ಯಾ ಅದರಂಶಕ್ಕೆ	೮ ಆಣೆ
೧೦೦೦,, ,, ಪ್ರತಿ ,,೫೦೦ಕ್ಕೆ ಯಾ ಅದರ ಅಂಶಕ್ಕೆ . .	೨ ರೂಪಾಯಿ ೮ ಆಣೆ

14. (Bond or Mortgage-Deed) ದಸ್ತಾವೇಜು ಅಥವಾ ಅಡವು ದಸ್ತಾವೇಜು (ಒಂದು ಕೆಲಸವನ್ನು ಸರಿಯಾಗಿ ನೆರವೇರಿಸ ತಕ್ಕ ಬಗ್ಗೆ ಅಥವಾ ತದ್ವಾರಾ ಬಂದ ಹಣದನ್ನು ಕುರಿತು ಸಮಾಧಾನ ಪಡಿಸ ತಕ್ಕ ಬಗ್ಗೆ ಜವಾಬದಾರಿಯಾಗಿ ಬರಕೊಡುವಂಥಾದ್ದು):—

a) ಇದರ ಮೊಬಲಗು ೧೦೦೦ ರೂಪಾಯಿಗೆ ಮೀರದಿದ್ದರೆ—13ನೇ ಅಂಕೆಯಲ್ಲಿ ಹೇಳಿರುವಷ್ಟೆ ತಸೆ

b) ಇತರ ಸಂಗತಿಯಲ್ಲಿ . . . . . ೫ ರೂಪಾಯಿ

16. ಏಲಂ ಮಾಡಿದ ಆಸ್ತಿ ಬಗ್ಗೆ ಕೊಡ ತಕ್ಕ ದರಖಾಸ್ತ ಪಟ್ಟಿ—21ನೇ ಅಂಕೆಯಲ್ಲಿ ಹೇಳಿರುವಷ್ಟೆ ತಸೆ

19. ಇಪ್ಪತ್ತು ರೂಪಾಯಿಗೆ ಮೀರಿದ ಹಣಕ್ಕೆ (Cheque) ಚೆಕ್ಕ್ ಯಾನೆ ಹುಂಡಿ (ಇದು ಹಣ ಕೇಳಿದಾಗಲೇ ಕೊಡ ತಕ್ಕದ್ದಾಗಿದ್ದರೆ). . ೧ ಆಣೆ

21. (Conveyance) ಕೊನ್ವೆಯನ್ಸ್ ಯಾನೆ ಕ್ರಯಸಾಧನ, ದಾನ ಸಾಧನ; ಇದರಲ್ಲಿ ಕಾಣಿಸಿದ ಪ್ರತಿಫಲದ ಮೊಬಲಗು

ರೂಪ್ಯಾ ೫೦ಕ್ಕೆ ಮೀರದಿದ್ದರೆ . . . . . ೯ ಆಣೆ

" ೫೦ ಮೀರಿ ರೂ. ೧೦೦ಕ್ಕೆ ಮೀರದಿದ್ದರೆ . . . . ೧ ರೂಪಾಯಿ

" ೧೦೦ " " ೧೦೦೦ವರೆಗೆ ಪ್ರತಿ ರೂ. ೧೦೦ಕ್ಕೆ ಯಾ ಅದರ ಅಂಶಕ್ಕೆ ೧ ರೂಪಾಯಿ

" ೧೦೦೦ " " ಪ್ರತಿ ೫೦೦ ರೂಪಾಯಿಗೆ ಯಾ ಅದರ ಅಂತಕ್ಕೆ ೫ ರೂಪಾಯಿ

29. ಸಾಲ ಕೊಟ್ಟ ಹಣದ ವಸೂಲಿಯ ಬಂಡೋಬಸ್ತಿಗಾಗಿ ಮೂಲ ದಸ್ತಾವೇಜುಗಳನ್ನು ಇಲ್ಲವೆ ಬೇರೆ ಬೆಲೆಯುಳ್ಳ ಸಾಧನಗಳನ್ನು ಠೇವಣಿ ಇಟ್ಟು, ಅಥವಾ ಚರಸೊತ್ತಿನ ಈಡಿನ ಮೇಲೆ ಸಾಲ ತಕ್ಕೊಂಡದ್ದಕ್ಕೆ ಸಾಕ್ಷ್ಯವಾಗಿ ಮಾಡುವ ಕರಾರನ್ನು ತೋರಿಸುವ ದಸ್ತಾವೇಜು:—

a) ಸೆಲದ ಹಣವು ಅಂಥಾ ದಸ್ತಾವೇಜಿನ ತಾರೀಕಿನಿಂದ ಮೂರು ತಿಂಗಳ ಮೇಲೆ ಒಂದು ವರ್ಷದೊಳಗೆ ಸಂದಾಯವಾಗ ತಕ್ಕಂಥಾದ್ದಾಗಿದ್ದರೆ } 11ನೇ ಅಂಕೆಯ *b*ಯಲ್ಲಿ ಹೇಳಿರುವಷ್ಟೆ ತಸೆ

b) ೩ ತಿಂಗಳೊಗೆ ಸಂದಾಯವಾಗ ತಕ್ಕಂಥಾದ್ದಾಗಿದ್ದರೆ— 11ನೇ *b*ಯಲ್ಲಿಯ ತಸೆಯ ಅರೆವಾಸಿ

30. ಅಡವಿನ ಸೊತ್ತಿನ ಮೇಲೆ ಇನ್ನೂ ಸಾಲವನ್ನು ಹೊರಿಸಿ ಉಂಟಾಗುವ ದಸ್ತಾವೇಜು:—

a) ಪ್ರಥಮತಾ ಆಪ ಅಡವು 44ನೇ ಅಂಕೆಯ *a*ಯಲ್ಲಿ ಸೂಚಿಸಿರುವಂಥಾದ್ದಾಗಿದ್ದರೆ . . . . . 21ನೇ ಅಂಕೆಯಲ್ಲಿ ಹೇಳಿದ ಕ್ರಯಸಾಧನದಷ್ಟೆ ತಸೆ

b) ಅಂಥಾ ಅಡವು 44ನೇ ಅಂಕೆಯ *b*ಯಲ್ಲಿ ಹೇಳಿದಂಥಾದ್ದಾಗಿದ್ದರೆ, 13ನೇ ಅಂಕೆಯಲ್ಲಿರುವಷ್ಟೆ ತಸೆ

32. ಪಾಲುಗಾರಿಕೇ ದಸ್ತಾವೇಜು. . . . . ೧೦ ರೂಪಾಯಿ

33. ಪಾಲುಗಾರಿಕೆ ಅಗಲಿಕೇ ದಸ್ತಾವೇಜು . . . . ೫ ರೂಪಾಯಿ

35. ಯಾವದೊಂದು ಸೊತ್ತಿನ ಬಧಲಾವಣೆ ದಸ್ತಾವೇಜು—ಅಂಥಾ ಸೊತ್ತಿನ ಹೆಚ್ಚಾದ ಕಮ್ಮತಿನ ಬಗ್ಗೆ 21ನೇ ಅಂಕೆಯಲ್ಲಿ ಕ್ರಯಸಾಧನಕ್ಕೆ ಹೇಳಿರುವಷ್ಟೆ ತಸೆ

37. ಪಾಲುಪಟ್ಟಿ:—ಇದರಲ್ಲಿ ಪಾಲು ಮಾಡಿಕೊಂಡ ಆಸ್ತಿಗೆ ಕಾಣಿಸಿದ ಮೌಲ್ಯದ ಹಣವಿನ ಮೇಲೆ (13ನೇ ಅಂಕೆಯಲ್ಲಿ) ದಸ್ತಾವೇಜಿಗೆ ಹೇಳಿರುವಷ್ಟೇ ತಸೆ.

39. ಗೇಣಿಚೀಟು (ಗೇಣೀ ಬಗ್ಗೆ ಮಾಡುವ ಕರಾರು ಸಹ):—

a) ಗೇಣೀ ಮೊಬಲಗು ನಿಶ್ಚಯವಿದ್ದು, ಪ್ರೀಮಿಯಮ್ ಯಾನೆ ವಟ್ಟ ಇಲ್ಲದೆ, ಗೇಣಿ ವಾಯಿದೆ ಇಂಥಾದ್ದೆಂದು ನಮೂದಿಸಲ್ಪಟ್ಟು, ಸದರಿ ವಾಯಿದೆ ಒಂದು ವರುಷಕ್ಕೆ ಮೀರದಿದ್ದರೆ . . . . . 13ನೇ ಅಂಕೆಯಲ್ಲಿ ಹೇಳಿರುವಷ್ಟೆ ತಸೆ

ಒಂದು ವರುಷಕ್ಕೆ ಮೀರಿ ೩ ವರ್ಷಕ್ಕೆ ಮೀರದಿದ್ದರೆ—ಸರಾಸರಿ ೧ ವರ್ಷದ ಗೇಣಿಗೆ 13ನೇ ಅಂಕೆಯಲ್ಲಿ ಹೇಳಿರುವಷ್ಟೆ ತಸೆ

ಮೂರು ವರ್ಷಕ್ಕೆ ಮೀರಿ ಇದ್ದರೆ—ಸರಾಸರಿ ಒಂದು ವರ್ಷಕ್ಕೆ ಬೀಳುವ ಗೇಣಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ತಸೆ

b) ಗೇಣಿ ಮೊಬಲಗು ನಿಶ್ಚಯವಿದ್ದು, ವಟ್ಟ ಕೊಡುವದಿಲ್ಲದೆ, ಗೇಣಿ ಚೀಟಿನ ವಾಯಿದೆ ಇಂಥಾದ್ದೆಂದು ನಿರಖು ಇಲ್ಲದಿದ್ದರೆ—೧೦ ವರ್ಷದಲ್ಲಿ ಸರಾಸರಿ ಒಂದು ವರ್ಷಕ್ಕೆ ಬೀಳುವ ಗೇಣಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ತಸೆ

c) ಒಂದು ದಂಡ ಅಥವಾ ಪ್ರೀಮಿಯಮ್ ಯಾನೆ ವಟ್ಟ ಸಲುವಾಗಿ ಗೇಣಿಗೆ ಕೊಡೋಣವಾಗಿ, ಗೇಣಿ ಏನಾದರೂ ಬರುವಂಥಾದ್ದು ಇಲ್ಲದಿದ್ದರೆ— ಗೇಣಿಚೀಟಿನಲ್ಲಿ ನಮೂದಿಸಿದ ಸದರಿ ದಂಡ ಯಾ ವಟ್ಟದ ಮೊಬಲಗಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ತಸೆ

d) ಗೇಣಿ ಬರುವದರ ಹೊರ್ತು ದಂಡ ಯಾ ಪ್ರೀಮಿಯಮ್ ಯಾನೆ ವಟ್ಟದ ಸಲುವಾಗಿಸಹಾ ಗೇಣಿಗೆ ಕೊಡೋಣವಾಗಿದ್ದರೆ — ಗೇಣೀ ಬಗ್ಗೆ ಎಷ್ಟು ತಸೆ ಬೇಕಾದೀತೋ ಅಷ್ಟು ಹಾಸಲು, ಮತ್ತು ಸದರಿ ದಂಡದ ಯಾ ವಟ್ಟದ ಮೊಬಲಗಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ತಸೆ

41. (Letter of Credit) ಲೆಟರ್ ಒಫ್ ಕ್ರೆಡಿಟ್ (ಅಂದರೆ ಇದು ಯಾರ ಹೆಸರಿನಲ್ಲಿ ಬರಿಯಲ್ಪಡುತ್ತದೋ ಆತನಿಗೆ ನಂಬಿಕೆಯ ಮೇಲೆ ಸಾಲ ಕೊಡುವಂತೆ ಮತ್ತೊಬ್ಬನಿಗೆ ಅಧಿಕಾರ ಕೊಡುವಂಥಾ ದಸ್ತಾವೇಜು) ೧ ಆಣೆ

43. ಒಂದು ಕಂಪೆನಿಯ ಸಂಘದ ಯಾದಾಸ್ತು . . . ೧೫ ರೂಪಾಯಿ

44. ಅಡಮಾನಸಾಧನ (14, 15, 29, 55ನೇ ಅಂಕೆಗಳಲ್ಲಿ ಏರ್ಪಡಿಸದೆ ಇರುವಂಥಾ ತರದ್ದು):—

a) ಸಾಧನ ಬರೆದು ಕೊಡುವ ಸಮಯದಲ್ಲಿ ಆದರಲ್ಲಿ ನಮೂದಿಸಿದ ಸೊತ್ತನ್ನು ಅಡವುದಾರಗೆ ಒಪ್ಪಿಸಿ ಕೊಟ್ಟರೆ, ಇಲ್ಲವೆ ಒಪ್ಪಿಸಿ ಕೊಡುವರೆ ಸಮ್ಮತಿಸಿದರೆ . . . . . 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಸದರಿ ಸೊತ್ತಿನ ಸ್ವಾಧೀನತೆ ಬಿಟ್ಟುಕೊಡದೆ ಇದ್ದ ಪಕ್ಷಕ್ಕೆ—13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

46. (Note or Memorandum) ನೋಟು ಯಾ ಮೆಮೊರಂಡಮ್ (ಅಂದರೆ ಒಬ್ಬ ದಲಾಲನಾಗಲೀ ಮುತ್ತಾಲಿಕನಾಗಲೀ ತನ್ನ ಧನಿಗೋಸ್ಕರ ಇಪ್ಪತ್ತು ರೂಪಾಯಿಗೆ ಏರಿದ ಯಾವ ಸರಕನ್ನಾಗಲೀ ಜೀನಸನ್ನಾಗಲಿ ಕೊಂಡುಕೊಂಡಿರುವದಾಗಿ ಇಲ್ಲವೆ ಮಾರಿದ್ದಾಗಿ ಸದರಿ ಧನಿಗೆ ತಿಳಿಸುವ ಚೀಟು ಯಾ ಯಾದಾಸ್ತು) . . . . . ೧ ಆಣೆ

48. ಯಾವದಾದರೂ ಒಂದು ಹೊಸ ನಿರ್ಮಾಣದ ತಪತೀಲುವಟ್ಟಯನ್ನು ದಾಖಲು ಮಾಡುವ ಬಗ್ಯೆ, ಅಥವಾ ಹಿಂದುಸ್ಥಾನದಲ್ಲಿ ಸದರಿ ನಿರ್ಮಿತವನ್ನು ತನ್ನ ಹೊರ್ತು ಬೇರೆ ಯಾರಾದರೂ ಮಾಡಿ ಉಪಯೋಗಿಸದಂತೆ ಅಪ್ಪಣೆ ಆಗ ಬೇಕಾಗಿ ಬರಕೊಳ್ಳುವ ಅರ್ಜಿ . . . . ೧೦೦ ರೂಪಾಯಿ

50. (Power-of-Attorney) ಪವರ್-ಒಫ್-ಎಟ್ಟರ್ನಿ (ವೊಕ್ಯ್ಯಾರನಾಮೆ):—

a) ಒಂದೇ ಕಾರ್ಯಕ್ಕೆ ಸಂಬಂಧವಾದ ಒಂದು ಯಾ ಅನೇಕ ದಸ್ತಾವೇಜುಗಳನ್ನು ರಿಜಸ್ತ್ರೀ ಬಗ್ಯೆ ಹಾಜರು ಪಡಿಸುವದಕ್ಕೆ ಪೂರ್ತಿ ಉಂಟಾದರೆ ೪ ಆಣೆ

b) ಬೇರೆ ಯಾವದಾದರೂ ಒಂದೇ ಕಾರ್ಯಕ್ಕಾಗಿ ಒಬ್ಬ ಯಾ ಅನೇಕರಿಗೆ ಅಧಿಕಾರ ಕೊಡುವದಾದರೆ . . . . . ೧ ರೂಪಾಯಿ

c) ಸಮುಷ್ಟಿಯಾಗಿ ಯಾ ಬೇರೆ ಬೇರೆಯಾಗಿ ಒಂದಕ್ಕಿಂತ ಅನೇಕ ಕಾರ್ಯಗಳಲ್ಲಿ ಆಗಲೀ ಸಾಮಾನ್ಯವಾಗಿ ಆಗಲೀ ಪ್ರವರ್ತಿಸಲಿಕ್ಕೆ ೫ಕ್ಕೆ ಏರದಷ್ಟು ಮಂದಿಗೆ ಅಧಿಕಾರ ಕೊಡುವದಾದರೆ . . . . ೫ ರೂಪಾಯಿ

d) ಸಮುಷ್ಟಿಯಾಗಿ ಯಾ ಬೇರೆ ಬೇರೆಯಾಗಿ ಅನೇಕ ಕಾರ್ಯಗಳಲ್ಲಿ ಆಗಲೀ ಸಾಮಾನ್ಯವಾಗಿ ಆಗಲೀ ಪ್ರವರ್ತಿಸಲಿಕ್ಕೆ ೫ಕ್ಕೆ ಏರಿ ೧೦ಕ್ಕೆ ಏರದೆ ಇರುವ ಜನರಿಗೆ ಅಧಿಕಾರ ಕೊಡುವದಾದರೆ . . . . ೧೦ ರೂಪಾಯಿ

e) ಇತರ ಸಂಗತಿಯಲ್ಲಿ . . . . ಅಧಿಕಾರ ಹೊಂದುವ ಪ್ರತಿ ಮನುಷ್ಯನಿಗಾಗಿ ೧ ರೂಪಾಯಿ

52. ಇಪ್ಪತ್ತು ರೂಪಾಯಿಗೆ ಏರಿದ ಯಾವ ಹಣವನ್ನಾಗಲೀ ಸೊತ್ತನ್ನಾಗಲೀ ಬಂದದ್ದಕ್ಕೆ ಕೊಡುವ ರಸೀದಿ . . . . . ೧ ಆಣೆ

53. ಅಡವಿನ ಸೊತ್ತಿನ ಪರಭಾರೆ ದಸ್ತಾವೇಜು:—

a) ಅಡವಿನ ಹಣ ೧೦೦೦ ರೂಪಾಯಿಗೆ ಏರದಿದ್ದರೆ. . 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . . ೧೦ ರೂಪಾಯಿ

54. (Release) ರಿಲೀಜ್ ಯಾನೆ ಖುಲಾಸಪತ್ರ (ಅಂದರೆ ಒಬ್ಬನು ಮತ್ತೊಬ್ಬನ ಮೇಲಾಗಲೀ ಫಲಾಣೆ ಸೊತ್ತಿನ ಮೇಲಾಗಲೀ ತನಗಿರುವ ಬಾಧ್ಯತೆಯನ್ನು ಬಿಟ್ಟು ಬಿಡುವ ದಸ್ತಾವೇಜು):—

a) ಬಾಧ್ಯತೆಯ ಮೊಬಲಗು ೧೦೦೦ ರೂಪಾಯಿಗೆ ಏರದಿದ್ದರೆ—13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . . ೫ ರೂಪಾಯಿ

57. (Settlement) ಸೆಟ್ಲಿಮೆಂಟ ಯಾನೆ ವ್ಯವಸ್ಥಾಪತ್ರ— 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

58. (Shipping Order) ಸಿಪ್ಪಿಂಗ್ ಬರ್ಡರ್ (ಅಂದರೆ ಜಹಜಿನ ಮೇಲೆ ಜೀನಸುಗಳನ್ನು ಮೈಯುವದಕ್ಕೆ ಕೊಡುವ ಪತ್ರ) . . . . ೧ ಆಣೆ

59. ಗೇಣಿ ಸೋದಚೀಟು:—

a) ಗೇಣಿಚೀಟಿನ ಠಸೆ ೫ ರೂಪಾಯಿಗೆ ಏರದಿದ್ದರೆ—ಗೇಣಿಚೀಟಿನಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . . ೫ ರೂಪಾಯಿ

ಠಸೇ ಹಾಸಲು ಮಾಫಿ ಇರುವ ಕೆಲವು ದಸ್ತಾವೇಜುಗಳು.

೨. *a*) 46ನೇ ಅಂಕೆಯಲ್ಲಿ ಹೇಳಿರುವ ನೋಟು ಯಾ ನೆಮೊರಂಡಮ್ ಸ್ವಭಾವದ್ದಾಗಿರದೆ, ಯಾವ ದೊಂದು ಚರಸೊತ್ತು ಯಾ ಸರಕನ್ನು ಮಾರಾಟದ ಸಮ್ಮಂಧವಾಗಿರುವ ಯಾವದೊಂದು ಕರಾರು ಯಾ ಕರಾರಿನ ಯಾದಾಸ್ತು.

೧೩. ಗೇಣಿಚೀಟುಗಳೂ ಅವುಗಳ ಎದುರ್ನುಡಿಗಳೂ:—*b*) ಯಾವ ದಂಡವಾಗಲೀ ವಟ್ಟವಾಗಲೀ ಕೊಡದೆ ಒಬ್ಬ ವ್ಯವಸಾಯಗಾರನು ಬರಕೊಡುವ ಗೇಣಿಚೀಟು; ಇದರಲ್ಲಿ ನಿರಖು ವಾಯಿದೆ ನಮೂದಿಸಿದ್ದರೆ, ಮತ್ತು ಸದರಿ ವಾಯಿದೆ ಒಂದು ಸಂವತ್ಸರಕ್ಕೆ ಮೀರದೆ ಇದ್ದರೆ, ಅಥವಾ ಅದರ ವರ್ಷಾವಧಿ ಗೇಣಿ ೧೦೦ ರೂಪಾಯಿಗೆ ಮೀರದಿದ್ದರೆ; *c*) ಒಬ್ಬ ವ್ಯವಸಾಯಗಾರನಿಗೆ ಕೊಡುವ ಗೇಣಿಚೀಟಿನ ಎದುರ್ನುಡಿ.

೧೫. ರತೀದಿ:—*a*) ಕ್ರಮವಾಗಿ ಠಸೇ ಮೇಲೆ ಆದಂಥಾ ಯಾವ ದಸ್ತಾವೇಜಿನಲ್ಲಾಗಲೀ ನಮೂದಿಸಿರುವ ಪ್ರತಿಫಲ ಬಂತೆಂದು ಅಥವಾ ಅದರಿಂದ ಭದ್ರ ಪಡಿಸಿರುವ ಅಸಲು ಆಗಲೀ ಬಡ್ಡಿ ಆಗಲೀ ವರ್ಷಾಸನವಾಗಲೀ ಕಾಲಾವಧಿ ಸಂದಾಯವಾಗ ತಕ್ಕ ಬೇರೆ ಹಣವಾಗಲೀ ಬಂತೆಂದು ಕೊಡುವ ರತೀದಿ; *b*) ಪ್ರತಿಫಲವಿಲ್ಲದೆನೇ ಹಣ ಪಾವತಿ ಆದ್ದಕ್ಕೆ ರತೀದಿ; *h*) ಒಬ್ಬ ಸಾವಕಾರನ ಕೈಯ ಠೇವಣಿ ಇಟ್ಟ ಹಣದ ಬಗ್ಗೆ ಯಾ ಹಣದ ಪಾತರೀ ಬಗ್ಗೆ ಕೊಡುವ ರತೀದಿ. ಪರಂತು ಸದರಿ ಹಣಕ್ಕಾಗಿ ಯಾರಿಗೆ ಉತ್ತರ ಹೇಳ ತಕ್ಕದ್ದೋ ಅವನಿಗೆ ಹೊರ್ತು ಬೇರೆ ಯಾರಾದರೂ ಈಸಿಕೊಳ್ಳುವಂತೆ ನಮೂದಿಸಿರ ಬಾರದು. ಈ ಮಾಫಿಯು ಒಂಡು ಸಂಘದ ಹಿಸೆಗೆ, ಅಥವಾ ಹಿಸೆಯ ನಿರ್ಣಯಪತ್ರದ ಪ್ರಕಾರ ಕೊಡೋಣಾಗುವ ಇಲ್ಲವೆ ಠೇವಣಿ ಇಡೋಣಾಗುವ ಹಣಕ್ಕಾಗಿ ಕೊಡುವ ರತೀದಿಗೆ ಸಮ್ಮಂಧಿಸುವದಿಲ್ಲ.

೧೬. ಮೇಲ್‌ಚೀಟು ಯಾನೆ ಎಂಡಾರಸ್ ಮೂಲಕವಾಗಿ ವಟಾಯಿಸ ತಕ್ಕ ಹುಂಡಿ, ಚೆಕ್ಕ್, ಇಲ್ಲವೆ ಪ್ರೊಮಿಸರಿ ನೋಟನ್ನು ವರ್ಗ ಯಾನೆ ವರಾಧೀನ ಮಾಡುವ ಪತ್ರ.

ಟಪ್ಪಾಲಿನ ವಿಷಯ ಮುಖ್ಯ ಕ್ರಮಗಳು.

ಮುಂದಿನ ಕ್ರಮಗಳು ಹಿಂದುಸ್ಥಾನದಲ್ಲಿಯೂ ಅದರ ನೆರೆಶೀಮೆಗಳಲ್ಲಿಯೂ ನಡಿಯುವ ಟಪ್ಪಾಲ ಸಮ್ಮಂಧವಾಗಿರುತ್ತವೆ.

ಕೋವಿಮದ್ದು ಮುಂತಾದ ಜ್ವಲನಾಸ್ಪದವಾದ ಒಡವೆಗಳು, ಗಾಜಿನ ಸಾಮಾನು, ತೆಳುಜೀನಸು, ಇಂಥಾದ್ದನ್ನು ಟಪ್ಪಾಲಿನ ಮೇಲೆ ರವಾನಿಸಬಾರದು; ಪರಂತು ಔಷಧ ಮುಂತಾದ್ದು ಗಾಜಿನ ಬಾಟ್ಲಿಯಲ್ಲಿ ಹಾಕಿದ್ದಾಗ್ಯೂ, ಅಲ್ಲಾಡದಂತೆ ಬಂಮೋಬಸ್ತಾಗಿ ಕಟ್ಟಿದ್ದರೆ, ರವಾನಿಸುವದಕ್ಕೆ ಅಡ್ಡಿ ಇರುವದಿಲ್ಲ. ಅದಲ್ಲದೆ ಬಂಡು ತರದ ಬರಹ, ಛಾಪೆ, ಚಿತ್ರ, ನಕ್ಷೆ, ಇಂಥಾದ್ದನ್ನು ಟಪ್ಪಾಲಿನ ದ್ವಾರಾ ರವಾನಿಸಗೊಡುವದಿಲ್ಲ.

ಒಬ್ಬನು ತನ್ನ ಹೆಸರಿಗೆ ಬಂದ ಲಖೋಟಿ ಇಲ್ಲವೆ ಕಟ್ಟನ್ನು ತೆರಿಯದೆ ವಾಪಸು ಮಾಡ ಬಹುದು; ಹಾಗೆ ವಾಪಸು ಮಾಡಿದ ಪಕ್ಷಕ್ಕೆ, ಅವನು ಅದರ ದಸ್ತೂರಿ ತೆರಲಿಕ್ಕೆ ಬದ್ಧನಾಗುವದಿಲ್ಲ. ಒಂದು ಲಖೋಟಿ ಇಲ್ಲವೆ ಕಟ್ಟು ಹೊಂದಿದವನು ಒಂದು ವೇಳೆ ಅದನ್ನು ತೆರದಾಗ್ಯೂ, ಅವನ ಮೇಲೆ ದ್ವೇಷದಿಂದ ಯಾರಾದರೂ ಕಳುಹಿಸಿದ್ದೆಂತ ಅದು ತಲ್ಪಿದ ಆಫಿಸಿನ ಪೋಸ್ಟ್‌ಮಾಸ್ತರಿಗೆ ಕಂಡರೆ, ಆ ಆಫಿಸರು ಅದರ ದಸ್ತೂರಿಯನ್ನು ಮಾಫು ಮಾಡ ಬಹುದು.

ಟಪ್ಪಾಲಿಗೆ ಹಾಕಿದ ಯಾವ ಲಿಫಾಪೆಗೆ, ಕಾರ್ಡಿಗೆ, ಯಾ ಕಟ್ಟಿಗೆ ರತೀದಿ ತಿಳ್ಕುವದಿಲ್ಲವೋ, ಅಂಥಾದ್ದನ್ನು ಟಪ್ಪಾಲಿಗೆ ಹಾಕಿದ ಗುರುತಿಗಾಗಿ ಸರ್ಟಿಫಿಕೇಟನ್ನು ಪಡಕೊಳ್ಳ ಬಹುದು. ಹ್ಯಾಗಂದರೆ, ರತೀದಿಯನ್ನು ಅಪೇಕ್ಷಿಸುವವನು ತನ್ನ ಲಿಫಾಪೆಯ ಯಾ ಕಟ್ಟಿನ ಮೇಲೆ ಬರದ ಮೇಲುವಿಳಾಸದ ಯಥಾ ಪ್ರತಿಯನ್ನು ಬೇರೊಂದು ಕಾಗದದ ಮೇಲೆ ಬರದು, ಅದಕ್ಕೆ ಅರ್ಧ ಆಣೆಯ ಚೀಟು ಹಚ್ಚಿ, ಅವೆರಡನ್ನು ಪೋಸ್ಟ್ ಆಫಿಸಿಗೆ ಹಾಜರು ಮಾಡಿದ್ದಲ್ಲಿ, ಚೀಟನ್ನು ರದ್ದು ಮಾಡಿ ತಾರೀಕಿನ ಮುದ್ರೆಯನ್ನು ಸಹ ಒತ್ತಿ, ಅದನ್ನು ಹಾಜರು ಮಾಡಿದ ಮನುಷ್ಯನಿಗೆ ವಾಪಸು ಕೊಡುವರು. ಇದು "ಸರ್ಟಿಫಿಕೇಟು" ಅನ್ನಿಸಿಕೊಳ್ಳುತ್ತದೆ.

ಒಂದು ಲಿಫಾಪೆಗೆ ಇಲ್ಲವೆ ಮುಂದೆ ಹೇಳಿರುವ ಬುಕ್ ಪೆಕೆಟ್ ಯಾ ಪೆಟರ್ನ್‌ಪೆಕೆಟ್ ಎಂಬ ಕಟ್ಟಿಗೆ ದಸ್ತೂರಿ ಮುಂದಾಗಿ ಹಚ್ಚದೆ ಇದ್ದರೆ, ಇಲ್ಲವೆ ಹಚ್ಚಿದ ದಸ್ತೂರಿ ನಿರಖಿಗೆ ಕಡಿಮೆಯಾದರೆ, ಆ ಲಿಫಾಪೆಯನ್ನು ಯಾ ಕಟ್ಟನ್ನು ಹೊಂದುವವನು ಆ ದಸ್ತೂರಿಯ ಇಲ್ಲವೆ ಕಡಿಮೆಯಾದದರ ಇಮ್ಮಡಿ ಹಾಸಲ ತೆರ ಬೇಕು. ಈ ಮೇರೆಗೆ ಚೀಟು ಹಚ್ಚದೆ ರವಾನಿಸುವಂಥಾದ್ದರ ಮೇಲೆ "ಬೇರಿಂಗ್" (Bearing) ಎಂದು ಬರಿಯ ಬೇಕು.

ಒಂದು ಲಿಫಾಪೆ ಇಲ್ಲವೆ ಕಟ್ಟನ್ನು ತೆರಿಯದೆ ಬೇರೊಂದು ವಿಳಾಸಕ್ಕೆ ತಿರಿಗಿ ರವಾನಿಸ ಬಹುದು; ಆ ಪ್ರಕಾರ ರವಾನಿಸಿದ್ದಾದರೆ, ಅದಕ್ಕೆ ಪ್ರತ್ಯೇಕ ದಸ್ತೂರಿ ಕೊಡ ಬೇಕೆಂದಿಲ್ಲ.

ಒಂದು ಲಿಫಾಪೆ, ಟಪ್ಪಾಲ ಕಾರ್ಡ್, ಇಲ್ಲವೆ ಪೆಕೆಟು ಎಂಬ ಖುಲ್ಲಾ ಕಟ್ಟು ಹೆಚ್ಚು ಭದ್ರತೆಯಿಂದ ತಲಪ ಬೇಕೆಂಬವರು ಎರಡು (೨) ಆಣೆ ಕೊಟ್ಟು ಅದನ್ನು ರಿಜಿಸ್ತ್ರಿ ಮಾಡಿಸ ಬಹುದು. ಹ್ಯಾಗಂದರೆ: ರವಾನಿಸುವವನು ಅದಕ್ಕೆ ಮೇಲ್ವಿಳಾಸ ಬರದು, ಅದರ ಎಡಭಾಗದ ಕೆಳಗೆ ತನ್ನ ಹೆಸರು, ವಿಳಾಸ ಸಹ ಬರದು, ಅದಕ್ಕೆ ನಿರಖು ಇರುವ ಚೀಟು ಮತ್ತು ರಿಜಿಸ್ತ್ರಿ ಬಗ್ಗೆ ಎರಡು ಆಣೇ ಚೀಟು ಸಹ ಹಚ್ಚಿ, ಟಪ್ಪಾಲು

ಕೈದು ಆಗುವ ಮುಂಚಿ ಟಪ್ಪಾಲುಕಟ್ಟೆಯಲ್ಲಿ ಒಪ್ಪಿಸ ಬೇಕು; ಅವರು ಅದನ್ನು ರಿಜಿಸ್ತ್ರಿ ಮಾಡಿ, ಛಾಪಾ ರತೀದಿ ಕೊಡುವರು. ಮತ್ತು ಸದರಿ ಲಿಫಾಪೆ ಯಾ ಕಾರ್ಡು ಹೊಂದಿದವನಿಂದ ಪಾವತಿರತೀದಿ ತರಿಸಿ ಕೊಡ ಬೇಕಾದರೆ, ಹೆಚ್ಚಿಗೆ ೧ ಆಣೆ ಚೀಟು, ಮತ್ತು ಸದರಿ ಪೆಕೆಟು ಹೊಂದಿದವನಿಂದ ಪಾವತಿರತೀದಿ ತರಿಸಿ ಕೊಡ ಬೇಕಾದರೆ, ೧ ಆಣೆ ರೊಕ್ಕ ಸಹ ಹಾಜರು ಮಾಡಿದ್ದಲ್ಲಿ ಆ ಪ್ರಕಾರ ತರಿಸಿ ಕೊಡೋಣಾಗುವದು.

(Letter Post) ಕಾಗದಟಪ್ಪಾಲು.

ಎಲ್ಲಾ ಲಖೋಟೆಗಳೂ ಟಪ್ಪಾಲ ಕಾರ್ಡುಗಳೂ ೨೦ ತೊಲೆಗೆ ಮೀರದ ಪೆಕೆಟುಗಳೂ ಈ ಟಪ್ಪಾಲಿನ ದ್ವಾರಾ ಹೋಗುವವು.

	ಆ.	ಪೈ.
ಭಾರದಲ್ಲಿ ½ ತೊಲೆಗೆ ಮೀರದಿದ್ದರೆ	೦	೬
" ೧ " "	೧	೦
ಹೆಚ್ಚಿಗೆ ಪ್ರತಿ ೧ ತೊಲೆಗೆ ಯಾ ಆದರಂತಕ್ಕೆ	೧	೦
ಟಪ್ಪಾಲ ಕಾರ್ಡು ಒಂದಕ್ಕೆ	೦	೩
ಉತ್ತರ ತಿಗತಕ್ಕ ಜೋಡು ಕಾರ್ಡಿಗೆ	೦	೬

ಕಾರ್ಡಿನ ಮುಂದಗಡೆ ವಿಳಾಸ ಮಾತ್ರ ಹೊರ್ತು, ಹೆಚ್ಚಿಗೇನೂ ಬರಿಯ ಬಾರದು. ಜೋಡು ಕಾರ್ಡನು ಪ್ರತ್ಯಪ್ರತ್ಯೇಕವಾಗಿಯೂ ಪ್ರಯೋಗಿಸ ಬಹುದು.

೩ ಪೈ ಕಾರ್ಡುಗಳೂ, ೬ ಪೈ ಉತ್ತರದ ಜೋಡು ಕಾರ್ಡುಗಳೂ, ½, ೧, ೧½, ೨, ೩, ೪, ೬, ೮ ಆಣೇ, ೧ ರೂಪಾಯಿ ಮೌಲ್ಯದ ಟಪ್ಪಾಲಚೀಟುಗಳೂ, ½ ಆಣೆ, ೧ ಆಣೆ, ಇಲ್ಲವೆ ೪½ ಆಣೆಯ ಚೀಟುಳ್ಳ ಲಖೋಟೆಗಳೂ ವ್ಯಾಪಾರಕ್ಕೆ ತಿಗುತ್ತವೆ.

ಕಾಗದಟಪ್ಪಾಲಿನ ದ್ವಾರಾ ಕಳುಹಿಸುವ ಲಿಫಾಪೆ ೨೦ ತೊಲೆಗೆ ಮೀರ ಬಾರದು.

ತಂತಿಟಪ್ಪಾಲಿನಲ್ಲಿ ಹೋಗ ತಕ್ಕ ವರದಿಯನ್ನು ಯಾವ ಟಪ್ಪಾಲಕಟ್ಟೆಯಲ್ಲಿಯಾದರೂ ಮುಟ್ಟಿಸಿ ದ್ದಲ್ಲಿ ಅವರು ಅದನ್ನು ಸಮೀಪದ ತಂತಿಟಪ್ಪಾಲ್ ಆಫಿಸಿಗೆ ರಿಜಿಸ್ತ್ರಿ ನಿಶೀ ರವಾನಿಸುವರು. ಅದಕ್ಕಾಗಿ ಟಪ್ಪಾಲ್‌ದಸ್ತೂರಿಯಾಗಲೀ ರಿಜಿಸ್ತ್ರಿ ಫೀಸು ಆಗಲೀ ಕೊಡುವ ಅವಶ್ಯವಿಲ್ಲ.

ಟಪ್ಪಾಲ ದಸ್ತೂರಿಯನ್ನು ತಪ್ಪಿಸಿಕೊಳ್ಳುವ ಬಗ್ಗೆ, ಬೇರೆ ಬೇರೆಯವರಿಗೆ ಪ್ರತ್ಯಪ್ರತ್ಯೇಕವಾಗಿ ಬರದ ಲೇಖನಗಳನ್ನು ಒಂದೇ ಲಿಫಾಪೆಯಲ್ಲಿ ಹಾಕಿ ಕಳುಹಿಸುವಂಥವರು ತಿಕ್ಷ್ಣೆಗೆ ಗುರಿಯಾಗುತ್ತಾರೆ.

(Banghy Post) ಬಂಗಿಟಪ್ಪಾಲು.

೨೦ ತೊಲೆಗೆ ಮೀರಿದ (Book Packet and Pattern Packet) "ಬುಕ್‌ಪೆಕೆಟ್" ಮತ್ತು "ಪೆಟರ್ನ್‌ಪೆಕೆಟ್" ಎಂಬ, ಮತ್ತು (Parcel) "ಪಾರ್ಸೆಲ್" ಎಂಬ ಎರಡು ವಿಧದ ಕಟ್ಟುಗಳು ಈ ಟಪ್ಪಾಲ ದ್ವಾರಾ ರವಾನಿಸಲಾಗುತ್ತದೆ. ಇವುಗಳ ಟಪ್ಪಾಲು ಹಾಸಲಿನ ದರ ಹ್ಯಾಗಂದರೆ:—

ಬುಕ್‌ಪೆಕೆಟ್ ಮತ್ತು ಪೆಟರ್ನ್‌ಪೆಕೆಟ್		
	ಆ.	ಪೈ.
ಭಾರದಲ್ಲಿ ೧೦ ತೊಲೆಗೆ ಮೀರದಿದ್ದರೆ	೦	೬
ಹೆಚ್ಚಿಗೆ ಪ್ರತಿ ೧೦ " ಯಾ ಆದರಂತಕ್ಕೆ	೦	೬

ಒಂದು ಪೆಕೆಟು ೨ ಫೂಟ್ ಉದ್ದ ೧ ಫೂಟ್ ಅಗಲ ಅಥವಾ ದಪ್ಪಕ್ಕೆ ಮೀರ ಬಾರದು. ಬುಕ್ ಪೆಕೆಟಿನ ಭಾರದ ವಿಷಯದಲ್ಲಿ ಪ್ರತ್ಯೇಕ ನಿರಖು ಇಲ್ಲ; ಆದರೆ ಪೆಟರ್ನ್ ಪೆಕೆಟು ಭಾರದಲ್ಲಿ ೪೦ ತೊಲೆಗೆ ಮೀರ ಬಾರದು.

ಪಾರ್ಸೆಲ್		
	ಆ.	ಪೈ.
ಭಾರದಲ್ಲಿ ೨೦ ತೊಲೆಗೆ ಮೀರದಿದ್ದರೆ	೪	೦
" ೪೦ " "	೮	೦
ಹೆಚ್ಚಿಗೆ ಪ್ರತಿ ೪೦ " ಯಾ ಆದರಂತಕ್ಕೆ	೪	೦

ಇದರ ಟಪ್ಪಾಲಹಾಸಲು ರೊಕ್ಕವಾಗಿ ತೆರ ಬೇಕು. ಪಾರ್ಸೆಲು ಭಾರದಲ್ಲಿ ೩೫ ಶೇರು (೨೦೦ ತೊಲೆ) ಗಳಿಗೆ ಮೀರ ಬಾರದು; ಮತ್ತು ಅದರ ಗಾತ್ರ ಆಕಾರ, ಕಟ್ಟಿದ ರೀತಿ, ಇವುಗಳ ದೆಶೆಯಿಂದ ವೈಯಲಿಕ್ಕೆ ತೊಂದರೆಯೂ ಜೋಕುಮೂ ಇರ ಬಾರದು.

"ಬುಕ್‌ಪೆಕೆಟ್" ಮತ್ತು "ಪೆಟರ್ನ್‌ಪೆಕೆಟ್":—(1) ಖಾಲಿ ಇಲ್ಲವೆ ಛಾಪೆಯಾದ ಪುಸ್ತಕ, ವರ್ತಮಾನಪತ್ರ, ಚಿತ್ರ, ನಕ್ಷೆ (ಇಂಥಾದ್ದಕ್ಕೆ ಸಮ್ಮಂಧವಾದ ಕೈಬರಹವಿದ್ದರೆ, ಅದರ ಸಮೇತ); ಬರದು ತಿಳಿಸುವ ಯಾ ಲೇಖನಸ್ವಭಾವದ್ದಾಗಿರದೆ, ಕಾರ್ಯಸಮ್ಮಂಧವಾಗಿ ಬರೆಯಲ್ಪಟ್ಟ ದಸ್ತಾವೇಜು, ಭರಾವಣೆಚೀಟು, ಸಾಮಾನುಪಟ್ಟಿ, ಲೆಖ್ಖದ ಪಟ್ಟಿ ಎಂಬೀ ತರದ ಕಾಗದಗಳು; ಯಾವದೊಂದು ವರ್ತಮಾನ ಪತ್ರದಲ್ಲಿ (ಇಲ್ಲವೆ ಪುಸ್ತಕವಾಗಿ) ಛಾಪಿಸುವದಕ್ಕಾಗಿ ಯಾವದೊಂದು ಛಾಪಖಾನೆಗೆ ರವಾನಿಸಲ್ಪಡುವ ಕೈ ಬರಹದ ಕಾಗದಗಳು,—ಇಂಥಾದ್ದೆಲ್ಲ "ಬುಕ್‌ಪೆಕೆಟಿನಲ್ಲಿ" ಶೇರುತ್ತವೆ. ಅದಲ್ಲದೆ ಮನಃಪೂರ್ವಕವಾಗಿ ವ್ಯಾಪಾರದ ನಮೂನೆ ಯಾ ಕೆಲಸದ ಮಾದರಿಯುಳ್ಳ ಯಾವದೊಂದು ಕಟ್ಟು, ಅದಕ್ಕೆ ಕ್ರಯ ಹಿಡಿಯದೆ ರವಾನಿಸಲ್ಪಟ್ಟ ಪಕ್ಷಕ್ಕೆ, ಅಂಥಾದ್ದು "ಪೆಟರ್ನ್ ಪೆಕೆಟಿನಲ್ಲಿ" ಶೇರುತ್ತದೆ. (2) ಪೆಕೆಟು ಉಭಯ ಕಡೆಗಳಲ್ಲಿಯೂ ಖುಲ್ಲಾ ಬಿಟ್ಟು, ಅದರೊಳಗಿರುವದನ್ನು ಬಿಚ್ಚಿ ನೋಡುವ ಹಾಗೆ, ಕಟ್ಟಿ ತರ ಬೇಕು. (3) ಈ ಉಭಯ ತರದ ಪೆಕೆಟುಗಳಿಗೂ ನಿರಖಿರುವ ದಸ್ತೂರಿ ಮುಂದಾಗಿ ಹಚ್ಚ ಬೇಕು; ಹಚ್ಚದೆ ರವಾನಿಸಿದರೆ,

ಆ ಪೆಕೆಟು ಹೊಂದುವವನು ಆ ದಸ್ತೂರಿಯ ದುಬ್ಬಾರೆ, ಇಲ್ಲವೆ ಹಚ್ಚಿದ ದಸ್ತೂರಿ ಕಡಿವೆಯಾಗಿ ಹೋದರೆ, ಆ ಬಾಕಿಯ ದುಬ್ಬಾರೆ ಹಾಸಲು ರೊಕ್ಕವಾಗಿ ತರ ಬೇಕು. (4) ಪೆಕೆಟು ಟಪ್ಪಾಲಿಗೆ ಹಾಕಿದ್ದಕ್ಕೆ ರಶೀದಿ ತಿಗುವದಿಲ್ಲ; ಆದರೆ ಅದನ್ನು ರಿಜಿಸ್ತ್ರಿ ಮಾಡಿಸಿದ್ದಾದರೆ, ರಶೀದಿ ಕೊಡೋಣಾಗುತ್ತದೆ.

ಯಾವದೊಂದು ವರ್ತಮಾನಪತ್ರದ* ಮಾಲಿಕನಾಗಲೀ ಪ್ರಸಿದ್ಧಿಕನಾಗಲೀ ತಾನು ಕಾಲಾವಧಿಯಾಗಿ ಟಪ್ಪಾಲಿಗೆ ಹಾಕುವ ತನ್ನ ಪತ್ರಕ್ಕಾಗಿ ಇಂತಿಷ್ಟು ಕಾಲಕ್ಕೆಂತ ಒಮ್ಮೆಯೇ ಹಾಸಲಿನ ಹಣ ನಗದಾಗಿ ಕೊಟ್ಟು ತೀರಿಸ ಬಹುದು. ಹಾಗೆ ಮಾಡಿದಂಥಾ ಪತ್ರವನ್ನು ಟಪ್ಪಾಲ ಚೀಟಲ್ಲದೆ, ಮತ್ತು ಪ್ರತ್ಯೇಕ ಹಾಸಲಿಗೆ ಗುರಿಯಾಗದೆ ರವಾನಿಸ ಬಹುದು. ಈ ಪ್ರಕಾರ ಮುಂಗಡವಾಗಿ ತೆರುವ ಹಾಸಲಿನ ಅವಧಿಯು ಸಾಮಾನ್ಯ

ವರ್ತಮಾನಪತ್ರದ ಒಂದೊಂದು ಪ್ರತಿಯು		
೩ ತೊಲಿಗೆ ನೂರದಿದ್ದರೆ	೧೦ ತೊಲಿಗೆ	ಪ್ರತಿ ಹೆಚ್ಚಿಗೆ ೧೦ ತೊಲಿಗೆ ಯಾ ಅದರ ಅಂತಕ್ಕೆ
೩ ಪೈ	೬ ಪೈ	೬ ಪೈ

೩ ತಿಂಗಳಾಗಿರುವದು. ಮುಂಗಡ ದಸ್ತೂರಿಯನ್ನು ಎಣಿಸುವಲ್ಲಿ, ವರ್ತಮಾನಪತ್ರಕರ್ತರು ತಮ್ಮೊಳಗೆ ಉಚಿತಾರ್ಥವಾಗಿ ಬದಲಾಯಿಸಿಕೊಳ್ಳುವಂಥಾ ಪ್ರತಿಗಳಿಗೆ ಟಪ್ಪಾಲ ಹಾಸಲು ಪೂರಾ ಮಾಫಿಯಾಗಿಯೂ, ಮಾರಾಟದ ಬಗ್ಗೆ ಏಜೆಂಟರಿಗೆ ರವಾನಿಸುವ ಪತ್ರಿಕೆಪ್ರತಿಗಳ ಕಟ್ಟುಗಳು ಇಲ್ಲಿ ನಮೂದಿಸಿರುವ ಹಾಸಲಿನ ಅರೆವಾಸಿಗೂ, ಉಳಿದ ಪ್ರತಿಗಳು ಪೂರಾ ಹಾಸಲಿಗೂ ಗುರಿಯಾಗಿ ಇರುವವು.

"ಪಾರ್ಸೆಲು":—(1) ಇದನ್ನು ಪೂರಾ ಬಂದು ಮಾಡಿ ಕಟ್ಟಿ ತರ ಬೇಕು. (2) (ನಿಷೇಧಿಸಲ್ಪಟ್ಟ ಸಾಮಾನುಗಳ ವಿನಹ) ಬೇರೇನಾದರೂ ಇದರಲ್ಲಿ ಗರ್ಭಿಸ ಬಹುದು. (3) ಆದರೆ, ಇದರಲ್ಲಿ ಒಂದಕ್ಕಿಂತ ಹೆಚ್ಚಿಗೆ ಲೇಖನಪತ್ರದ ಸ್ವಭಾವದ್ದೇನಾದರೂ ಹಾಕ ಬಾರದು. (4) ಇದನ್ನು ಪ್ರತ್ಯೇಕ ರಿಜಿಸ್ತ್ರಿ ಮಾಡುವದು ಅವಶ್ಯ ವಿಲ್ಲ; ಯಾಕಂದರೆ ಇದನ್ನು ಟಪ್ಪಾಲಿಗೆ ಹಾಕಿದ್ದಕ್ಕೆ ರಶೀದಿ ತಿಗುತ್ತದೆ†; ಮತ್ತು ಅದು ತಲ್ಪಿದ್ದಕ್ಕೆ ಪಾರ್ಸೆಲು ಹೊಂದಿದವನಿಂದ ರಶೀದಿ ಸಹ ಪಡಕೊಳ್ಳೋಣಾಗುತ್ತದೆ. (5) ಇದಕ್ಕೆ ದಸ್ತೂರಿ ಮುಂದಾಗಿ ಕೊಡಲೂ ಬಹುದು, ಕೊಡದೆ ಇರಲೂ ಬಹುದು; ಎರಡನೇ ಸಂಗತಿಯಲ್ಲಿ ಪಾರ್ಸೆಲು ಹೊಂದಿದವನು ಆ ದಸ್ತೂರಿಯ ಮೌಲ್ಯ ಮಾತ್ರ ಕೊಡ ಬೇಕು; ಅದರೆ ದಸ್ತೂರಿ ಮುಂದಾಗಿ ಸಲ್ಲಿಸಿದರೂ, ನಿರಖಿಗೆ ಕಡಿವೆಯಾದರೆ, ಅದನ್ನು ಮುಂಜೂರು ಮಾಡೋಣಾಗಲಿಕ್ಕಿಲ್ಲ.—ಅದಲ್ಲದೆ ಪಾರ್ಸೆಲು ಹೊಂದಿದವನಿಂದ ರಶೀದಿ ತರಿಸಿ ಕೊಡಿಸ ಬೇಕಾದರೆ, ೧ಆಣೆ ದಸ್ತೂರಿ ಕೊಡ ಬೇಕು.

(Value Payable Article) "ವೇಲ್ಯು ಪೇಯಬ್‌ಲ್ ಆರ್ಟಿಕಲ್" ಅಂದರೆ ಪೋಸ್ಟ್ ಆಫೀಸಿನವರು ತಮ್ಮ ವಶಕ್ಕೆ ಬಂದ ಲಿಫಾಪೆ ಯಾ ಕಟ್ಟನ್ನು ಅದರ ಮೇಲ್‌ವಿಳಾಸಕ್ಕೆ ಮುಟ್ಟಿಸಿ, ಅದರ ಮೇಲೆ ವಾಗ್ದೊಪ ಪಡಿಸಿರುವ ಮೌಲ್ಯವನ್ನು ಆ ಲಿಫಾಪೆ ಯಾ ಕಟ್ಟು ಹೊಂದಿದವನಿಂದ ವಸೂಲು ಮಾಡಿ ಅದನ್ನು ರವಾನಿಸಿದವನಿಗೆ ಕೊಡುತ್ತಾರೆ. ಈ ಪ್ರಕಾರ ಪಾರ್ಸೆಲುಗಳಾಗಲೀ ಪೆಕೆಟುಗಳಾಗಲೀ ಲಖೋಟೆಗಳಾಗಲೀ ಮನಿ ಆರ್ಡರ್ ಆಫೀಸುಳ್ಳ ಯಾವ ಪೋಸ್ಟ್ ಆಫೀಸಿನಲ್ಲಾದರೂ ಟಪ್ಪಾಲಿಗೆ ಹಾಕ ಬಹುದು; ಅವುಗಳ ಮೌಲ್ಯ ಮಾತ್ರ ನಾಲ್ಕು ಆಣೆಗೆ ಕಡಿವೆಯಾಗಲೀ, ಸಾವಿರ ರೂಪಾಯಿಗೆ ಏರಿ ಆಗಲೀ ಇರ ಬಾರದು. ಮತ್ತು ಅದರಲ್ಲಿ ಒಂದು ಆಣೆಯ ಅಂಶವೂ ಇರ ಬಾರದು. ಹೀಗೆ ರವಾನಿಸುವವನು ಟಪ್ಪಾಲುಕಟ್ಟೆಯಲ್ಲಿ ಮಾಫಿಯಾಗಿ ತಿಕ್ಕುವ ಒಂದು ಛಾಪಾ ಕಾಗದದ ಮೇಲೆ ಅದರ ಮೌಲ್ಯವನ್ನು ಕುರಿತು ಬರದು ಅದರ ಸಂಗಡ ಕೊಡ ಬೇಕು. ಈ ಪ್ರಕಾರ ರವಾನೆಯಾದ ಕಟ್ಟು ಇಲ್ಲವೆ ರಿಜಿಸ್ತ್ರಿ ಲಿಫಾಪೆ ಅದರ ಠಿಕಾಣೆಗೆ ಬಂದು ಮುಟ್ಟುತ್ತಲೇ ಅದನ್ನು ಹೊಂದ ತಕ್ಕವನಿಗೆ ಅದನ್ನು ಕುರಿತು ಚೀಟು ಬರದು ತಿಳಿಸಲಾಗಿ, ಅದರ ಮೇಲೆ ಅತನು ದಸ್ಕತು ಹಾಕಿ ಅದರ ಮೌಲ್ಯ ಸಮೇತ ಅದೇ ಪೋಸ್ಟ್ ಆಫೀಸಿಗೆ ರವಾನಿಸಿ, ಅದನ್ನು ಪಡಕೊಳ್ಳ ಬಹುದು. ಅದರೆ ರಿಜಿಸ್ತ್ರಿ ಆಗದಿರುವ ಪೆಕೆಟನ್ನು ಟಪ್ಪಾಲ ಪೇದೆಯು ಅದರ ವಿಳಾಸವಿರುವವನಿಗೆ ಮುಟ್ಟಿಸಿ, ಅದರ ನಿರಖು ಮೌಲ್ಯವನ್ನು ಅವನಿಂದ ಈಸಿಕೊಳ್ಳವನು.

(Insurance) "ಇನ್ಶೂರೆನ್ಸ್". ರಿಜಿಸ್ತ್ರಿ ಆಗ ತಕ್ಕ ಲಿಫಾಪೆಗಳಾಗಲೀ ಪಾರ್ಸೆಲುಗಳಾಗಲೀ ಭದ್ರತೆಯಿಂದ ತಲುಪಿಸುವ ವಿಷಯದಲ್ಲಿ ಟಪ್ಪಾಲಿನವರು ಜವಾಬದಾರಿಯನ್ನು ವಹಿಸಿಕೊಳ್ಳುತ್ತಾರೆ. ಇವುಗಳ ಮೌಲ್ಯವನ್ನು ಕುರಿತು ಮಿತವಿರುವದಿಲ್ಲ. ಈ ಪ್ರಕಾರ ರವಾನಿಸುವ ಲಖೋಟೆಯು ಘಟ್ಟಿ ತರದ ಕಾಗದದ್ದಾಗಿದ್ದು, ಭದ್ರವಾಗಿ ಬಂದು ಮಾಡಲ್ಪಟ್ಟು, ಅಂಚುಗಳಲ್ಲಿ ಎರಡೆರಡು ಇಂಚುಗಳಿಗೆ ಮೊಹರು ಹಾಕಿರ ಬೇಕು; ಅದೇ ಪ್ರಕಾರ ಕಟ್ಟು ಸಹ ಅದರ ಹೊಲಿಗೆಯಲ್ಲಿ ಮೂರು ಮೂರು ಇಂಚುಗಳಿಗೆ ಮೊಹರು ಹಾಕಿದ್ದಾಗಿರ ಬೇಕು. ಮತ್ತು ಅದರ ಮೇಲ್ಮಡೆಯಲ್ಲಿ ಮೇಲ್‌ವಿಳಾಸವನ್ನೂ ಅಕ್ಷರದಿಂದಲೂ ಅಂಕೆಯಿಂದಲೂ ಅದರ ವಾಜಬಿ ಮೌಲ್ಯವನ್ನೂ ಬರಿಯ ಬೇಕು; ಬರಿಯುವಾಗ ಚಿತ್ತು ಮಾಡ ಬಾರದು. ಇದರ ಯಾವತ್ತು

* ಅಂದರೆ ೭೧ ದಿವಸಗಳಿಗೆ ವಿಾರದ ಕಾಲಾವಧಿಯಾಗಿ ಪ್ರಕಟವಾಗುವ ವರ್ತಮಾನಪತ್ರಗಳು.

† ಅಂದರೆ ಪಾರ್ಸೆಲು ಟಪ್ಪಾಲಿಗೆ ಹಾಕುವಾಗ ಅದರ ಸಂಗಡ ಛಾಪಾರಶೀದಿಯನ್ನು ಭರಾಯಿಸಿ ಕೊಡ ಬೇಕು. ಇದಕ್ಕೆ ದಸ್ಕತು ಹಾಕಿ ವಾಪಸು ಕೊಡೋಣಾಗುತ್ತದೆ. ಇಂಥಾ ರಶೀದಿ ಇಲ್ಲದೆಯೂ ರವಾನಿಸ ಬಹುದು. ಆದರೆ ಅದಕ್ಕೆ ಬೇರೆ ರಶೀದಿ ತಿಕ್ಕಲಿಕ್ಕಿಲ್ಲವಷ್ಟೆ.

ದಸ್ತೂರಿ ಮುಂದಾಗಿ ತೆರಲೇ ಬೇಕು. ಈ ಪ್ರಕಾರ ಇನ್ಶ್ಯೂರೆನ್ಸ್ ಮಾಡ ತಕ್ಕ ಲಬೋಟಿಯಾಗಲೀ ಪಾರ್ಸೆಲಾಗಲೀ ಟಪ್ಪಾಲಕಟ್ಟೆಗೆ ಹಾಜರು ಮಾಡುವಾಗ ಅದರ ಸಂಗಡ ಅದರ ಮಲಫೂಪುಗಳನ್ನೂ ಮೌಲ್ಯವನ್ನೂ ಕುರಿತು (ಟಪ್ಪಾಲಕಟ್ಟೆಯಿಂದ ಮೂಫಿಯಾಗಿ ತಿಳಿಯಬಹ ಭಾಷಾಕಾಗದದಲ್ಲಿ) ವಾಗ್ರೂಪ ಬರದು ತರ ಬೇಕು.

೧೦೦೦ ರೂಪಾಯಿ ಮೌಲ್ಯದೊಳಗಿನ ಕಟ್ಟು ತಲಪುತ್ತಲೇ ಅದು ಹೊಂದ ತಕ್ಕವನಿಗೆ ಸಾಧಾರಣ ರೀತಿಯಂತೆ ಒಪ್ಪಿಸೋಣಾಗುವದು; ಆದರೆ ೧೦೦೦ ರೂಪಾಯಿಗೆ ಏರಿದ ಮೌಲ್ಯವುಳ್ಳ ಕಟ್ಟು ಟಪ್ಪಾಲ ಕಟ್ಟೆಯಲ್ಲಿಯೇ ಒಪ್ಪಿಸಲಾಗುವದು. ಕಟ್ಟು ಹೊಂದಿದವನಿಂದ ಅದು ತಲಪಿದ್ದಕ್ಕೆ ರಶೀದಿ ಪಡಕೊಂಡು, ಕಟ್ಟು ರವಾನಿಸಿದವನಿಗೆ ಮುಟ್ಟಿಸೋಣಾಗುವದು.

(Value Payable Commission) ಮೌಲ್ಯವಸೂಲು ಮಾಡಿ ಕೊಡಿಸುವ ಬಗ್ಗೆ ವಟ್ಟು: ಆ. ಪೈ.

ಕಟ್ಟಿನ ಮೌಲ್ಯ ೧೦ ರೂಪೈಗೆ ಏರದಿದ್ದರೆ ೨ ೦
" ೨೫ " " ೪ ೦
ಪೆಚ್ಚಿಗೆ ಪ್ರತಿ ೨೫ " ಯಾ ಅದರಂಶಕ್ಕೆ ೪ ೦

ಕಟ್ಟುರವಾನಿಸಿದವನಿಗೆ ತರಿಸಿಕೊಡ ತಕ್ಕ ಹಣದಿಂದ ಈ ದರದಲ್ಲಿ ವಟ್ಟು ವಜಾ ಮಾಡಲಾಡೀತು. ಆದರೆ ಕಟ್ಟು ಹೊಂದ ತಕ್ಕವನು ಅದು ತನಗೆ ಬೇಡವೆಂದು ವಾಪಸು ಮಾಡಿದರೆ, ಅದನ್ನು ರವಾನಿಸಿದವನೇ ಅದರ ಟಪ್ಪಾಲ ಪಾಸಲು ಸಹ ತೆರುವದಕ್ಕೆ ಬದ್ಧನಾಗುವನು.

(Insurance) ಲಿಫಾಪೆಗಳಾಗಲೀ ಕಟ್ಟುಗಳಾಗಲೀ ಸುರಕ್ಷಿತವಾಗಿ ಮುಟ್ಟಿಸಿ ಕೊಡುತ್ತೇವೆಂದು ಹೊಣೆ ಮಾಡೋಣಾಗುವದಕ್ಕೆ ವಟ್ಟು:

ಆ. ಪೈ.

ಸೊತ್ತಿನ ಕ್ರಯ ರೂ. ೫೦ಕ್ಕೆ ಏರದಿದ್ದರೆ ೨ ೦
" " ೧೦೦ " ೪ ೪ ೦
ಪೆಚ್ಚಿಗೆ ಪ್ರತಿ " ೧೦೦ ಯಾ ಅದರಂಶಕ್ಕೆ ೪ ೦

ಲಿಫಾಪೆಗಳಿಗೆ ಈ ವಟ್ಟಿನ ಮೌಲ್ಯದ ಚೀಟು ಹಚ್ಚುವದು, ಕಟ್ಟುಗಳಿಗೆ ಅದರ ಮೌಲ್ಯವನ್ನು ನಗದಾಗಿ ಕೊಡುವದು.

(Money Order) "ಮನಿ ಆರ್ಡರ್" ಎಂಬ ಹುಂಡಿಚೀಟು.

ಹಿಂದುಸ್ಥಾನದಲ್ಲಿ ಟಪ್ಪಾಲುಕಟ್ಟೆ ಇರುವ ಒಂದು ಊರಿನಿಂದ ಬೇರೆ ಯಾವ ಊರಿಗಾದರೂ ೧೫೦ ರೂಪಾಯಿಗೆ ಏರದಷ್ಟು ಹಣಕ್ಕೆ ಪೋಸ್ಟ್‌ಮಾಸ್ಟರು ಹುಂಡಿ ಕೊಡ ಬಹುದು.—ಹುಂಡೀ ದ್ವಾರಾ ಹಣ ಯಾರು ಯಾರಿಗೆ ಮುಟ್ಟಿಸ ಬೇಕೋ, ಅವರಿಬ್ಬರ ಹೆಸರು, ವಿಳಾಸ, ಹಣದ ಸಂಖ್ಯೆ ಮುಂತಾದ್ದನ್ನು, ಟಪ್ಪಾಲಕಟ್ಟೆಯಿಂದ ತಿಳಿಯುವ ಭಾಷಾಕಾಗದದಲ್ಲಿ ಬರದು, ಅದರಲ್ಲಿ ಬಿಟ್ಟಿರುವ ಖಾಲಿ ಜಾಗದಲ್ಲಿ (ಹಣ ಪಡಕೊಳ್ಳುವವನಿಗೆ ತಿಳಿಸ ತಕ್ಕ) ಅವಶ್ಯದ ಬೇರೆ ಸಂಗತಿಗಳೇನಾದರೂ ಬರದು, ಹಣ, ಪಟ್ಟಿ ಸಮೇತಾ ಟಪ್ಪಾಲಕಟ್ಟೆಗೆ ರವಾನಿಸಿದ್ದಾದರೆ, ಅದಕ್ಕಾಗಿ ಅವರು ರಶೀದಿ ಕೊಟ್ಟು, ಹಣವನ್ನು ಹೊಂದ ತಕ್ಕವನಿಗೆ ಅವರೇ ಹುಂಡೀಚೀಟು ತೀಡಾ ರವಾನಿಸಿ, ನಮೂದಿಸಿದ ಹಣ ಸಮೇತಾ ಅದನ್ನು ಹೊಂದ ತಕ್ಕವನಿಗೆ ಮುಟ್ಟಿಸುವರು; ತಲ್ಪಿದ ಕೂಡಲೇ ಅದರಲ್ಲಿ ಅಗತ್ಯವಿರುವ ದಸ್ಕತುಗಳನ್ನು ತಾರೀಕು ಸಮೇತಾ ಮತಿಯಿಂದ ಬರದು, ರಶೀದಿ ಕೊಟ್ಟು, ಹಣ ಪಡಕೊಳ್ಳುವದು. ಹುಂಡೀಚೀಟು ಹೊಂದಿದವನು ಬರಹ ಜಾರದವನಾಗಿದ್ದ ಪಕ್ಷಕ್ಕೆ, ಅದಕ್ಕೆ ಅವನ ಗುರುತು ಪಾಕಸಿ, ಬರಹ ತಿಳಿದವನೊಬ್ಬನ ಸಾಕ್ಷಿ ಸಹ ಹಾಕಸಿ ಕೊಡ ಬೇಕು. ಅದಲ್ಲದೆ ಹುಂಡೀಚೀಟು ಹೊಂದುವವನು, ತನ್ನ ಹಣವನ್ನು ಪಡಕೊಳ್ಳುವ ಬಗ್ಗೆ ಬರಹಮೂಲಕವಾಗಿ ಬೇರೊಬ್ಬನನ್ನುಮೊಕ್ತ್ಯಾರನಾಗಿ ನೇಮಿಸ ಬಹುದು.

ವಟ್ಟಿನ ದರ:	ಆ.	ಪೈ.
ಹುಂಡೀ ಹಣ ರೂ. ೧೦ಕ್ಕೆ ಏರದಿದ್ದರೆ,	೨	೦
" " " ಏರಿ, ರೂ. ೨೫ಕ್ಕೆ ಏರದಿದ್ದರೆ	೪	೦
ಪೆಚ್ಚಿಗೆ ಪ್ರತಿ ೨೫ ರೂಪಾಯಿಗೆ ಯಾ ಅದರ ಅಂಶಕ್ಕೆ	೪	೦

ಇಂಥಾ ಹುಂಡೀ ಚೀಟನ್ನು ತಂತಿಟಪ್ಪಾಲಿನ ದ್ವಾರ ಸಹ ರವಾನಿಸ ಬಹುದು. ಆದರೆ ಅಂಥಾ ಹುಂಡೀ ಚೀಟು ಸಹ ೧೫೦ ರೂಪಾಯಿಗೆ ಮಿಾರಬಾರದು. ಮತ್ತು ಒಬ್ಬನ ಹೆಸರಿನಲ್ಲಿ ಒಂದೇ ದಿನಕ್ಕೆ ೬೦೦ ರೂಪಾಯಿಗೆ ಮಿಾರಿ ಹುಂಡಿ ಚಲಾವಣೆಯಾಗಕೂಡದು. ಮಾರ್ಜಿನಿನಲ್ಲಿ ಹೇಳಿದ ವಟ್ಟದಲ್ಲಿ ತಂತಿ ಖರ್ಚು ಸೇರಿರುವದಿಲ್ಲ. ಅದಕ್ಕಾಗಿ ಪ್ರತ್ಯೇಕ ಎರೂಪಾಯಿ ತೆರ ಬೇಕು.

ತಂತಿಟಪ್ಪಾಲಿನ ಹುಂಡೀಚೀಟಿನ ವಟ್ಟು:	ರೂ.	ಆ.
ಹುಂಡೀ ಹಣ. ರೂ. ೨೫ಕ್ಕೆ ಏರದಿದ್ದರೆ,	೦	೯
" " " ಏರಿ ೫೦ಕ್ಕೆ ಏರದಿದ್ದರೆ	೦	೧೨
" " ೫೦ಕ್ಕೆ " ೭೫ " "	೧	೩
" " ೭೫ " " ೧೦೦ " "	೧	೯
" " ೧೦೦ " " ೧೨೫ " "	೧	೧೪
" " ೧೨೫ " " ೧೫೦ " "	೨	೪

ಅದಲ್ಲದೆ ಚಿಲ್ಲರೆ ಹಣ ರವಾನಿಸುವ ಬಗ್ಗೆ ಮೂರು ತರದ (Postal Notes ಅಂದರೆ) ಟಪ್ಪಾಲ

(ಕಪ್ಪುಚೀಟು)	ರೂ. ೨ ಆ. ೯ಕ್ಕೆ ವಟ್ಟು:	ಆ. ೧	
(ಕೆಂಪುಚೀಟು)	„ ೧ „ ೦ „	„	ಪೈ ೬
(ನೀಲಚೀಟು)	„ ೦ „ ೯ „	„	ಪೈ ೩

ನೋಟುಗಳು ಚಲಾವಣಿಯಾಗುತ್ತವೆ. ಅಂಥಾದ್ದನ್ನು ಕೊಂಡುಕೊಂಡವನು ಅದರ ಹಿಂದಗಡೆಯಲ್ಲಿ ಆ ಹಣ ಯಾರಿಗೆ ಮುಟ್ಟಿಸ ಬೇಕೋ ಆತನ ಹೆಸರು ಬರದು, ಆತನಿಗೆ ರವಾನಿಸ ಬೇಕು. ತಲಪುತ್ತಲೇ ಹಣ ಹೊಂದ ತಕ್ಕವನು ಅದರ ಹಿಂಬದಿಯಲ್ಲಿ ಹಣ ತೆರ ತಕ್ಕ ಟಪ್ಪಾಲ ಕಟ್ಟೆಯ ಹೆಸರು ಬರದು, ತನ್ನ ದಸ್ಕತು ಮಾಡಿ, ಅದನ್ನು ಆ ಟಪ್ಪಾಲಕಟ್ಟೆಗೆ ಹಾಜರು ಮಾಡಲಾಗಿ ಹಣ ಕೊಡೋಣಾಗುವದು. ಇಲ್ಲವೆ ಟಪ್ಪಾಲ ನೋಟನ್ನು ರವಾನಿಸುವವನು ಅದನ್ನು ಆರ್ಡರ್ ಆಣೆ ಚೀಟು ಮತ್ತು ಅದನ್ನು ಕುರಿತು ಬರದ ಕಾರ್ಡು ಸಹಿತ ಟಪ್ಪಾಲುಕಟ್ಟೆಗೆ ರವಾನಿಸಿದ್ದಲ್ಲಿ, ಅವರು ಅದಕ್ಕಾಗಿ ರಶೀದಿ ಕೊಟ್ಟು ಆ ನೋಟನ್ನು ಶೀಘ್ರ ರವಾನಿಸಿ, ಅದನ್ನು ಹೊಂದ ತಕ್ಕವನಿಗೆ ಟಪ್ಪಾಲ ಪೇದೆಯ ಮುಖಾಂತರ ಹಣ ಮುಟ್ಟಿಸುವರು. ಇಂಥಾ ನೋಟು, ೬ ತಿಂಗಳೊಳಗೆ ಹಣ ಪಡಕೊಳ್ಳದಿದ್ದರೆ, ಅವಧಿಯಿಂದ ಆತಂಕ ಸಲ್ಲಡುವದು. ಆದರೆ, ಪುನಹಾ ವಟ್ಟಾ ಕೊಟ್ಟು ಅದನ್ನು ಜಾರಿಗೆ ತರ ಬಹುದು; ಹ್ಯಾಗೂ ೬ ತಿಂಗಳ ವರೆಗೆ ಹಣ ಪಡಕೊಳ್ಳದಿದ್ದರೆ, ಅದು ಪೂರಾ ರದ್ದಾಗುವದು.

(India Stock Notes) ಇಂಡಿಯಾ ಸ್ಟೋಕ್ ನೋಟುಗಳು.

ಟಪ್ಪಾಲುಕಟ್ಟೆಗಳಲ್ಲಿ ರೂಪಾಯಿ ೧೦೦, ೨೫, ಮತ್ತು ೫೦ ಮೌಲ್ಯಗಳ ಸ್ಟೋಕ್ ನೋಟುಗಳೆಂಬ ಚೀಟುಗಳು ಮಾರೋಣಾಗುತ್ತವೆ. ಇವುಗಳಿಗೆ ಶೇಕಡಾ ೪ರ ಮೇರೆಗೆ ಬಡ್ಡಿ ಎಣಿಸಲ್ಪಟ್ಟು, ಅಂಥಾ ನೋಟುಳ್ಳವನು ವರ್ಷಂಪ್ರತಿ ಬಡ್ಡಿಯನ್ನು ಖಜಾನೆಯಿಂದ ಪಡಕೊಳ್ಳ ಬಹುದು.

(Post Office Savings Bank) ಟಪ್ಪಾಲಕಟ್ಟೆಯಲ್ಲಿ ಹಣ ಠೇವಣಾತಿ ಇಡೋಣ.

ಈ ಬೇಂಕಿನಲ್ಲಿ ಯಾವ ಪುರುಷನಾಗಲೀ ಸ್ತ್ರೀಯಾಗಲೀ ಮಗುವಿಗೋಸ್ಕರವಾಗಲೀ ಹಣವನ್ನು ಠೇವಣಾತಿಯಾಗಿ ಇಡ ಬಹುದು. ನಾಲ್ಕು ಆಣೆಗಿಂತ ಕಡಿಮೆ ಮೊಬಲಗನ್ನಾಗಲೀ ನಾಲ್ಕು ಆಣೆಯ ಅಂತವಿರುವ ಮೊಬಲಗನ್ನಾಗಲೀ ತಗದುಕೊಳ್ಳುವದಿಲ್ಲ; ಮತ್ತು ಒಂದು ವರ್ಷದೊಳಗೆ ಒಟ್ಟು ಕೂಡಿ ಐನೂರು ರೂಪಾಯಿಗಿಂತ ಜಾಸ್ತಿ ಮೊಬಲಗನ್ನು ಠೇವಣಾತಿಯಾಗಿ ಇಡ ಕೂಡದು.

ಈ ಪ್ರಕಾರ ಠೇವಣಾತಿ ಮಾಡಿದವನು ತನ್ನ ಹಣದಿಂದ ವಾರದಲ್ಲಿ ಒಂದಾವರ್ತಿ ವಾಪಸು ಪಡಕೊಳ್ಳ ಬಹುದು. ಆದರೆ ತನ್ನ ಪೂರಾ ಲೇವಾದೇವಿ ತೀರಿಸುವಾಗ ಅಲ್ಲದೆ, ಒಬ್ಬನು ಒಂದು ಸಾರಿಗೆ ನಾಲ್ಕು ಆಣೆಗಿಂತ ಕಡಿಮೆಯಾಗಲೀ ಅದರ ಅಂತ ಕೂಡಿದ ಯಾವ ಮೊಬಲಗಾಗಲೀ ವಾಪಸು ಪಡಕೊಳ್ಳ ಕೂಡದು.

ಈ ವಿಷಯದಲ್ಲಿ ಇನ್ನೊಂದು ಹುಕುಂ ಕೊಡುವ ವರೆಗೆ, ಪೂರಾ ಐದೈದು ರೂಪಾಯಿಯ ಮೊಬಲಗಿನ ಮೇಲೆ ತಿಂಗಳು ಒಂದಕ್ಕೆ ಮೂರು ಪೈ ಮೇರೆಗೆ (ಅಂದರೆ ವರ್ಷಕ್ಕೆ ಶೇಕಡಾ ೬ ರೂಪಾಯಿ ೧೫ ಆಣೆ ಮೇರೆಗೆ) ಬಡ್ಡಿ ಕೊಡೋಣಾಗುವದು; ಮತ್ತು ವರ್ಷಂಪ್ರತಿ ಬಡ್ಡಿಯನ್ನು ಅಸಲಿಗೆ ಕೂಡಿಸೋಣಾಗುವದು.

(Telegraph) ತಂತಿಟಪ್ಪಾಲು.

ತಂತಿಟಪ್ಪಾಲಿನ ದ್ವಾರಾ ವರ್ತಮಾನವನ್ನು ಕಳುಹಿಸುವದಕ್ಕೆ ಮುಖ್ಯ ಮೂರು ವಿಧದ ದರ ಉಂಟು:

	ಮೊದಲನೆ ೯ ಶಬ್ದಗಳಿಗೆ	ಹೆಚ್ಚಿಗೆ ಪ್ರತಿ ೧ ಶಬ್ದಕ್ಕೆ ಯಾ ೬ ಅಂಕೆಗಳುಳ್ಳ ಸಂಖ್ಯೆಗೆ
(Deferred Message) "ಅವಕಾಶ ವರದಿ" ಅಂದರೆ ಆಫೀಸಿನ ಕೆಲಸದ ಹೊತ್ತಿನಲ್ಲಿ ಕೊಡಲ್ಪಟ್ಟು, ತಂತಿಟಪ್ಪಾಲಿನವರ ಸಂದರ್ಭದಲ್ಲಿ ರವಾನಿಸಿ, ಮರುದಿನ ಬೆಳಿಗ್ಗೆ ಅದರ ವಿಳಾಸಕ್ಕೆ ಮುಟ್ಟಿಸುವಂಥಾದ್ದಾಗಿದ್ದರೆ.	ರೂ. ೦ ಆ. ೯	ರೂ. ೦ ಆ. ೧
(Ordinary Message) "ಸಾಧಾರಣ ವರದಿ" ಅಂದರೆ ಆಫೀಸಿನ ಕೆಲಸದ ಹೊತ್ತಿನಲ್ಲಿ ಒಪ್ಪಿಸಲ್ಪಟ್ಟು, ಚಾಲತಿ ಕ್ರಮದಲ್ಲಿ ರವಾನಿಸಿ ಮುಟ್ಟಿಸುವಂಥಾದ್ದಾಗಿದ್ದರೆ	ರೂ. ೧ ಆ. ೦	ರೂ. ೦ ಆ. ೨
(Urgent Message) "ಜರೂರು ವರದಿ" ಅಂದರೆ ಆಫೀಸಿನ ಕೆಲಸದ ಹೊತ್ತಿನಲ್ಲಿ ಕೊಡಲ್ಪಟ್ಟು, ಕೂಡಲೇ ರವಾನಿಸಿ ಸಾಧಾರಣ ವರದಿಗಿಂತ ಮುಂದಾಗಿ ಮುಟ್ಟಿಸ ತಕ್ಕದ್ದಾಗಿದ್ದರೆ . .	ರೂ. ೨ ಆ. ೦	ರೂ. ೦ ಆ. ೪

ವರದಿ ಹೊರಡುವ ಮತ್ತು ತಲಪುವ ಠಾಣೆಗಳ ಹೆಸರುಗಳು, ವರದಿ ರವಾನಿಸುವವನ ಮತ್ತು ಹೊಂದುವವನ ಹೆಸರುಗಳು, ವಿಳಾಸಗಳು ಲೆಖ್ಖಕ್ಕೆ ಹಿಡಿಯುವದಿಲ್ಲ.

"ಛಾಪಖಾನೇ ವರದಿಗಳು" (ಅಂದರೆ ವರ್ತಮಾನಪತ್ರಗಳಿಗೆ ಬರಿಯಲ್ಪಡುವ ವರದಿಗಳು) ರವಾನಿಸುವದಕ್ಕೆ ಮೇಲಿನ ದರದಲ್ಲಿ ಅದರ ೪ ಪಾಲು ಶಬ್ದಗಳು ಎಣಿಸೋಣಾದಾವು.

Officials of South Canara District

ದಕ್ಷಿಣ ಕನ್ನಡ ಜಿಲ್ಲೆಯ ಸರಕಾರ ಉದ್ಯೋಗಸ್ಥರು.

Civil ಸಿವಿಲ್.

1. District Court ಡಿಸ್ಟ್ರಿಕ್ಟ ಕೋರ್ಟ್.

J. W. Best Esq. ಜೆ. ವ. ಬೆಸ್ಟ್ ಥೊರೆಗಳು—ಡಿಸ್ಟ್ರಿಕ್ಟ ವ ಶೆಸ್ಯನ್ ಜಡ್ಜರು.

H. M. Winterbotham Esq. ಹ. ಮ. ವಿಂಟರ್‌ಬೊಥಮ್ ಥೊರೆಗಳು—ಅಕ್ಟಿಂಗ್ ಜಡ್ಜರು.

ಮಿಸ್ತರ್ ಜು. ಸ. ಸಾಲ್ದಾಞ್ಞಾ—ತಿರಸ್ತೇದಾರ್.

ಪ. ರಾಮರಾವ್—ಹೆಡ್ ಕ್ಲರ್ಕ್.

ಎ. ಬಿ. ಗೊನ್ಸಾಲ್ವೆಸ್—ರಿಕಾರ್ಡ್‌ಕೀಪರ್.

ಜೆ. ಬಿ. ಫೆರ್ನಂಡೆಸ್—ಟ್ರಾನ್ಸ್‌ಲೇಟರ್.

ಉ. ರಾಘವೇಂದ್ರರಾವ್—೩ನೇ ಕ್ಲರ್ಕ್.

ಬಿ. ಮಂಗೇಶರಾವ್—ಶೆಂಟ್ರಲ್ ನಾಜರ್.

ಎ. ಪಿ. ಲೋಬೊ—ಕಾಪಿಸ್ಟರ ಶೆ. ಸುಪರಿಂಟೆಂಡೆಂಟ್.

2. Subordinate Judge's Court. ಸಬೋರ್ಡಿನೇಟ್ ಜಡ್ಜರ ಕೋರ್ಟ್.

M. R. Ry. C. Venkobacharya Avargal ಮ. ರಾ. ರಾ. ಸಿ. ವೆಂಕೋಬಾಚಾರ್ಯರವರು—ಸಬೋರ್ಡಿನೇಟ್ ಜಡ್ಜರು.

ತೋ. ಸೊರೋಞ್ಞಾ—ತಿರಸ್ತೇದಾರ್.

ಕೊ. ಶಾಮರಾವ್—ಹೆಡ್ ಕ್ಲರ್ಕ್.

Pleaders ಡಿಸ್ಟ್ರಿಕ್ಟ ಕೋರ್ಟ ವಕೀಲರು.

ಅ. ಸುಬ್ಬರಾವ್, ಬಿ. ಎ., ಬಿ. ಎಲ್.
ಎ. ಫೆರ್ನಂಡೆಸ್, " " "
ಉ. ಕೃಷ್ಣಭಟ್ಟ, " " "
} ಮದ್ರಾಸ ಹೈ ಕೋರ್ಟ ವಕೀಲರು.

ಕ. ಮಂಜುನಾಥಯ್ಯ.
ಬ. ಲಕ್ಷ್ಮಯ್ಯ.
ನ. ಶಿವರಾವ್.
ಗೊ. ವೆಂಕಟರಾವ್.
ಕಾ. ಭಾ. ರಾಮರಾವ್.
ಕ. ಶಾಮರಾವ್.
ಪ. ವರಮೇಶ್ವರಯ್ಯ.
ಹ. ಕೃಷ್ಣರಾವ್.
ಮ. ತೇ. ರಾಮರಾವ್.
ಮು. ರಾಮಚಂದ್ರಯ್ಯ.
ಕಾ. ಸಾಂತಯ್ಯ.
ಕೋ. ರಾಮಪ್ಪ.
ಮ. ಸುಬ್ಬರಾವ್.
ಸಾ. ಫೆ. ಬ್ರಿತೊ.
ಲೊ. ಲೋಬೊ.
ಬ. ರಾಮಪ್ಪ.
ತ. ಭವಾನಿರಾವ್.
ಸು. ರಾಮರಾವ್.
ಮು. ಶಿವರಾವ್.
ನ. ಮಂಜುನಾಥಯ್ಯ.
ಜೆ. ಎಫ್ ದಿಸೋಜಾ.
ಕೊ. ದೇವರಾವ್.
ಪ. ಸುಬ್ಬರಾವ್.
ಚ. ಆನಂದರಾವ್.
ಎಫ್. ಬಿ. ಮಸ್ಕರೆಞ್ಞಾ.
ಎ. ನರ್ಸಪ್ಪಯ್ಯ.
ಪೆ. ಜ. ಸುಬ್ರಾವ್.

3. Munsifs ಮುನಸಿಫರು.

ಅ. ವೆಂಕಟರಮಣಪೈಗಳು—ಮಂಗಳೂರ ಮುನಸಿಫ್ (1ನೇ ದರ್ಜೆ).
ಕಾ. ಸಲ್ದಾಞ್ಞಾ—ಅ. ಹೆಡ್‌ಕ್ಲರ್ಕ್.

ಕು. ಕೃಷ್ಣರಾಯರು, ಬಿ. ಎ.—ಉಡಪಿ ಮುನಸಿಫ್ (1ನೇ ದರ್ಜೆ).
ಹ. ರಾಮಪ್ಪಾ—ಹೆಡ್‌ಕ್ಲರ್ಕ್.

ಮಿಸ್ತರ್ ಜೆ. ಲೋಬೊನವರು—ಪುತ್ತೂರ ಮುನಸಿಫ್ (2ನೇ ದರ್ಜೆ).
ಬ. ಗಣಪಯ್ಯ —ಹೆಡ್‌ಕ್ಲರ್ಕ್.

ಮಿಸ್ತರ್ ಇ. ಪೆ. ಫೆರ್ನಾಂಡೆಜರು—ಚೀಕಲ (ಕಾಸರಗೋಡ) ಮುನಸಿಫ್ (2ನೇ ದರ್ಜೆ).
ಪು. ರಂಗಪ್ಪಾ—ಹೆಡ್‌ಕ್ಲರ್ಕ್.

ಉ. ಬಾಬುರಾಯರು, ಬಿ. ಎಲ್.—ಕುಂದಾಪುರ ಮುನಸಿಫ್ (4ನೇ ದರ್ಜೆ).
ನ. ಶಾಂತಪ್ಪಾ—ಹೆಡ್‌ಕ್ಲರ್ಕ್.

ಮುಂಡಪ್ಪ ಬಂಗೇರರು, ಬಿ. ಎ., ಬಿ. ಎಲ್.—ಕಾರ್ಕಳ ಮುನಸಿಫ್ (4ನೇ ದರ್ಜೆ).
ಅನಂತಯ್ಯ—ಹೆಡ್‌ಕ್ಲರ್ಕ್.

Registration Department ರಿಜಿಸ್ಟ್ರಿ ಇಲಾಖೆ.

M. R. Ry. A. S. Venkata Rao Avargal, B. A. ಮ. ರಾ. ರಾ. ಎ. ಸ. ವೆಂಕಟರಾಯರು, ಬಿ. ಎ.—ಡಿಸ್ಟ್ರಿಕ್ಟ ರಿಜಿಸ್ಟ್ರಾರ್ ಒಫ್ ಎಸ್ಯುರೆನ್ಸಸ್.

Sub. Registrars ಸಬ್‌ರಿಜಿಸ್ಟ್ರಾರರು.

ಗೊ. ವೆಂಕಟರಾವ್, ಬಿ.ಎ.—2ನೇ ಗ್ರೇಡ್, ಉಡಪಿ.
ಕ. ರಾಮರಾವ್— 3ನೇ ಗ್ರೇಡ್, ಕಾಸರಗೋಡ.
ತ. ಮಂಗೇಶರಾವ್, ಬಿ. ಎ.—3ನೇ ಗ್ರೇಡ್, ಕುಂದಾಪುರ.
ಕಾ. ನಾರಾಯಣರಾವ್—4ನೇ ಗ್ರೇಡ್, ಎಟ್ಲ.
ಹ. ನಾರಾಯಣರಾವ್— " " ಬ್ರಹ್ಮಾವರ.
ಪ. ಕೃಷ್ಣರಾವ್— 4ನೇ ಗ್ರೇಡ್, ಕಾರ್ಕಳ.
ಜೆ. ಬಿ. ಪಿಂತೊ— " " ಬಂಟವಾಳ.
ಪಿ. ರಾಮಕೃಷ್ಣಯ್ಯ—" " ಮುಲ್ಕಿ.
ಮ. ಮುಕುಂದರಾವ್, ಬಿ.ಎ.—6ನೇ " ಹೊಸದುರ್ಗ.
ಕೊ. ನಾರಾಯಣರಾವ್— " " ಮಂಜೇಶ್ವರ.
ಎ. ದೇವಪ್ಪ ಪೂಂಜ—7ನೇ ಗ್ರೇಡ್, ಪುತ್ತೂರು.
ಗೊಡ್‌ಫ್ರೆ ರೋಬರ್ಟ್ಸ್ " " ಬೆಳತಂಗಡಿ.

Revenue and Magisterial
ರೆವೆನ್ಯು ಮತ್ತು ಮೆಜಿಸ್ಟ್ರೇಟ್.

1. Huzur Office ಹಜೂರು.

J. Sturrock Esq. ಜೆ. ಸ್ಟರ್ರಕ್ ಥೊರೆಗಳು—ಕಲ್ಲೆಕ್ಟರ್ ಮ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು.

ಮಾ. ರಾ. ಅ. ವೆಂಕಪ್ಪಪೂಂಜರು—ತಿರಸ್ತೇದಾರ್.

ಜೊ. ಲು. ಫೆರ್ನಂದೆಜರು—ಹೆಡ್‌ಕ್ಲರ್ಕ್.

ಮತ್ತರ್ಥಂಡಾಶಿಗಳು—ಇಂಗ್ಲಿಷ ಹೆಡ್ ಎಕೌಂಟಾಂಟ್.

ಉ. ರಘುನಾಥಯ್ಯನವರು—ಟ್ರನ್ಸ್‌ಲೇಟರ್.

ಅ. ವಾಸುದೇವಪೈಗಳು—ಫೋರೆಸ್ಟ್ ಹೆಡ್ ಕ್ಲರ್ಕ್.

ರ. ರಾಮರಾವರು—ದೇಶಭಾಷಾ ಹೆಡ್ ಕ್ಲರ್ಕ್.

ಬೊ. ತೀವಯ್ಯರು—ಮೆಜಸ್ಟ್ರೆಟ್ ಕ್ಲರ್ಕ್.

ಯೂಸುಫ್‌ಖಾನ್—ಇಂಗ್ಲಿಷ ರಿಕಾರ್ಡ್‌ಕೀಪರ್.

ಇ. ತಿ. ರುಜೆರಿಯೊ—ದೇಶಭಾಷಾ "

ಜಾ ಎಂ. ಗೊನ್ಸಾಲ್ವೆಸ್—ಟ್ರೆಜರರ್ (ಖಜಾನಜ).

2. Head Assistant Collector
ಹೆಡ್ ಅಶಿಸ್ಟಾಂಟ್ ಕಲ್ಲೆಕ್ಟರ್.

Sujaat Ali Khan Esq. ಸುಜಾತ್ ಅಲಿಖಾನ್ ಸಾಹೇಬರು—ಅ. ಹೆಡ್ ಅಸಿಸ್ಟಾಂಟ್ ಕಲ್ಲೆಕ್ಟರ್ ಮತ್ತು 1ನೇ ಕ್ಲಾಸ ಮೆಜಸ್ಟ್ರೇಟರು.

ಪಿ. ಸಿ. ಕಾಸ್ತಿಲಿನೊ—ಹೆಡ್‌ಕ್ಲರ್ಕ್.

3. Deputy Collectors ಡಿಪ್ಯುಟಿ ಕಲ್ಲೆಕ್ಟರರು.

P. F. Fernandez Esq. ಪಿ. ಫ. ಫೆರ್ನಂದೆಜರವರು—ಖಜಾನಾ ಡಿಪ್ಯುಟಿ ಕಲ್ಲೆಕ್ಟರ್.

M. R. Ry. K. Rama Rao Avargal ಮು. ರಾ. ರಾ. ಕವಾಡ ರಾಮರಾಯರವರು—ಜನರಲ್ ಡ್ಯೂಟಿ ಡಿಪ್ಯುಟಿ ಕಲ್ಲೆಕ್ಟರ್ ಮತ್ತು 1ನೇ ಕ್ಲಾಸ ಮೆಜಸ್ಟ್ರೇಟ್.

ರ. ಮಂಜುನಾಥಯ್ಯ—ಹೆಡ್‌ಕ್ಲರ್ಕ್.

I. M. Coelho Esq. ಇ. ಮಾ. ಕೊಯಿಲೊಯವರು—ಟಿಂಪೊರೆರಿ ಡಿಪ್ಯುಟಿ ಕಲ್ಲೆಕ್ಟರ್ ಮ 1ನೇ ಕ್ಲಾಸ ಮೆಜಿಸ್ಟ್ರೇಟ್.

ತಿ. ರಾಮರಾವ್—ಹೆಡ್‌ಕ್ಲರ್ಕ್.

4. Bench Magistrates
ಮಂಗಳೂರ ಶಹರಿನ ಬೆಂಚು ಮೆಜಿಸ್ಟ್ರೇಟರು.

ಮಂಗಳೂರ ಟೌನ್ ಮೆಜಸ್ಟ್ರೇಟರು—ಪ್ರೆಸಿಡೆಂಟ್.

ತುಂಬಿರುವವು. ಈ ಗುರುತುಗಳ ದೆಶೆಯಿಂದ ವ್ಯಾಧಿಯ ಗುಣಗಳನ್ನು ತಿಳುಕೊಳ್ಳ ಬಹುದು. ಎಂಟನೇ ದಿನ ಸಾಯಂಕಾಲ ಆ ಬೊಕ್ಕೆಗಳ ಸವಿಾಪದಲ್ಲಿ ಸುತ್ತುಮುತ್ತ ಲ್ಲೂ ಬಾತು, ಕೆಂಪು ಕಟ್ಟುವದು; ಅದು ಒಂದು ಅಂಗುಲದಷ್ಟು ಇರುವದು. ಆಗ ಶಿಶು ವಿಗೆ ಸ್ವಲ್ಪ ಜ್ವರ ಕಾಣಿಸುವದು, ಕೆಲವು ಶಿಶುಗಳಿಗೆ ಅಧಿಕವಾಗಿ, ಕೆಲವಕ್ಕೆ ಕಡಿಮೆಯಾಗಿ ಅವರವರ ದೇಹಸ್ಥಿತಿಯ ಪ್ರಕಾರ ಕಾಣಿಸುವದು. ಇದು ತನ್ನಂತೆ ಆದ ವೈಲಿಗೆಯಲ್ಲಿ ಕಾ ಣುವ ಜ್ವರಕ್ಕೆ ಎರಡನೇದಾಗಿದೆ. ಈ ಜ್ವರ ಉಂಟಾದರೆ, ಮತ್ತು ಬೊಕ್ಕೆಗಳು ಸಮನಾಗಿ ಎದ್ದು ಬಂದರೆ, ಹಾಕೋಣಾದ ಡಾಕು ಫಲಿತವಾಯಿತು ಎಂಬದಕ್ಕೆ ದೃಷ್ಟಾಂತವಾಗಿದೆ. ಬೊಕ್ಕೆಗಳು ತಗ್ಗಿ ಬಂದ ಎರಡು ದಿನದೊಳಗೆ ಒಡದು, ಕೀವು ಹೊರಟು, ಗಟ್ಟಿ ಕಟ್ಟು ವವು. ಅವು ಕ್ರಮೇಣವಾಗಿ ಒಣಗಿ ಹಕ್ಕಾಗಿ, ೧೫ ದಿವಸದನಂತರ ೨೦ ದಿವಸಗಳೊಳಗೆ ಆ ಹಕ್ಕುಗಳು ಬಿದ್ದುಹೋಗುವವು. ಹಕ್ಕುಗಳು ಬಿದ್ದು ಹೋದ ಸ್ಥಳದಲ್ಲಿ ಕಂತವಾಗಿ ಇರು ವದು. ಸ್ವಲ್ಪ ದಿವಸದ ಮೇಲೆ ಅದನ್ನು ನೋಡಿದ್ದಾದರೆ, ಗುಂಡಗಾಗಿ ಅದರ ಮಧ್ಯದಲ್ಲಿ ಸ್ವಲ್ಪ ಕಂತಿ ಹೋದ ಹಾಗೆ ಕಾಣ ಬರುವದು. ಪ್ರತಿ ಬೊಕ್ಕೆಯಲ್ಲಿ ಸುರಳಿ ಸುರಳಿಗಳಂತೆ ಕಾಣ ಬರುವದು. ಮತ್ತು ಅದರ ಲಾಂಛನವು ಆಯುಷ್ಯಕಾಲವೆಲ್ಲ ಮಾಜದೆ ವಿಶೇ ಷವಾದ ಗುರುತುಳ್ಳದ್ದಾಗಿರುವದು. ಇದರ ದೆಶೆಯಿಂದ ಡಾಕಿನ ಗುಣವನ್ನು ತಿಳಿದುಕೊಳ್ಳ ಬಹುದು. ಡಾಕಿನ ಹಾಲು ಒಳ್ಳೇದಲ್ಲವಾದರೆ, ಯಾ ಡಾಕು ಹಾಕುವಲ್ಲಿ ಹೆಚ್ಚು ಕಡಿಮೆ ಆದರೆ, ಡಾಕು ನಿಷ್ಫಲವಾಗುವದು, ಯಾ ಮೇಲೆ ಹೇಳಿದ ಗುಣಗಳು ಕಂಡು ಬರಲಿಕ್ಕಿಲ್ಲ. ಆದರೆ ಬೊಕ್ಕೆಗಳನ್ನು ಗೀರಿದ್ದಾದರೆ, ವ್ರಣವಾಗುವದು.

ಡಾಕು ಹಾಕಿದ ೬ನೇ, ೭ನೇ ಯಾ ೮ನೇ ದಿವಸದಲ್ಲಿ ತೆಗದಂಥಾ ಹಾಲು ಮಾತ್ರವೇ ಮತ್ತೊಬ್ಬನಿಗೆ ಡಾಕು ಹಾಕುವದಕ್ಕೆ ಉಪಯೋಗಿಸ ಬಹುದು. ಆದರೆ ೮ನೇ ದಿವಸ ಬೊಕ್ಕೆ ಯಲ್ಲಿ ದೊರಿಯುವ ಹಾಲು ಅತ್ಯುತ್ತಮವಾದ್ದು, ಮತ್ತು ಅಂದು ಬೊಕ್ಕೆ ದೊಡ್ಡದಾಗಿ ಕಾಣ ಬರುವದು; ಆಗ ಗಿಣ್ಣು ಉಂಟಾಗಿರುವ ನೀರು ತೆಳ್ಳಗಾಗಿಯೂ ಶುಚಿಯಾಗಿಯೂ ಕೀವು ವಿರಹಿತವಾಗಿಯೂ ಕಾಣುವದು. ಆದದರಿಂದ ಆ ಡಾಕಿನ ಬೀಜ ತೆಗಿಯುವಾಗ ಜಾಗ್ರ ತೆಯಾಗಿ ನೋಡಿ ತೆಗಿಯ ಬೇಕು. ಕತ್ತಿ ಶುದ್ಧವಾಗಿಯೂ ತುಕ್ಕು ಇಲ್ಲದೆಯೂ ಇರ ಬೇ ಕು. ಆ ಹಾಲು ತೆಗಿಯಲ್ಪಡುವ ಶಿಶುವು ಗಜ್ಜಿಯಿಂದಲಾದರೂ ಬಲಹೀನ ಪಡಿಸ ತಕ್ಕ ವ್ಯಾಧಿಯ ದೆಶೆಯಿಂದಲಾದರೂ ತೊಂದರೆ ಪಡದೆ ಇರ ಬೇಕು. ಒಟ್ಟಾರೆಯಾಗಿ ಹಾಲು ಎತ್ತುವಾಗಲೂ ಹೊಂದಿಸುವಾಗಲೂ ಜಾಗ್ರತೆಯಾಗಿ ಡಾಕುಸಂಬಂಧವಾದ ಸೂಚನೆಗಳ ನ್ನೆಲ್ಲಾ ಸರಿಯಾಗಿ ಕೈಕೊಳ್ಳ ಬೇಕು.

ಸಣ್ಣ ಶಿಶುಗಳು ಡಾಕು ಹಾಕಲ್ಪಡದೆ ಸ್ಫೋಟಕ ವ್ಯಾಧಿಯಿಂದ ಸಹಜವಾಗಿ ತಪ್ಪಿಸಿ ಕೊಳ್ಳುವರೆಂಬುವ ಮಾತು ಮಹಾ ಕಲ್ಪಿತವು. ಈ ಭಯಂಕರವಾದ ವ್ಯಾಧಿಗೆ ಒಳಪಡು ವದಕ್ಕೆ ಯಾವ ವಯಸ್ಸಾದರೂ ಅಭ್ಯಂತರವಾಗಿರುವದಿಲ್ಲ. ಶಿಶುಗಳು ಹುಟ್ಟುವದಕ್ಕೆ ಮುಂಚೆ ಸಹ ಇದರ ಸೋಂಕು ಹಿಡಿಯ ಬಹುದು. ತಾಯಿಯು ಗರ್ಭಿಣಿಯಾಗಿರು ವಾಗಲಾದರೂ ಇದರ ದೆಶೆಯಿಂದ ಗರ್ಭ ಕರಗಿ ಹೋಗುವದು. ಆದದರಿಂದ ಈ ಸ್ಫೋ ಟಕವು ಶಿಶುವಿಗೆ ಹುಟ್ಟುವದುಂಟು.

ಡಾಕು ಹಾಕುವಾಗ ಹಾಲು ಅಪೂಟವಾಗಿಯೂ ಒಳ್ಳೇದಾಗಿಯೂ ಇರ ಬೇಕು. ಆ ದನ್ನು ಡಾಕುದಾರರು ಹೊಂದಿಸುವಾಗ ಚನ್ನಾಗಿ ಹೊಂದಿಸಿದ್ದಾರೋ ಏನೆಂಬದನ್ನು ಜಾಗ್ರ

ತೆಯಾಗಿ ನೋಡಿಕೊಳ್ಳ ಬೇಕು. ಎಷ್ಟು ಜಾಗ್ರತೆಯಾಗಿ ಹೊಂದಿಸಿದರೂ ಬೊಕ್ಕೆಗಳೇಳದೆ ತಪ್ಪಿ ಹೋದರೆ, ಪುನಹಾ ಅದನ್ನು ಹೀರಿಸ ಬೇಕು. ಈ ಮೇರೆಗೆ ಫಲಿತವಾಗುವ ವರೆಗೂ ಮಾಡಿಸ ಬೇಕು. ಅನೇಕ ಸಾರಿ ಡಾಕು ಹಾಕಿಸಿಕೊಳ್ಳುವದರ ದೆಶೆಯಿಂದ ಏನೂ ಬಾಧಕವಿಲ್ಲ.

ಕೆಲವರಿಗೆ ಕೆಟ್ಟ ಸ್ವಾರ್ಥವಿರುತ್ತದೆ: ತಮ್ಮ ಮಕ್ಕಳಿಗೆ ಡಾಕು ಹಾಕಿಸುವದಕ್ಕೆ ಸಂತೋಷ ಪಟ್ಟರೂ, ತಮ್ಮ ಮಕ್ಕಳಿಗೆ ಉಂಟಾಗಿರುವ ಶಿಡುಬುಬೊಕ್ಕೆಗಳಿಂದ ನೀರು ತೆಗದು ಕಡಿಮೆ ಮಕ್ಕಳಿಗೆ ಹಾಕಿಸುವದಕ್ಕೋಸ್ಕರ ಕೊಡುವದಕ್ಕೆ ಆಕ್ಷೇಪಿಸುತ್ತಾರೆ. ಬೇರೆ ಜನರ ಬೊಕ್ಕೆಗಳ ಹಾಲು ಮಾತ್ರ ತೆಗದುಕೊಂಡು ಅದರ ಪ್ರಯೋಜನ ಪಡಕೊಳ್ಳುತ್ತಾರೆ. ಆ ಹಾಲು ಕೊಟ್ಟರೆ, ಅದರ ಬಲ ತಗ್ಗುವದೆಂದು ಯೋಚಿಸುತ್ತಾರೆ. ಇದು ಎಷ್ಟು ಮಾತ್ರವೂ ವಾಸ್ತವಿಕವಲ್ಲಾ. ನಾಲ್ಕು ಬೊಕ್ಕೆಗಳಲ್ಲಿ ಎರಡು ಬೊಕ್ಕೆಗಳೆದ್ದರೆ ಸಾಕು. ನಾಲ್ಕು ಮಾತ್ರವಲ್ಲ ಆರು ಬೊಕ್ಕೆಗಳೇಳುವ ಹಾಗೆ ತಗಲಿಸುವದುಂಟು. ಅವೆಲ್ಲಾ ಪೂರ್ತಿಯಾಗಿ ಎದ್ದದ್ದಾದರೆ, ನಾಲ್ಕು ಬೊಕ್ಕೆಗಳು ಕಂಡಾಗ ಒಂದನ್ನು, ಆರು ಬೊಕ್ಕೆಗಳು ಕಂಡಾಗ ಎರಡನ್ನು ಎತ್ತಿಕೊಳ್ಳ ಬಹುದು. ಅದಕ್ಕೆ ಕಡಿಮೆಯಾಗದಂತೆ ವಿುಕ್ಕಾದವರಿಗೆ ಮಾಡ ಬಹುದು.

ಕೆಲವು ಮನುಷ್ಯರಿಗೆ ಜೀವಕಾಲದೊಳಗೆ ಹ್ಯಾಗೂ ಸ್ಫೋಟಕ ಒಂದಾವರ್ತಿಯಾದರೂ ಕಾಣಿಸುವದೆಂದು ಹೇಳುವರು. ಬಲಹೀನತೆಯ ದೆಶೆಯಿಂದಲೂ ಶರೀರಧಾತುವಿನ ವ್ಯತ್ಯಾಸದ ದೆಶೆಯಿಂದಲೂ ಸ್ಫೋಟಕವು ಜೀವಕಾಲದೊಳಗೆ ಎರಡು ಪರ್ಯಾಯಗಳಾಗಿ ಕಾಣಿಸುವದುಂಟು. ಇಂಥವರಿಗೆ ಡಾಕು ಸರಿಯಾಗಿ ಹಾಕಿಸಿದ್ದಾಗ್ಯೂ, ಶಿಡುಬು ಎರಡನೇ ಸಾರಿ ಕಾಣಿಸುವದು. ಹಾಗೆ ಕಾಣಿಸಿದಾಗ್ಯೂ ಶಾಂತವಾಗುವದು, ಪ್ರಾಣ ನಷ್ಟವಾಗಲಿಕ್ಕಿಲ್ಲ. ಶಿಡುಬು ರೋಗ ತೊಡಗಿದ ಒಬ್ಬ ಮನುಷ್ಯನನ್ನು ಕೂಡಲೇ ಒಂದು ಪ್ರತ್ಯೇಕ ಕೋಣೆಯಲ್ಲಿ ಅನುಕೂಲವಿದ್ದರೆ ಪ್ರತ್ಯೇಕ ಒಂದು ಮನೆಯಲ್ಲಿ, ಇರಿಸ ಬೇಕು. ಬಳಿಸಲ್ಪಡದಂಥ ಉಡಿಗೆ ತೊಡಿಗೆಯ ಎಲ್ಲ ವಸ್ತ್ರಗಳನ್ನು ತೆಗದು, ಬೇರೆ ಕಡೆಯಲ್ಲಿ ಇಡ ಬೇಕು. ಮತ್ತು ರೋಗಿಯ ದೇಹದ ಮೇಲಿರುವ ಮೈಲಿಗೆ ವಸ್ತ್ರಗಳನ್ನು ನೀರಿನಲ್ಲಿ ಹಾಕಿ, ಕನಿಷ್ಟ ಪಕ್ಷಕ್ಕೆ ಒಂದು ತಾಸಿನ ಪರ್ಯಂತರವಾದರೂ ಬೇಯಿಸ ಬೇಕು, ಸುಟ್ಟು ಬಿಟ್ಟರೆ ಅತ್ಯುತ್ತಮವೇ ಸರಿ. ಮತ್ತು ಸಂದರ್ಭವಿದ್ದದ್ದಾದರೆ, ಕುಟುಂಬದಲ್ಲಿ ಒಮ್ಮೆ ಮೈಲೆಗಜ್ಜಿ ಆದವನು, ಇಲ್ಲವೆ ಡಾಕು ಹಾಕಲ್ಪಟ್ಟವನಾದರೂ ರೋಗಿಯ ಅನುಪಾನ ನೋಡುವ ಹಾಗೆ ಅಲ್ಲಿ ನಿಲ್ಲ ತಕ್ಕದ್ದು. ಡಾಕು ಹಾಕದೆ ಇರುವ ಇತರ ಜನರನ್ನು ಆ ಕೋಣೆಯಿಂದ ಹೊರಡಿಸಿ, ಅಲ್ಲಿ ಬರಗೊಡಿಸ ಬಾರದು. ಕೋಲ್‌ಟಾರ್ಫು[1] ಯಾ ಗಂಧಕವನ್ನು ನಿರಂತರವಾಗಿ ರೋಗಿಯನ್ನು ಮಲಗಿಸಿದ ಠಾವಿನಲ್ಲಿ ಸುಡುತ್ತಾ ಇದ್ದು, ಬಾಗಲುಗಳನ್ನೂ ಕಿಡಿಕಿಗಳನ್ನೂ ಪೂರ್ಣವಾಗಿ ಘಾಳಿಯ ಚಲನೆಗೆ ಅಸ್ಪದವಾಗುವ ಹಾಗೆ ತೆರದಿಡ ತಕ್ಕದ್ದು; ಮತ್ತು ರೋಗಿ ಇರುವ ಮನೆಯಲ್ಲಿಯೂ ಅದರ ಸುತ್ತುಮುತ್ತಲಿನಲ್ಲಿಯೂ ರೊತ್ತಿ ಕೆಸರು ಮುಂತಾದ್ದಿದ್ದರೆ, ಝಾಡಿಸಿ, ಎಲ್ಲಾ ನಿರ್ಮಲವಾಗಿ ಇಡ ತಕ್ಕದ್ದು. ಮೈಲೆಗಜ್ಜಿ ಆಗದ ಜನರು ಮೈಲೆಗಜ್ಜಿ ರೋಗ ಪ್ರಬಲವಾಗಿದ್ದಾಗ್ಯೂ, ಅದರ ಸೋಂಕು ಬಾರದ ಹಾಗೆ ಡಾಕು ಹಾಕಿಸಿಕೊಳ್ಳ ತಕ್ಕದ್ದು. ಒಂದು ಸರ್ತಿ ಡಾಕು ಹಾಕಿಸಿಕೊಂಡವರಾದರೂ ತಿರಿಗಿ ಹಾಕಿಸಿಕೊಳ್ಳುವದು ಹೆಚ್ಚು ಭದ್ರವಾದ ಉಸಾಯವಾಗಿರುತ್ತದೆ. ಮುಖ್ಯವಾಗಿ ಮೈಲೆಗಜ್ಜಿಯುಳ್ಳ ಮನೆಯ ಜನರು, ಈ ರೋಗದ ಸೋಂಕು ಹಬ್ಬದ ಹಾಗೆ ಆ ಪ್ರಕಾರ ಮುಂಜಾಗ್ರತೆ ತೆಗದುಕೊಳ್ಳುವದು ಅವಶ್ಯವಾಗಿರುತ್ತದೆ.

[1] ಇದು ಪೇಟೆಯಲ್ಲಿ ವಾಡಿಕೆಯಾಗಿ ತಿಕ್ಕುವ ಕಪ್ಪು ಟಾರ್ ಆಗಿರುತ್ತದೆ.

ಮೈಲೆಗಜ್ಜಿ ಇದ್ದ ಮನೆಯಲ್ಲಿ ರೋಗಿಗಾಗಿ ಉಪಯೋಗವಾದ ಎಲ್ಲಾ ವಸ್ತ್ರ ಚಾಪೆ ಮುಂತಾದ್ದನ್ನು ಸುಟ್ಟು ಬಿಡ ಬೇಕು, ಮತ್ತು ರೋಗಿ ಇದ್ದ ಕೋಣೆಯನ್ನು ಪೂರ್ಣವಾಗಿ ಶುಚಿ ಮಾಡಿ, ಆದರ ಸಂದು ಮೂಲೆಗಳಿಗೆಲ್ಲಾ ಸುಣ್ಣ ಬೊಳಿಯ ಬೇಕು. ಮತ್ತು ಬಾಗಲು ಕಿಡಿಕಿಗಳನ್ನು ಕನಿಷ್ಟ ಪಕ್ಷಕ್ಕೆ ಇಪ್ಪತ್ತನಾಲ್ಕು ತಾಸುಗಳ ಪರ್ಯಂತರವಾದರೂ ಮುಚ್ಚಿ, ಒಳ್ಳೇ ಹೊಗೆ ತಾಗುವ ಹಾಗೆ ಕೋಲ್‌ಟಾರು ಅಥವಾ ಗಂಧಕವನ್ನು ಸುಟ್ಟು, ತರುವಾಯ ಹೊರಗಿನ ಘಾಳಿ ಬರುವ ಹಾಗೆ ತೆರದಿಡ ಬೇಕು. ಇಷ್ಟು ಮಾಡದ ಹೊರ್ತು ಅದನ್ನು ತಿರಿಗಿ ವಾಸಿಸಲಿಕ್ಕೆ ತಕ್ಕದ್ದು ಎಂತ ಎಣಿಸ ಕೂಡದು.

ಮೈಲೆಗಜ್ಜಿ ರೋಗ ಆದ ಪಕ್ಷದಲ್ಲಿ ಮಾಡ ತಕ್ಕ ಚಿಕಿತ್ಸೆಯನ್ನು ಕುರಿತು ಏರ್ಪಡಿಸಿದ ಕ್ರಮಗಳು.*

ಲಕ್ಷಣಗಳು: ಒಬ್ಬ ಮನುಷ್ಯನು ತನಗೆ ಕಂಪನ, ಜ್ವರ, ತಲೆನೋವು, ವಾಂತಿ ವ ಬೆನ್ನಿನಲ್ಲಿ ನೋವು ಉಂಟಾಗಿ ಅದೆ ಎಂತ ಹೇಳಿದ ಕೂಡಲೇ ಅತಗೆ ಮೈಲೆಗಜ್ಜಿ ಪ್ರಾರಂಭ ವಾಗಿ ಅದೆ ಎಂತ ಅನುಮಾನ ಪಡ ಬಹುದು. ಈ ಕುರುಹುಗಳು ಕಂಡು ಬಂದ ೪ಲ ತಾ ಸುಗಳ ಮೇಲೆ ಅಥವಾ ೩ನೇ ದಿವಸದ ಶುರುವಿನಲ್ಲಿ ಚಳ್ಳೆಗಳು ಪ್ರಥನುತಾ ಮುಖದ ಮೇ ಲೂ ಕುತ್ತಿಗೆ ಮುಂಗೈಗಳ ಮೇಲೂ, ಎರಡನೆ ದೇಹದ ಮೇಲೂ, ಕಡೆಗೆ ದೇಹದ ಕೆಳ ಭಾಗದಲ್ಲಿಯೂ ಕಂಡು ಬರುವವು. ನುಂಗಲಿಕ್ಕೆ ಪ್ರಯಾಸವಾಗುವದು, ಮುಖ, ಕಾಲು, ಕೈಗಳು ಬೀಗುವವು, ಕಣ್ಣುರೆಪ್ಪೆಗಳು ಉರಿಯುವಂತೆ ಆಗಿ, ಅವುಗಳಿಂದ ನೀರು ಸುರಿ ಯುವದು, ಮತ್ತು ಕ್ರಮೇಣದಲ್ಲಿ ಪೂರಾ ಮುಚ್ಚಿ ಸಹಾ ಹೋಗುವದುಂಟು. ಆರಂಭ ದಿಂದ ಕಣ್ಣುಗಳಿಗೆ ಉಚಿತ ಮುಂತಾದ್ದು ಇದ್ದರೆ, ದೃಷ್ಟಿಗೆ ಬಹುಶಾ ಅಪಾಯ ಬರುವ ದುಂಟು. ೬ನೇ ದಿವಸದಲ್ಲಿ ಸರ್ವಾಂಗದಲ್ಲಿ ಚೆಳ್ಳೆಗಳು ಹೊರಟು ನೀರು ಹಿಡಿದು, ೧೧ನೇ ದಿವ ಸದಲ್ಲಿ ಕೀವು ಹುಟ್ಟಿ ತುಂಬುವದು; ಆ ಮೇಲೆ ಕ್ರಮೇಣವಾಗಿ (crust) ಹಕ್ಕುಗಟ್ಟಿ ಬಿದ್ದು ಹೋಗುವದು. ಇದೇ ರೋಗದ ಅಪತ್ತಿನ ಸಮಯವಾಗಿರುತ್ತದೆ. ಮೈಲೆಗಜ್ಜಿಯ ಪೀಡೆಯು ಸಾಧಾರಣವಾಗಿ ಇಪ್ಪತ್ತು ದಿವಸಗಳ ವರೆಗೆ ಇರುವದು. ಅದರ ಅವಸ್ಥೆಗಳೆಲ್ಲಾ ಯಾವ ಉಪಾಯದಿಂದಾದರೂ ನಿಲ್ಲಿಸಲೂ ನಿವಾರಿಸಲೂ ಆಗುವದಿಲ್ಲಾ.

ಚಿಕಿತ್ಸೆ: ರೋಗ ಪ್ರಾರಂಭವಾದಂದಿನಿಂದ ರೋಗಿಗೆ ತುಂಬ ಪತ್ಯ ಕೊಡ ಬೇಕು; ರೋಗವು ಸಾಧಾರಣ ತರದ್ದಾದರೆ, ವಾಡಿಕೆಯಾದ ಆಹಾರವು ಸಾಕಾಗಿರುತ್ತದೆ; ಇಲ್ಲವಾ ದರೆ, ಒಳ್ಳೇ ಕುರಿ ಮಾಂಸ ಯಾ ಕೋಳಿಮರಿಯ "ಬ್ರಾತ್" ಯಾನೆ ಕಷಾಯ, ರೊಟ್ಟಿ, ಹಾಲು, ಮತ್ತು ಹಾಲು ಬೆರಸಿರುವ ಚಾನೀರನ್ನು ಆಗ್ಯಾಗ್ಗೆ ಸ್ವಲ್ಪ ಸ್ವಲ್ಪವಾಗಿ ಕೊಡುತ್ತಿರ ಬೇಕು. ಮತ್ತು ಜ್ವರ ಕಠಿಣವಾದರೆ, ಸಾಧಾರಣವಾದ ಮಲವಿಸರ್ಜನೆ ಆಗುವ ಹಾಗೆ ಹರಳೆಣ್ಣೆ ಸಮಯಾನುಸಾರವಾಗಿ ಕೊಡ ಬೇಕಲ್ಲದೆ ಕಠಿಣವಾದ ಜುಲಾಬಿನ ಔಷಧಗಳ ನ್ನು ಕೊಡಬಾರದು. ಶಿವಿಲ್ ಆಸ್ಪತ್ರಿಗಳಲ್ಲಿ ಧರ್ಮಾರ್ಥವಾಗಿ ಶಿಕ್ಕುವ ಮೈಲೆಗಜ್ಜೀ "ಲೋ ಶನ್" ಎಂಬ ಔಷಧಿ ನೀರಿನಿಂದ ರೋಗಿಯು ದೇಹವನ್ನು ಬೊಕ್ಕೆಗಳು ಎದ್ದಂದಿನಿಂದ ದಿವ ಸಕ್ಕೊಮ್ಮೆ ತೊಳಿಯ ತಕ್ಕದ್ದು. ಕಣ್ಣುಮುಚ್ಚಳಗಳು ಬಾತು, ಕೆಂಪಾಗಿ ಉರಿ ಇರು

* "ದಕ್ಷಿಣ ಕನ್ನಡಾ ಜಿಲ್ಲಾ ಗಜೆಟ್", ೧೮೭೬ನೇ ಇಸವಿ ಫೆಬ್ರುವರಿ ೧೦ನೇ ತಾರೀಕಿನ ಸಂಚಿಕೆಯ ೪೧-೪೨ನೇ ಪಾನುಗಳನ್ನು ನೋಡು.

ವ ಸಂಗತಿಯಲ್ಲಿ ಉಗುರುಬಿಚ್ಚಿಗಿರುವ ನೀರಿನಿಂದ ಪದೇ ಪದೇ ತೊಳೆಯುವದರಿಂದಾಗಲೀ, ಕಿವೀ ಹಿಂದೆ (blister) ಬ್ಲಿಷ್ಟರ ಎಂಬ ಚಳ್ಳೆ ಎಬ್ಬಿಸೋಣದರಿಂದಾಗಲೀ ಗುಣ ಶಿಕ್ಕೀತು.

ಗ್ರೆಹಾಮು ಎಂಬ ಪ್ರಶಸ್ತ ವೈದ್ಯಪಂಡಿತನು ಹೇಳುವ ಔಷಧವು ಮೈಲೆಗಜ್ಜಿಯ ಯಾವ ಅವಸ್ಥೆಯಲ್ಲಿ ಆದರೂ ಅತ್ಯುತ್ತಮವಾದ್ದೆಂದು ಹೇಳುತ್ತಾರೆ. ಫೈಬ್ಸ್ (ಕಾಲು ಕುಡು ತೆಯ ಮುಕ್ಕಾಲು ಅಂಶ) (cream of tartar) ಕ್ರೀಮ್ ಆಫ್ ಟಾರ್ಟರ್, ೧೨ ಗ್ರೇನ್ (rhubarb) ರುಬಾರ್ಬ ಎಂಬ ತಿಗಡೇ ಹುಡಿ, ಇವೆರಡನ್ನು ಅರ್ಧ ಬಾಟ್ಲಿ ನೀರಿನಲ್ಲಿ ಚನ್ನಾಗಿ ಕಲಕಿಸಿ, ಅದರ ಆರೆವಾಸಿಯನ್ನು ಕೂಡಲೇ ಕೊಟ್ಟು, ೬ ತಾಸಿನನಂತರ ಪುನಹ ಕೊಡುವದು. ಆ ಮೇಲೆ ಆದೇ ಪ್ರಕಾರ ಅರ್ಧ ಬಾಟ್ಲಿ ತಯಾರು ಮಾಡಿ, ದಿವಸಕ್ಕೆ ಒಂದು ಸಾರಿ ಕೊಡುವದು. ಇದು ರೋಗ ವಿಷಮವಾದ ಸಂಗತಿಗಳಲ್ಲಿ ಸಹ ಬಹಳ ಪ್ರಯೋಜನಕರವಾಗಿ ಕಂಡು ಬಂದೀತು.

ಮೈಸೊಕ್ಕು (ಕಣ್ಣುಕತ್ತಲೆ ಬರುವದು) Fainting.

೧೮೮೮ನೇ ಇಸವಿಯ ಪಂಚಾಂಗದ ೫೧೦-೫೧೧ನೇ ಪಾನುಗಳಲ್ಲಿ ನೋಡು.

ಮೊಡವೆಗಳು (ನೋವುಳ್ಳ), ನೋವಿನ ಗಡ್ಡೆ Painful Tumours.

೧೮೮೫ನೇ ಇಸವಿಯ ಪಂಚಾಂಗದ ೫೬೩-೫೬೪ನೇ ಪಾನುಗಳಲ್ಲಿ ನೋಡು.

ಮೊಣಕಾಲುಗಂಟಿನ ಬಾವು Enlargement of the Knee-joint.

೧೮೮೬ನೇ ಇಸವಿಯ ಪಂಚಾಂಗದ ೫೧೦ನೇ ಪಾನಿನಲ್ಲಿ ಕೀಲುಗಳ ಬಾವಿಗೆ ಹೇಳಿದ ಚಿಕಿತ್ಸೆಯನ್ನು ಮಾಡು.

ಮೊಲೆಕುರು Milk Abscess, Gathered Breasts (Mammary Abscess).

ಸ್ತ್ರೀಯರು ಹೆತ್ತ ಮೇಲೆ ಸ್ತನದಲ್ಲಿ ಹಾಲು ಪ್ರಥಮತಾ ಉಂಟಾಗುವ ಸಮಯದಲ್ಲಿ ಆಗಲೀ, ಕೂಸು ಸರಿಯಾಗಿ ಮೊಲೆ ತಿನ್ನದೆ ಇರುವ ದೆಶೆಯಿಂದ ಸ್ತನಗಳಲ್ಲಿ ಹಾಲು ಹೆಚ್ಚು ಜಮೆ ಆದದರಿಂದಾಗಲೀ, ಬೇರೆ ಕಾರಣದಿಂದಾಗಲೀ ನೋವು ಉಂಟಾಗಿ ಬಾವು ಪ್ರಾರಂಭ ವಾಗುವದು. ವಿಶೇಷವಾಗಿ ಚೊಚ್ಚಲ ಮಗು ಹೆತ್ತ ಸ್ತ್ರೀಯರಿಗೆ ಈ ತರದ ಕುರು ಉಂಟಾಗುವ ಸಂಭವವಿರುವದು.

ಚಿಕಿತ್ಸೆ: ಆದರ ಪ್ರಾರಂಭಸ್ಥಿತಿಯಲ್ಲಿ ನವಸಾಗರದ ನೀರು (೨೬೭[1]), ಇಲ್ಲವೇ ಬಿಸಿ ತಿರ್ಕದ ನೀರುಗಾವು (೨೬೬[2]) ಕೊಡುವದು. ಆದರೆ ಆದರಲ್ಲಿ ಕೀವು ಉಂಟಾದ ಪಕ್ಷಕ್ಕೆ, ಅದು ಬರೇ ಬಾವಿನಂತೆ ಎಣಿಸಿ, ೧೮೮೬ನೇ ಇಸವಿಯ ಪಂಚಾಂಗದ ೪೮೦ನೇ ಪಾನಿನಲ್ಲಿ ಹೇಳಿರುವ ಚಿಕಿತ್ಸೆಯನ್ನು ಮಾಡುವದು.

---

1) ೧೮೮೬ನೇ ಇಸವಿಯ ಪಂಚಾಂಗದ ೪೮೦ನೇ ಪಾನಿನಲ್ಲಿ ನೋಡು.

2) ೧೮೮೬ನೇ ಇಸವಿಯ ಪಂಚಾಂಗದ ೫೮೫ನೇ ಪಾನಿನಲ್ಲಿ ತೀರಿದ ೨೬೫ನೇ ಅಂಕೆಯಿಂದ ಮುಂದೆ.

೨೭೬. ಬಾಳಾಂತಿಗಳಿಗಾಗಲೀ ಮೊಲೆ ತಿನ್ನಿಸುವ ಬೇರೆ ಸ್ತ್ರೀಯರಿಗಾಗಲೀ ಉಂಟಾಗುವ ಮೊಲೆಕುರುವಿನಲ್ಲಿ ಕೀವು ಉಂಟಾಗುವದಕ್ಕಿಂತ ಮುಂಚೆ ಅದರ ಪ್ರಾರಂಭದ ಸ್ಥಿತಿಯಲ್ಲಿ ಒಂದು ದ್ರಮ್ ನವಸಾಗರ, ಒಂದು ಔನ್ಸ್ ಕಳ್ಳು, ಒಂದು ಪ್ಯಾಂಟ್ ಗುಲಾಬಿನ ನೀರು, ಇವು ಮೂರನ್ನು ಒಂದು ಬಾಟ್ಲಿಯಲ್ಲಿ ಹಾಕಿ ಚನ್ನಾಗಿ ವಿಶ್ರ ಮಾಡಿ, ಅದರಲ್ಲಿ ಒಂದು ಅರಿವೆ ತುಂಡನ್ನು ತೋಯಿಸಿ, ಜೀಗು ಇರುವ ಭಾಗಕ್ಕೆ ಮುಚ್ಚಿ, ಆಗ್ಯಾಗ್ಗೆ ಆ ನೀರಿನಿಂದ ಹನಿಸುತ್ತಿರುವದರಿಂದ ಬಹಳ ಗುಣಕರವಾಗುವದು. ಬಾವು ಒಡದು ಹೋದ ಮೇಲೆ ಉಳಿಯುವ ಘಟ್ಟೆಯೂ ಬೀಗೂ ಸಹ ಈ ಶೇಕವನ್ನು ಉಪಯೋಗಿಸುವದರಿಂದ ನಿವಾರಣೆಯಾಗುವದು. ಅದಲ್ಲದೆ ಮೈಯ ಇತರ ಭಾಗದಲ್ಲಿ ಉಂಟಾಗುವ ಬಾವಿಗೂ ಈ ಲೇಪನವು ಪ್ರಾರಂಭದ ಸ್ಥಿತಿಯಲ್ಲಿ, ಅಂದರೆ ಕೀವು ಉಂಟಾಗುವದಕ್ಕೆ ಮುಂಚೆ, ಪ್ರಯೋಗಿಸಿದ್ದಾದರೆ, ಗುಣ ತಿಕ್ಕುವದು.

ಮೊಲೇ ತುದಿಯಲ್ಲಿ ಆಗುವ ಹುಣ್ಣು ಅಥವಾ ಬರುಕು

Sore or Cracked Nipples.

೧೪೮ನೇ ಇಸವಿಯ ಪಂಚಾಂಗದ ೫೬-೫೭ನೇ ಪಾನುಗಳಲ್ಲಿ ನೋಡು.

ಮೊಲೆಯ ಹಾಲು ವೃದ್ಧಿಯಾಗುವದಕ್ಕೆ

For increasing the Secretion of Milk.

ಇದಕ್ಕೆ ಊರ ಹರಳ[1] ಎಲೆಗಳ ಶೇಕವಾಗಲೀ ಒತ್ತಡವಾಗಲೀ (೨೭೭), ಕಾಡ ಹರಳಿನ (ಬೆಟ್ಟದ ಹರಳಿನ) ಎಲೆಗಳ ಶೇಕವಾಗಲಿ (೨೭೮) ಕೊಡುವದು. ಆದರೆ ಹಾಲಿನ ಅಧಿಕತೆಯನ್ನು ನಿಲ್ಲಿಸುವದಕ್ಕೆ ವೀಳ್ಯದೆಲೆಯ ಶೇಕ (೨೭೯) ಕೊಡುವದು. ೨೭೭. ಹರಳು ಗಿಡದ ಎಲೆಗಳು ಮೊಲೆಹಾಲು ಹೆಚ್ಚಿಸುವದಕ್ಕೆ ಒಳ್ಳೇದಾಗಿರುತ್ತವೆ. ಈ ಉದ್ದಿಶ್ಯ ಒಂದು ಹಿಡಿ ತುಂಬ ಎಲೆಗಳನ್ನು ೬ ಯಾ ೮ ಪ್ಯಾಂಟ್ ನೀರಿನಲ್ಲಿ ಹಾಕಿ ಶುಮಾರು ಕಾಲು ತಾಸು ವರೆಗೆ ಬೆಯಿಸಿ ಕಷಾಯ ತೆಗಿಯುವದು. ಈ ಕಷಾಯದಿಂದ ಸ್ತನಗಳನ್ನು ಸ್ವಲ್ಪ ಹೊತ್ತು ತೊಳದು, ಆ ಬೆಯಿಸಿದ ಎಲೆಗಳನ್ನು ಜಜ್ಜಿ, ಸ್ವಲ್ಪ ಬಿಸಿ ಮಾಡಿ, ಒತ್ತಡದಂತೆ ಅವುಗಳ ಮೇಲೆ ಹಚ್ಚುವದು. ಈ ಪ್ರಕಾರ ಮಾಡಿದ ಕೆಲವು ತಾಸುಗಳೊಳಗೆ ಅದರ ಒಳ್ಳೇ ಫಲ ಕಾಣಬರುವದು. ಮತ್ತೂ ಸುಲಭವಾದ ಪ್ರಯೋಗವೇನೆಂದರೆ, ಹಸಿ ಹರಳೆಲೆಗಳನ್ನು ಒಂದರ ಮೇಲೆ ಒಂದು ಇಟ್ಟು, ಒಲೆಯಲ್ಲಿ ಬೆಚ್ಚಗೆ ಮಾಡಿ, ಸ್ತನಗಳಿಗೆ ಶೇಕ ಕೊಡುವದು. ಇದು ಮೇಲಿನ ಕ್ರಮದಷ್ಟೇ ಫಲಕರವಾಗಿರುವದು.

---

1) ಈ ಗಿಡದ ಬೀಜದಿಂದ ಎಣ್ಣೆ ಮಾಡುತ್ತಾರೆ. ದೊಡ್ಡ ಹರಳು ಚಿಕ್ಕ ಹರಳು ಎಂಬ ಎರಡು ವಿಧಗಳೊಳಗೆ ಚಿಕ್ಕ ಹರಳಿನ ಎಣ್ಣೆಯು ಜುಲಾಬಿಗೆ ಪ್ರಯೋಗಿಸುತ್ತಾರೆ. (೧೬೭ನೇ ಇಸವಿಯ ಪಂಚಾಂಗದ xxನೇ ಪಾನಿನ ಅಡಿಯಲ್ಲಿರುವ 6ನೇ ಟಿಪ್ಪಣಿಯನ್ನು ನೋಡು) ಹರಳು ಎಲೆಗಳು ತೇಕ ಕೊಡುವದಕ್ಕೂ, ಅವುಗಳ ದಂಟಿನ ಸಾರು ವಾಯುವಿನ ಉಪದ್ರವಕ್ಕಾಗಿಯೂ ಪ್ರಯೋಗಿಸುತ್ತಾರೆ.

ಳಲ ಯೇಸು ರಾಜ್ಯದ ಸುವಾರ್ತೆಯನ್ನು ಸಾರುತ್ತಾ, ಜನರೊಳಗಿರುವ ಎಲ್ಲಾ ರೋಗಗಳನ್ನೂ

೨೭೮. ಬೆಟ್ಟದ ಹರಳು ಯಾನೆ ಕಾಡ ಹರಳಿನ[1] ಎಲೆಗಳನ್ನು ತಂದು, ಅವುಗಳ ದಂಟು ಕೊಯಿದು, ಅವುಗಳ ಒಳಭಾಗ ಬೆಂಕೀ ಮೇಲೆ ಹಿಡಿದು, ಬಿಶಿ ಇರುವಾಗಲೇ ಒಂದರ ಮೇಲೊಂದರಿಂದ ಬಾಳಾಂತಿಗಳ ಸ್ತನಗಳಿಗೆ ಶೇಕ ಕೊಟ್ಟಲ್ಲಿ ಮೊಲೆಹಾಲು ಯಥೇಷ್ಟ ಹೆಚ್ಚುವದೆಂದು ಹೇಳುತ್ತಾರೆ. ಅದಲ್ಲದೆ ಎಲೆಗಳನ್ನು ಬೆಯಿಸಿ ಅರದು ಒತವಾಡಿ ಸಹ ಹಚ್ಚ ಬಹುದು.

೨೭೯. ಯಾವ ಕಾರಣದಿಂದಾದರೂ ಮೊಲೆಹಾಲಿನ ವೃದ್ಧಿಯು ನಿಲ್ಲಿಸುವಂಥಾದ್ದು ಅಗತ್ಯವಾದರೆ, ವೀಳ್ಯದೆಲೆಗಳನ್ನು ಬೆಂಕೀ ಮೇಲೆ ಹಿಡದು, ಸ್ವಲ್ಪ ಕಾಯಿಸಿ, ಅದರಿಂದ ಸ್ತನಗಳಿಗೆ ಶೇಕ ಕೊಡ ಬಹುದು. ಇಂಥಾ ಶೇಕದಿಂದ ಮಾಂಸಗ್ರಂಥಿಗಳ ಬೀಗು ಸಹ ಇಳಿಯುವದಂತೆ.

ರಕ್ತಪಿತ್ತ (ಗುಂಡಿಗೆ ಅನ್ನಕೋಶಾದಿ ಅಂತರೇಂದ್ರಿಯಗಳಿಂದ ನೆತ್ತರ ಹರಿಯೋಣ) Hæmorrhage from the Heart, Stomach, and other Internal Organs.

೧೮೭೭ನೇ ಇಸವಿಯ ಪಂಚಾಂಗದ ೧೯-೨೦ನೇ ಪಾನುಗಳಲ್ಲಿ ನೋಡು.

ರಕ್ತಹರಿಯೋಣದರಿಂದ ಕ್ಷೀಣತೆ Exhaustion from Hæmorrhage after Fevers or other Causes.

ಇದಕ್ಕೆ ಬ್ರೆಂಡೀ ಮಿಶ್ರ[2] ಕೊಡುವದು.

ರಕ್ತದ ಕೊರತೆಯಿಂದುಂಟಾಗುವ ದುರ್ಬಲತೆ Anæmia.

೧೮೭೫ನೇ ಇಸವಿಯ ಪಂಚಾಂಗದ ೪೪ನೇ ಪಾನಿನಲ್ಲಿ ಕೃಶರೋಗಕ್ಕೆ ಹೇಳಿದ ಚಿಕಿತ್ಸೆಯನ್ನು ಮಾಡುವದು.

---

[1] *Engl:* Physic Nut Plant; ದಕ್ಕ: ಜಂಗ್ಲಿ ಎಂಡಿ; ಹಿಂದು: ಜಂಗಲ್ ಎಂಡಿ; ತನು: ಕಾಟ್ಟಾ ಮಣಕು; ತೆಲು: ಪೇಪಲಂ, ಮಲ: ಕಾಟ್ಟಾಮಣಕ್; ಮಹಾ: ರಾನ ಎರಂಡಿ.—ಈ ಪ್ರಾಂತ್ಯನ ಬಂಜರಸ್ಥಳಗಳಲ್ಲಿ ಸಾಧಾರಣವಾಗಿ ತಿಕ್ಕುವ ಈ ಕಾಡಗಿಡವು ಬೇಲಿಗಳಲ್ಲಿ ಬೆಳೆದು ಹೇರಳವಾಗುವದು. ಇದರ ಬೀಜಗಳು ಅತಿವಿರೇಚಕ ವಿಷವಾಗಿದ್ದು, ಅವುಗಳನ್ನು ಜಜ್ಜಿ ಹಿಂಡಿದ್ದಾದರೆ, ಶೇಕಡಾ ಒಂದಷ್ಟು ಹಳದಿ ತರದ ಎಣ್ಣೆ ಹೊರಡುವದು. ಈ ಎಣ್ಣೆಯ ೧೨-೧೫ ತಟುಕುಗಳನ್ನು ಕೊಟ್ಟಲ್ಲಿ ಒಂದು ಔನ್ಸ್ ಹರಳೆಣ್ಣೆಗೆ ಸರಿಯಾಗಿದ್ದು, ವಿರೇಚನೆ ಮಾಡಿಸುವದು. ಆದರೆ ಅದರ ಪ್ರವರ್ತನೆ ಈ ಎರಡನೇದರಷ್ಟು ನಿಶ್ಚಿತವಾಗಿರುವದಿಲ್ಲ. ಆದದರಿಂದ ಅದು ಹರಳೆಣ್ಣೆಯಷ್ಟು ಬಳಿಕೆಯಾಗಿ ಇರುವದಿಲ್ಲ. ಬೆಟ್ಟದ ಹರಳಿನ ಸೊನೆಯ ಸೇವನೆಯಿಂದ ಜಾಥಕ ಉಂಟಾದ ಪಕ್ಷಕ್ಕೆ, ಸಿಂಬೆರಸವನ್ನು ಪಾನಕವಾಗಿ ಅಗಲಿ ಹೀಗೆ ಅಗಲಿ ಕುಡಿದ್ದಲ್ಲಿ ಉಪಶಮನವಾದೀತು. ದೀರ್ಘಕಾಲದ ಶ್ರೋಣಿತವಾತದಲ್ಲಿ ಇದರ ಸೊನೆ ೨ ಯಾ ೩ ಭಾಗ ತೆಂಗಿನ ಇಲ್ಲವೆ ಎಳ್ಳೆಣ್ಣೆಗೆ ಕೂಡಿಸಿ ನೋವು ಉಳ್ಳ ಭಾಗಕ್ಕೆ ಹಚ್ಚಿ ತಿಕ್ಕುವದು ಬಹಳ ಗುಣಕರವಾಗುವದು. ಆದರೆ ಈ ಕಾಡಹರಳಿನ ಹೆಚ್ಚು ಪ್ರಶಸ್ತವಾದ ಪ್ರಯೋಗವೇನಂದರೆ: ಘಾಯಗಳಿಂದ ನೆತ್ತರ ಸುರಿಯುವದನ್ನು ನಿಲ್ಲಿಸುವದು: ಇದಕ್ಕೆ ಅದರ ಹಸಿ ಸೊನೆ ಉತ್ತಮ ಔಷಧವೆಂದು ಹೇಳುತ್ತಾರೆ. ಒಂದು ಅರವೆ ಚಂದಿಯನ್ನು ಆ ಸೊನೆಯಲ್ಲಿ ಅದ್ದಿ ಘಾಯಕ್ಕೆ ಇಟ್ಟಲ್ಲಿ ಕೂಡಲೆ ನೆತ್ತರ ಹರಿಯುವದು ನಿಂತು ಹೋಗುವದು. ಈ ಸಂಗತಿಯಲ್ಲಿ ಬೇರೆ ಕೆಲವು ವಿಲಾಯತಿ ಔಷಧಗಳಿಗಿಂತಲೂ ಈ ಸೊನೆಯು ಹೆಚ್ಚು ಪ್ರಯೋಜನಕರವೆಂದು ಕಂಡು ಬಂದಿರುತ್ತದೆ. ಇದರಿಂದ ನೋವು ಅಗಲಿ ಉರಿ ಅಗಲಿ ಆಗುವ ನಿಲ್ಲ; ಆದರೆ ನೆತ್ತರು ಹೆಪ್ಪುಗಟ್ಟಿಸಿ, ಘಾಯವನ್ನು ಒಂದು ತರದ ಜಗಟಾವ ಪದರಿನಿಂದ ಮುಚ್ಚುತ್ತದೆ. ಈ ವಿಷಯದಲ್ಲಿ ಇನ್ನು ಶೋಧನೆ ಮಾಡುವಂಥಾದ್ದು ಬಹಳ ಯೋಗ್ಯವಿರುತ್ತದೆ. ಈ ಗಿಡದ ರಕ್ತಸ್ತಂಭಕ ಗುಣವನ್ನು ಇನ್ನು ಪರೀಕ್ಷಿಸಿ ನೋಡಲುಚಿತವಾದದ್ದೇ ಸರಿ.

[2] ೧೮೭೭ನೇ ಇಸವಿಯ ಪಂಚಾಂಗದ ೧೭ನೇ ಪಾನಿನಲ್ಲಿರುವ ✓ ಅಕ್ಷರವನ್ನು ನೋಡು.

ರಕ್ತ ಕಾರುವದು Hemoptyisis.

ಶ್ವಾಸಕೋಶದಲ್ಲಿ ರಕ್ತವೇರಿ, ಅದರಿಂದ ಹೊರಡುವ ಕಫದ ಸಂಗಡ ಬರುವ ರಕ್ತಕ್ಕೆ ೧೮೭೭ನೇ ಇಸವಿಯ ಪಂಚಾಂಗದ ೧೯-೨೨ನೇ ಪಾನುಗಳಲ್ಲಿ ಹೇಳಿದ ಚಿಕಿತ್ಸೆಯನ್ನು ಮಾಡುವದು.

ರಕ್ತಾತಿಸಾರ Dysentery.

೧೮೭೯ನೇ ಇಸವಿಯ ಪಂಚಾಂಗದ ೪೫-೫೦ನೇ ಪಾನುಗಳಲ್ಲಿ ನೋಡು.

ರಾಜಹುಣ್ಣು Carbuncle.

೧೮೭೭ನೇ ಇಸವಿಯ ಪಂಚಾಂಗದ ೪೮-೫೨ನೇ ಪಾನುಗಳಲ್ಲಿ ನೋಡು.

ರಾಜಕ್ಷಯ Pulmonary Consumption.

ಶ್ವಾಸಕೋಶವು ದುರ್ಬಲವಾಗಿ ಅದರಲ್ಲಿ (tubercles ಎಂಬ) ಚಿಕ್ಕ ಗುಳ್ಳೆಗಳು ಎದ್ದು, ಛಿದ್ರ ಬಿದ್ದು, ಇಡೀ ದೇಹ ಕುಂದಿ ಕ್ಷೀಣವಾಗಿ ಹೋಗಲೀಸುವಂಥಾ ಈ ರೋಗವು ರಾಜಕ್ಷಯ ವೆನ್ನಿಸುವದು. ಈ ವ್ಯಾಧಿ ೨೦—೩೦ ವರ್ಷದೊಳಗೆ ಪ್ರಾರಂಭವಾಗಿ, ಅಗ್ನಿಮಾಂದ್ಯ, ಅರುಚಿ, ಕೆಮ್ಮು, ಎದೆಯಲ್ಲಿ ನೋವು, ನೇವಸ, ಕ್ರಮೇಣವಾಗಿ ಹೆಚ್ಚುತ್ತಿರುವ ಆಶಕ್ತಿ, ವೇಗವುಳ್ಳ ನಾಡಿಯ ಬಡದಾಟ, ಅಸ್ತಿಜ್ವರ, ರಾತ್ರಿಯಲ್ಲಿ ಬೆವರು, ಈ ಮುಂತಾದ ಲಕ್ಷಣಗಳನ್ನು ಕಾಣಿಸಿಕೊಳ್ಳುತ್ತದೆ.

ಚಿಕಿತ್ಸೆ: ಇದಕ್ಕೆ ಪ್ರಾರಂಭದಲ್ಲಿ ದೃಢ ಮನಸ್ಸಿನಿಂದ ಸರಾಗವಾಗಿ ಏಾನಿನ ಎಣ್ಣೆ ಕೊಡಬೇಕು (೧೨೬[1]). ಅದಲ್ಲದೆ ಸುಣ್ಣದ ತಿಳೀನೀರು ಮತ್ತು ಹಾಲು (೧೭, ೧೮, ೧೯[2]) ಸಹ ಸಾಧಾರಣ ಪಾನವಾಗಿ ಕೊಡ ಬಹುದು. ಕೆಮ್ಮೂ ಶ್ವಾಸಬದ್ಧತೆಯೂ ಇರುವದಕ್ಕೆ ಸಾಸಿವೆಯ ಒತ್ತಡ (೬೨[3]) ಇಲ್ಲವೆ ಜಾಫಲದ ಮುಲಾಮು (೧೬೪[4]) ಸಹ ಎದೆಗೆ ಹಚ್ಚಿದ್ದಲ್ಲಿ ತಕ್ಕಷ್ಟು ಉಪಶಮನವಾಗುವದು. ಅದಲ್ಲದೆ ಬಿಸಿ ನೀರಿನ ಹಬೆಯಾಗಲಿ (೧೮೮[5]), ಬೆಂಡೆಕಾಯಿಯಾ ಕಷಾಯದ ಹಬೆಯಾಗಲಿ (೧೮೯[5]) ಬಾಯಿಯಲ್ಲಿ ಹೀರಿಕೊಳ್ಳುವದು ಸಹ ಪ್ರಯೋಜನಕರವಾಗಿದೆ. ಝಾಡನೆ (ಅತಿಸಾರ) ಉಂಟಾದ ಪಕ್ಷಕ್ಕೆ, ಫಟಿಕಾರದ ಹುಡಿ (೨೯[6]) ಇಲ್ಲವೆ ಮೈಲತುತ್ತಿನ ಹುಡಿ (೨೭[6]) ಕೊಡುವದು. (ಝಾಡನೆ ಸಮ್ಬಂಧವಾದ

---

1) ೧೮೭೧ನೇ ಇಸವಿಯ ಪಂಚಾಂಗದ ೪೭ನೇ ಪಾನಿನಲ್ಲಿ ನೋಡು. ಏಾನಿನ ಎಣ್ಣೆಯನ್ನು ಮಾಡುವ, ತಕ್ಕೊಳ್ಳುವ ಮುಂತಾದ ಕ್ರಮಗಳ ವಿಷಯದಲ್ಲಿ ೧೮೭೭ನೇ ಇಸವಿಯ ಪಂಚಾಂಗದ ೩೭ನೇ ಪಾನಿನಲ್ಲಿರುವ ೭ನೇ ಅಂಕೆಯನ್ನೂ ಆದರ ಟಿಪ್ಪಣಿಯನ್ನೂ ನೋಡು.

2) ೧೮೭೭ನೇ ಇಸವಿಯ ಪಂಚಾಂಗದ ೭೦ನೇ ಪಾನಿನಲ್ಲಿ ನೋಡು.

3) ೧೮೭೭ನೇ ಇಸವಿಯ ಪಂಚಾಂಗದ ೩೫ನೇ ಪಾನಿನಲ್ಲಿ ನೋಡು.

4) ೧೮೭೪ನೇ ಇಸವಿಯ ಪಂಚಾಂಗದ ೫೦ನೇ ಪಾನಿನಲ್ಲಿ ನೋಡು.

5) ಈ ಅಂಕೆಗಳನ್ನು ೧೮೭೭ನೇ ಇಸವಿಯ ಪಂಚಾಂಗದ ೪೭ನೇ ಪಾನಿನಲ್ಲಿಯೂ ಆದರ ೩೫ನೇ ಟಿಪ್ಪಣಿಯಲ್ಲಿಯೂ ನೋಡು.

6) ಈ ಅಂಕೆಗಳನ್ನು ೧೮೭೭ನೇ ಇಸವಿಯ ಪಂಚಾಂಗದ ೩೪ನೇ ಪಾನಿನಲ್ಲಿಯೂ ಆದರ ಟಿಪ್ಪಣಿಯಲ್ಲಿಯೂ ನೋಡು.

ಬೇರೆ ಚಿಕಿತ್ಸೆ ಅವಶ್ಯವಾದರೆ, ೧೮೭೬ನೇ ಇಸವಿಯ ಪಂಚಾಂಗದ ೩೨-೩೮ನೇ ಪಾನುಗಳಲ್ಲಿ ನೋಡಿಕೊಳ್ಳುವದು.) ಬಾಯಿಹುಣ್ಣು, ನಾಲಿಗೆಯಲ್ಲಿ ಅಗ್ರವೂ ಘಾಯಗಳೂ ಉಂಟಾದರೆ, ಬಿಳಿಗಾರ (೭೭,[1] ೧೦೨[1]) ಇಲ್ಲವೆ ಫಟಿಕಾರ (೭೬[1]) ಪ್ರಯೋಗಿಸುವದು. ಶ್ವಾಸಕೋಶಗಳಿಂದ ನೆತ್ತರ ಹರಿಯೋಣಕ್ಕೆ ೧೮೭೭ನೇ ಇಸವಿಯ ಪಂಚಾಂಗದ ೨೦-೨೨ನೇ ಪಾನುಗಳಲ್ಲಿ ಹೇಳಿದ ಚಿಕಿತ್ಸೆಯನ್ನು ಮಾಡುವದು. ಸಿರ್ಕವು ಬಾಹ್ಯಲೇಪನವಾಗಿ ಪ್ರಯೋಗಿಸುವದು (೧೧೪[2], ೨೬೦) ರೋಗವನ್ನು ಆಣಗಿಸುವದಕ್ಕೆ ಪ್ರಯೋಜನಕರವಾದ್ದು.

೨೬೦. ರಾಜಕ್ಷಯದಲ್ಲಿ ಶಿರ್ಕವು ಅತಿರೇಕ ಬೆವರನ್ನು ಕೂಡಲೆ ಶಮಿಸುವದಕ್ಕೆ ಬಹಳ ಒಳ್ಳೇದಾಗಿರುತ್ತದೆ. ಒಂದು ಅಂಶ ಶಿರ್ಕ, ಒಂದು ಅಂಶ (Eau de Cologne ಎಂಬ[3]) ಪರಿಮಳದ ನೀರು, ಎರಡು ಅಂಶ ಉಗುರುಬೆಚ್ಚಗೆ ನೀರು, ಈ ಮೂರನ್ನು ಚನ್ನಾಗಿ ಮಿಶ್ರ ಮಾಡಿ, ಅದರಿಂದ ಮೈಯನ್ನು ತೊಳೆಯುವದು; ಈ ಪ್ರಕಾರ ತೊಳೆಯುವದರಿಂದ ಮೈಬೆವರು ಮುಂತಾದ್ದು ನಿಲ್ಲುವದಲ್ಲದೆ ರೋಗಿಗೆ ಬಹಳ ಮನೋಹರವಾಗಿಯೂ ಆಗುವದು. ಇದರಿಂದ ದೋಷವೇನೂ ಇಲ್ಲಾ.

ರುದ್ರವಾಯು (ಒಂದು ತರದ ಅಪಸ್ಮಾರ) Apoplexy.

೧೮೭೭ನೇ ಇಸವಿಯ ಪಂಚಾಂಗದ ೨೨-೨೫ನೇ ಪಾನುಗಳಲ್ಲಿ ನೋಡು.

ವತ್ಸನಾಭಿಯಿಂದಾದ ವಿಷಕ್ಕೆ Poisoning with Bish (Aconite Root).

ಇದಕ್ಕೆ ಬ್ರೇಂಡಿ, (Ammonia[4]) ಅಮ್ಮೋನಿಯ ಎಂಬ ನವಸಾಗರದ ಧೃತಿ ಮುಂತಾದ ಉತ್ತೇಜಕಗಳನ್ನು ಕೊಟ್ಟು, ತಣ್ಣೀರಧಾರೆ (೫೮[5]) ಎರೆದು, ಕೈಕಾಲುಗಳನ್ನು ಚನ್ನಾಗಿ ತಿಕ್ಕುವದರಿಂದ ಉತಾರವಾದೀತು. ಮಾಚಿಕಾಯಿಯ ಕಷಾಯ (೬೫[6]) ಕೊಟ್ಟಲ್ಲಿ ವಿಷಹರವಾಗುವದು. ಅದಲ್ಲದೆ ರೋಗಿಯು ನುಂಗಲಿಕ್ಕೆ ಕೂಡುವ ಪಕ್ಷಕ್ಕೆ ಕಾಫಿ ಕಷಾಯ (Café noir[7]) ಮಾಡಿ ಕೊಡ ಬಹುದು.

ವರಿಶೇ ಜ್ವರ Intermittent Fever, or Ague.

೧೮೮೪ನೇ ಇಸವಿಯ ಪಂಚಾಂಗದ ೪೮-೫೩ನೇ ಪಾನುಗಳಲ್ಲಿ ನೋಡು.

ವಸಡಿನ ಹುಣ್ಣು ಮತ್ತು ವಸಡು ಮೆತ್ತಗಾಗೋಣ Ulceration and Sponginess of Gums.

೧೮೯೯ನೇ ಇಸವಿಯ ಪಂಚಾಂಗದ ೫೦-೫೧ನೇ ಪಾನುಗಳಲ್ಲಿ ನೋಡು.

---

1) ಈ ಅಂಕೆಗಳನ್ನು ೧೮೯೯ನೇ ಇಸವಿಯ ಪಂಚಾಂಗದ ೯೯ನೇ, ೨೧ನೇ ಪಾನುಗಳಲ್ಲಿ ನೋಡು.

2) ೧೮೮೦ನೇ ಇಸವಿಯ ಪಂಚಾಂಗದ ೪೩ನೇ ಪಾನಿನಲ್ಲಿ ನೋಡು.

3) Cologne water 'ಕೋಲೊನ್ ವಾಟರ್' ಎಂಬ ಈ ಸುಗಂಧ್ದ ನೀರು ವಿಲಾಯತಿ ಸಾಮಾನುಗಳನ್ನು ಮಾರುವ ಅಂಗಡಿಯಲ್ಲಿ ದೊರಕುವದು.

4) ಈ ಮದ್ದು ವಿಲಾಯತೀ ಔಷಧಗಳನ್ನು ಮಾರುವ ಅಂಗಡಿಯಲ್ಲಿ ದೊರಕುವದು. (೧೮೭೭ನೇ ಇಸವಿಯ ಪಂಚಾಂಗದ ೨೧ನೇ ಪಾನಿನಲ್ಲಿರುವ ಪ್ರಥಮ ಟಿಪ್ಪಣಿಯನ್ನು ಸರಿ ನೋಡು.)

5) ೧೮೭೭ನೇ ಇಸವಿಯ ಪಂಚಾಂಗದ ೨೩-೨೪ನೇ ಪಾನುಗಳಲ್ಲಿ ನೋಡು.

6) ೧೮೭೭ನೇ ಇಸವಿಯ ಪಂಚಾಂಗದ ೪೯ನೇ ಪಾನಿನಲ್ಲಿ ನೋಡು.

7) ೧೮೮೦ನೇ ಇಸವಿಯ ಪಂಚಾಂಗದ ೪೦ನೇ ಪಾನಿನ ೩೩ನೇ ವಂಕ್ತಿಯಲ್ಲಿ ನೋಡು.

ವ್ರಣ (ಹುಣ್ಣು, ವಿದ್ರಧಿ) Ulcer.

೧೮೮೫ನೇ ಇಸವಿಯ ಪಂಚಾಂಗದ ೫೦-೫೬ನೇ ಪಾನುಗಳಲ್ಲಿ ಹೇಳಿರುವ ಚಿಕಿತ್ಸೆಯನ್ನು ನೋಡು. ಆ ವ್ರಣದಿಂದ ಕೀವು ಬಹಳ ಸೋರುವದಿದ್ದರೆ, ೧೮೮೬ನೇ ಇಸವಿಯ ೪೮ನೇ ಪಾನಿನಲ್ಲಿ ಹೇಳಿರುವ ಚಿಕಿತ್ಸೆಯನ್ನು ಮಾಡುವದು.

ವಾಂತಿ (ಕಾರುವದು) Vomiting.

ವಾಂತಿಯು ತಾನೇ ಒಂದು ರೋಗವಾಗಿರದೆ, ಹೊಟ್ಟೆಯಲ್ಲಿರುವ ಬೇರೆ ಯಾವದಾದರೂ ಅಕ್ರಮದ ಲಕ್ಷಣವನ್ನು ಸೂಚಿಸುತ್ತದಷ್ಟೆ; ಹ್ಯಾಗಂದರೆ ಹೆಚ್ಚು ಉಂಡದರಿಂದಾಗಲಿ, ಉಂಡ ಆಹಾರದ ದೋಷದಿಂದಾಗಲಿ, ಜೀರ್ಣಕೋಶದ ಅಕ್ರಮ ಇಲ್ಲವೆ ಅದಕ್ಕೆ ವ್ರಣ ಬಿದ್ದದರಿಂದಾಗಲಿ, ಈ ತರದ ಇತರ ಕಾರಣಗಳಿಂದಾಗಲಿ ವಾಂತಿ ಉಂಟಾಗುವದು. ಗರ್ಭಿಣಿಗಳಿಗೂ ಗರ್ಭಕೋಶ ಶುದ್ಧಿಯ ಕಾಲದಲ್ಲಿ ವಾಂತಿ ಉಂಟಾಗುವದುಂಟು.

ಚಿಕಿತ್ಸೆ: ವಾಂತಿ ನಿಲ್ಲಿಸ ತಕ್ಕ ಔಷಧಗಳೊಳಗೆ ಲವಂಗದ ಕಲ್ಕ (೧೩೦[1]), ಶುಂಠೀ ಕಲ್ಕ (೧೨೪[1]), ಮಜ್ಜಿಗೆ ಹುಲ್ಲಿನ ಎಣ್ಣೆ (೧೨೭[1]), ಇಲ್ಲವೆ ಓಮದ ನೀರು (೧೫೫[2]), ಇದರೊಳಗೆ ಯಾವದಾದರೂ ಒಂದರ ಸಂಗಡ ಅಫೀಮಿ (೭೪೧) ಕೂಡಿಸಿ ಆಗಲೀ, ಅದು ಇಲ್ಲದೆ ಆಗಲೀ ಕೊಡ ಬಹುದು. ಅನ್ನಕೋಶದಲ್ಲಿ ಹುಳಿವು ಇರುವ ದೆಶೆಯಿಂದ ಉಂಟಾಗುವ ವಾಂತಿಗೆ ಸುಣ್ಣದ ತಿಳೀನೀರು (೧೭-೧೯[3], ೨೪೩[3]) ಕೊಡ ತಕ್ಕಂಥಾದ್ದಾಗಿದ್ದಾಗ್ಯೂ, ಕಠಿಣ ತರದ ಎಲ್ಲಾ ವಾಂತಿಗಳಲ್ಲಿ, ಮುಖ್ಯವಾಗಿ ಕೂಸುಗಳಿಗೂ ಚಿಕ್ಕ ಮಕ್ಕಳಿಗೂ ಉಂಟಾಗುವ ಸಾಧಾರಣ ವಾಂತಿಯಲ್ಲಿ ಸಹ ಅದನ್ನು ಕೊಟ್ಟು ನೋಡ ಬಹುದು. ಸುಣ್ಣದ ತಿಳೀನೀರು ಹಾಲಿನಲ್ಲಿ ಕೊಡುವದು ಉತ್ತಮ.

೭೪೧. ವಾಂತಿಯಲ್ಲಿ (laudanum) ಅಫೀಮಿಯ ಸತ್ವದ ೫-೧೦ ತಟಕುಗಳನ್ನು (soda water) "ಸೋಡಾ ವೋಟರ್" ಎಂಬ ಉಕ್ಕುವ ನೀರಿನಲ್ಲಿ ಆಗಲೀ ಒಂದಿಷ್ಟು ಓಮದ ನೀರಿನಲ್ಲಿ ಆಗಲೀ, ಕೊಟ್ಟು ವಾಂತಿ ಕೂಡಲೇ ನಿಲ್ಲಿಸ ಬಹುದು. ಅಫೀಮನ್ನು ಅದೇ ಪರಿಮಾಣದಲ್ಲಿ ಲವಂಗದ ಕಷಾಯ ಮುಂತಾದ ಇತರ ಔಷಧಗಳ ಸಂಗಡಲೂ ಬಹಳ ಗುಣಕರವಾಗಿ ಕೊಡ ಬಹುದು.

ವಾಂತಿಭೇದಿ (ವಾಂತಿಭ್ರಾಂತಿ) Cholera.

ಈ ರೋಗ ಹಿಡಿಯದ ಹಾಗೆ ಏನು ಮಾಡ ಬೇಕು, ಹಿಡಿದ ಪಕ್ಷಕ್ಕೆ ಏನು ಮಾಡ ಬೇಕು ಎಂಬ ವಿಷಯದಲ್ಲಿ ಸವಿಸ್ತಾರವಾದ ವಿವರವನ್ನು ೧೮೭೭ನೇ ಇಸವಿಯ ಪಂಚಾಂಗದ ೨೬-೩೦ನೇ ಪಾನುಗಳಲ್ಲಿ ಕೊಟ್ಟಿದ್ದೇವೆ.

---

1) ೧೮೮೧ನೇ ಇಸವಿಯ ಪಂಚಾಂಗದ ೪೫ನೇ ೪೬ನೇ ಪಾನುಗಳಲ್ಲಿಯೂ, ೪೫ನೇ ಪಾನಿನ ಅಡಿಯಲ್ಲಿರುವ ೬ನೇ ಟಿಪ್ಪಣಿಯಲ್ಲಿಯೂ ನೋಡು. ದಪ್ಪ ಅಂಕೆಯಿಂದ ತೊಡಗುವ ಔಷಧಗಳು ವಿಶೇಷ ಗುಣ ಉಳ್ಳವುಗಳೆಂದು ಎಣಿಸ ಬೇಕು.

3) ೧೮೭೬ನೇ ಇಸವಿಯ ಪಂಚಾಂಗದ ೯೯ನೇ ಪಾನಿನಲ್ಲಿ ನೋಡು.

3) ೧೭-೧೯ನೇ ಅಂಕೆಗಳನ್ನು ಅದೇ ಪಂಚಾಂಗದ ೭೦ನೇ ಪಾನಿನಲ್ಲಿ ನೋಡು; ಮತ್ತು ೨೪೩ನೇ ಅಂಕೆಯನ್ನು ೧೮೭೪ನೇ ಇಸವಿಯ ಪಂಚಾಂಗದ ೪೫ನೇ ಪಾನಿನಲ್ಲಿ ನೋಡು.

ವಾತ (ಶ್ರೋಣಿತವಾತ, ಪ್ರಾರಂಭಸ್ಥಿತಿದು, ಚಳುಕು) Acute Rheumatism.

ಪ್ರಾರಂಭದಲ್ಲಿ ಆಗುವಂಥಾ ಈ ವಾತವು ಜ್ವರ ಸಹಿತ ತೊಡಗುವದು; ಮೇಲೆ ಮೇಲೆ ಛಳಿ, ಬಿಸುಪು, ದಾಹ, ಹುಳಿತರದ ಅತಿರೇಕ ಬೆವರು, ಕೈಕಾಲುಗಳು ಮುಖ್ಯವಾಗಿ ಸಂದುಗಳು ಬಾತು ನೋಯುವದು, ನೋವುಳ್ಳ ಭಾಗದಲ್ಲಿ ಮುಟ್ಟಲಿಕ್ಕಾಗದಷ್ಟು ನಾಜೂಕತೆ, ಇವು ಮುಂತಾದ್ದು ರೋಗಲಕ್ಷಣಗಳಾಗಿರುತ್ತವೆ. ಕಠಿಣ ಶೀತ ಘಾಳಿಯ ದೆಶೆಯಿಂದಾಗಲೀ, ಮೈ ಚಂಡಿಯಾದದರಿಂದಾಗಲೀ ಈ ರೋಗ ಹುಟ್ಟುವದು; ಬಹುಶಾ ಒದ್ದೆ ವಸ್ತ್ರವನ್ನು ಉಟ್ಟು ಬದಲಿಸದೆ ಇರುವದರಿಂದ ಇಲ್ಲವೆ ತ್ಯಾವವಾದ ಹಾಸಿಗೆಯಲ್ಲಿ ಮಲಗಿದದರಿಂದ ಈ ವಾತಕ್ಕೆ ಕಾರಣವಾಗ ಬಹುದು.

ಚಿಕಿತ್ಸೆ: ವಾತಜ್ವರಕ್ಕೆ ೧೮ನೆಯ ಇಸವಿಯ ಪಂಚಾಂಗದ ೪೩-೪೫ನೇ ಪಾನುಗಳಲ್ಲಿ ಬಿಡದೆ ಬರುವ ಜ್ವರಕ್ಕೆ ಹೇಳಿದ ಚಿಕಿತ್ಸೆಯನ್ನು ಮಾಡುವದು. ಮತ್ತು ತಣುಸಾದ, ಸರಾಗವಾಗಿ ಘಾಳಿ ಚಲಿಸುವ ಕೋಣೆಯಲ್ಲಿ ರೋಗಿಯನ್ನು ಮಲಗಿಸುವದು. ಹಿಟ್ಟಿನಂಥಾ ಪಕ್ವಗಳ ಆಹಾರ, ಮದ್ಯ ಮುಂತಾದ ಉತ್ತೇಜಕಗಳ ವರ್ಜನೆ ಸಹ ಇದರ ಚಿಕಿತ್ಸೆಯಲ್ಲಿ ಅವಶ್ಯವಾಗಿರುತ್ತವೆ. ದಾಹಕ್ಕೆ ಪೆಟ್ಲುಪ್ಪಿನ ಪಾನಕವನ್ನು (೨೮೨), ನಿಂಬೇ ಪಾನಕದ (೨೧೮[1]) ಸಂಗಡವಾಗಲೀ ಅದಿಲ್ಲದೆ ಆಗಲೀ ಯಥೇಷ್ಟ ಕೊಡುವನು. ಅದಲ್ಲದೆ ಆಗ್ಯಾಗ್ಯೆ ಮಲಶೋಧನೆ ಸರಾಗವಾಗಿ ಇರಿಸ ಬೇಕು; ಈ ಉದ್ದಿಶ್ಯ (calomel[2]) ಕೆಲೊಮೆಲ್ ೩-೪ ಗ್ರೇನ್ ಮತ್ತು ಆಫೀಮು ೧ ಗ್ರೇನ್ (ನೋವೂ ಅವಿಶ್ರಾಂತಿಯೂ ಹೆಚ್ಚಿರುವ ಪಕ್ಷಕ್ಕೆ ಎರಡು ಗ್ರೇನ್ ಆದರೂ ಕೊಡ ಬಹುದು), ಇವೆರಡನ್ನು ಕೂಡಿಸಿ, ರಾತ್ರೆ ಮಲಗುವಾಗ ಕೊಟ್ಟು, ಮರುದಿನ ಬೆಳಿಗ್ಯೆ ಸೋನಾಮಕ್ಕೀ ಕಲ್ಕ (೧೮೬[3]) ಇಲ್ಲವೆ ಹರಳೆಣ್ಣೆ (೧೫೦[4]) ಕೊಡುವದು. ಬಾತು ನೋಯುವ ಸಂದುಗಳನ್ನು ಪೆಟ್ಲುಪ್ಪಿನ ನೀರಿನಿಂದ ಆಗ್ಯಾಗ್ಯೆ ತೋಯಿಸುತ್ತಿರುವದರಿಂದ ಬಹಳ ಶಮನಕರವಾಗುವದು. ಇಲ್ಲದಿದ್ದರೆ, ದತ್ತೂರದ ಒತ್ತಡ ಅಥವಾ ದತ್ತೂರದ ಎಲೆಗಳನ್ನು ನೀರಿನಲ್ಲಿ ತೋಯಿಸಿ, ನೋವು ಉಳ್ಳ ಜಾಗಕ್ಕೆ ಇಡುವದು (೧೩೭[5]).

೨೮೨. ಪ್ರಾರಂಭದ ವಾತದಲ್ಲಿ ಪೆಟ್ಲುಪ್ಪು ಬಹಳ ಗುಣಕರವಾಗಿ ಕೊಡ ಬಹುದು; ಹ್ಯಾಗಂದರೆ ೪೦ ಗ್ರೇನ್ ಪರಿಮಾಣದಲ್ಲಿ ಪ್ರಾರಂಭಿಸಿ ದಿನಕ್ಕೆ ಎರಡಾವರ್ತಿ ಕೊಡುವದು; ಕ್ರಮೇಣ ಹೆಚ್ಚಿಸಿ ೬೦, ೯೦, ೧೨೦ ಗ್ರೇನ್ ವರೆಗಾದರೂ ಕೊಡ ಬಹುದು. ಪ್ರತಿ ಸಾರಿ ಕೊಡುವಾಗ ½ ಪ್ಯಾಂಟ್ ಬಿಸಿ ಗಂಜಿನೀರಿನಲ್ಲಿ ಕಲಸಿ, ಅದಕ್ಕೆ ಸಕ್ಕರೆ ಹಾಕಿ ಕೊಡುವದು. ರೋಗದ ಉಕ್ಕುಬು ಹ್ಯಾಗೆ ಇಳಿಯುತ್ತಾ ಬರುತ್ತದೋ, ಹಾಗೆ ಪೆಟ್ಲುಪ್ಪಿನ ಪರಿಮಾಣ ಸಹ ಕಡಿಮೆ ಮಾಡುತ್ತಾ ಬರುವದು. ಅದಲ್ಲದೆ ಬಾಹ್ಯಲೇಪನಕ್ಕೂ ಅದೇ ಪೆಟ್ಲುಪ್ಪು ೪ ಔನ್ಸ್ ತೆಗದು, ೧ ಪ್ಯಾಂಟ್ ನೀರಿನಲ್ಲಿ ಕಲಸಿ, ಅದರಲ್ಲಿ ಒಂದು ಅರಿವೇ ತುಂಡನ್ನು ಅದ್ದಿ, ನೋವು ಉಳ್ಳ ಸಂದುಗಳಿಗೆ ಇಟ್ಟು, ಅದನ್ನು ಆ ನೀರಿನಿಂದ ಬಿಡದೆ ತೋಯಿಸುತ್ತಾ ಇರ ಬೇಕು. ಈ ಬಾಹ್ಯಲೇಪನದಿಂದ ಬಹುಶಾ ನೋವೂ ಬೀಗೂ ಬಹಳ ಉಪಶಮನವಾಗುವದುಂಟು.

---

1) ೧೮೮೪ನೇ ಇಸವಿಯ ಪಂಚಾಂಗದ ೪೭ನೇ ಪಾನಿನಲ್ಲಿಯೂ, ೧೮೭೭ನೇ ಇಸವಿಯ ಪಂಚಾಂಗದ ೩೧ನೇ ಪಾನಿನಲ್ಲಿರುವ ೫೪ನೇ ಅಂಕೆಯಲ್ಲಿಯೂ ನೋಡು.

2) ಇದು ವಿಲಾಯತೀ ಔಷಧಗಳನ್ನು ಮಾರುವ ಅಂಗಡಿಯಲ್ಲಿ ದೊರಕುವದು.

3) ೧೮೮೭ನೇ ಇಸವಿಯ ಪಂಚಾಂಗದ ೪೫ನೇ ಪಾನಿನಲ್ಲಿಯೂ ಅದರ ಟಪ್ಪಣಿಯಲ್ಲಿಯೂ ನೋಡು.

4) ೧೮೮೧ನೇ ಇಸವಿಯ ಪಂಚಾಂಗದ ೫೫ನೇ ಪಾನಿನಲ್ಲಿಯೂ ಅದರ ಟಪ್ಪಣಿಯಲ್ಲಿಯೂ ನೋಡು.

5) ೧೮೮೩ನೇ ಇಸವಿಯ ಪಂಚಾಂಗದ ೪೯ನೇ ಪಾನಿನಲ್ಲಿ ನೋಡು.

ವಾತ (ದೀರ್ಘಕಾಲದ್ದು) Chronic Rheumatism.

ಈ ದೀರ್ಘಕಾಲದ ವಾತವು ಪ್ರಥಮತಾ ತೊಡಗಿದ ಶ್ರೋಣಿತ ವಾತದ ಶೇಷವಾಗಿ ಆಗಲೀ, ಶರೀರಧಾತುವಿನ ಬೇರೆ ಉಪಹತಿಯಿಂದಾಗಲೀ ಉಂಟಾಗುವದು. ಇದು ಸಾಧಾರಣವಾಗಿ ಬಹಳ ಕಾಲದ ವರೆಗೆ ಉಪದ್ರವಿಸಿ, ಆಗ್ಯಾಗ್ಯೆ ಕಾಣಿಸಿಕೊಂಡು, ಬಹುಶಾ ರಾತ್ರೆಗೆ ನೋವು ಹೆಚ್ಚಿಸುವಂಥಾದ್ದಾಗಿರುತ್ತದೆ. ವಾತ ಹಿಡಿದ ಅಂಗಗಳು ಕ್ರಮೇಣವಾಗಿ ಚೇತನವನ್ನೂ ಚಲನಾಶಕ್ತಿಯನ್ನೂ ಕಳಕೊಂಡು, ಕೆಲವು ಸಂಗತಿಗಳಲ್ಲಿ ಸೊರಗಿ ಹೋಗುವದೂ, ಕೆಲವು ಸಂಗತಿಗಳಲ್ಲಿ ಬಿಗಿಯಾಗಿ ಮುದರಿಕೊಳ್ಳುವದೂ ಉಂಟು. ಇಂಥಾ ದೀರ್ಘಕಾಲದ ವಾತದಲ್ಲಿ ವಿಶೇಷ ಜ್ವರವಾಗಲೀ ಬೆವರು ಆಗಲೀ ಇರುವದಿಲ್ಲ; ಸಂದುಗಳ ಬಾತುಹೋಗೋಣ ಸಹ ಆಷ್ಟು ಇರುವದಿಲ್ಲ.

ಚಿಕಿತ್ಸೆ: ನವಸಾಗರ (೨೫೦[1]) ಮತ್ತು ಸುಗಂಧೀ ಬೇರಿನ ಕಲ್ಕ (೧೩[2]) ಸಹ ಬಹಳ ಗುಣಕರವಾಗಿರುವವು. ಚಾಲಮೂಗ್ರದ ಚೂರ್ಣ ಇಲ್ಲವೆ ಎಣ್ಣೆ (೧೮೧[3]), ಎಕ್ಕೆಗಿಡದ ಚೂರ್ಣ (೧೭೫[4]), ಮತ್ತು ಅಮೃತಬಳ್ಳಿಯ ತಣ್ಣೀರ ಕಲ್ಕ (೧೪[5]) ಸಹ ಗುಣಕರ ಔಷಧಗಳೆಂದು ಹೆಸರುಗೊಂಡವೆ. ಆದರೆ ವಾತವು ದೀರ್ಘಕಾಲದಿಂದ ಇದ್ದಲ್ಲಿ ವಿಷಾನಿನ ಎಣ್ಣೆ ಸಹ ಕೊಡುವದರಿಂದ ಮತ್ತಷ್ಟು ಗುಣ ಶಿಕ್ಕೀತು (೧೮೩[6]). ದೇಹದ ಪ್ರಕೃತಿ ಒಳ್ಳೇದಾಗುವದಕ್ಕೆ ಕರ್ಪೂರವನ್ನು[7] ಹೊಟ್ಟೆಗೆ ಕೊಟ್ಟು (೨೮೩), ಬಾಹ್ಯಲೇಪನವಾಗಿಯೂ ಪ್ರಯೋಗಿಸುವದರಿಂದಲೂ, ರಾತ್ರೆಗೆ ಮಲಗುವಾಗ ಶುಂಠೀಕಲ್ಕ (೨೨೪[8]) ಕೊಡುವದರಿಂದಲೂ, ಮೈಯನ್ನು ಬಿಡದೆ ಉಣ್ಣೇ ವಸ್ತ್ರದಿಂದ ಮುಚ್ಚಿಕೊಳ್ಳುವದರಿಂದಲೂ ಬಹಳ ಪ್ರಯೋಜನವಾಗುವದು. ಬಾಹ್ಯಲೇಪನಗಳಲ್ಲಿ ಕರ್ಪೂರವೂ ಅಫೀಮಿಯೂ ಹಾಕಿ ಮಾಡಿದ ಮುಲಾಮು (೫೦) ಮತ್ತು ಸಂಬಾರಹುಲ್ಲಿನ ಎಣ್ಣೆ (೧೨೧[10]) ಸಹ ಅತ್ಯುತ್ತಮವಾಗಿರುತ್ತವೆ. ಇನ್ನು ಪ್ರಯೋಜನವುಳ್ಳ ಬೇರೆ ಕೆಲವು ಬಾಹ್ಯಲೇಪನಗಳಲ್ಲಿ ಕರ್ಪೂರದ ಮುಲಾಮು ಯಾನೆ ತೈಲ್ಯ (೧೧೯[11]), ಜಾಫಲದ ಎಣ್ಣೆ (೧೬೪[12]), ಜಾಯಿಕಾಯಿಯ ಎಣ್ಣೆ (೧೬೨[13]), ಕಾಡ ಹರಳಿನ ಎಣ್ಣೆ[14], ಗಂಧಕದ ಎಣ್ಣೆ (೨೮೪), ಟರ್ಪೆಂಟ್ಯೈನ್ ಮುಲಾಮು (೧೨೨[15])

---

1) ೧೪೪೫ನೇ ಇಸವಿಯ ಪಂಚಾಂಗದ ೫೦ನೇ ಪಾನಿನಲ್ಲಿ ನೋಡು.

2) ೧೪೬೬ನೇ ಇಸವಿಯ ಪಂಚಾಂಗದ ೨೪ನೇ ಪಾನಿನಲ್ಲಿ ನೋಡು.

3) ೧೪೪೬ನೇ ಇಸವಿಯ ಪಂಚಾಂಗದ ೪೩ನೇ ಪಾನಿನಲ್ಲಿಯೂ ಆದರ ೬ನೇ ಟಿಪ್ಪಣಿಯಲ್ಲಿಯೂ ನೋಡು.

4) ೧೪೪೫ನೇ ಇಸವಿಯ ಪಂಚಾಂಗದ ೫೬ನೇ ಪಾನಿನಲ್ಲಿ ನೋಡು.

5) ೧೪೬೬ನೇ ಇಸವಿಯ ಪಂಚಾಂಗದ ೯೯ನೇ ಪಾನಿನಲ್ಲಿ ನೋಡು.

6) ೧೪೪೬ನೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿ ನೋಡು. ಎಣ್ಣೆ ಮಾಡುವ, ತಕ್ಕೊಳ್ಳುವ ಮುಂತಾದ ವಿವರವನ್ನು ೧೪೬೬ನೇ ಇಸವಿಯ ಪಂಚಾಂಗದ ೨೬ನೇ ಪಾನಿನಲ್ಲಿರುವ ೬ನೇ ಅಂಕೆಯಲ್ಲಿಯೂ ಆದರ ಟಿಪ್ಪಣಿಯಲ್ಲಿಯೂ ನೋಡು.

7) ೧೪೪೬ನೇ ಇಸವಿಯ ಪಂಚಾಂಗದ ೫೪ನೇ ಪಾನಿನ ಅಡಿಯಲ್ಲಿರುವ ೧ನೇ ಟಿಪ್ಪಣಿಯನ್ನು ನೋಡು.

8) ೧೪೪೪ನೇ ಇಸವಿಯ ಪಂಚಾಂಗದ ೫೦ನೇ ಪಾನಿನಲ್ಲಿ ನೋಡು.

9) ೧೪೬೬ನೇ ಇಸವಿಯ ಪಂಚಾಂಗದ ೨೫ನೇ ಪಾನಿನಲ್ಲಿ ನೋಡು.

10) ೧೪೪೧ನೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿ ನೋಡು.

11) ೧೪೪೦ನೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿ ನೋಡು.

12) ೧೪೪೫ನೇ ಇಸವಿಯ ಪಂಚಾಂಗದ ೫೦ನೇ ಪಾನಿನಲ್ಲಿ ನೋಡು.

13) ಅದೇ ಪಂಚಾಂಗದ ೪೫ನೇ ಪಾನಿನಲ್ಲಿಯೂ ಆದರ ೧ನೇ ಟಿಪ್ಪಣಿಯಲ್ಲಿಯೂ ನೋಡು.

14) ಇದೇ ೧೪೬೬ನೇ ಪಂಚಾಂಗದ ೪೬ನೇ ಪಾನಿನ ಅಡಿಯಲ್ಲಿರುವ ೧ನೇ ಟಿಪ್ಪಣಿಯಲ್ಲಿ ನೋಡು.

15) ೧೪೪೦ನೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿ ನೋಡು.

ಸಹ ಗುಣಕರವಾಗಿ ಪ್ರಯೋಗಿಸ ಬಹುದು. ಧೂಪದ ಎಣ್ಣೆ (೨೮೫) ಸಹ ವಾತದಲ್ಲಿ ನೋವು ಉಪಶಮಿಸುವದಕ್ಕೆ ಒಳ್ಳೇ ಬಾಹ್ಯಲೇಪನವೆಂದು ಹೆಸರುಗೊಂಡಿರುತ್ತದೆ. ಒಂದ ಕ್ಕಿಂತ ಹೆಚ್ಚು ಗಂಟುಗಳಿಗೆ ವಾತ ಹಿಡಿದಿರುವ ಪಕ್ಷಕ್ಕೆ, ಹಿಂದೆ ಪ್ರಾರಂಭದ ವಾತಕ್ಕೆ ಹೇಳಿದ ಚಿಕಿತ್ಸೆಯಾಗಲೀ, ಗಂಧಕದ ಹುಡಿಯ ಚಿಕಿತ್ಸೆಯಾಗಲೀ ಪರೀಕ್ಷಿಸಿ ನೋಡ ಬಹುದು.

೨೮೩. ದೀರ್ಘಕಾಲದ ಶ್ರೋಣಿತ ವಾತದಲ್ಲಿ (೧೧೯ನೇ ಅಂಕೆಯಲ್ಲಿ ಹೇಳಿದ) ಕರ್ಪೂರದ ಮುಲಾಮು ಬಾಹ್ಯಲೇಪನವಾಗಿ ಉಪಯೋಗಿಸುವದಲ್ಲದೆ, ಕರ್ಪೂರವನ್ನು ಹೊಟ್ಟಿಗೆ ಸಹ ಕೊಡ ಬಹುದು. ಹ್ಯಾಗಂದರೆ ೫ ಗ್ರೇನ್ ಕರ್ಪೂರವನ್ನು ೧ ಗ್ರೇನ್ ಅಫೀಮಿಯ ಸಂಗಡ ರಾತ್ರೆ ಮಲಗುವಾಗ ಕೊಡುವದು. ಇದರಿಂದ ಸರ್ವಾಂಗ ಬೆವರ್ತು ಉಪಶಮನವಾಗುವದು. ಇನ್ನೂ ಬೆವರು ಬರುವದಕ್ಕೆ ಶುಂಠೀ ಕಲ್ಕವನ್ನು ಬಿಸಿ ಇರುವಾಗಲೇ ಕೊಡುವದರಿಂದಲೂ ಮೈಗೆ ದಪ್ಪ ವಸ್ತ್ರಗಳನ್ನು ಮುಚ್ಚಿಕೊಳ್ಳುವದರಿಂದಲೂ ಸಹಾಯವಾಗುವದು. ಇದಲ್ಲದೆ ಅರ್ಧ ಔನ್ಸ್ ಕರ್ಪೂರವನ್ನು ಬಿಸಿ ನೀರಿನಲ್ಲಿ ಹಾಕಿ, (೨೧೭ನೇ[1] ಅಂಕೆಯಲ್ಲಿ ಹೇಳಿದಂತೆ) ಹಬೆಮಜ್ಜನ ಕೊಡ ಬಹುದು. ಈ ಪ್ರಕಾರದ ಮಜ್ಜನದಿಂದ ಕ್ಷಣದಲ್ಲಿ ಯಥೇಷ್ಟ ಬೆವರು ಬರುವದು. ಆದರೆ ಖಾಲಿ ಬಿಸಿ ನೀರಿನಿಂದ ಮಜ್ಜನ ಮಾಡುವಾಗ ಬಾಯಿಯಲ್ಲಿ ಅದರ ಹಬೆ ಶೀರಿದರಿಂದ ಬಾಧಕವಿಲ್ಲವಾದಾಗ್ಯೂ, ಕರ್ಪೂರ ನೀರಿನ ಹಬೆಯು ಬಾಯಿಯಲ್ಲಿ ಹೀರಿಕೊಳ್ಳದ ಹಾಗೆ ರೋಗಿಯು ಜಾಗ್ರತೆಯಾಗಿ ಇರ ತಕ್ಕದ್ದು.

೨೮೪. ದೀರ್ಘ ಕಾಲದ ವಾತದಲ್ಲಿ ಗಂಧಕದ ಹುಡಿ ಇಲ್ಲವೆ (sublimed sulphur ಎಂಬ) ಶುದ್ಧ ಮಾಡಿದ ಗಂಧಕ ೨ ಔನ್ಸ್ ತೆಗದು, ೧ ಪ್ಯಾಂಟ್ ಬೇವಿನ ಎಣ್ಣೆಯಲ್ಲಿ ಹಾಕಿ ಚನ್ನಾಗಿ ಕಲಕಿಸಿ, ಆ ಎಣ್ಣೆಯನ್ನು ವಾತದ ನೋವು ಇರುವಲ್ಲಿ ಹಚ್ಚಿ ಚನ್ನಾಗಿ ತಿಕ್ಕ ಬೇಕು. ಅದಲ್ಲದೆ ರಾತ್ರೆ ಮಲಗುವಾಗ ನೋವು ಉಳ್ಳ ಜಾಗಕ್ಕೆ ಗಂಧಕದ ಹುಡಿಯನ್ನು ಚೆಲ್ಲಿ ಇಡೀ ಭಾಗವನ್ನು ಬಾಳೇ ಎಲೆಯಿಂದ ಕಟ್ಟಿದ್ದಾದರೆ ಸಹ ನೋವು ಉಪಶಮನವಾದೀತು.

೨೮೫. ಧೂಪದ ಕಾಯಿಗಳಿಂದ ಎಣ್ಣೆ ತೆಗಿಯುತ್ತಾರೆ. ಈ ಎಣ್ಣೆ ಚರಬಿಯಂತೆ ದಪ್ಪವಾಗಿದ್ದು ದೀರ್ಘಕಾಲದ ವಾತದಲ್ಲಿಯೂ ಇತರ ವೇಧನೆಗಳಲ್ಲಿಯೂ ಉತ್ತಮ ಬಾಹ್ಯಲೇಪನವೆಂದು ಹೆಸರುಗೊಂಡಿರುತ್ತದೆ. ಇದನ್ನು ಬಿಸಿ ಮಾಡಿ ನೋವುಳ್ಳ ಭಾಗಕ್ಕೆ ಚನ್ನಾಗಿ ಹಚ್ಚಿ ತಿಕ್ಕುವದು. ಈ ಎಣ್ಣೆಯನ್ನು ಬೇರೆ ಮುಲಾಮುಗಳ ಸಂಗಡ ಸಹ ಬಹಳ ಗುಣಕರವಾಗಿ ಪ್ರಯೋಗಿಸ ಬಹುದು.

ವಾತಕಾಲು (ಆನೆಕಾಲು, ಹಸ್ತಪಾದ) Elephantiasis.

ಕಾಲಿನ ಚರ್ಮ ಕೆಟ್ಟು ಹೋಗಿ, ದಪ್ಪವಾಗಿ, ಅದರ ಮೇಲೆ ಗುಳ್ಳೆಗಳಂತೆ ಎದ್ದು, ಸೋರಿ, ಹಾಳಾಗುವಂಥಾ ಈ ವ್ಯಾಧಿಯಲ್ಲಿ ಪ್ರಾರಂಭದಲ್ಲಿಯೂ ಅನಂತರ ಆಗ್ಯಾಗ್ಯೆಯೂ ಜ್ವರ ಕಾಣಿಸಿಕೊಂಡು, ನೋವೂ ಬೀಗೂ ಉಂಟಾಗಿ, ರೋಗ ಬೆಳೆಯುತ್ತಾ ಮೇಲಿನ ಚಿನ್ಹೆಗಳೆಲ್ಲಾ ವೃದ್ಧಿಯಾಗುತ್ತಾ ಬಂದು, ರೋಗ ಹಿಡಿದ ದುರ್ಮಾಂಸದಲ್ಲಿ ಹುಣ್ಣೂ ಕೀವೂ ಆಗಿ ಸೋರಿ, ಬಹಳ ಸಂಕಷ್ಟಕ್ಕೆ ಕಾರಣವಾಗುವದು. ಈ ರೋಗವು ಪ್ರಾರಂಭದಲ್ಲಿ ಅಲ್ಲ, ಆದರೆ ಕಡೇ ಸ್ಥಿತಿಯಲ್ಲಿ ಸೋಂಕು ಉಳ್ಳದ್ದೆಂದು ಹೇಳುತ್ತಾರೆ.

[1] ೧೭೯ನೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿ ನೋಡು.

ಈ ರೋಗದ ಸಂಗಡ ಇರುವ ಜ್ವರಕ್ಕೆ ೧೮೮೪ನೇ ಇಸವಿಯ ಪಂಚಾಂಗದ ೪೮-೫೩ನೇ ಪಾನುಗಳಲ್ಲಿ ವರಿಶೇ ಜ್ವರಕ್ಕೆ ಹೇಳಿದ ಚಿಕೆತ್ಸೆಯನ್ನು ಮಾಡುವದು. ಈ ರೋಗದ ಬೆಳವನ್ನು ತಡಿಸುವದಕ್ಕೋಸ್ಕರ ಒಂದೇ ಉಪಾಯವೇನಂದರೆ: ಈ ರೋಗೋತ್ಪಾದಕ್ಕೆ ಕಾರಣವಾದ ಸ್ಥಳದಿಂದ ರೋಗಿಯನ್ನು ತಪ್ಪಿಸಿ, ಅಂಥಾ ಸಂಭವವಿಲ್ಲದ ಬೇರೆ ದೂರ ಸ್ಥಳಕ್ಕೆ (ಅಂದರೆ ಶುಮಾರು ೧೦ ಮೈಲುಗಳಿಗಾದರೂ ಕಡಿಮೆಯಾಗದಷ್ಟು ದೂರವಿರುವ ತೀರಪ್ರಾಂತ್ಯಕ್ಕೆ) ವೈದು ಕಾಯಮ್ ಆಗಿ ನಿಲ್ಲಿಸ ಬೇಕು. ರೋಗಿಯು ನಿವಾಸಿಸ ತಕ್ಕ ಸ್ಥಳವು ಆದಷ್ಟು ಎತ್ತರವಾಗಿಯೂ ತ್ಯಾವವಿಲ್ಲದಂಥಾದ್ದಾಗಿಯೂ ಇರ ಬೇಕು.

ಅದಲ್ಲದೆ ಉಬ್ಬಿದ ಕಾಲನ್ನು ಆದರ ಗಾತ್ರ ಅಣಗುವ ತನಕ ಉದ್ದವಾದ ವಸ್ತ್ರದ ಪಟ್ಟಿಯಿಂದ ಕೂಡುವಷ್ಟು ಬಿಮ್ಮಗೆ ಯಾವಾಗಲೂ ಕಟ್ಟಿಕೊಂಡಿರ ಬೇಕು.

ವಾಯು, ವಾಯುವಿನಿಂದ ಉಂಟಾಗುವ ಉದರಶೂಲೆ

Flatulence, and Flatulent Colic.

ಇದಕ್ಕೆ ೧೮೮೦ನೇ ಇಸವಿಯ ಪಂಚಾಂಗದ ೩೮-೪೦ನೇ ಪಾನುಗಳಲ್ಲಿ ಉದರಶೂಲೆಗೆ ಹೇಳಿರುವ ಚಿಕಿತ್ಸೆಯನ್ನೂ, ೧೮೮೫ನೇ ಇಸವಿಯ ಪಂಚಾಂಗದ ೪೮ನೇ ಪಾನಿನಲ್ಲಿ ಹೇಳಿರುವ ಚಿಕಿತ್ಸೆಯನ್ನೂ ಮಾಡುವದು.

ವಿರೇಚನಕಾಯಿ (ಕಾಡ ಹರಳಿನ) ವಿಷಕ್ಕೆ

Poisoning by Physic Nut.

ಇದಕ್ಕೆ ೧೮೮೧ನೇ ಇಸವಿಯ ಪಂಚಾಂಗದ ೪೯ನೇ ಪಾನಿನಲ್ಲಿ ಇರುವ ೧೩೯ನೇ ಅಂಕೆಯಲ್ಲಿ ಹೇಳಿರುವ ಚಿಕಿತ್ಸೆಯನ್ನು ಮಾಡುವದು.

ವಿಷಜಂತುಗಳು (ಕಿವಿಹಾವು, ಚೇಳು, ಕಣಜದ ಹುಳ ಇತ್ಯಾದಿ) ಕಚ್ಚಿದರೆ

Stings of Reptiles.

೧೮೮೧ನೇ ಇಸವಿಯ ಪಂಚಾಂಗದ ೫೦ನೇ ಪಾನಿನಲ್ಲಿ ಕಣಜದ ಹುಳ ಚುಚ್ಚಿದ್ದಕ್ಕೆ ಹೇಳಿದ ಚಿಕಿತ್ಸೆಯನ್ನು ಮಾಡುವದು.

ವ್ರಣಗಳು (ಕೀವು ಸೋರುವ ಹುಣ್ಣುಗಳು) Ulcers.

೧೮೮೬ನೇ ಇಸವಿಯ ಪಂಚಾಂಗದ ೫೦-೫೬ನೇ ಪಾನುಗಳಲ್ಲಿ ನೋಡು.

ಶಯ್ಯ ವ್ರಣ (ಹುಣ್ಣು) Bed Sores.

ಅತಿರೇಕ ವೇದನಕರವಾದ ಈ ಹುಣ್ಣುಗಳು ಬೇರೆ ಅಸ್ವಸ್ಥದ ಸಮ್ಮಂಧ ಬಹಳ ಕಾಲ ಮುಲಗಿಕೊಂಡೇ ಇದ್ದದರಿಂದ ಟೊಂಕದಲ್ಲಿ ಅಗಲೇ ಹಾಸಿಗೆ ಒತ್ತುವ ಇತರ ಉಬ್ಬಿನಲ್ಲಿ ಅಗಲೇ ಉಂಟಾಗುತ್ತವೆ.

ಇವುಗಳು ಉಂಟಾಗದ ಹಾಗೆ ಕರ್ಪೂರದ ದ್ರಾವಕದ (೨೮೬) ನೀರಿನಿಂದಾಗಲೀ, ಬ್ರೇಂಡಿ ನೀರಿನಿಂದಾಗಲೀ, (Eau de Cologne) ಕೋಲೊನ್ ಎಂಬ ಸುಗಂಧ ನೀರಿನಿಂದಾಗಲೀ ತೊಳದು, ಮೈ ಒಂದೇ ಕಡೆಯಲ್ಲಿ ಒತ್ತಿಕೊಳ್ಳದ ಹಾಗೆ ಆಗ್ಗಾಗ್ಗೆ ಬದಲಿಸುತ್ತಾ ಇರುವದು ಒಳ್ಳೇದು. ಉರುಟಾಗಿಯೂ ನಡುವೆ ಟೊಳ್ಳಾಗಿಯೂ ಇರುವ ಒಂದು ಲೋಡು ಮಾಡಿಸಿ (ಅಂದರೆ ಕೂಲಿ ಆಳುಗಳು ಹೊರೆಯನ್ನು ಹೊತ್ತುಕೊಳ್ಳುವಾಗ ಅದರ ಭಾರವು ತಲೆಗೆ ಒತ್ತದಂತೆ ನಡುವೆ ಇಟ್ಟುಕೊಳ್ಳುವ ದುಂಡಗಾದ ತಲೇದಿಂಡಿಯಂತೆ ಮಾಡಿಸಿ), ಮೈ ಕೆಳಗೆ ಅಲ್ಲ್ಯಲ್ಲಿ ಇಟ್ಟುಕೊಳ್ಳುವದು. ಇಷ್ಟು ಮಾಡಿದರೂ ಹುಣ್ಣು ಉಂಟಾಗುವ ಪಕ್ಷಕ್ಕೆ, ಸಾಧಾರಣ ಹುಣ್ಣಿನಂತೆ ಅದರ ಚಿಕಿತ್ಸೆ ಮಾಡುವದು. (೧೮೮೨ನೇ ಇಸವಿಯ ಪಂಚಾಂಗದ ೫೦-೫೬ನೇ ಪಾನುಗಳಲ್ಲಿ ನೋಡು.)

೨೮೬. ಶಯ್ಯಾವ್ರಣಗಳು ಉಂಟಾಗದಂತೆ ಕರ್ಪೂರವನ್ನು ಸಾರಾಯಿಯಲ್ಲಿ ಆಗಲೀ ಬ್ರೇಂಡಿಯಲ್ಲಿ ಆಗಲೀ ಹಾಕಿ ಕರಗಿಸಿ, ಆ ದ್ರಾವಕವನ್ನು ಹಾಸಿಗೆಗೆ ತಗಲುವ ಮೈಭಾಗಕ್ಕೆ ದಿನಕ್ಕೆ ೨ ಸಾರಿ ಹಚ್ಚಿ ಕೆಲವು ನಿಮಿಷದ ವರೆಗೆ ತಿಕ್ಕ ಬೇಕು.

ಶಿಡುಬು, ಶೀತಳಿಗೆ Small-pox.

ಇದೇ ಪಂಚಾಂಗದ ೪೨-೪೬ನೇ ಪಾನುಗಳಲ್ಲಿ ಹೇಳಿರುತ್ತದೆ.—ಅದಲ್ಲದೆ ಇನ್ನು ಮೈಲಿಗ ಜ್ವಿಯ ವಿಷಯದಲ್ಲಿ ಹಿಂದೆ ಹೇಳಲಿಕ್ಕೆ ಉಳಿದಿರುವ ಚಿಕಿತ್ಸೆಯ ಕ್ರಮ ಯಾವದಂದರೆ: ಪ್ರಥಮ ತಾ ಹರಳೆಣ್ಣೆ (೧೫೦[1]) ಆಗಲೀ ಸೋನಾಮಕ್ಕಿ ಕಷಾಯವಾಗಲೀ (೧೮೬[2]) ಕೊಟ್ಟು ಮಲ ಶೋಧನೆ ಮಾಡಿಸುವದು. ರೋಗಿಯನ್ನು ಘಾಳಿ ಸರಾಗವಾಗಿ ಚಲಿಸುವ ತಣುಸಾದ ಕೋಣೆಯಲ್ಲಿ ಮಲಗಿಸ ಬೇಕು. ಮತ್ತು ಯಥೇಷ್ಟವಾಗಿ ನಿಂಬೇ ಪಾನಕ (೨೧೮[3]), ಅಕ್ಕಿ ಗಂಜಿ (೧೧೮[4]) ಮುಂತಾದ್ದನ್ನು ಪೆಟ್ಲುಪ್ಪಿನ ನೀರಿನ ಸಂಗಡ ಕೊಡುವದು. ಅದಲ್ಲದೆ ಮೈಯನ್ನು ದಿನಾಲು ಶಿರ್ಕದ ನೀರಿನಿಂದಾಗಲೀ (೨೪೦[5]) ಬರೆ ನೀರಿನಿಂದಾಗಲೀ (೨೪೧[6]) ಒರಸುವದು. ಮೈಯುರಿಯನ್ನು ಶಮಿಸುವ ಬಗ್ಗೆ ಸಣ್ಣಗೆ ಜೀಸಿದ ಹಿಟ್ಟನ್ನು ಮೈಮೇಲೆ ಚೆಲ್ಲುವದು. ಬೊಕ್ಕೆಗಳ ದೆಶೆಯಿಂದ ಗುಣಿ ಬೀಳದಂತೆ ಸುಣ್ಣದ ಮುಲಾಮು (೨೬೯[7]) ಹಚ್ಚುವದು. ಬಹಳ ಅಶಕ್ತಿಯೂ ಬುದ್ಧಿಭ್ರಮಣೆಯೂ ಮುಂತಾದ್ದು ಇರುವ ರೋಗದ ಕಠಿಣ ಸ್ಥಿತಿಯಲ್ಲಿ ಕರ್ಪೂರ (೨೬೨[7]), ಬ್ರೇಂಡಿ ಮಿಶ್ರ[8] ಮುಂತಾದ ಉತ್ತೇಜಕಗಳನ್ನೂ ಜೇತನಕರ ಆಹಾರವನ್ನೂ ಕೊಡುವದು. ರೋಗವು ಇಳಿತರವಾದ ಮೇಲೆ ಉಂಟಾಗುವ ಅಶಕ್ತಿಗೆ ಜ್ವರದಲ್ಲಿ ಹೇಳಿದ ಚಿಕಿತ್ಸೆಯನ್ನು ಮಾಡುವದು.

---

1) ೧೮೮೧ನೇ ಇಸವಿಯ ಪಂಚಾಂಗದ ೫೯ನೇ ಪಾನಿನಲ್ಲಿಯೂ ಅದರ ಟಿಪ್ಪಣಿಯಲ್ಲಿಯೂ ನೋಡು.
2) ೧೮೮೨ನೇ ಇಸವಿಯ ಪಂಚಾಂಗದ ೪೭ನೇ ಪಾನಿನಲ್ಲಿಯೂ ಅದರ ೩ನೇ ಟಿಪ್ಪಣಿಯಲ್ಲಿಯೂ ನೋಡು.
3) ೧೮೮೪ನೇ ಇಸವಿಯ ಪಂಚಾಂಗದ ೪೭ನೇ ಪಾನಿನಲ್ಲಿ ನೋಡು.
4) ೧೮೮೦ನೇ ಇಸವಿಯ ಪಂಚಾಂಗದ ೪೭ನೇ ಪಾನಿನಲ್ಲಿ ನೋಡು.
5) ೧೮೮೩ನೇ ಇಸವಿಯ ಪಂಚಾಂಗದ ೫೦ನೇ ಪಾನಿನಲ್ಲಿ ನೋಡು.
6) ಆದೇ ಪಂಚಾಂಗದ ೫೦ನೇ ಪಾನಿನಲ್ಲಿ ನೋಡು.
7) ೧೮೮೪ನೇ ಇಸವಿಯ ಪಂಚಾಂಗದ ೪೯ನೇ ಪಾನಿನ ಬುಡದಲ್ಲಿ ನೋಡು.
8) ೧೮೭೬ನೇ ಇಸವಿಯ ಪಂಚಾಂಗದ ೧೬ನೇ ಪಾನಿನಲ್ಲಿರುವ ಎ ಅಂಕೆಯನ್ನು ನೋಡು.

ಪ್ರಶ್ನೋತ್ತರಗಳು.

೧. ಪ್ರಶ್ನೆ. ವಾಯುವಿಗಿಂತಲೂ ವೇಗವಾದದ್ದು ಯಾವದು?
ಉತ್ತರ. ವಿಚಾರವು.

೨. ಪ್ರಶ್ನೆ. ಸ್ವಲ್ಪ ಬಿತ್ತಿ ವಿಪುಳವಾಗುವಂಥಾದ್ದು ಯಾವದು?
ಉತ್ತರ. ಪರೋಪಕಾರವು.

೩. ಪ್ರಶ್ನೆ. ಮತ್ಸರವಂದರೇನು?
ಉತ್ತರ. ಮತ್ತವರ ಒಳ್ಳೇದನ್ನು ನೋಡಿ ಕೇಡು ಬಗೆಯುವದು.

೪. ಪ್ರಶ್ನೆ. ಧನದಲ್ಲಿ ಉತ್ತಮ ಧನ ಯಾವದು?
ಉತ್ತರ. ವಿದ್ಯಾಧನವು.

೫. ಪ್ರಶ್ನೆ. ಲಾಭದಲ್ಲಿ ಉತ್ತಮ ಲಾಭ ಯಾವದು?
ಉತ್ತರ. ಆರೋಗ್ಯತೆಯು.

೬. ಪ್ರಶ್ನೆ. ಸುಖದಲ್ಲಿ ಉತ್ತಮ ಸುಖ ಯಾವದು?
ಉತ್ತರ. ಸಂತೋಷವು.

೭. ಪ್ರಶ್ನೆ. ವಿಷವು ಯಾವದು?
ಉತ್ತರ. ಬೇಡುವಿಕೆ.

೮. ಪ್ರಶ್ನೆ. ಜ್ಞಾನ ಯಾವದು?
ಉತ್ತರ. ಸಾರಾಸಾರ ತಿಳಿಯುವದು.

೯. ಪ್ರಶ್ನೆ. ಶೂರತ್ವ ಯಾವದು?
ಉತ್ತರ. ಇಂದ್ರಿಯಗಳನ್ನು ಅಧೀನದಲ್ಲಿಡುವದು.

೧೦. ಪ್ರಶ್ನೆ. ಸುಖಸ್ಥನು ಯಾರು?
ಉತ್ತರ. ಸಾಲವಿಲ್ಲದೆ ಪರವೂರಿಗೆ ಹೋಗದೆ ಮನೆಯಲ್ಲಿ ದೊರಕುವ ಕೊಂಚ ದರಲ್ಲಿ ತೃಪ್ತಿ ಪಟ್ಟಿರುವವನು.

೧೧. ಪ್ರಶ್ನೆ. ಆಶ್ಚರ್ಯ ಯಾವದು?
ಉತ್ತರ. ಪ್ರತಿನಿತ್ಯವೂ ಮನುಷ್ಯರು ಸಾಯುತ್ತಿರುವದು ನೋಡಿ ತಾನು ಅಮರ್ತ್ಯನೆಂದು ಭಾವಿಸುವದು.

೧೨. ಪ್ರಶ್ನೆ. ಮಾರ್ಗ ಯಾವದು?
ಉತ್ತರ. ಯೇಸು ಕ್ರಿಸ್ತನೇ.

ದಕ್ಷಿಣ ಹಿಂದುಸ್ಥಾನದಲ್ಲಿ ರೂಢಿಯಾಗಿ ಎಣಿಸುವ

ಶಕಗಳ ಮೊಕಾಬಿಲೆ ಪಟ್ಟಿ.

ಕ್ರೈಸ್ತಶಕ A. D.		ಹಿಂದು ಶಕಗಳು				ಫಸಲಿ		ಮಹಮ್ಮದಿ ಹಿಜರಿ	
		ಚಾಂದ್ರಮಾನ		ಸೌರಮಾನ					
		ಸಂವತ್ಸರಗಳು	ಶಾಲಿವಾಹನ ಶಕ	ಮಲಯಾಳ ಕೊಲ್ಲಮ್					
1807	1867	ಪ್ರಭವ	1729	1789	982	1042	1216	1276	1222	1284
1808	1868	ವಿಭವ	1730	1790	983	1043	1217	1277	1223	1285
1809	1869	ಶುಕ್ಲ	1731	1791	984	1044	1218	1278	1224	1286
1810	1870	ಪ್ರಮೋದೂತ	1732	1792	985	1045	1219	1279	1225	1287
1811	1871	ಪ್ರಜೋತ್ಪತ್ತಿ	1733	1793	986	1046	1220	1280	1226	1288
1812	1872	ಆಂಗೀರಸ	1734	1794	987	1047	1221	1281	1227	1289
1813	1873	ಶ್ರೀಮುಖ	1735	1795	988	1048	1222	1282	1228-29	1290
1814	1874	ಭಾವ	1736	1796	989	1049	1223	1283	1230	1291
1815	1875	ಯುವ	1737	1797	990	1050	1224	1284	1231	1292
1816	1876	ಧಾತು	1738	1798	991	1051	1225	1285	1232	1293
1817	1877	ಈಶ್ವರ	1739	1799	992	1052	1226	1286	1233	1294-95
1818	1878	ಬಹುಧಾನ್ಯ	1740	1800	993	1053	1227	1287	1234	1296
1819	1879	ಪ್ರಮಾಥಿ	1741	1801	994	1054	1228	1288	1235	1297
1820	1880	ವಿಕ್ರಮ	1742	1802	995	1055	1229	1289	1236	1298
1821	1881	ವಿಷು	1743	1803	996	1056	1230	1290	1237	1299
1822	1882	ಚಿತ್ರಭಾನು	1744	1804	997	1057	1231	1291	1238	1300
1823	1883	ಸ್ವಭಾನು	1745	1805	998	1058	1232	1292	1239	1301
1824	1884	ತಾರಣ	1746	1806	999	1059	1233	1293	1240	1302
1825	1885	ಪಾರ್ಥಿವ	1747	1807	1000	1060	1234	1294	1241	1303
1826	1886	ವ್ಯಯ	1748	1808	1001	1061	1235	1295	1242	1304
1827	1887	ಸರ್ವಜಿತು	1749	1809	1002	1062	1236	1296	1243	1305
1828	1888	ಸರ್ವಧಾರಿ	1750	1810	1003	1063	1237	1297	1244	1306
1829	1889	ವಿರೋಧಿ	1751	1811	1004	1064	1238	1298	1245	1307
1830	1890	ವಿಕೃತಿ	1752	1812	1005	1065	1239	1299	1246	1308
1831	1891	ಖರ	1753	1813	1006	1066	1240	1300	1247	1309
1832	1892	ನಂದನ	1754	1814	1007	1067	1241	1301	1248	1310
1833	1893	ವಿಜಯ	1755	1815	1008	1068	1242	1302	1249	1311
1834	1894	ಜಯ	1756	1816	1009	1069	1243	1303	1250	1312

ಕ್ರಿಸ್ತಶಕ		ಸಂವತ್ಸರಗಳು	ಶಾಲಿವಾಹನ ಶಕ		ಮಲಯಾಳ ಕೊಲ್ಲಮ್		ಫಸಲಿ		ಮಹಮ್ಮದಿ ಹಿಜರಿ	
1835	1895	ಮನ್ಮಥ	1757	1817	1010	1070	1244	1304	1251	1313
1836	1896	ದುರ್ಮುಖಿ	1758	1818	1011	1071	1245	1305	1252	1314
1837	1897	ಹೇವಿಳಂಬಿ	1759	1819	1012	1072	1246	1306	1253	1315
1838	1898	ವಿಳಂಬಿ	1760	1820	1013	1073	1247	1307	1254	1316
1839	1899	ವಿಕಾರಿ	1761	1821	1014	1074	1248	1308	1255	1317
1840	1900	ಶಾರ್ವರಿ	1762	1822	1015	1075	1249	1309	1256	1318
1841	1901	ಪ್ಲವ	1763	1823	1016	1076	1250	1310	1257	1319
1842	1902	ಶುಭಕೃತು	1764	1824	1017	1077	1251	1311	1258	1320
1843	1903	ಶೋಭಕೃತು	1765	1825	1018	1078	1252	1312	1259	1321
1844	1904	ಕ್ರೋಧಿ	1766	1826	1019	1079	1253	1313	1260	1322
1845	1905	ವಿಶ್ವಾವಸು	1767	1827	1020	1080	1254	1314	1261-62	1323
1846	1906	ಪರಾಭವ	1768	1828	1021	1081	1255	1315	1263	1324
1847	1907	ಪ್ಲವಂಗ	1769	1829	1022	1082	1256	1316	1264	1325
1848	1908	ಕೀಲಕ	1770	1830	1023	1083	1257	1317	1265	1326
1849	1909	ಸೌಮ್ಯ	1771	1831	1024	1084	1258	1318	1266	1327-28
1850	1910	ಸಾಧಾರಣ	1772	1832	1025	1085	1259	1319	1267	1329
1851	1911	ವಿರೋಧಿಕೃತು	1773	1833	1026	1086	1260	1320	1268	1330
1852	1912	ಪರಿಧಾವಿ	1774	1834	1027	1087	1261	1321	1269	1331
1853	1913	ಪ್ರಮಾದೀಚ	1775	1835	1028	1088	1262	1322	1270	1332
1854	1914	ಆನಂದ	1776	1836	1029	1089	1263	1323	1271	1333
1855	1915	ರಾಕ್ಷಸ	1777	1837	1030	1090	1264	1324	1272	1334
1856	1916	ನಳ	1778	1838	1031	1091	1265	1325	1273	1335
1857	1917	ಪಿಂಗಳ	1779	1839	1032	1092	1266	1326	1274	1336
1858	1918	ಕಾಳಯುಕ್ತಿ	1780	1840	1033	1093	1267	1327	1275	1337
1859	1919	ಸಿದ್ಧಾರ್ಥಿ	1781	1841	1034	1094	1268	1328	1276	1338
1860	1920	ರೌದ್ರಿ	1782	1842	1035	1095	1269	1329	1277	1339
1861	1921	ದುರ್ಮತಿ	1783	1843	1036	1096	1270	1330	1278	1340
1862	1922	ದುಂದುಭಿ	1784	1844	1037	1097	1271	1331	1279	1341
1863	1923	ರುಧಿರೋದ್ಗಾರಿ	1785	1845	1038	1098	1272	1332	1280	1342
1864	1924	ರಕ್ತಾಕ್ಷಿ	1786	1846	1039	1099	1273	1333	1281	1343
1865	1925	ಕ್ರೋಧನ	1787	1847	1040	1100	1274	1334	1282	1344
1866	1926	ಕ್ಷಯ	1788	1848	1041	1101	1275	1335	1283	1345

ಸೂಚನೆ: 1. ಕ್ರಿಸ್ತಶಕವೆಂಬ ಇಸವಿ ಜನವರಿ 1ನೇ ತಾರೀಕಿಗೆ ಪ್ರಾರಂಭವಾಗುವದು.
2. ಸಂವತ್ಸರವೂ ಶಾಲಿವಾಹನ ಶಕವೂ(ಒಂದೇ ದಿವಸ) ಮಾರ್ಚ-ಎಪ್ರಿಲಲ್ಲಿ ಪ್ರಾರಂಭವಾಗುವದು.
3. ಮಲಯಾಳ ಕೊಲ್ಲಮ್ ಎಂಬ ಕೇರಳ ಶಕವು ಸಪಟಂಬರ ತಿಂಗಳಲ್ಲಿ "
4. ಫಸಲಿ ಜುಲಾಯಿ 1ನೇ ತಾರೀಕಿಗೆ "
5. ಮಹಮ್ಮದಿ ಹಿಜರಿ ಸಾಮಾನ್ಯವಾಗಿ ವರ್ಷ ವರ್ಷ ೧೫ ದಿವಸಕ್ಕೆ ಮುಂದಾಗಿ "

ಲೇಸು ಪದಗಳು.

(ಒಂದೊಂದು ನುಡಿಯ ಮೇಲೆ "ಲೇಸು ಲೇಸೆನ್ನಿರೋ, ಸಜ್ಜನರೆಲ್ಲಾ ಲೇಸು.ಲೇಸೆನ್ನಿರೋ" ಎಂದು ಹೇಳ ತಕ್ಕದ್ದು.)

ಶ್ರೀ ದೇವರಾಜ್ಞೆ ವಿಾರಿದಾದಾಮ ಪಾಪಕಾಗಿ ।
ತಾ ದಿವ್ಯಮಗನನ್ನೀಯಲೀ ಧಾತ್ರಿ ನರರಿಂಗೊಲಿದ ॥೧॥

ಪರಿಶುದ್ಧಾತ್ಮನಿಂದ ವರ ಕನ್ಯಮರಿಯಗರ್ಭ ।
ದಿರವಿನೊಳ್‌ನಿಂದ ಸಾಕ್ಷಾತ್ ಪರಮಾತ್ಮಪುತ್ರನಡಿಗೆ ॥೨॥

ಬೆತ್ಲೆಹೇಮಿನೊಳು ಪವಿತ್ರ ಗೋದಲಿಯಲ್ಲಿ ।
ರಾತ್ರಿಯೊಳವತಾರವೆತ್ತೀರ್ದ ಮಹಿಮನಿಗೆ ॥೩॥

ಆ ತರುಕ್ಷಣದಿ ದೇವದೂತರಾಕಾಶದಿಂದ ।
ಓತು ಕುರುಬರೊಳು ಮಾತಾಡಿ ನುತಿಸಿದಗೆ ॥೪॥

ಉನ್ನತೋನ್ನತವು ಮಹೋನ್ನತಿ ಮಹಿಮೆ ದೇವ ।
ರ್ಗಿನ್ನು ಮಾನವರಲ್ಲಿ ಜನ್ನಶಾಂತಿಯೆಂದಗೆ ॥೫॥

ಮೂಡಣ ಜ್ಞಾನಿಗಳಿಗೆ ನೀಡಿ ಭೇಟಿಯನತಿ ।
ಮೂಢ ಹೇರೋದಗತಿ ಕೇಡನುಣ್ಣಿಸಿದವಗೆ ॥೬॥

ಪನ್ನೆರಡಬುದ ಪ್ರಾಯ ಚಿಣ್ಣ ದೇವಾಲಯದಿ ।
ಮುನ್ನ ಪಂಡಿತರೊಳು ನನ್ನಿವಾದಿಸಿದವಗೆ ॥೭॥

ದ್ವಾದಶಾಪೊಸ್ತಲರಿಗೆ ಬೋಧವೀವುತ ಸತ್ಯ ।
ವೇದ ಪಾಲಿಸಿ ಸಾರಲಾದಿ ಗೈಸಿದನಿಂಗೆ ॥೮॥

ಕೆತ್ತಲೆ ಮರಣನೆರಳೊಲೊತ್ತೀರ್ದ ದೇಶದವರ್ಗೆ ।
ಉತ್ತಮ ಬೆಳಕದೋರಿ ನಿತ್ಯ ಪಾಲಿಸಿದಂಗೆ ॥೯॥

ದೇವರಾಜ್ಯ ಸಮೀಪ ಭಾವಬೇರ್ಪಡಿರೆಂದು ।
ಆ ಊರ ಯೂದರಿಂಗೆ ವೋವಿ ಸಾರಿದನಿಂಗೆ ॥೧೦॥

ಹೇ ಪುರುಷನೆ ನಿನ್ನ ಪಾಪದ ಭಾರವನು ।
ತಾ ಪೊತ್ತುಕೊಂಬೆನೆಂಬವಾಪದ್ಬಾಂಧವನಿಗೆ ॥೧೧॥

ಕರ್ತನೆಯೆಂದು ಸಟೆಯೊಳತ್ತರಿಂಗರಿಯೆನ್ನಾಜ್ಞೆ ।
ಸತ್ಯದಿಂ ತಾಳಿಕೊಂಡರಿಷ್ಟಾರ್ಥಿ ತಾನೆಂಬವಗೆ ॥೧೨॥

ಕುರುಡಕಿವಿಡರಿಗೆಲ್ಲಾ ಕರದು ಕಣ್ಣಿವಿಯನಿತ್ತು ।
ಕರಿಕುಷ್ಠಾದ್ಯಖಿಲ ರೋಗ ಪರಿಹರಿಸಿದವಂಗೆ ॥೧೩॥

ಪಂಚ ರೊಟ್ಟಿ ರಡೇವಿಾನ ಪಂಚಸಾವಿರ ಜನಕೆ ।
ಹಂಚಿ ತೃಪ್ತಿಯ ಗೈದು ವಾಂಛೆ ಪಾಲಿಸಿದವಗೆ ॥೧೪॥

ಮತ್ತಂಬುನಿಧಿಯ ಮೇಲೆ ಕರ್ತನ್ಯೆತರಲು ನಡೆದು ।
ಪೇತ್ರ ತಾ ಮುಳುಗಲಭಯಹಸ್ತವಿತ್ತ್ಯೆತ್ತಿದವಗೆ ॥೧೫॥

ಗೋರಿಯೊಳಿಟ್ಟ ಪೆಣನ ಭೋರನೆ ಕರೆದು ಜೀವ ।
ದೋರಿ ಲಾಜರನಿಗುದ್ಧಾರ ಗೈದವನಿಂಗೆ ॥೧೬॥

ಭಾವಶುದ್ಧದಿ ನಂಬಿ ಪಾವನ ಸ್ನಾನವಾಂತ ।
ಜೀವಿಗಳಿಂಗೆ ನಿತ್ಯಜೀವವೀವಾತನಿಗೆ ॥೧೭॥

ಆ ಗೆತ್ಸೆಮನೆಯೊಳಂದು ತಾ ಗೈದ ಪುಣ್ಯಫಲದ ।
ಭಾಗವಿತ್ತೆಮ್ಮ ಕಾಯ್ವ ಶ್ರೀ ಗುರುವರ್ಯನಿಗೆ ॥೧೮॥

ಇಸ್ಕರಿಯೋತ ಯೂದ ಮಸ್ಕರಾತ್ರಿಯೊಳಂದು ।
ದುಷ್ಕೃತ್ಯ ಜನರ ವಶಕೆ ತಸ್ಕಿನಿಂದೊಪ್ಪಿಸಿದಗೆ ॥೧೯॥

ಅತ್ತಿತ್ತ ಖಳರ ಮಧ್ಯಕ್ಕೆತ್ತಿ ತಿಲುಬೆಗೆ ಜಡಿಯೆ ।
ಮತ್ತು ದೇವರೊಳ್ ಲೇಸಧೂರ್ತಗರ್ಗೆ ಬೇಡಿದವಗೆ ॥೨೦॥

ನಿತ್ಯಜೀವದ ಕರ್ತ ಸತ್ತು ಮೂರನೆ ದಿನಕೆ ।
ಯುತ್ಥಾನಗೈದ ಪುನರುತ್ಥಾನದಾತನಿಗೆ ॥೨೧॥

ತನ್ನ ಭಕ್ತರಿಗೆಲ್ಲಾ ಇನ್ನು ನಾಲ್ವತ್ತು ದಿವಸ ।
ತನ್ನ ಕಾಣಿಸಿ ಬೋಧವನ್ನೊಲಿದಿತ್ತವಂಗೆ ॥೨೨॥

ಉಚಿತದಿಂ ಪಡೆದ ಬೋಧೆಯುಚಿತದಿಂ ಸಾರಿ ಲೋಕ ।
ನಿಜಯಕೆನ್ನುತ್ತ ಶಿಷ್ಯನಿಜಯಕ್ಕಾಜ್ಞಾಪಿಸಿದಗೆ ॥೨೩॥

ಪರಿಶುದ್ಧಾತ್ಮನು ಬಂದು ವೊರೆವನಿನ್ನೆಲ್ಲ ಮುಂದೆ ।
ಸ್ಮರಣೆಕಾಲದಿ ನಿಮ್ಮೊಳಿರುವೆ ತಾನೆಂದವನಿಗೆ ॥೨೪॥

ಇತ್ಯಾದಿಯೊರೆದು ಪರಶಿ ಬೆತಾನ್ಯಗಿರಿಯನೇರಿ ।
ಉತ್ತರೋತ್ತರ ಗತಿಯ ಮತ್ತಡರಿರ್ದವಂಗೆ ॥೨೫॥

ದೇವರ ಬಲದಿ ದಿವ್ಯ ದೇವಯಾಜಕನಾಗಿ ।
ಭಾವಿಕರನ್ನು ನಿತ್ಯ ಕಾವ ರಕ್ಷಕನಿಂಗೆ ॥೨೬॥

ಕವಿ: ಮುಳ್ಕಿ ರಾಮಕೃಷ್ಣಯ್ಯನ ಕೃತಿ.

ಬರ್ಮಾ ದೇಶವು.

ಇತ್ತಲಾಗೆ ನಮ್ಮ ಸರಕಾರದವರು ಬರ್ಮಾ ದೇಶದ ಅರಸನ ಶೀಮೆಯನ್ನು ತೆಗೆದು ಕೊಂಡು ಹಿಂದು ಸಾಮ್ರಾಜ್ಯಕ್ಕೆ ಶೇರಿಸಿದರೆಂದು ವರ್ತಮಾನಸಂಗ್ರಹದಲ್ಲಿ ಹೇಳಿದ್ದಾ ಯಿತು. ಈಗ ಬರ್ಮಾ ದೇಶವನ್ನೂ ಜನರನ್ನೂ ಕುರಿತು ಕೆಲವು ವಿವರಗಳನ್ನು ಪ್ರಸ್ತಾಪಿಸುತ್ತೇವೆ.

ಬರ್ಮಾ ರಾಜ್ಯವು ಮೊದಲು ಬಹು ವಿಶಾಲವಾದದ್ದಾಗಿತ್ತು; ಆದರೆ ಬ್ರಿತಿಷ ಸರಕಾರವದರು ಆಯಾ ಶೀಮೆಗಳನ್ನು ಯುದ್ಧಮುಖವಾಗಿ ಕಟ್ಟಿಕೊಂಡರಾದ ಕಾರಣ ಕಡಿಮೆ ಕಡಿಮೆಯಾಗುತ್ತಾ ಬಂತು. ಪಶ್ಚಿಮದಲ್ಲಿರುವ ಅರಕಾನ ಶೀಮೆ ೧೮೨೬ನೇ ವರ್ಷದಲ್ಲಿ ಬರ್ಮಾ ಅರಸನು ಬಿಟ್ಟು ಕೊಟ್ಟನು. ದಕ್ಷಿಣದಲ್ಲಿ ಪೇಗು ಶೀಮೆ ಯನ್ನು ೧೮೫೨ರಲ್ಲಿ ಸರಕಾರದವರು ತೆಗದುಕೊಂಡರು. ಬರ್ಮಾ ರಾಜ್ಯದ ಕ್ಷೇತ್ರ ಫಲವು ೨೦೦,೦೦೦ ಚಚ್ಚೌಕ ಮೈಲು ಆಗಿರ ಬಹುದು. ಇರಾವದಿ ಸಲ್ವಿನ ಎಂಬುವ ಎರಡು ಮುಖ್ಯ ನದಿಗಳು ದಕ್ಷಿಣಕ್ಕೆ ಹರಿಯುತ್ತಾ ಬಂಗಾಳ ಕೊಲ್ಲಿಗೆ ಕೂಡುತ್ತವೆ. ಇರಾವದಿ ನದಿಯು ಅಳವೆಯಿಂದ ಮೇಲ್ಗಡೆ ಎಂಟು ನೂರು ಮೈಲು ವರೆಗೆ ನಗಗಳು ಹೋಗ ತಕ್ಕಷ್ಟು ಆಳವಾಗಿದೆ. ಸಲ್ವಿನ ನದಿಯ ಪ್ರವಾಹದಲ್ಲಿ ಅಲ್ಲಲ್ಲಿ ಬಂಡೆಗಳು ಬರುವ ದರಿಂದ ನಗಗಳು ಹೋಗ ತಕ್ಕದ್ದಲ್ಲಾ. ಬರ್ಮಾದಲ್ಲಿ ಲೋಹಗಳು ಧಾತುಗಳು ಹೇರ ಳವಿದ್ದಾಗ್ಯೂ ಜನರು ಕಷ್ಟ ಮಾಡಿ ಅವುಗಳನ್ನು ತೆಗಿಯುವದಕ್ಕೆ ಪ್ರಯತ್ನ ಮಾಡಲಿ ಲ್ಲಾ. ಕೆಂಪು ನೀಲ ಕಲ್ಲುಗಳು ಶಿಕ್ಕುವ ಖನಿಗಳವೆ; ಆದರೆ ಅಲ್ಲಿ ಅರಸನ ಪಹರೆಯುಂಟು. ಅದರಲ್ಲಿ ಆದ ಉತ್ಪತ್ತಿ ಎಲ್ಲಾ ರಾಜ್ಯಭಂಡಾರಕ್ಕೆ ಹೋಗುತ್ತವೆ. ಇರಾವದಿ ನದಿಯ ದಂಡೆಯಲ್ಲಿ ಕೆರೊಸಿನ ಎಣ್ಣೆಯ ಭಾವಿಗಳೂ ಅವೆ.

ಮುಖ್ಯ ಬೆಳಸು ಅಕ್ಕಿ, ಸಾವೆ, ಜೋಳ, ಗೋಧಿ, ವಿದಳ ಧಾನ್ಯಗಳು, ಹೊಗೆ ಸೊಪ್ಪು, ಹತ್ತಿ, ಎಳ್ಳು, ಸಾಸಿವೆ, ನೀಲಿ; ಅಕ್ಕಿ ೧೫೦ ತರದ್ದು ಉಂಟು. ಒಂದು ಚಾ ಗಿಡ ಅಲ್ಲಿ ಬೆಳೆಯುತ್ತದೆ; ಅದರ ಎಲೆಗಳನ್ನು ಜನರು ಉಪ್ಪಿನ ಕಾಯಿ ಹಾಕಿ ಇಡುವರು. ಹಣ್ಣುಹಂಪಲು ಹಿಂದುಸ್ಥಾನದಲ್ಲಿ ಆಗುವಂಥಾದ್ದೇ ಆಗುತ್ತವೆ. ದೊಡ್ಡ ದೊಡ್ಡ ಮಲೆಗಳಲ್ಲಿ ತೇಗು ಮೊದಲಾದ ಘಟ್ಟಿ ಮರಗಳು ಹೇರಳವಾಗಿವೆ. ಅಂಥಾ ಮರಗ ಳನ್ನು ಇತ್ತಕಡೆಗೂ ಸಾಗಿಸುತ್ತಾರೆ. ಅಡವಿಗಳಲ್ಲಿ ಮೆರಗು ಎಣ್ಣೆಯ ಗಿಡಗಳೂ ಅವೆ.— ಸಾಧಾರಣ ಮನೇ ಮೃಗಗಳೂ ಬರ್ಮಾದಲ್ಲಿ ಅವೆ. ಕುದುರೆಗಳು ಗಿಡ್ಡ ವಾಗಿರುವವು. ಇಲ್ಲಿ ಪೇಗು ಟಾಕಣಗಳು ಅನ್ನಿಸಿಕೊಳ್ಳುವವುಗಳು ಮೂಡಲಲ್ಲಿ ರುವ ಶಾನ ದೇಶದಿಂದ ಬರುತ್ತವೆ. ಮರಗಳ ಖಂಡಿಗಳನ್ನು ಆನೆಗಳಿಂದ ಎಳಿಸುತ್ತಾ ರೆ. ಒಂದು ಕೊಂಬು ಎರಡು ಕೊಂಬು ಉಳ್ಳ ಖಡ್ಗಮೃಗಗಳು ಅರಣ್ಯಗಳಲ್ಲಿ ಅವೆ. ಹುಲಿ, ಹೆಬ್ಬುಲಿ, ಕರಡಿ ಇವೇ ಮುಖ್ಯ ಹಿಂಸಕ ಮೃಗಗಳು.

ದೇಶನಿವಾಸಿಗಳಾದ ಬರ್ಮಿಜನರು ಗಿಡ್ಡರು, ಗಾತ್ರವಾದವರು; ಚಿಕ್ಕ ತಲೆ, ಹರ ವಾದ ಕಪಾಲ, ಜಪ್ಪಟಿ ಮೋರೆ; ಮೈಬಣ್ಣವು ತುಸ ಕರೀದು, ತಲೆಯಲ್ಲಿ ಪುಷ್ಕಳ ಕೂದಲು, ಮೋರೆಯಲ್ಲಿ ಅಷ್ಟಿಲ್ಲಾ. ಅವರ ಭಾಷೆಗೆ ಬರಹ ಉಂಟು. ಹೆಂಗಸರೂ

ಗಂಡಸರೂ ಅಂಗಿ ತೊಡುವರು; ಗಂಡಸರು ಕೆಲವು ಮೊಳ ಉದ್ದವಾದ ಬಟ್ಟೆ ವೇಷ್ಟಿಯಂತೆ ಉಡುವರು. ಹೆಂಗಸರ ಬಟ್ಟೆ ಸ್ವಲ್ಪ ಕಿರುದು. ವೀಳ್ಯ ಹಾಕುವದು, ಹೊಗೆಸೊಪ್ಪು ಜೇದುವದು ಬಹಳ ರೂಢಿ. ಅವರು ಬಿದುರಿನ ತಟ್ಟಿಗಳನ್ನೇ ಗೋಡೆಯಾಗಿ ಮಾಡಿ ಮಡ್ಲು ಹೊಚ್ಚಿ ಮನೆ ಕಟ್ಟುವರು. ಅರಸನ ಅಪ್ಪಣೆ ಇಲ್ಲದೆ ಮಣ್ಣಿನ ಗೋಡೆ ಯಾರೂ ಕಟ್ಟಬಾರದು. ಮಳೆಗಾಲದಲ್ಲಿ ನೆರೆ ಬರುವದರಿಂದ ಮನೆಗಳ ತಳವನ್ನು ನೆಲದಿಂದ ಕೆಲವು ಅಡಿ ಎತ್ತರಿಸುತ್ತಾರೆ. ಗಂಡಸರಿಗಿಂತ ಹೆಂಗಸರು ಘಟ್ಟವಾಳಿಗಳು. ಕೊಳ್ಳುವದು, ಮಾರುವದು, ನೇಯುವದು, ಮನೆಗೆಲಸ ಮಾಡುವದು ಇದೆಲ್ಲಾ ಹೆಂಗಸರ ಪಾಲು. ಕೋಳಿಪಡೆ ಕೋಣಪಡೆ ಮುಂತಾದ ಆಟಗಳು ರೂಢಿಯವೆ. ನಿಜವಾದ ಬರ್ಮಿಗಳಲ್ಲದೆ ಮೂಡಣ ಪ್ರಾಂತದಲ್ಲಿ ಶಾನರು ಎಂಬವರೂ ತೆಂಕಣ ಪ್ರಾಂತದಲ್ಲಿ ಕರೇನ ಎಂಬವರೂ ಇದ್ದಾರೆ. ಕೈಗಾರಿಕೆ ವಿದ್ಯೆಯಲ್ಲಿ ಬರ್ಮಿಗಳು ಕಡಿಮೆಯವರಲ್ಲಾ. ಹೆಂಗಸರು ಬಟ್ಟೆ ನೇಯುತ್ತಾರೆ; ಚೀನಿಯಿಂದ ರೇಶಿಮೆ ತರಿಸಿ ಪಟ್ಟಾವಳಿ ನೇಯುತ್ತಾರೆ. ಮಣ್ಣಿನ ಪಾತ್ರೆಗಳೂ ಕಬ್ಬಿಣದ ಮುಟ್ಟುಗಳೂ ಚಿನ್ನ ಬೆಳ್ಳಿಯ ನಗಗಳೂ ಮಾಡುತ್ತಾರೆ. ನೆರುಗು ಹಚ್ಚಿದ ಒಡವೆಗಳನ್ನು ಬಹಳ ಅಂದವಾಗಿ ಮಾಡುತ್ತಾರೆ. ರಾಜಧಾನಿಗೆ ಬಡಗಲಲ್ಲಿ ಶುದ್ಧ ಬಿಳೇ ಕಲ್ಲಿನ ಗುಡ್ಡವೇ ಅದೆ. ಆ ಕಲ್ಲಿನಿಂದ ಬುದ್ಧನ ಪ್ರತಿಮೆಗಳನ್ನು ಕೆತ್ತುತ್ತಾರೆ. ಗಂಟೆಗಳನ್ನು ಎರಕ ಹೊಯ್ಯುವದರಲ್ಲಿ, ಮುಲಾಮಿನ ಕೆಲಸದಲ್ಲಿ ಅವರು ಗಟ್ಟಿಗರೆನ್ನಿಸಿಕೊಳ್ಳುತ್ತಾರೆ.

ಬರ್ಮಿ ಅರಸನು ಅಶಾಧಿಪತಿ; ಪ್ರಜೆಯವರ ಜೀವವೂ ಧನವೂ ಅವನ ಆಸ್ತಿ. ಮನಸೋ ಇಚ್ಛೆ ಪ್ರಜೆ ಪರಿವಾರದವರನ್ನು ಪೀಡಿಸಲೂ ಶರೆಯಲ್ಲಿಡಲೂ ಕೊಲ್ಲಿಸಲೂ ಅವನಿಗೆ ಸ್ವತಂತ್ರ ಉಂಟು. ದೇವರಿಗೆ ಸಲ್ಲುವ ಮಾನ ಅವನಿಗೆ ಸಲ್ಲುತ್ತದೆ. ಅವನ ಹೆಸರನ್ನಾದರೂ ಜನರು ತೆಗಿಯುವದಿಲ್ಲಾ. ಚಿನ್ನದ ಕಿವಿ, ಚಿನ್ನದ ಪಾದಗಳು, ಜೀವಕ್ಕೂ ಮರಣಕ್ಕೂ ಒಡೆಯನು, ಕತ್ತಿಯ ಧನಿ ಮೊದಲಾದ ಬಿರುದುಗಳಿಂದ ಅವನನ್ನು ಕುರಿತು ಮಾತಾಡುವದು ಬಳಿಕೆ. ಬಿಳೇ ಆನೆಗಳ ಒಡೆಯನು ಎಂಬುವದೂ ಅವನ ದೊಂದು ಬಿರುದು. ಸಾಧಾರಣ ಆನೆಗಳು ಬಿಳೇ ಮರಿಗಳನ್ನು ಅಪರೂಪವಾಗಿ ಈಯುವದುಂಟು. ಇಂಥಾ ಬಿಳೇ ಆನೆಯನ್ನು ಬರ್ಮಿಗಳು ಪೂಜಿಸುತ್ತಾರೆ. ಬಿಳೇ ಆನೆ ಇನ್ನೊಂದು ಜನ್ಮದಲ್ಲಿ ಬುದ್ಧನಾಗುತ್ತದಂತೆ. ಬಹುಮಾನದಲ್ಲಿ ಅರಸನಿಗೆ ಆದು ಎರಡನೇದು. ಅದಕ್ಕೆ ಮಲಗುವದಕ್ಕೆ ರೇಶಿಮೆ ಪಟ್ಟುವಳಿಯ ಮೆತ್ತನ ಹಾಸಿಗೆ, ತಿನ್ನುವದಕ್ಕೆ ಕುಡಿಯುವದಕ್ಕೆ ಚಿನ್ನದ ಪಾತ್ರೆಗಳು ಅವೆ.

ನೀನು ಮನುಷ್ಯನೇ.

ಪೂರ್ವದಲ್ಲಿ ಚಿಕ್ಕ ಶೀಮೆಯನ್ನು ಆಳುತ್ತಿದ್ದ ಒಬ್ಬ ಅರಸನಿರುತ್ತಿದ್ದನು. ಬರಬರುತ್ತಾ ಅವನು ಪ್ರತಾಪಶಾಲಿಯಾಗಿ ಶೀಮೆಯ ಮೇಲೆ ಶೀಮೆಯನ್ನು ಗೆದ್ದು ಹೇರಳ ದ್ರವ್ಯವನ್ನು ಭಂಡಾರದಲ್ಲಿ ಕೂಡಿಸಿ ಮಂದಿ ಮಾರ್ಬಲ ಪ್ರಜೆ ಪರಿವಾರದಿಂದ ಯುಕ್ತನಾಗಿ ಸರ್ವಭೌಮನೆಂದು ಕೀರ್ತಿ ಪಡೆದನು. ಇಂಥಾ ಮಹಿಮೆಯಲ್ಲಿರುವಾಗ ಅರಸನು ಅಹಂಕಾರದಿಂದ ತಾನು ಮನುಷ್ಯನೆಂಬುವದು ಮರೆತು ಕೆಟ್ಟು ಹೋ

ದೇನು ಎಂದು ತಿಳಿದು ಒಂದು ಯುಕ್ತಿ ಮಾಡಿದನು. ತನ್ನ ಅಲ್ಪಾಯುಷ್ಯವೂ ಅಸ್ಥಿರತ್ವವೂ ಸರ್ವದಾ ತನ್ನ ನೆನವರಿಕೆಗೆ ಬರುತ್ತಲೆ ಇರುವಂತೆ ಕೆಲವು ಭಾಟರನ್ನು ಸಂಬಳಕ್ಕೆ ಇರಿಸಿಕೊಂಡು, ಅರಸನೇ, ನೀನು ಮನುಷ್ಯನೇ ಎಂದು ಪ್ರತಿನಿತ್ಯವೂ ತನ್ನ ಮುಂದೆ ಕೂಗುವ ಹಾಗೆ ಅಪ್ಪಣೆ ಮಾಡಿದನು. ಭಾಟರು ಆ ಪ್ರಕಾರ ಕೂಗುವಾಗ ಅರಸನಿಗೆ ತಾನು ಇಲ್ಲಿ ಪ್ರಯಾಣಸ್ಥನು, ಪರಕ್ಕೆ ಶೀರ ತಕ್ಕವನೆಂಬುವದು ನೆನಪಿಗೆ ಬಂದು ಆಚೆಯ ಸನ್ನಾಹ ಮಾಡುತ್ತಿದ್ದನಂತೆ. ಇದೊಂದು ಉಪಕಥೆ. ಇದರಲ್ಲಿ ಒಂದು ಬುದ್ಧಿಮಾತು ನಾವು ನೆನವರಿಕೆ ಮಾಡ ಬೇಕು. ನಾವು ಮನುಷ್ಯರೇ ಅಲ್ಲವೋ? ಹೌದು, ಆದರೆ ಈ ಸಂಗತಿ ನಮಗೆ ಬಹುಶಾ ಮರೆತು ಹೋಗುವದುಂಟು. ಅವನು ಸಾಯುವವನು, ಇವನು ಸಾಯುವವನು ಎಂದು ನಾವು ತಿಳಿಯುತ್ತೇವೆ. ನಾನೇ ಸಾಯುವವನು ಎಂಬುವದು ನಮ್ಮ ಮನಸ್ಸಿಗೆ ಬರುವದು ದುರ್ಲಭ. ನಮ್ಮ ಜೀವಮಾನದ ವರ್ಷಗಳು ಎಪ್ಪತ್ತು ವರ್ಷ, ಬಲದಿಂದಿದ್ದರೆ ಎಂಭತ್ತು ವರ್ಷ, ಅದರ ಅಹಂಕಾರವು ಕಷ್ಟವೂ ಆಯಾಸವೂ ಆಗಿದೆ ಎಂದು ಶಾಸ್ತ್ರವಚನ ಉಂಟು. ದೇವರು ನಮ್ಮ ದಿವಸಗಳನ್ನು ಗೇಣುದ್ದವಾಗಿ ಕೊಟ್ಟಿದ್ದಾನೆ. ನಾವು ಈ ಲೋಕದಲ್ಲಿ ಶಾಶ್ವತವಾಗಿ ಬದುಕುವ ಉಪಾಯ ಉಂಟೋ? ಇಲ್ಲಾ. ನಮ್ಮ ಬಂಧುಬಳಗದವರು ನಮ್ಮನ್ನು ಹಿಡಿದು ನಿಲ್ಲಿಸ ಬಹುದೋ? ಕೂಡದು. ನಮ್ಮ ಆಸ್ತಿಪಾಸ್ತಿಯಿಂದ ಒಂದೇ ಒಂದು ಘಳಿಗೆಯನ್ನಾದರೂ ಆಯುಷ್ಯಕ್ಕೆ ಕೂಡಿಸಿಕೊಳ್ಳ ಬಹುದೋ? ಆಗದು. ನಮ್ಮ ಆಸ್ತಿಪಾಸ್ತಿ ಬದುಕುಬಾಳು ಯಾವತ್ತು ಇಲ್ಲಿಯೇ ಉಳಿಯುವದು; ನಾವೇ ಹೊರಟು ಹೋಗುವವರು. ಹಾಗಾದರೆ ನಮ್ಮ ಆಯುಷ್ಯ ಕಾಲದ ಅಂತ್ಯದಲ್ಲಿ ಪಯಣ ಮುಗಿದಾಗ ನಾವು ಮರಣದಿಂದ ಶೀರ ತಕ್ಕ ಗತಿ ಯಾವದು ಎಂದು ದೃಢ ಮಾಡಿಕೊಳ್ಳುವದು ಅಗತ್ಯವಲ್ಲವೋ? ಪಶುವಾದದ್ದು ಗೊತ್ತು ಗುರಿ ಇಲ್ಲದೆ ಸತ್ತು ಹೋಗುತ್ತದೆ. ನಮ್ಮ ಗತಿ ಹಾಗಾಗ ಬಾರದು. ನಮಗೆ ದೇವರು ಪರಲೋಕದಲ್ಲಿ ಸದ್ಗತಿಯನ್ನು ನೇಮಿಸಿದ್ದಾನೆ. ನಾವು ಅಲ್ಲಿಗೆ ಶೀರ ಬೇಕಾದರೆ, ಅದನ್ನೇ ಬಯಸಿ, ಅದು ಶಿಕ್ಕ ತಕ್ಕ ಮಾರ್ಗದಲ್ಲಿ ನಡಿಯ ತಕ್ಕದ್ದು. ಆ ಮಾರ್ಗ ಯಾವದು? ಕರ್ಮಕಾಂಡವೆಂಬ ಪಿಪೀಲಿಕಾ ಮಾರ್ಗವೋ? ಜ್ಞಾನಮಾರ್ಗವೆಂಬ ವಿಹಂಗಮಾರ್ಗವೋ? ಅಲ್ಲಾ; ಮನುಷ್ಯರು ಸ್ವಂತ ಕರ್ಮಾನುಷ್ಠಾನಗಳಿಂದ, ಜ್ಞಾನದಿಂದ ದೇವರ ಮಾರ್ಗವನ್ನು ಕಂಡು ಹಿಡಿಯಲಾರರು. ಪಾಪಿಯಾದವರು ಮಾಡುವಂಥಾದ್ದು ಸರ್ವವೂ ಪಾಪವೇ. ಆದ್ದರಿಂದ ದೇವರ ದಯವನ್ನೇ ಆಶ್ರಯ ಮಾಡ ಬೇಕು. ಬೇರೆ ಉಪಾಯವಿಲ್ಲಾ. ರಕ್ಷಣೆ ಮಾಡುವಂಥಾ ದೇವರ ದಯವು ಯೇಸು ಕ್ರಿಸ್ತನಲ್ಲಿ ಮನುಷ್ಯರೆಲ್ಲರಿಗೆ ಪ್ರಸಿದ್ಧಿಯಾಗಿದೆ. ನಾವು ಭಕ್ತಿಹೀನತ್ವವನ್ನೂ ಲೌಕಿಕ ಆಶೆಗಳನ್ನೂ ತೊರೆದು, ಮನಃಸ್ವಸ್ಥವಾಗಿ ನೀತಿಯಾಗಿ ಭಕ್ತಿಯಾಗಿ ಈ ಲೋಕದಲ್ಲಿ ಬದುಕಿ, ಭಾಗ್ಯವಾದ ನಿತ್ಯಜೀವದ ನಿರೀಕ್ಷೆಯನ್ನೂ, ಮಹಾ ದೇವರೂ ನಮ್ಮ ರಕ್ಷಕನೂ ಆದ ಯೇಸು ಕ್ರಿಸ್ತನ ಮಹಿಮೆಯ ಪ್ರತ್ಯಕ್ಷತೆಯನ್ನೂ ಎದುರು ನೋಡ ಬೇಕು. ನಮ್ಮನ್ನು ಸಕಲ ಅನೀತಿಯಿಂದ ವಿಮೋಚಿಸುವದಕ್ಕೆ ಆತನು ನಮಗೋಸ್ಕರ ತನ್ನನ್ನು ಕೊಟ್ಟನು. ಇದೇ ಸುವಾರ್ತೆ. ಇದನ್ನು ನಂಬುವವನೇ ಪರಲೋಕರಾಜ್ಯಕ್ಕೆ ಯೋಗ್ಯನಾಗಿದ್ದಾನೆ.

ತ ಸೇ ತೀ ವೆ ೯.

(೧೮೮೯ನೇ ಇಸವಿ Iನೇ ಆಕ್ಟಿನಲ್ಲಿರುವ ಪಟ್ಟಿಯಿಂದ ಎತ್ತಿ ತೆಗದು ಸಂಕ್ಷೇಪಿಸಿದ್ದು.)

ದಸ್ತಾವೇಜಿನ ವಿವರಣೆ:	ಸ್ಟಾಂಪ್ ಹಾಸಲು:

11. (Bill of Exchange or Promissory Note) ಬಿಲ್ ಒಫ್ ಎಕ್ಸ್‌ಚೇಂಜ್ ಯಾ ಪ್ರೊಮಿಸರಿ ನೋಟು (ಅಂದರೆ ವಟಾಯಿಸ ತಕ್ಕ ಪತ್ರ ಇದರಲ್ಲಿ ಚಕ್ಕ್, ದಸ್ತಾವೇಜು, ಬೇಂಕನೋಟು, ಇಲ್ಲವೆ ಕರೆನ್ಸಿನೋಟು ಶೇರುವದಿಲ್ಲ):—

a) ಕೇಳಿದಾಗಲೇ ಪಾವತಿ ಆಗ ತಕ್ಕದ್ದಾಗಿ, ಅದರ ಮೌಲ್ಯ ೨೦ ರೂ ಪಾಯಿಗೆ ಮೀರಿದರೆ . . . . . ೧ ಆಣೆ

ಒಂದಕ್ಕೆ: ದುಬಾರೆವ್ರತಿಗೆ: ತಿಬಾರೆವ್ರತಿಗೆ:

b) ಕೇಳಿದಾಗಲೇ ಅಲ್ಲದೆ ಅನ್ಯಥಾ ಪಾವತಿಯಾಗ ತಕ್ಕ ದ್ದಾಗಿ, ಬರದ ಯಾ ಕಂಡ ತಾರೀಕಿನಿಂದ ಒಂದು ಸಂವತ್ಸರಕ್ಕೆ ಮೀರದ ವಾಯಿದೆ ಇದ್ದರೆ:

	ರೂ.	ಆ.	ರೂ.	ಆ.	ರೂ.	ಆ.
ನಮೂದಿಸಿದ ರೂಪಾಯಿ ೨೦೦ಕ್ಕೆ ಮೀರದಿದ್ದರೆ	೦	೩	೦	೧	೦	೧
ರೂಪಾಯಿ ೨೦೦ಕ್ಕೆ ಮೀರಿ ೪೦೦ ,,	೦	೪	೦	೩	೦	೨
,, ೪೦೦ ,, ೬೦೦ ,,	೦	೬	೦	೫	೦	೩
,, ೬೦೦ ,, ೧೦೦೦ ,,	೦	೧೦	೦	೫	೦	೪
,, ೧೦೦೦ ,, ೧೨೦೦ ,,	೦	೧೨	೦	೬	೦	೪
,, ೧೨೦೦ ,, ೧೬೦೦ ,,	೧	೦	೦	೮	೦	೬
,, ೧೬೦೦ ,, ೨೫೦೦ ,,	೧	೮	೦	೧೨	೦	೮
೨೫೦೦ ರೂಪಾಯಿ ಮೇಲೆ ೧೦೦೦೦ ರೂ. ವರೆಗೆ ಪ್ರತಿ ರೂ. ೨೫೦೦ಕ್ಕೆ ಯಾ ಅದರ ಅಂತಕ್ಕೆ.	೧	೮	೦	೧೨	೦	೮
೧೦೦೦೦ ರೂಪಾಯಿ ಮೇಲೆ ೨೦೦೦೦ ರೂಪಾಯಿ ವರೆಗೆ ಪ್ರತಿ ರೂಪಾಯಿ ೫೦೦೦ಕ್ಕೆ ಯಾ ಅದರ ಅಂತಕ್ಕೆ. . .	೫	೦	೧	೮	೧	೦
೨೦೦೦೦ ರೂಪಾಯಿ ಮೇಲೆ ಪ್ರತಿ ರೂಪಾಯಿ ೧೦೦೦೦ಕ್ಕೆ ಯಾ ಅದರ ಅಂತಕ್ಕೆ	೬	೦	೨	೦	೨	೦

c) ಬರದ ತಾರೀಕಿನಿಂದ ಇಲ್ಲವೆ ಕಂಡ ತಾರೀಕಿನಿಂದ ಒಂದು ಸಂವತ್ಸರದ ಮೇಲೆ ಪಾವತಿ ಆಗ ತಕ್ಕದ್ದಾದರೆ— ೧೩ನೇ ಅಂಕೆಯಲ್ಲಿ ಹೇಳಿರುವಷ್ಟೇ ತಸೆ

12. (Bill of Lading) ಬಿಲ್ ಒಫ್ ಲೇಡಿಂಗ್ ಎಂಬ ಸಾಮಾನು (ಜಹಜಿನ ಮೇಲೆ) ಭರಾವಣಚೀಟು . . . . . ೪ ಆಣೆ

13. ದಸ್ತಾವೇಜು (ಈ ಆಕ್ಟಿನಿಂದ ಅನ್ಯಥಾ ನಿಬಂಧಿಸಲ್ಪಡದೆ ಇರುವಂಥಾದ್ದು):—

ಇದರ ಮೊಬಲಗು ೧೦ ರೂಪಾಯಿಗೆ ಮೀರದಿದ್ದರೆ . .	೨ ಆಣೆ
೧೦ ರೂಪಾಯಿಗೆ ಮೀರಿ ೫೦ ರೂಪಾಯಿಗೆ ಮೀರದಿದ್ದರೆ. .	೪ ಆಣೆ
೫೦ ,, ,, ೧೦೦ ,, ,, . .	೮ ಆಣೆ
೧೦೦ರೂ.ಮೇಲೆ ೧೦೦೦ರೂ. ವರೆಗೆ ಪ್ರತಿ ರೂ.೧೦೦ಕ್ಕೆ ಯಾ ಅದರಂಶಕ್ಕೆ	೮ ಆಣೆ
೧೦೦೦ ,, ,, ಪ್ರತಿ ,, ೫೦೦ಕ್ಕೆ ಯಾ ಅದರ ಅಂತಕ್ಕೆ . .	೧ ರೂಪಾಯಿ ೮ ಆಣೆ

14. (Bond or Mortgage-Deed) ದಸ್ತಾವೇಜು ಅಥವಾ ಅಗ ವು ದಸ್ತಾವೇಜು (ಒಂದು ಉದ್ಯೋಗ ಕೆಲಸವನ್ನು ಸರಿಯಾಗಿ ಸೆರ ವೇರಿಸ ತಕ್ಕ ಬಗ್ಗೆ ಅಥವಾ ತಪ್ಪಾರಾ ಬಂದ ಹಣವನ್ನು ಕುರಿತು ಸಮಾ ಧಾನ ಪಡಿಸ ತಕ್ಕ ಬಗ್ಗೆ ಜವಾಬುದಾರಿಯಾಗಿ ಬರಕೊಡುವಂಥಾದ್ದು):—

a) ಇದರ ಮೊಬಲಗು ೧೦೦೦ ರೂಪಾಯಿಗೆ ಮೀರದಿದ್ದರೆ—13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ
b) ಇತರ ಸಂಗತಿಯಲ್ಲಿ . . . . . ೫ ರೂಪಾಯಿ

16. ಏಲಂ ಮಾಡಿದ ಆಸ್ತಿ ಬಗ್ಗೆ ಕೊಡ ತಕ್ಕ ದರಖಾಸ್ತಪಟ್ಟಿ—21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

19. ಇಪ್ಪತ್ತು ರೂಪಾಯಿಗೆ ಮೀರಿದ ಹಣಕ್ಕೆ (Cheque) ಚೆಕ್ಕ್ ಯಾನೆ ಹುಂಡಿ (ಇದು ಹಣ ಕೇಳಿದಾಗಲೇ ಕೊಡ ತಕ್ಕದ್ದಾಗಿದ್ದರೆ). . ೧ ಆಣೆ

21. 36. (Conveyance) ಕೊನ್ವೆಯನ್ಸ್ ಯಾನೆ ಕ್ರಯಸಾಧನ, ದಾನಸಾಧನ; ಇದರಲ್ಲಿ ಕಾಣಿಸಿದ ಪ್ರತಿಫಲದ ಮೊಬಲಗು

ರೂಪ್ಯಾ ೫೦ಕ್ಕೆ ಮೀರದಿದ್ದರೆ . . . . . ೯ ಆಣೆ
" ೫೦ ಮೀರಿ ರೂ. ೧೦೦ಕ್ಕೆ ಮೀರದಿದ್ದರೆ . . . . ೧ ರೂಪಾಯಿ
" ೧೦೦ " " ೧೦೦೦ವರೆಗೆ ಪ್ರತಿ ರೂ. ೧೦೦ಕ್ಕೆ ಯಾ ಅದರ ಅಂತಕ್ಕೆ ೧ ರೂಪಾಯಿ
" ೧೦೦೦ " " ಪ್ರತಿ ೫೦೦ ರೂಪಾಯಿಗೆ ಯಾ ಅದರ ಅಂತಕ್ಕೆ ೫ ರೂಪಾಯಿ

29. ಮೂಲ ದಸ್ತಾವೇಜುಗಳನ್ನು ಇಲ್ಲವೆ ಬೇರೆ ಬೆಲೆಯುಳ್ಳ ಸಾಧನಗಳನ್ನು ತೀವಣಿ ಇಟ್ಟು, ಅಥವಾ ಚರಸೊತ್ತು ಈಡು ಇಟ್ಟು ಮಾಡಿದ ಸಾಲವನ್ನು ತಿರಿಗಿ ಪಾವತಿ ಮಾಡುವ ಬಂದೋಬಸ್ತಿಗಾಗಿ ಮಾಡುವ ಕರಾರನ್ನು ತೋರಿಸುವ ದಸ್ತಾವೇಜು:—

a) ಸಾಲದ ಹಣವು ಅಂಥಾ ದಸ್ತಾವೇಜಿನ ತಾರೀಕಿನಿಂದ ಮೂರು ತಿಂಗಳ ಮೇಲೆ ಒಂದು ವರ್ಷದೊಳಗೆ ಸಂದಾಯವಾಗ ತಕ್ಕಂಥಾದ್ದಾಗಿದ್ದರೆ } 11ನೇ ಅಂಕೆಯ b ಯಲ್ಲಿ ಹೇಳಿರುವಷ್ಟೆ ಠಸೆ
b) ೩ ತಿಂಗಳೊಳಗೆ ಸಂದಾಯವಾಗ ತಕ್ಕಂಥಾದ್ದಾಗಿದ್ದರೆ— 11ನೇ b ಯಲ್ಲಿಯ ಠಸೆಯ ಅರೆವಾಸಿ

30. ಅಡವಿನ ಸೊತ್ತಿನ ಮೇಲೆ ಇನ್ನೂ ಸಾಲವನ್ನು ಹೊರಿಸಿ ಉಂಟಾಗುವ ದಸ್ತಾವೇಜು:—

a) ಪ್ರಥಮತಾ ಅದ ಅಡವು 44ನೇ ಅಂಕೆಯ a ಯಲ್ಲಿ ಸೂಚಿಸಿರುವಂಥಾದ್ದಾಗಿದ್ದರೆ . . . . . 21ನೇ ಅಂಕೆಯಲ್ಲಿ ಹೇಳಿದ ಕ್ರಯಸಾಧನದಷ್ಟೆ ಠಸೆ
b) ಅಂಥಾ ಅಡವು 44ನೇ ಅಂಕೆಯ b ಯಲ್ಲಿ ಹೇಳಿದಂಥಾದ್ದಾಗಿದ್ದರೆ, 13ನೇ ಅಂಕೆಯಲ್ಲಿರುವಷ್ಟೆ ಠಸೆ

32. ಪಾಲುಗಾರಿಕೆ ದಸ್ತಾವೇಜು. . . . . ೧೦ ರೂಪಾಯಿ

33. ಪಾಲುಗಾರಿಕೆ ಅಗಲಿಕೆ ದಸ್ತಾವೇಜು . . . . ೫ ರೂಪಾಯಿ

35. ಯಾವದೊಂದು ಸೊತ್ತಿನ ಬದಲಾವಣೆ ದಸ್ತಾವೇಜು—ಅಂಥಾ ಸೊತ್ತಿನ ಹೆಚ್ಚಾದ ಕಮ್ಮತಿನ ಬಗ್ಗೆ 21ನೇ ಅಂಕೆಯಲ್ಲಿ ಕ್ರಯಸಾಧನಕ್ಕೆ ಹೇಳಿರುವಷ್ಟೆ ಠಸೆ

37. ಪಾಲುಪಟ್ಟಿ:—ಇದರಲ್ಲಿ ಪಾಲು ಮಾಡಿಕೊಂಡ ಆಸ್ತಿಗೆ ಕಾಣಿಸಿದ ಮೌಲ್ಯದ ಹಣವಿನ ಮೇಲೆ (13ನೇ ಅಂಕೆಯಲ್ಲಿ) ದಸ್ತಾವೇಜಿಗೆ ಹೇಳಿರುವಷ್ಟೇ ಠಸೆ.

39. ಗೇಣಿಚೀಟು (ಗೇಣೀ ಬಗ್ಗೆ ಮಾಡುವ ಕರಾರು ಸಹ):—

a) ಗೇಣೀ ಮೊಬಲಗು ನಿಶ್ಚಯವಿದ್ದು, ಪ್ರೀಮಿಯಮ್ ಯಾನೆ ನಟ್ಟ ಇಲ್ಲದೆ, ಗೇಣಿ ವಾಯಿದೆ ಇಂಥಾದ್ದೆಂದು ನಮೂದಿಸಲ್ಪಟ್ಟು, ಸದರಿ ವಾಯಿದೆ ಒಂದು ವರುಷಕ್ಕೆ ಮೀರದಿದ್ದರೆ . . . . . 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ
ಒಂದು ವರುಷಕ್ಕೆ ಮೀರಿ ೩ ವರ್ಷಕ್ಕೆ ಮೀರದಿದ್ದರೆ—ಸರಾಸರಿ ೧ ವರ್ಷದ ಗೇಣಿಗೆ 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ
ಮೂರು ವರ್ಷಕ್ಕೆ ಮೀರಿ ಇದ್ದರೆ—ಸರಾಸರಿ ಒಂದು ವರ್ಷಕ್ಕೆ ಬೀಳುವ ಗೇಣಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಗೇಣಿ ಮೊಬಲಗು ನಿಶ್ಚಯವಿದ್ದು, ನಟ್ಟ ಕೊಡುವದಿಲ್ಲದೆ, ಗೇಣಿ ಚೀಟಿನ ವಾಯಿದೆ ಇಂಥಾದ್ದೆಂದು ಸಿದಕು ಇಲ್ಲದಿದ್ದರೆ ಪ್ರಥಮದ ೧೦ ವರ್ಷದಲ್ಲಿ ಸರಾಸರಿ ಒಂದು ವರ್ಷಕ್ಕೆ ಬೀಳುವ ಗೇಣಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

c) ಒಂದು ದಂಡ ಅಥವಾ ಪ್ರೀಮಿಯಮ್ ಯಾನೆ ನಟ್ಟ ಸಲುವಾಗಿ ಗೇಣಿಗೆ ಕೊಡೋಣಾಗಿ, ಗೇಣಿ ಏನಾದರೂ ಬರುವಂಥಾದ್ದು ಇಲ್ಲದಿದ್ದರೆ— ಗೇಣಿಚೀಟನಲ್ಲಿ ನಮೂದಿಸಿದ ಸದರಿ ದಂಡ ಯಾ ನಟ್ಟದ ಮೊಬಲಗಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

d) ಗೇಣಿ ಬರುವದರ ಹೊರ್ತು ದಂಡ ಯಾ ಪ್ರೀಮಿಯಮ್ ಯಾನೆ ನಟ್ಟದ ಸಲುವಾಗಿಸಹಾ ಗೇಣಿಗೆ ಕೊಡೋಣಾಗಿದ್ದರೆ — ಗೇಣೀ ಬಗ್ಗೆ ಎಷ್ಟು ಠಸೆ ಬೇಕಾದೀತೋ ಅಷ್ಟು ಹಾಸಲು, ಮತ್ತು ಸದರಿ ದಂಡದ ಯಾ ನಟ್ಟದ ಮೊಬಲಗಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟು ಠಸೆ ಸಹ

41. (Letter of Credit) ಲೆಟರ್ ಒಫ್ ಕ್ರೆಡಿಟ್ (ಅಂದರೆ ಇದು ಯಾರ ಹೆಸರಿನಲ್ಲಿ ಬರಿಯಲ್ಪಡುತ್ತದೋ ಆತನಿಗೆ ನಂಬಿಕೆಯ ಮೇಲೆ ಸಾಲ ಕೊಡುವಂತೆ ಮತ್ತೊಬ್ಬನಿಗೆ ಅಧಿಕಾರ ಕೊಡುವಂಥಾ ದಸ್ತಾವೇಜು) ೧ ಆಣೆ

43. ಒಂದು ಕಂಪೆನಿಯ ಸಂಘದ ಯಾದಾಸ್ತು . . . ೧೫ ರೂಪಾಯಿ

44. ಅಡಮಾನಸಾಧನ (14, 15, 29, 55ನೇ ಅಂಕೆಗಳಲ್ಲಿ ಏರ್ಪಡಿಸದೆ ಇರುವಂಥಾ ತರದ್ದು):—

a) ಸಾಧನ ಬರೆದು ಕೊಡುವ ಸಮಯದಲ್ಲಿ ಆದರಲ್ಲಿ ನಮೂದಿಸಿದ ಸೊತ್ತನ್ನು ಯಾ ಅದರ ಅಂಶವನ್ನು ಆಡವುದಾರಗೆ ಒಪ್ಪಿಸಿ ಕೊಟ್ಟರೆ, ಇಲ್ಲವೆ ಒಪ್ಪಿಸಿ ಕೊಡುವರೆ ಸಮ್ಮತಿಸಿದರೆ. . . . . 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಸದರಿ ಸೊತ್ತಿನ ಸ್ವಾಧೀನತೆ ಬಿಟ್ಟುಕೊಡದೆ ಯಾ ಒಪ್ಪಿಸಲಿಕ್ಕೆ ಸಮ್ಮತಿಸದೆ ಇದ್ದ ಪಕ್ಷಕ್ಕೆ— . . . . . 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

46. (Note or Memorandum) ನೋಟು ಯಾ ಮೆಮೊರಂಡಮ್ (ಅಂದರೆ ಒಬ್ಬ ದಲಾಲನಾಗಲೀ ಮುತ್ತಾಲಿಕನಾಗಲೀ ತನ್ನ ಧನಿಗೋಸ್ಕರ ಇಪ್ಪತ್ತು ರೂಪಾಯಿಗೆ ಮೀರಿದ ಯಾವ ಸರಕನ್ನಾಗಲೀ ಜೀನಸನ್ನಾಗಲಿ ಕೊಂಡುಕೊಂಡಿರುವದಾಗಿ ಇಲ್ಲವೆ ಮಾರಿದ್ದಾಗಿ ಸದರಿ ಧನಿಗೆ ತಿಳಿಸುವ ಚೀಟು ಯಾ ಯಾದಾಸ್ತು) . . . . . ೧ ಆಣೆ

48. ಯಾವದಾದರೂ ಒಂದು ಹೊಸ ನಿರ್ಮಾಣದ ವಿವರಪತ್ರಿಕೆಯನ್ನು ಪಾಖಲು ಮಾಡುವ ಬಗ್ಗೆ, ಅಥವಾ ಹಿಂದುಸ್ಥಾನದಲ್ಲಿ ಸದರಿ ನಿರ್ಮಿತವನ್ನು ತನ್ನ ಹೊರ್ತು ಬೇರೆ ಯಾರಾವರೂ ಮಾಡಿ ಉಪಯೋಗಿಸದಂತೆ ಅಪ್ಪಣೆ ಆಗ ಬೇಕಾಗಿ ಬರಕೊಳ್ಳುವ ಅರ್ಜಿ . . . . ೧೦೦ ರೂಪಾಯಿ

50. (Power-of-Attorney) ಪವರ್-ಒಫ್-ಎಟ್ಟರ್ನಿ (ಮೊಕ್ತ್ಯಾರನಾಮೆ):—

a) ಒಂದೇ ಕಾರ್ಯಕ್ಕೆ ಸಂಬಂಧವಾದ ಒಂದು ಯಾ ಅನೇಕ ದಸ್ತಾವೇಜುಗಳನ್ನು ರಿಜಿಸ್ತ್ರೀ ಬಗ್ಗೆ ಹಾಜರು ಪಡಿಸುವದಕ್ಕೆ ಪೂರ್ತಿ ಉಂಟಾದರೆ ೯ ಆಣೆ

b) ಬೇರೆ ಯಾವದಾದರೂ ಒಂದೇ ಕಾರ್ಯಕ್ಕಾಗಿ ಒಬ್ಬ ಯಾ ಅನೇಕರಿಗೆ ಅಧಿಕಾರ ಕೊಡುವದಾದರೆ . . . . . ೧ ರೂಪಾಯಿ

c) ಸಮುಷ್ಟಿಯಾಗಿ ಯಾ ಬೇರೆ ಬೇರೆಯಾಗಿ ಒಂದಕ್ಕಿಂತ ಅನೇಕ ಕಾರ್ಯಗಳಲ್ಲಿ ಆಗಲೀ ಸಾಮಾನ್ಯವಾಗಿ ಆಗಲೀ ಪ್ರವರ್ತಿಸಲಿಕ್ಕೆ *ಕ್ಕೆ ಮೀರದಷ್ಟು ಮಂದಿಗೆ ಅಧಿಕಾರ ಕೊಡುವದಾದರೆ . . . . * ರೂಪಾಯಿ

d) ಸಮುಷ್ಟಿಯಾಗಿ ಯಾ ಬೇರೆ ಬೇರೆಯಾಗಿ ಅನೇಕ ಕಾರ್ಯಗಳಲ್ಲಿ ಆಗಲೀ ಸಾಮಾನ್ಯವಾಗಿ ಆಗಲೀ ಪ್ರವರ್ತಿಸಲಿಕ್ಕೆ *ಕ್ಕೆ ಮೀರಿ ೧೦ಕ್ಕೆ ಮೀರದೆ ಇರುವ ಜನರಿಗೆ ಅಧಿಕಾರ ಕೊಡುವದಾದರೆ . . . . ೧೦ ರೂಪಾಯಿ

e) ಇತರ ಸಂಗತಿಯಲ್ಲಿ . . . . ಅಧಿಕಾರ ಹೊಂದುವ ಪ್ರತಿ ಮನುಷ್ಯನಿಗಾಗಿ ೧ ರೂಪಾಯಿ

52. ಇಪ್ಪತ್ತು ರೂಪಾಯಿಗೆ ಮೀರಿದ ಯಾವ ಹಣವನ್ನಾಗಲೀ ಸೊತ್ತನ್ನಾಗಲೀ ಬಂದದ್ದಕ್ಕೆ ಕೊಡುವ ರಶೀದಿ . . . . . ೧ ಆಣೆ

53. ಅಡವಿನ ಸೊತ್ತನ್ನು ತಿರಿಗಿ ಕೊಡುವ ದಸ್ತಾವೇಜು:—

a) ಅಡವಿನ ಹಣ ೧೦೦೦ ರೂಪಾಯಿಗೆ ಮೀರದಿದ್ದರೆ. . 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . . ೧೦ ರೂಪಾಯಿ

